ಸಂಪುಟ 3

"ನವಭಾರತ"

1941-42

ಪ್ರಥಮ ಸಂಚಿಕೆ 1000 50.

4, 7, 15, 16, 17, 22, 23, 26

ಸಂಚಿಕೆಗಳನ್ನು ಬಿಟ್ಟು

ಉಳಿದವು 1000 432

Reg.M. No 3937 'ವಂದೇ ಮಾತರಂ' ವಿಜಯದಶಮಿ ಸಂಚಿಕೆ ೧

THE Bharat
ನವ ಭಾರತ
नव भारत

(ಇದರಲ್ಲಿ ಕಾಂಗ್ರೆಸ್ ಬುಲೆಟಿನ್ ಸಹಾವೇಶವಾಗಿದೆ)

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಚಂದಾ
ಸ್ಥಳ ೭—೦—೦
ದೂರ ೪—೦—೦

ಸಂಪಾದಕ - ಟಿ ಬಿ. ಕೇಶವರಾವ್

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ಬಿಡಿ ಸಂಚಿಕೆ
೦—೧—೦

ವಸು ೪ | ಬಳಾರಿ ಸೆಪ್ಟಂಬರ್ ೩೦ನೇ ಮಂಗಳವಾರ ೧೯೪೧ | ಸಂಚಿಕೆ ೧

Long Live Mahatma Gandhi

73rd Birthday.

2-10-1941.

ಮಹಾತ್ಮ ಗಾಂಧಿಯವರು ಧೀರ್ಘಾಯುಗಳಾಗಲಿ

೭೩ನೇ ಜನ್ಮದಿನ

ಜನರ ಜನ್ಮದಿನವನ್ನಾಚರಿಸುವ ಪದ್ಧತಿಯಿದೆ ಆದರೆ ಸ್ವೈಸ್ಯತಿನಿಮಾರಣೆ
ಗ್ರಾಮೋದ್ಧಾರ ಕಾರ್ಯ ಹಿಂದಿ ಪ್ರಚಾರ ವಿಧಾಯಕ
ಕಾರ್ಯಕ್ರಮಗಳಿಗೆಲ್ಲಾ ತನು - ಮನ - ಧನದಿಂದ
ಸಹಾಯ ಸಹಕಾರ ನೀಡುವುದಾಗಿದೆ
ಕಾರಣ ಎಲ್ಲರೂ ಈ ಕಾರ್ಯಗಳಿಗೆ
ಬೆಂಬಲಕೊಡಿರಿ

NAVA BHARAT,

The General Assurance Society Ltd.,

H. O. AJMER.

ದಿ ಜನರಲ್ ಅಶೂರೆನ್ಸ ಸೊಸೈಟಿ ಲಿ. ಅಜ್ಮೀರ್

(ಸ್ಥಾಪಿತ 1907)

ಹಣ ಕಟ್ಟುವುದು ಅಲ್ಪ ! **ಪಡೆಯುವ ಲಾಭವು ಅಧಿಕ !**

ಉತ್ಸಾಹಪೂರಿತ ನುತ್ತು ಆಶಾದಾಯಕ ಪ್ರಗತಿಯ ನುತ್ತೊಂದು ವರ್ಷ

1940.

ಅಂಕೆಗಳೇ ಚರಿತ್ರೆಯನ್ನು ಹೇಳುತ್ತವೆ !!

ವರ್ಷ ವರ್ಷದ ಅಭಿವೃದ್ಧಿಯನ್ನು ಗಮನಿಸಿರಿ !!!

	1936	1938	1940
ವಾರ್ಷಿಕ ವಿಮಾಕಾರ್ಯ	51,26,000	58,40,500	68,53,800
ಒಟ್ಟು ಆದಾಯ	18,69,208	21,97,494	24,51,654
ಕಂಪನಿ ಆಸ್ತಿಗಳು	81,03,531	91,54 504	1,04,57,714
ಆಡಳಿತ ಖರ್ಚಿನ ದಾಮಾಷಾ	31·2%	27·67%	26·8%

ವಾರ್ಷಿಕ ಲಾಭದ ಹಂಚಿಕೆ:— 1] ಜೀವಾವಧಿ ವಿಮೆ 22½ ರೂ. ಸಾವಿರ ರೂ. ಪಾಲಿಸಿಗೆ
2] ಎಂಡೋಮೆಂಟ್ 18 ರೂ. "

ಆಡಳಿತದ ಅಲ್ಪಖರ್ಚಿನಿಂದ ಪಾಲಿಸಿದಾರರಿಗೆ ಹೆಚ್ಚಿನ ಲಾಭವನ್ನು ಹಂಚುವದೇ ನಮ್ಮ ಉದ್ದೇಶವಾಗಿದೆ.

ನಮ್ಮ ಕುಟುಂಬದ ಭವಿಷ್ಯ ರಕ್ಷಣೆಗಾಗಿ ಇಂದೇ ನಮ್ಮಲ್ಲಿ ವಿಮೆಮಾಡಿರಿ. ನಿಮಗೆ ಏನೂ ಖರ್ಚಿಲ್ಲದೆ ವಿವರಗಳನ್ನು ಒದಗಿಸಲು ಸರ್ವದಾ ಸಿದ್ಧರಿರುತ್ತೇವೆ. ಏಜಂಸಿ ಮತ್ತು ಇತರ ವಿವರಗಳಿಗಾಗಿ ನಮ್ಮಲ್ಲಿಗೆ ಬನ್ನಿರಿ. ಇಲ್ಲವೇ ಬರೆದು ತಿಳಿಯಿರಿ.

ಕೆ ಯಂ. ರಾಮಾಚಾರ್ ಆರ್ಗನೈಜರ್,
155 ತೇರುಬಜಾರ ಬಳ್ಳಾರಿ.

ಬ್ರಹ್ಮದತ್ತ, ಬಿ. ಎಸ್. ಸಿ.
ಎಲ್. ಎಲ್. ಬಿ ಎಫ್. ಯಸ್. ಯಸ್. [ಲಂಡನ್]
ಜನರಲ್ ಮ್ಯಾನೇಜರ್.

ರಷ್ಯನರು ಕೀವ್‌ನಗರವನ್ನು ತ್ಯಜಿಸಿದರು.

೧,೪೦,೦೦೦ ಮಂದಿಯ ಸೆರೆ

ಭಯಾನಕ ಪರಿಸ್ಥಿತಿ

ಹಲವು ದಿನಗಳ ಕಾಲ ಉಗ್ರವಾಗಿ ಹೋರಾಡಿದ ಮೇಲೆ ನಮ್ಮ ಸೈನಿಕರು ಕೀವ್ ನಗರವನ್ನು ತ್ಯಜಿಸಿದರೆಂಬುದಾಗಿ ರಷ್ಯದ ಪ್ರಕಟನೆಯು ತಿಳಿಸುತ್ತದೆ.

ಕೀವ್ ಪೂರ್ವದಲ್ಲಿ ರಷ್ಯಾ ಸೇನೆಗಳನ್ನು ಸುತ್ತುವರಿದದರ ಪರಿಣಾಮವಾಗಿ ೧,೪೦,೦೦೦ ಮಂದಿ ಯೋಧರು ಸೆರೆಸಿಕ್ಕಿದರೆಂದು ಜರ್ಮನ್ ಸೈನ್ಯಾಧಿಕಾರಿಗಳ ಪ್ರಕಟನೆಯು ತಿಳಿಸುತ್ತದೆ.

ಕೀವ್ ನಗರದವರೆಲ್ಲ ಬಳಲಿ ಬೆಂಡಾಗಿ ಹೋದುದರಿಂದ ಅದು ಶತ್ರುಗಳ ವಶವಾಯಿತೆಂದು ತಿಳಿದುಬಂದಿದೆ. ಈಗೊಂದುವಾರದಿಂದ ನಗರಕ್ಕೆ ನೀರೇ ಇರಲಿಲ್ಲ. ಈಗೊಂದು ತಿಂಗಳಿಂದ ಆಹಾರವಸ್ತುಗಳ ಅಂಗಡಿಗಳು ಮುಚ್ಚಿದ್ದವು ಪೂರ್ವ ಉಕ್ರೇನಿನಲ್ಲಿ ಗಾಯಗೊಂಡ ರಷ್ಯನರನ್ನೆಲ್ಲ ಕೀವ್‌ಗೆ ಸಾಗಿಸಲಾಗಿತ್ತು. ಆಸ್ಪತ್ರೆಗಳು, ಶಾಲೆಗಳು, ಚರ್ಚುಗಳು, ಥಿಯೇಟರುಗಳು ಸಿನೆಮಾಗಳು, ಹೋಟಲುಗಳು, ನಿವಾಸಗೃಹಗಳು-ಇವೆಲ್ಲ ಗಾಯಗೊಂಡವರಿಂದ ತುಂಬಿ ಹೋಗಿದ್ದವು. ಕೀವ್ ನಗರವೆಲ್ಲ ಒಂದು ಮಹಾ ಆಸ್ಪತ್ರೆಯಂತಿತ್ತು. ಹೀಗಿದ್ದರೂ ಈ ನಗರವನ್ನು ಹಿಡಿಯಲು ಜರ್ಮನರು ಬಹಳ ಹೊಡೆದಾಡಬೇಕಾಯಿತು. ಈಗ ಮೂರು ದಿನಗಳಿಂದ ಕೀವ್ ನಗರದವರಿಗೆ ಅನ್ನ ನೀರಿರಲಿಲ್ಲ !

ಜರ್ಮನರು ಕೀವ್ ಹೊಕ್ಕಾಗ ಎಲ್ಲೆಲ್ಲೂ ವಿಕಾಶಹೊಂದಿದ ವಸ್ತುಗಳೇ ರಾಶಿಯಾ ಬಿದ್ದಿದ್ದವು ಎಂಬುದಾಗಿ ಈದಿನ ಬರ್ಲಿನ್ ನಗರದಲ್ಲಿ ತಿಳಿಸಲಾಯಿತು. "ಮುಖ್ಯವಾದ ವಸ್ತುಗಳನ್ನೆಲ್ಲ ಶತ್ರುಗಳು ಕೊಂಡೊಯ್ದಿದ್ದಾರೆ ನೀರು ಸರಪರಾಜು, ವಿದ್ಯುತ್ ಸರಪರಾಜು ವ್ಯವಸ್ಥೆಗಳನ್ನೆಲ್ಲ ನಾಶಮಾಡಲಾಗಿದೆ ರಷ್ಯನರು ತಮ್ಮ ಸಾವಿರಾರು ಪ್ರಜೆಗಳ ಪ್ರಾಣವನ್ನು ಲೆಕ್ಕಿಸದೆ ಈ ವಿನಾಶಕಾರ್ಯ ನಡೆಸಿದ್ದಾರೆ" ಎಂಬುದಾಗಿ ನಾಜಿ ಪ್ರಕಟನೆ ಹೊರಟಿದೆ.

ರಷ್ಯಾ-ಜಪಾನ ಘರ್ಷಣೆ

ಜಪಾನ್ ಮತ್ತು ರಷ್ಯಾ ಸೇನೆಗಳ ನಡುವಿನ ಕಾದಾಟದಲ್ಲಿ ಮೇಲಿಂದ ಮೇಲೆ ಘರ್ಷಣೆಗಳಾಗುತ್ತಲೇ ಇವೆಯೆಂದೂ, ಪ್ರತಿದಿನ ಅವು ಹೆಚ್ಚುತ್ತಿವೆ ಯೆಂದೂ ಚುಂಗ್ ಕಿಂಗ್‌ನಿಂದ ಅಮೆರಿಕನ್ ಸುದ್ದಿಗಾರರು ತಿಳಿಸುತ್ತಾರೆ. ರಷ್ಯಾ, ಜಪಾನ್ ಎರಡೂ ಗಡಿ ಪ್ರದೇಶಕ್ಕೆ ಹೆಚ್ಚಿನ ಬಲವನ್ನು ಕಳುಹಿಸಿವೆಯೆಂದು ಅವರು ತಿಳಿಸುತ್ತಾರೆ.

ಹಿಂದೂಸ್ಥಾನಕ್ಕೆಲ್ಲಾ ಒಂದೇ ರಾಷ್ಟ್ರಭಾಷೆ.

ಹಿಂದಿ—ಹಿಂದೂಸ್ಥಾನಿ.

ಲೇ — ಟಿ. ಬಿ. ಕೇಶವರಾವ್.

ಅವಶ್ಯಕತೆ:— ಹಿಂದೂಸ್ಥಾನದ ಜನಸಂಖ್ಯೆ 40 ಕೋಟಿ. ಕನ್ಯಾಕುಮಾರಿಯಿಂದ ಹಿಮಾಲಯದವರೆಗೂ ಕರಾಚಿಯಿಂದ ಬರ್ಮಾದವರೆಗೂ ಪ್ರಚಾರದಲ್ಲಿರುವ ಅಥವಾ ಜನತೆಗೆಲ್ಲಾ ತಿಳಿಯುವ ಒಂದು ಭಾಷೆಯು ಇಲ್ಲ. ಹಿಂದೂಸ್ಥಾನದಲ್ಲಿ ನಿತ್ಯ ವ್ಯವಹಾರಕ್ಕಾಗಿ ಬಳಸಲ್ಪಡುವ ಭಾಷೆಗಳು 300 ಎಂಬುದಾಗಿ ಗೊತ್ತಾಗಿದೆ. ಏಳುಲಕ್ಷ ಹಳ್ಳಿಗಳೂ, ಸುಮಾರು 3 ಸಾವಿರ ಪಟ್ಟಣಗಳೂ ಇದ್ದು ಅಂಗ್ಲೇಯರ 175 ವರ್ಷಗಳ ರಾಜ್ಯಭಾರ ಕಾಲದಲ್ಲಿ ಆಳರಸನ ವಿಶ್ವಪ್ರಯತ್ನವಾದರೂ 1941ರ ಸುಮಾರಕ್ಕೆ 50 ಲಕ್ಷಕ್ಕಿಂ ಗ್ಲಭಾಷಾಭಿಜ್ಞರು ಇರುವುದು ಕೂಡ ಅನುಮಾನಾಸ್ಪದವಾಗಿದೆ. ಈ ಕಾರಣ ಹಿಂದೂಸ್ಥಾನದಲ್ಲಿಯೇ ವಿಶೇಷ ಬಳಸಲ್ಪಡುವ ಭಾಷೆಯ ಪ್ರಚಾರವಾಗುವುದು ಅವಶ್ಯಕ. ರಾಷ್ಟ್ರದಲ್ಲೆಲ್ಲಾ ಒಂದು ಭಾಷೆಯು ಪ್ರಚಾರವಿಲ್ಲದೆ ಸಂಸ್ಕೃತಿ-ವ್ಯಾಪಾರ-ಉದ್ಯೋಗ ಅಂತರ ಪ್ರಾಂತೀಯ ವ್ಯವಹಾರವಾಗುವುದು ಅಸಾಧ್ಯ. ಆದುದರಿಂದ ಹಿಂದೂಸ್ಥಾನಕ್ಕೆಲ್ಲಾ ಒಂದು ರಾಷ್ಟ್ರಭಾಷೆಬೇಕು.

ಹಿಂದಿ-ಹಿಂದೂಸ್ಥಾನಿ-ಉರ್ದು

ಹಿಂದೂಸ್ಥಾನದಲ್ಲಿ 8 ಕೋಟಿ ಮುಸಲ್ಮಾನರು ಇರುತ್ತಾರೆ. ಅವರು ಸರ್ವಸಾಧಾರಣವಾಗಿ ತಾವು ವಾಸಿಸುವ ಪ್ರಾಂತಗಳ ಪ್ರಾಂತೀಯ ಶಬ್ದಗಳಲ್ಲಿ ಮಿಶ್ರಣ ವ್ಯತ್ಯಾಸವುಳ್ಳ 'ಉರ್ದು' ಭಾಷೆಯನ್ನಾಡುತ್ತಾರೆ. ಅನೇಕರು ತಮ್ಮ ಮಾತೃಭಾಷೆಯನ್ನು ಬಿಟ್ಟು ಗೊತ್ತಿ ಪ್ರಾಂತೀಯ ಭಾಷೆಯನ್ನಾಡುತ್ತಾರೆ. ಅಂದರೆ ಮಾತೃಭಾಷೆಯ ಜ್ಞಾನವು ಆವರಿಗಿಲ್ಲ. ಉದಾಹರಣೆ ರ್ಥವಾಗಿ ಗುಜರಾತಿನಲ್ಲಿರುವ ಮುಸಲ್ಮಾನರು ಗುಜರಾತಿಯನ್ನು ತಮಿಳು ವೇಶವರಿರುವ ಮುಸಲ್ಮಾನರು ತಮಿಳನ್ನೂ ವಿಶೇಷವಾಗಿ ಬಳಸುವರು. ಆದರೆ "ಮುಸಲ್ಮಾನರು ಪ್ರಾಂತೀಯ ಭಾಷೆಯನ್ನೂ, ಮಾತೃಭಾಷೆಯನ್ನೂ ಬಲ್ಲರು. ಇವರು ವ್ಯವಹಾರ ಸೌಲಭ್ಯಕ್ಕಾಗಿ ಮಾತ್ರ ಪ್ರಾಂತೀಯ ಭಾಷೆಯನ್ನು ಬಳಸುವರು" ಎಂಬ ವಾದವು ಬರಬಹುದು. ಇರಲಿ. ಮುಸಲ್ಮಾನರಲ್ಲಿನ ಅಧಿಕ ಸಂಖ್ಯಾಕರೆಲ್ಲಾ ಉರ್ದು ಭಾಷೆಯನ್ನು ಬಲ್ಲರೆಂದು ಭಾವಿಸೋಣ. ಇನ್ನು ಯುಕ್ತ ಪ್ರಾಂತ - ಬಿಹಾರ - ಮಧ್ಯಪ್ರಾಂತ ಮತ್ತು ರಾಜಾಸ್ಥಾನಗಳಲ್ಲಿ ಹಿಂದೀ ಭಾಷೆಯು ಅನೇಕರಿಗೆ ಮಾತೃಭಾಷೆಯಾಗಿದೆ.

ಹಿಂದೀ-ಹಿಂದುಸ್ಥಾನಿ - ಉರ್ದುಗಳಿಗೆ ವಿಶೇಷ ವ್ಯತ್ಯಾಸವಿಲ್ಲ. ಜಾತೀಯ ಕಲಹಗಳು ಹೆಚ್ಚಿದ ಮೇಲೆ ಮುಸಲ್ಮಾನರು ತಮ್ಮ ಭಾಷೆಯಲ್ಲಿ ಅರಬಿ - ಪರ್ಶಿಯ ಶಬ್ದಗಳನ್ನೂ, ಹಿಂದುಗಳು ತಮ್ಮ ಭಾಷೆಯಲ್ಲಿ ಸಂಸ್ಕೃತ ಶಬ್ದಗಳನ್ನೂ ಹೆಚ್ಚಾಗಿ ಸೇರಿಸುತ್ತಾ ಬಂದರು. ನೇವನಾಗರಿ ಲಿಪಿಯಲ್ಲಿ ಬರೆಯಲ್ಪಡುವ ಭಾಷೆಗೆ ಹಿಂದುಸ್ಥಾನಿ ಅಥವಾ ಉರ್ದು ಎಂತಲೂ ಕೆಲವರು ಕರೆಯುವರು. ಅಂತೂ ಹಿಂದೂಸ್ಥಾನದಲ್ಲಿ ಹಿಂದೀ-ಉರ್ದು-ಹಿಂದುಸ್ಥಾನಿ ತಿಳಿದವರು 25 ಕೋಟಿ ಜನರಿರುವರೆಂತಧಾರಾಳವಾಗಿ ಹೇಳಬಹುದು. ನಾಮ ಮಾತ್ರದಿಂದ ಈ 3 ಭಾಷೆಗಳು ಭಿನ್ನವಾಗಿಕಂಡುಬರುತ್ತಿದ್ದರೂ, ಇದರಲ್ಲಿ ಕೆಲವೊಂದು ಶಬ್ದಗಳ ಜೋಡಣೆಯನ್ನು ಸಮರಸ ಮಾಡಿದರೆ ಸಂಪೂರ್ಣ ಏಕ್ಯತೆಯು ಲಭ್ಯವಾಗುವುದು.

ಪ್ರಾಂತೀಯ ಭಾಷೆಗಳು ಮತ್ತು ಹಿಂದುಸ್ಥಾನಿ:— ಉತ್ತರ ಹಿಂದೂಸ್ಥಾನದಲ್ಲಿ ಪ್ರಚಾರದಲ್ಲಿರುವ ಭಾಷೆಗಳು, ದಕ್ಷಿಣ ಹಿಂದುಸ್ಥಾನದಲ್ಲಿ ಪ್ರಚಾರದಲ್ಲಿರುವ ಭಾಷೆಗಳು ಎಂದು ಮುಖ್ಯವಾಗಿ ಎರಡು ಭಾಗಗಳನ್ನಾಗಿ ಮಾಡಬಹುದು. ದಕ್ಷಿಣ ಹಿಂದೂಸ್ಥಾನದಲ್ಲಿರುವ 7 ಕೋಟಿ ಜನರು ಆಡುವ ಭಾಷೆಗಳನ್ನು ದ್ರಾವಿಡ ಭಾಷೆಗಳೆಂದು ಕರೆಯುತ್ತಾರೆ.

ಹಿಂದೀ— ಮಧ್ಯಪ್ರಾಂತ, ರಾಜಸ್ತಾನ, ಯುಕ್ತಪ್ರಾಂತ, ಬಿಹಾರ ವಗೈರೆ.

ಬಂಗಾಲಂ-ಯೂ

ಬಂಗಾಳಿ— ಬಂಗಾಳ

ಒರಿಯ— ಒರಿಸ್ಸಾ

ಆಸ್ಸಾಮಿ— ಆಸ್ಸಾಂ

ಉರ್ದು — ಅಧಿಕ ಸಂಖ್ಯಾಕ ಮುಸಲ್ಮಾನರಿರುವ ಪ್ರಾಂತ್ಯಗಳಲ್ಲಿ.

ಈ ದೊಡ್ಡ ಪ್ರಾಂತಗಳೊಳಗೆ ಅಂತರ್ಗತವಾಗಿರುವ ಅಥವಾ ಹೊಂದಿಕೊಂಡಿರುವ ಸಂಸ್ಥಾನಗಳಲ್ಲಿಯೂ ಕೂಡ ಮೇಲ್ಕಾಣಿಸಿದ ಪ್ರಮುಖ ಭಾಷೆಗಳೇ ರೂಢಿಯಲ್ಲಿವೆ.

ದಕ್ಷಿಣದಲ್ಲಿ ಪ್ರಚಾರದ ಅವಶ್ಯಕತೆ ಹೆಚ್ಚು:— ಉತ್ತರ ಹಿಂದೂಸ್ಥಾನದಲ್ಲಿರುವ ಪ್ರಮುಖ ಭಾಷೆಗಳಲ್ಲಿ ಹಿಂದೀ-ಉರ್ದು-ಹಿಂದುಸ್ಥಾನಿಯಲ್ಲಿನ ಅನೇಕ ಶಬ್ದಗಳು ನಾಡಿಕೆಯಲ್ಲಿವೆ. ಉತ್ತರದಲ್ಲಿರುವವರು ಅತಿ ಸುಲಭವಾಗಿ ಹಿಂದೂಸ್ಥಾನಿಯನ್ನು ಕಲೆತು, ಸಂಭಾಷಣೆಯಲ್ಲಿ ನಿತ್ಯ ವ್ಯವಹಾರದಲ್ಲಿ ಉಪಯೋಗಿಸುವರು. ಆದರೆ ದಕ್ಷಿಣದ ಮಾತು ಬೇರೆ-ಉತ್ತರದ ಸಂಸ್ಕೃತಿಯ ಪ್ರಭಾವವು ದಕ್ಷಿಣದವರೆಗೂ ಹರಿಯಲಿಲ್ಲ. ದ್ರಾವಿಡ ಭಾಷೆಗಳ ಪರಿಶುದ್ಧತೆಯು ಪ್ರಾಚೀನಕಾಲದಿಂದಲೂ ಕಾಪಿಡಲ್ಪಟ್ಟಿದೆ ಯೆಂದು ಅನೇಕ ತಜ್ಞರ ಅಭಿಪ್ರಾಯ. ದಕ್ಷಿಣ ದೇಶದವರು ಹಿಂದಿ ಹಿಂದುಸ್ಥಾನಿಯನ್ನು ಪರಭಾಷೆಯಂತೆ ಕಲಿಯಬೇಕಾಗಿದೆ.

ಹಿಂದುಸ್ಥಾನಿ.

ಮುಖ್ಯಭಾಷೆಗಳು	ಸಂಬಂಧಿಸಿದ ಪ್ರಾಂತಗಳು
ತೆಲುಗು —	ಮದ್ರಾಸ್
ತಮಿಳು —	,,
ದಕ್ಷಿಣ	
ಮಲ್ಲಯಾಳಂ —	,,
ಕನ್ನಡ —	ಮುಂಬೈ, ಮದ್ರಾಸು ಮೈಸೂರು, ಹೈದರಾಬಾದ್ ವಗೈರೆ.
II ಗುಜರಾತಿ —	ಮುಂಬೈ
ಮರಾಠಿ —	,,
ಸಿಂಧಿ —	ಸಿಂಧೂದೇಶ
ಉತ್ತರ	
ಪಂಜಾಬಿ —	ಪಂಜಾಬ್
ಬಲೂಚಿ —	ಬಲೂಚಿಸ್ತಾನ
ಪುಷ್ತು —	ಸರಹದ ಪ್ರಾಂತ

ಗಾಂಧೀಜಿಯವರು ಮಾಡಿದುದೇನು? ಗಾಂಧೀಜಿಯವರು ದಕ್ಷಿಣ ಆಫ್ರಿಕದಿಂದ ಹಿಂದುಸ್ಥಾನಕ್ಕೆ ಬಂದು ರಾಜಕೀಯ ರಣಾಂಗಣವನ್ನಿಳಿದು ಭಾರತರಾಷ್ಟ್ರೀಯ ಸಂಸ್ಥೆಯ ಅತ್ಯುತ್ಸ್ವರೂಪರಾದರು. 1918ರಲ್ಲಿಯೇ ದಕ್ಷಿಣ ಹಿಂದೂದೇಶದಲ್ಲಿ ಹಿಂದೀ ಭಾಷಾ ಪ್ರಚಾರದ ಮಹತ್ವವನ್ನು ಅರಿತು, ತಮ್ಮ ಮಕ್ಕಳಾದ ಶ್ರೀ ದೇವದಾಸಗಾಂಧಿಯವರನ್ನು ಕಳುಹಿಸಿದರು. ಕೆಲ ವರ್ಷಗಳ ನಂತರ ಅಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಸ್ಥಾಪನೆಯಾಯಿತು. ಈ 23 ವರ್ಷಗಳಲ್ಲಿ ದಕ್ಷಿಣದೇಶದಲ್ಲಿ ಹಿಂದಿಯ ಪ್ರಗತಿಯು ಅದ್ಭುತವಾಗಿದೆ. ಲಕ್ಷಾಂತರ ಜನರು ಪರೀಕ್ಷೆಗಳಿಗೆ ಕೂತು ತೇರ್ಗಡೆ ಹೊಂದಿದರು. ಲಕ್ಷಗ

22ನೇ ಪುಟವನ್ನು ನೋಡಿರಿ

ಅಂಬಾ ಭವನ
ಕಾಫಿ ಕ್ಲಬ್ ಮತ್ತು ಊಟದ ಹೋಟೆಲು
ಬೆಂಗಳೂರು ರೋಡು ಬಳ್ಳಾರಿ.

ಅಂಬಾ ಭವನ ಬಳ್ಳಾರಿ.

- ಸುಂದರ ವಸತಿ ಸ್ಥಾನ
- ಗಾಳಿ ಬೆಳಕುಗಳುಳ್ಳ ಸ್ವಚ್ಛ ಕೊಠಡಿಗಳು
- ತಣ್ಣೀರು ಮತ್ತು ಬಿಸಿನೀರಿನ ಸ್ನಾನ
- ವ್ಯಾಪಾರ ಉದ್ಯಮಗಳ ಕೇಂದ್ರ ಸ್ಥಳ
- ರುಚಿಕರ ಮತ್ತು ಆರೋಗ್ಯಕರ ಉಪಹಾರ
- ಸ್ವದಿಷ್ಟ ಭೋಜನ
- ವಿನಯಶೀಲ ನೌಕರವರ್ಗ

ಆರ್ಡರ್ ಕೊಟ್ಟಲ್ಲಿ ಸಂತೋಷಕೂಟಗಳಿಗೂ ಮತ್ತು ಅಲ್ಪೋಪಹಾರಗಳಿಗೂ ಬೇಕಾದಂಥ ಪಕ್ವಾನ್ನಗಳನ್ನು, ಪಲಹಾರ ಜಿನಸುಗಳನ್ನು ಸರಿಯಾದ ಧರಗಳಿಂದ ಒದಗಿಸುತ್ತೇವೆ.

ಬಳ್ಳಾರಿಯಲ್ಲಿರಬೇಕಾದರೆ ಇಲ್ಲಿಗೇ ಬರಲು ಮರೆಯಬೇಡಿ

WHILE AT BELLARY
Forget not to Stay at
AMBA - BHAVAN.
COFFEE CLUB
BOARDING - LODGING HOUSE
Bangalore Road — BELLARY.

ಪ್ರಾಥಮಿಕ ಶಾಲೆಗಳ ಆಯೋಗ್ಯತೆ?

ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಭೀಷಣೆ ಆಜ್ಞೆ

ನಿಮ್ಮ 200 ಶಾಲೆಗಳು ಅಯೋಗ್ಯವಾಗಿವೆ. ಸರ್ಕಾರದ ವಿಧಿ ನಿಯಮಗಳ ಮಟ್ಟಕ್ಕೆ 15 ನವಂಬರ್ 1941ರ ವಳಗಾಗಿ ಬರದಿದ್ದರೆ ಸದರಿ ಶಾಲೆಗಳ ಮುಂಜೂರಾತಿಯನ್ನು ಹಿಂತೆಗೆಯುವೆವು

[ಲೇಖಕ: ಉಪಾಧ್ಯಾಯ ಮಿತ್ರ] (ರೆಕಗ್ನಿಷನ್)

ಎಂಬರ್ಥವುಳ್ಳ ಭೀಷಣಾಜ್ಞೆಯು ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಬಂದಿದೆ ಸಾಪ! ಅನರೇನು ಮಾಡಿಯಾರು? ಬಾರು ಕೋಲು ಬಡಿತವನ್ನು ಉಪಾಧ್ಯಾಯರ ಬೆನ್ನ ಮೇಲೆ ತೀಡಿವರು [ನಂತರ ಹೊಟ್ಟೆಯ ಮೇಲೆ] ಎತ್ತರಿಕೆಯು ಯಥಾ ಪ್ರಕಾರವ ಪ್ರಾಥಮಿಕ ಶಾಲಾ ನಿಬಂಧನೆಗಳ ಪುನಃ ಪಠನಮಾಡಿದೆ ಮುಖ್ಯವಾದುವೆಂದರೆ.

1] ಬಾಲೆಯರ ಶಾಲೆಗಳಿಲ್ಲದ ಸ್ಥಳಗಳಲ್ಲಿ ಶಾಲಾಯೋಗ್ಯ ವಯಸ್ಸಿನ ಬಾಲೆಯರ ಸಂಖ್ಯೆಯಲ್ಲಿ ಶೇ 25 ಆದರೂ ಬಾಲೆಯರು ಗಂಡುಹುಡುಗರ ಶಾಲೆಯಲ್ಲಿರಬೇಕು.

2] ಒಂದನೆಯ ತರಗತಿಯಲ್ಲಿರುವ ವಿದ್ಯಾರ್ಥಿಗಳ ನಾಲ್ಕರಲ್ಲೊಂದು ಭಾಗ 4 ಮತ್ತು 5 ನೆಯ ತರಗತಿಗಳಲ್ಲಿರಬೇಕು.

3] ಶಾಲಾ ನಿದರ್ಶಕರು ಸೂಚನೆ ಇಲ್ಲದೆ ಬಂದ ಕಾಲಕ್ಕೆ (Surprise Visit) ಕನಿಷ್ಟಕ್ಕೆ ಉಪಾಧ್ಯಾಯರೊಬ್ಬರಿಗೆ ಸದಾಮಾನ್ಯ 20 ವಿದ್ಯಾರ್ಥಿಗಳಾದರೂ ಇರಬೇಕು.

4] 5 ನೆಯ ತರಗತಿಯವರೆಗೆ ಇಲ್ಲದ ಅಪೂರ್ಣ ಶಾಲೆಗಳು 5 ರ ವರೆಗೆ ತೆಗೆಯಲ್ಪಟ್ಟು ಪೂರ್ಣವಾಗಬೇಕು.

ಪ್ರಾಂತ್ಯದ ವಿದ್ಯಾಖಾತೆಯ ಮುಖ್ಯಾಧಿಕಾರಿಗಳ (D. P. I) ಈ ಆಜ್ಞೆಯನ್ನು ಜಾರಿಗೆ ತರಲು ಜಿಲ್ಲಾ ವಿದ್ಯಾಧಿಕಾರಿಗಳು ಆತುರಿಸುತ್ತಿರುವರು. ಅಂತೂ ಮೇಲಧಿಕಾರಿಗಳು ಪರಿಸ್ಥಿತಿಯ ಪೂರ್ಣ ತಿಳುವಳಿಕೆ ಸಾಲದೆ ನೂರಾರು ಉಪಾಧ್ಯಾಯರನ್ನು ಮನೆಗೆ ಕಳುಹಿಸಲು ಕೈತೊಳೆದುಕೊಂಡು, ಕೈತೋಳೇರಿಸಿಕೊಂಡು ಸಿದ್ಧರಿರುವರು.

ಗುಬ್ಬಿಯಮೇಲೆ ಬ್ರಹ್ಮಾಸ್ತ್ರ

ದ ಪ್ರಯೋಗನೇತಕ್ಕೋ ನಮಗೇ ಅರ್ಥವಾಗುವುದಿಲ್ಲ ಶಾಲೆಗಳು ಕೆಟ್ಟಿದ್ದರೆ ಅವುಗಳ ಕ್ಷೀಣತೆಗೆ ಎಲ್ಲಾ ಕಾರಣಗಳಿಗಿಂತಲೂ ವಿದ್ಯಾಖಾತೆಯ ನೀತಿಯೇ ಕಾರಣವೆಂಬುದನ್ನು ಆಧಾರ ಪೂರ್ವಕವಾಗಿ ಹೇಳಬಹುದು.

1] ಬೋರ್ಡು ನವರು ನಡೆಸುತ್ತಿರುವ ಶಾಲೆಗಳ ಪ್ರದೇಶಗಳಲ್ಲಿ ವಿದ್ಯಾ ಖಾತೆಯವರು ಖಾಸಗಿ ಶಾಲೆಗಳವರಿಗೆ ರೆಕಗ್ನಿಷನ್ ಕೊಟ್ಟಿರುವರು

2] ಕೂಳಿಲ್ಲದೆ ಸಾಯುತ್ತಿರುವ ಬಡವರ ಚಿಕ್ಕವಿಕ್ಕಳೂ ಸಹ ತಮ್ಮ ಬಾಲ್ಯದಿಂದಲೇ ಕೂಲಿ ಕೆಲಸಕ್ಕೆ, ಕುಳ್ಳು, ಕಟ್ಟಿಗೆ ಆರಿಸಲಿಕ್ಕೆ ದನಕಾಯಲಿಕ್ಕೆ ಹೋಗುತ್ತಾರೆ ಒಳ್ಳೆಯ ಶ್ರೀತರ ಮಕ್ಕಳೂ ಸಹ ಸರಿಯಾಗಿ ಶಾಲೆಗಳಿಗೆ ಬರುವುದಿಲ್ಲ. **ಉಪಾಧ್ಯಾಯರಿಗೆ ಪೋಲೀಸ್ ಅಧಿಕಾರಗಳಿಲ್ಲ ಚರ್ಯೆ ತೆಗೆದುಕೊಳ್ಳಲು ಬರುವಂತೆಯೇ ಇಲ್ಲ.**

3] ಹಳ್ಳಿಯ ಪ್ರದೇಶಗಳಲ್ಲಿ ನಿರ್ಬಂಧ ವಿದ್ಯಾಭ್ಯಾಸ ಪದ್ಧತಿಯು (Compulsory Education Scheme) ಜಾರಿಯಲ್ಲಿಲ್ಲ. ಅನುಲನಲ್ಲಿ ತಂದರೂ ಅದು ಮಾನ್ಯವಾಗದೆ ವ್ಯರ್ಥವಾಗುವದು.

21ನೇ ಪುಟವನ್ನು ನೋಡಿರಿ

ಸಾಮ್ಯವಾದ

ಭರತಖಂಡದ ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಭವಿಷ್ಯ ಸ್ವರಾಜ್ಯ ಸ್ಥಾಪನೆಯ ಯಾವ ತತ್ವದಿಂದಾಗಬೇಕೆಂಬುದೂ ಸಮಾಜ ರಚನೆಯು ಹೇಗಿರಬೇಕೆಂಬುದೂ, ವಿವೇಚಿಸಲ್ಪಡುವುದು, ನಿತ್ಯವಾಡಿಕೆಯಾಗಿ ಬಿಟ್ಟಿದೆ. ಸ್ವರಾಜ್ಯ ರಚನೆಯ ಕನಸಿಂದ ಪ್ರತಿಯೊಬ್ಬ ವ್ಯಕ್ತಿಯ ಜೀವನವೂ ಸಮಿಕರವಾಗಬೇಕೆಂಬುದು ಸದಿಚ್ಛೆಯೆಂತಲೇ ಭಾವಿಸುವುದರಲ್ಲಿ ಅಡ್ಡಿಯಿಲ್ಲ.

ಧನೋತ್ಪಾದನೆಯ ಸಾಧನೆಗಳೆಲ್ಲ ರಾಷ್ಟ್ರೀಕರಣವಾಗಿ, ರಾಷ್ಟ್ರದ ಸಂಪತ್ತು ಸಮನಾಗಿಯೇ ಎಲ್ಲರಿಗೂ ಹಂಚಲ್ಪಡಬೇಕೆಂಬುದು ಸಾಮ್ಯವಾದದ ಸಿದ್ಧಾಂತ ಎಲ್ಲರಿಗೂ ಕಲ್ಯಾಣವಾಗುವಂತೆ ಹಂಚುವ ಬಗೆ ಹೇಗೆ? ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಸಾಮ್ಯವಾದಿಗಳ ಪ್ರಕಾರ ಆರ್ಥಿಕ ಅಸಮಾನತೆಯಿಂದಲೇ ಬಂಡವಾಳಗಾರರ ಪ್ರಾಬಲ್ಯವು ಹೆಚ್ಚಿತು. ಬಡವಲದಿಂದಲೇ ಇಷ್ಟೆಲ್ಲಾ ಅನಾಹುತ ಉಂಟಾಗಿರುವುದರಿಂದ ಬಂಡವಾಳವನ್ನೇ ಕಿತ್ತೊಗೆದುಬಿಟ್ಟರೆ ಬಂಡವಾಳಕ್ಕೆ ಆಸ್ಪದವಿಲ್ಲದಂತೆ ಸದಸಮಾನವಾಗಿ ಹಂಚಬಹುದು. ಇದೇ ಸಮಾಜದ ತರುಣೋಪಾಯ ಇದರಲ್ಲಿಯೇ ಸಾಮ್ಯವಾದದ ಶಕ್ತಿ ಇದೆ. ಮಾನವನ ಹಿತಕ್ಕನುಸರಿಸಿ ವಿತರಣವಾಗುವುದೇ ಸ್ವಗತಿಯ ಕಾರಣ. ಸ್ವರಾಜ್ಯ ಸರ್ಕಾರವು ಕೆಲವಿಧಿ ನಿಯಮಗಳನ್ನು ಮಾಡಿ ಸಮಾಜ ರಚನೆಯ ಮತ್ತು ಆದಾಯ ವ್ಯಯಗಳ ನಿರೀಕ್ಷಕವಾಗಬೇಕು.

ಸಾಮ್ಯವಾದ ವೈಜ್ಞಾನಿಕ ತತ್ವಗಳ ನಿರೂಪಣೆಯಲ್ಲಿ ತೊಡಕು ಬರಬಹುದು. ತತ್ವಗಳು ಪುಸ್ತಕರೂಪದಲ್ಲಿರಬೇಕಾಗಲಿ ಪ್ರಪಂಚದ ಯಾವ ದೇಶದಲ್ಲಾಗಲಿ ಕೃತಿಯ ಸರಕಾರವು ಸ್ಥಾಪನೆಯಾಗಿಲ್ಲ ಯೂರೋಪ ಖಂಡದಲ್ಲಿ ಅಲ್ಪಸ್ವಲ್ಪ ಪ್ರಜಾರಾಜ್ಯಭಾರದ ಚಿಹ್ನೆಗಳುಳ್ಳ ಇಂಗ್ಲೆಂಡಿನೂ ಸ್ವೇಚ್ಛಾಧಿಕಾರೀ ರಾಷ್ಟ್ರಗಳಾದ ಜರ್ಮನಿ ಇಟಲಿಗೂ ಘೋರಯುದ್ಧವು ಸಾಗಿದೆ. ಅಲ್ಲಿಯ ಸಂಸ್ಕೃತಿ ನಡೆನುಡಿ ಆಚಾರ ವ್ಯವಹಾರ ದೇಶದ ಪ್ರಾಕೃತಿಕ ಸನ್ನಿವೇಶಗಳಿಗೂ ನಮ್ಮ ಭಾರತದೇಶಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಬ್ರಿಟಿಷರ ಆಳಿಕೆಯಲ್ಲಿ ಭಾರತ ರಾಷ್ಟ್ರದ ಸಹಕ್ಕು ಉದ್ಯೋಗ ವ್ಯವಸ್ಥೆಯ ಒಕ್ಕಲತನ ಕ್ಷೀಣಿಸುತ್ತಾ ನಡೆದಿದ್ದರೂ ಟ್ಯಾನಧಿ ಜನರು ಅನ್ನಾಹಾರಗಳಿಲ್ಲದೆ ಅರೆಯುತ್ತಿದ್ದಾರೆ. ಅಸಂಖ್ಯಾತ ಮಕ್ಕಳು ಹುಟ್ಟಿದ ಕೆಲ ತಿಂಗಳುಗಳೊಳಗಾಗಿಯೇ ಮರಣಿಸುತ್ತವೆ. ನಿರಕ್ಷರತೆ ದಾರಿದ್ರ್ಯ ರೋಗ-ನಿರುದ್ಯೋಗ ನಮ್ಮ ದೇಶದಲ್ಲಿದ್ದಷ್ಟು ಪ್ರಪಂಚದ ಯಾವ ದೇಶದಲ್ಲೂ ಇಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ ಭಾರತರಾಷ್ಟ್ರದ ಅಧೋಗತಿಗೆ ಪರಕೀಯರ ಆಳಿಕೆಯೇ ಮುಖ್ಯಕಾರಣ. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು 1929ನೆಯ ವರ್ಷ ಈಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿತು.

"ಭಾರತೀಯರ ದಾರುಣವಾದ ದುಃಖ ದಾರಿದ್ರ್ಯಗಳಿಗೆ ವಿದೇಶೀಯರ ಸುಲಿಗೆಯೊಂದೇ ಅಲ್ಲದೆ ಸಮಾಜದ ಲಿಂಗಕ ಘಟನೆಯೂ ಕಾರಣವಾಗಿದೆ ತಮ್ಮ ಸುಲಿಗೆಯು ತಡೆಯಿಲ್ಲದೆ ನಡೆಯಬೇಕೆಂದು ಬ್ರಿಟಿಷರು ಈ ಅರ್ಧಕಘಟನೆಯ ಸಮರ್ಥನೆಯನ್ನು ಮಾಡುತ್ತಿದ್ದಾರೆಂದು ಈ ಕಮಿಟಿಯು ಅಭಿಪ್ರಾಯಪಡುತ್ತದೆ. ಈದುಃಖ ದಾರಿದ್ರ್ಯಗಳನ್ನು ಪರಿಹರಿಸಿ ಹಿಂದೀ ಜನತೆಯನ್ನು ಸುಧಾರಿಸಬೇಕಾದರೆ, ಭಾರತೀಯ ಜನಾಂಗದ ಸದ್ಯದ ಆರ್ಥಿಕ ಮತ್ತು ಸಾಮಾಜಿಕ ಘಟನೆಯಲ್ಲಿಯೆ ಮೂಲಭೂತವಾದ ಬದಲಾವಣೆಗಳನ್ನು ಮಾಡಿ ಮಹತ್ತರವಾದ ಅಸಮಾನತೆಗಳನ್ನು ನಿರ್ಮೂಲಿಸಬೇಕು."

ಇಲ್ಲಿಯ ಸಾಮ್ಯವಾದಿಗಳು ಇದೇ ಮಾತನ್ನು ಎತ್ತಿ ಹಿಡಿದು ಕಾಂಗ್ರೆಸ್ ಸರಕಾರವೆಂದರೆ ಸಾಮ್ಯವಾದೀ ಸರಕಾರವೆಂದು ಪ್ರತಿವಾದಿಸುತ್ತಿರುವರು. ಅದಕ್ಕಾಗಿ ಹೋರಾಡುತ್ತಿರುವರು. ಆಲ್ ಇಂಡಿಯಾ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯವರು ತಮ್ಮ ಉದ್ದೇಶ ಪತ್ರಿಕೆಯಲ್ಲಿ ಸಾಮ್ಯವಾದಿಗಳ ಕಾರ್ಯಕ್ರಮವನ್ನು ವಿವರಿಸಿರುತ್ತಾರೆ. ಭಾರತೀಯ ಸಾಮ್ಯವಾದಿಗಳ ಉದ್ದೇಶಗಳು ತಿಳಿಕೆಗೆ ಕಂಡಂತಿವೆ.

1. ಎಲ್ಲ ಅಧಿಕಾರವು ಧನೋತ್ಪತ್ತಿಯಲ್ಲಿ ತೊಡಗಿದ ಜನತೆಯ ಕೈಯಲ್ಲೇ ಇರಬೇಕು.

2 ದೇಶದ ಆರ್ಥಿಕ ಜೀವನದ ವಿಕಾಸವೆಲ್ಲ ರಾಷ್ಟ್ರದ ನಿಯಂತ್ರಣಕ್ಕೆ ಒಳಪಡಬೇಕು.

3. ಕಾಲಕ್ರಮದಲ್ಲಿ ಉತ್ಪತ್ತಿ, ವಿನಿಮಯ, ವಿತರಣಗಳ ಸಾಧನಗಳನ್ನೆಲ್ಲ ಜನಾಂಗದ ಒಡೆತನದಲ್ಲಿರಿಸುವ ಉದ್ದೇಶದಿಂದ ಭೂಕ್ಕು, ಹತ್ತಿ, ನಾರ, ರೇಲ್ವೆ, ಹಡಗು, ಖನಿಜಗಳು ಮುಂತಾದ ಪ್ರಮುಖ ಮತ್ತು ಜೀವಾಳದ ಉದ್ಯಮಗಳೆಲ್ಲವನ್ನೂ ಬ್ಯಾಂಕುಗಳು, ವಿಮಾಸಂಸ್ಥೆಗಳು, ಸಾರ್ವಜನಿಕ ಸಂಸ್ಥೆಗಳೇ ಮೊದಲಾದವುಗಳನ್ನೂ ಜನಾಂಗದ ಆರ್ಥಾತ್ ರಾಷ್ಟ್ರದ ಒಡೆತನಕ್ಕೆ ಆರ್ಪಿಸುವುದು.

4. ವಿದೇಶದ ವ್ಯಾಪಾರವು ರಾಷ್ಟ್ರದ ನಿಶಿಷ್ಟ ಅಧಿಕಾರಕ್ಕೆ ಒಳಪಟ್ಟಿರಬೇಕು.

5 ಸಾಮ್ಯವಾದದ ಆಡಳಿತಕ್ಕೆ ಇನ್ನೂ ಒಳಪಡದ ದೇಶದ ಆರ್ಥವ್ಯವಸ್ಥೆಯ ಭಾಗದ ಉತ್ಪತ್ತಿ, ವಿತರಣ, ಸಾಲ ಇವುಗಳನ್ನು ಸಹಕಾರದ ಸಂಘಟನೆಯಿಂದ ನಡೆಯಿಸುವುದು.

6. ರಾಜರು, ಜಹಗೀರದಾರರು, ಮತ್ತು ಬೇರೆತರದ ಎಲ್ಲ ಸುಲಿಗೆಗಾರರು ಇವರನ್ನೆಲ್ಲ ಕ್ಷಿಪ್ರಫಲಕೊಡದ ಸಿಂಹಾಸನಗಳಿಂದಲೂ ಇತರ ಗದ್ದುಗೆಗಳಿಂದಲೂ ತಳ್ಳಿಹಾಕಬೇಕು.

7. ಹೊಲಗೆದ್ದೆಗಳನ್ನೆಲ್ಲ ಮತ್ತೊಮ್ಮೆ ಒಕ್ಕಲಿಗರಲ್ಲಿ ಹಂಚುವುದು.

8. ಸಹಕಾರದ ಮತ್ತು ಸಾಂಘಿಕವಾದ ಒಕ್ಕಲತನಕ್ಕೆ ರಾಷ್ಟ್ರದ ಸಹಾಯ ಮತ್ತು ಪ್ರೋತ್ಸಾಹವನ್ನು ಕೊಡುವುದು

9. ಕೂಲಿಕಾರರ ಮತ್ತು ಒಕ್ಕಲಿಗರ ಸಾಲಗಳನ್ನೆಲ್ಲ ತೀರಿಸುವುದು.

10 ಪ್ರತಿಯೊಂದು ವ್ಯಕ್ತಿಗೆ ಮಡಿತನವನ್ನು ಕೊಡುವುದು, ಅಥವಾ ಉಹ ಜೀವನಕ್ಕೆ ಸಹಾಯವಾಡುವುದು ತನ್ನ ಕರ್ತವ್ಯವೆಂದು ರಾಷ್ಟ್ರವು ತಿಳಿಯುವುದು.

11. ಪ್ರತಿಯೊಂದು ವ್ಯಕ್ತಿಯ ಕಾರ್ಯಕ್ಷಮತೆಯಂತೆ ದುಡಿತವನ್ನು ತೆಗೆದುಕೊಂಡು ಅವರವರ ಅಗತ್ಯಗಳಂತೆ ಜೀವನ ಸಾಮಗ್ರಿಗಳನ್ನು ಒದಗಿಸುವದೇ ಆರ್ಥಿಕ ಸರಕುಗಳ ಉತ್ಪತ್ತಿ ವಿತರಣಗಳನ್ನು ಸಾಗಿಸುವ ಕ್ರಮದ ಮೂಲಾಧಾರವಾಗಬೇಕು.

12. ದುಡಿತದ ತಳಹದಿಯಮೇಲೆ, ಪ್ರಾಯಸ್ಥರಾದವರಿಗೆಲ್ಲ ಮತಾಧಿಕಾರ.

13. ರಾಷ್ಟ್ರವು ಧಾರ್ಮಿಕ ಮತಮತಗಳಲ್ಲಿ ಪಕ್ಷಪಾತವನ್ನು ಮಾಡುವ

20ನೇ ಪುಟವನ್ನು ನೋಡಿರಿ

ಸಾರ್ವಜನಿಕ ವಿಶ್ವಾಸವೇ

'ಓರಿಯಂಟಲ್' ನ್ನು

ಹಿಂದೂಸ್ಥಾನದ ಪ್ರಮುಖ ಜೀವನವಿಮಾ ಕಂಪನಿಯನ್ನಾಗಿ ಮಾರ್ಪಡಿಸಿದೆ.

ಜಾರಿಯಲ್ಲಿರುವ ಒಟ್ಟು ಜೀವನವಿಮೆ ೩೧-೧೨-೧೯೪೦ ರ ದಿನ 83 ಕೋಟಿಗಳಮೇಲೆ

ಮೊತ್ತ

ನಿಧಿಯ (FUNDS) ಮೊತ್ತ ೩೧-೧೨-೧೯೪೦ „ 27½ „

ವಾರ್ಷಿಕ ಆದಾಯ ೩೧-೧೨-೧೯೪೦ „ 4¾ „

ನಮ್ಮ ಅತ್ಯಂತ ಆಕರ್ಷಣೀಯವಾದ ಯೋಜನೆಗಳಿಗಾಗಿ ಕಳಗಿನವರಿಗೆ ಬರೆಯಿರಿ

ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್ [ಸ್ಥಾಪನೆ ೧೮೭೪]

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ ಕಂಪನಿ ಲಿಮಿಟೆಡ್.

ಮದ್ರಾಸು ಮಧುರ, ಕೊಯೆಂಬತೂರು, ಬೆಂಗಳೂರು, ಟ್ರಿಚಿನಾಪಲಿ, ಟ್ರಿವಾಂಡ್ರಂ, ವಿಶಾಖಪಟ್ಟಣಂ

(ಮುಖ್ಯ ಕಾರ್ಯಾಲಯ, ಬೊಂಬಾಯಿ.)

ಇನ್‌ಸ್ಪೆಕ್ಟರು - ಓರಿಯಂಟಲ್ ಲೈಫ್ ಅಫೀಸು, ಅಕ್ಕಸಾಲಿಗರ ಬೀದಿ, ಬಳ್ಳಾರಿ.

1-8-1943ಕ್ಕೆ ಕೃತಯುಗಾರಂಭ!

ಈ ಆಶ್ಚರ್ಯಕರ ವಿಷಯವನ್ನು ನಮ್ಮ ಪುಸ್ತಕದಲ್ಲಿ ನೋಡಿರಿ

ಕಲಿಯುಗಾಂತ ಮತ್ತು ಕೃತಯುಗಾರಂಭ

ವಿಚಾರ.

(ಸ್ವೀಜು ಕಾಗದ, ಕಲ್ಲಿ ಅವತಾರದ ಚಿತ್ರ)

ಇಂಥಾ ಪುಸ್ತಕ, ಇಪ್ಪು ಶೋಧನೆ, ಈಪರಿಯಾದ ವಿಚಾರ ಯಾವ ಭಾಷೆಯಲ್ಲಿಯೂ ಇಲ್ಲ ಯುಗದ ಬದಲಾವಣೆ ಆಗುವದು ನಿಶ್ಚಯ. ನಿಶ್ಚಯುನೆಂದು ಹಿಂದೂ, ಮುಸಲ್ಮಾನೀಯ, ಕ್ರಿಸ್ತ ಗ್ರಂಥಗಳ ಪ್ರಮಾಣಗಳು ಕೊಡಲ್ಪಟ್ಟಿವೆ. ವಾಚಕರು ಬೇಗನೆ ತರಿಸಿಕೊಂಡು ಭವಿಷ್ಯತ್ಕಾಲ ಮಹಿಮೆಯನ್ನು ತಿಳಿದುಕೊಳ್ಳುವವರಲ್ಲಿ ಲಾಭವಿದೆ.

ಬೆಲೆ 0-8-0. | ಅನುವಾದಕ ಮತ್ತು ಪ್ರಕಾಶಕ

ವಿ. ಪಿ. ಖರ್ಚು ಪ್ರತ್ಯೇಕ. | 'ವಿದ್ವಾ' ಕೆ.ಯಂ. ಕರಿಬಸವ ಶಾಸ್ತ್ರಿ. ರಾಯದುರ್ಗ.

ಗ್ರಂಥ ಶಿಕ್ಷುವ ಸ್ಥಳಗಳು:...

ಶಿವರಾಮಯ್ಯ, ರಾಮಗಿರಿ ಮಠ ರಾಯದುರ್ಗ.

ಅ ಥ ವಾ

ಯಜಮಾನ್ ಅಂಡು ಬ್ರದರ್ಸ್, ಬಳ್ಳಾರಿ.

ಎಳ್ಳೆಣ್ಣೆ.

(ಈಗುರ್ತಿನ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ)

ಸುವಾಸನೆ. ಸುರುಚಿ-

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **AS** ಸೀಲನ್ನು ಗಮನಿಸಿ,ಕೊಳ್ಳಿರಿ. ಮೋಸಹೋಗಬೇಡಿರಿ

ದೊರೆಯುವ ಸ್ಥಳ:- 1.) ಎಂ. ಹುಚ್ಚೆಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ. ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ರಾಷ್ಟ್ರದ ಸ್ವಾತಂತ್ರ್ಯ ಯುದ್ಧದಲ್ಲಿ ಸ್ವಯಂಸೇವಕರ ಸ್ಥಾನವು

ಸ್ವಯಂಸೇವಕನ ಕರ್ತವ್ಯವು ಬಹು ಮಹತ್ವದ್ದೂ ಅಷ್ಟೇ ಕಠಿಣವಾದದ್ದೂ ಇದೆ. ಅವನ ದೇಹವು ಬಲವುಳ್ಳದ್ದೂ ಮನಸ್ಸು ನಿರ್ಮಲವಾದದ್ದೂ ಇರಬೇಕು. ಸೇವಾ ಬುದ್ಧಿಯಿಂದ ಕೂಡಿದ್ದ ಅವನನ್ನು ಯಾವ ಸ್ಥಿತಿಯೂ ಆತಂಕ ಗೊಳಿಸಲಾರದು. ಇಂತಹ ಜನರಿಂದ ಕೂಡಿದ ಸಂಘಗಳು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಒಂದೇ ಸೂತ್ರಬದ್ಧವಾಗಿ ನಡೆದರೆ ನಮ್ಮ ಧ್ಯೇಯವು ಪಾವನವಾಗಿಯೇ ಸಾಧಿಸುವುದು.

ಕಾರ್ಯೋದ್ದೇಶ

ಬ್ರಿಟಿಷ್ ಸರ್ಕಾರದಿಂದ ಸ್ವಾತಂತ್ರ್ಯಕ್ಕಾಗಿ ತ್ರಿಕರಣಪೂರ್ವಕವಾಗಿ ಹೋರಾಡುತ್ತಿರುವ ರಾಷ್ಟ್ರದಲ್ಲಿ ಅನೇಕ ಶಕ್ತಿಗಳು ಮಡಿಯುತ್ತಿರುತ್ತವೆ. ಇದಕ್ಕಾಗಿ ರಾಜಕೀಯ ಪಕ್ಷಗಳು ನಿರ್ಮಿಸಲ್ಪಡುತ್ತವೆ. ದೇಶದ ಸಾಮಾನ್ಯ ಜನತೆಗೆ ಒಡಂಬಡಿಸುವಂತಹ ಸ್ಪಷ್ಟವಾದ ಕಾರ್ಯಕ್ರಮಗಳು ಈ ಪಕ್ಷಗಳಿಗಿರಬೇಕು. ಈ ದೃಷ್ಟಿಯಿಂದ ಪಕ್ಷಗಳು ತಮ್ಮೊಳಗಿನ ಎಲ್ಲ ಕ್ಷುಲ್ಲಕ ಮತಭೇದಗಳನ್ನು ಮರೆಯಬೇಕಲ್ಲದೆ ಜಾತೀಯತೆಯ ವಿಚಾರಗಳಿಗೆ ಎಡೆಗೊಡಬಾರದು. ನ್ಯಾಯಬದ್ಧವೂ ಮತ್ತು ದೇಶದ ಕೋಟ್ಯಾವಧಿ ಜನರಿಗೆ ಹೊಣೆಯಾದ್ದೂ ಆದ ತಮ್ಮದೇ ಆದ ಸರ್ಕಾರವನ್ನು ಸ್ಥಾಪಿಸುವ ಅಂತಿಮ ಧ್ಯೇಯವನ್ನು ಮುಟ್ಟುವಂತಹ ನಮ್ಮ ಪಧ್ಯವರ್ತಿ ಸ್ಥಾನವನ್ನು ಬಲಗೊಳಿಸಿ ಅನಂತ್ಯವಾದ ಘಟನೆಯಾಗುವಂತೆ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಇದೇ ಪ್ರಮುಖವಾದ ಧ್ಯೇಯಸಾಧನೆಗಾಗಿ ನಮ್ಮಲ್ಲಿ ಹರಡಿಕೊಂಡಿರುವ ಎಲ್ಲ ಶಕ್ತಿಗಳನ್ನು ಪಕ್ಷಗಳು ಒಟ್ಟುಗೂಡಿಸಬೇಕು.

ಯೋಗ್ಯ ಉಪಾಯ

ಈ ಧ್ಯೇಯವನ್ನಿಟ್ಟುಕೊಂಡು ಅದರ ಸಾಧನೆಗಾಗಿ ಮತಭೇದಗಳಿಂದ ಅಲಿಪ್ತವಾದ ತನ್ನದೇ ಆದ ಒಂದು ಸುಬದ್ಧವಾದ ಮಂಡಲವನ್ನು ನಿಯಮಿಸುವುದು ಯಾವುದೇ ಸಂಸ್ಥೆಗೆ ಅವಶ್ಯವಾಗಿದೆ ಈ ದೇಶದ ಮತ್ತು ಇತರ ರಾಷ್ಟ್ರಗಳಲ್ಲಿಯ ಅನುಭವಗಳಿಂದ ಈ ಧ್ಯೇಯವನ್ನು ಸಾಧಿಸುವುದಕ್ಕೆ ತೀರ ಸುಲಭ ಮತ್ತು ಪರಿಣಾಮಕಾರಿಯಾದ ಮಾರ್ಗವೆಂದರೆ ಸ್ವಯಂಸೇವಕರ ಶಿಕ್ಷಣದ ದ್ವಾರಾ ಸಾಗುವುದೇ ಆಗಿದೆ. ಸ್ವಯಂಸೇನಕರ ಶಿಕ್ಷಣವು ಅನೇಕರು ತಿಳಿದಿರುವಂತೆ ಕೇವಲ ಕವಾಯತು ಮಾಡಿಸಿದರೆ ಮುಗಿಯುವುದಿಲ್ಲ. ದೇಶದ ರಾಷ್ಟ್ರೀಯ ಕಲ್ಯಾಣಕ್ಕಾಗಿ ಜೀವಿಸುತ್ತಿರುವ ಸಂಸ್ಥೆಯ ಪ್ರತಿದಿವಸದ ಕಾರ್ಯಕಲಾಪಗಳಲ್ಲಿ ಅದು ಪ್ರಾಮುಖ್ಯವಾಗಿ ಭಾಗವಹಿಸುತ್ತದೆ.

ನಿಜ ಸ್ವಯಂಸೇವಕ

ಸಾಮಾನ್ಯವಾದ ಧ್ಯೇಯಕ್ಕಾಗಿ ಕೂಡಿಕೊಂಡು ಸಾಗುವುದನ್ನು ಕಲಿಯುವುದೇ ಸ್ವಯಂಸೇವಕ ಶಿಕ್ಷಣದ ಮುಖ್ಯ ಗುರಿಯಾಗಿದೆ. ತಮ್ಮೊಳಗಿನ ಎಲ್ಲ ಭೇದಗಳನ್ನೂ ಮರೆಯಲ್ಬಟ್ಟು ಸ್ವಾರ್ಥತ್ಯಾಗದ ಮುಖಾಂತರ ಗುರಿಯ ದಾರಿಯು ಕಟ್ಟಲ್ಪಡಬೇಕು. ತ್ಯಾಗಶೀಲತೆಯು ಸ್ವಯಂಸೇವಕನಿಗೆ ಸೇರಿಕೊಡಬೇಕು. ಸೇವೆಯ ಮಾರ್ಗವಲ್ಲಿ ಶಿಕ್ಷಣ ಹೊಂದಿದನೆಂದರೆ, ರಾಷ್ಟ್ರದ ಭಾಗವಾದ ಸಮಾಜದ ಒರ್ವ ಸದಸ್ಯನು ಅವನು ಅಪ್ರತ್ಯಕ್ಷವಾಗಿ ಆಗುವನು ಕೀರ್ತಿಯು ಅವನಿಗೆ ಬೇಕಿಲ್ಲ. ಕರ್ತವ್ಯ ಪಾಲನೆಯೇ ಅವನ ಸಮಾಧಾನವು.

ಲೇಖಕರು
ಶ್ರೀ. ಕೆ. ಎಸ್. ಗಾಯತೋಂಡೆ
ದಿ ಬಾಂಬೆ ನ್ಯಾಶನಲ ಗಾರ್ಡ್ಸ್ ದ ಆಧ್ಯಕ್ಷರು.

ದಲಗಳ ಪ್ರಯೋಜನ

ಸ್ವಾತಂತ್ರ್ಯವ ಹೋರಾಟದಲ್ಲಿ ಸ್ವಯಂಸೇವಕ ದಲಗಳು ಹೇಗೆ ರಾಷ್ಟ್ರಕ್ಕೆ ಸಹಾಯ ಮಾಡಬಲ್ಲವು ? ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯವನ್ನೇ ತೆಗೆದುಕೊಳ್ಳೋಣ. ರಾಷ್ಟ್ರದ ಹಣೆಯಬರಹವನ್ನು ಬರೆಯುವ ಕಾರ್ಯದಲ್ಲಿ ಪ್ರತಿಯೊಬ್ಬನೂ ಭಾಗವಹಿಸುವುದು ಪವಿತ್ರವಾದ ಕರ್ತವ್ಯವಾಗಿದೆ. ಯಾವ ವ್ಯಕ್ತಿಯು ತಾನಾಗಿಯೇ ಕಾರ್ಯಪ್ರವೃತ್ತನಾವುದಿಲ್ಲ. ಅವನನ್ನು ಕಾರ್ಯೋನ್ಮುಖನನ್ನಾಗಿ ಮಾಡಲು ಬೇರೊಬ್ಬನು ಬೇಕು. ಈ ಕಾರ್ಯವನ್ನು ಸ್ವಯಂಸೇವಕ ದಲಗಳು ಚನ್ನಾಗಿ ಮಾಡಬಲ್ಲವು. ಕಾರ್ಯಕ್ರಮವನ್ನು ಸಾಗಿಸುವ ಕಾರ್ಯದ ಮಹತ್ವವು ಅನಮ್ರ ಭವಿಕನ ಮನಸ್ಸಿಗೆ ಹಿಡಿಯುವುದಿಲ್ಲ. ಆದರ ಮಹತ್ವದ ವಿಷಯದಲ್ಲಿ ಸುಸಂಘಟಿತ ಸಂಘಗಳು ಚನ್ನಾಗಿ ಪ್ರಚಾರ ಮಾಡಬಲ್ಲವು.

ಆದರೆ ಈಸಂಸ್ಥೆಗಳು ತಾತ್ಕಾಲಿಕವು ಕುಂಠಿತವೂ ದುಡಿಯುವಂಥವೂ ಇರಬೇಕು. ತಮ್ಮ ಹೊಣೆಗಾರಿಕೆಯ ಕಾರ್ಯದ ಅರಿವು ಇವರಿಗಿರಬೇಕು. ತಾವು ತಮ್ಮ ಆದರ್ಶವನ್ನು ಮುಂದಿಟ್ಟು ನೂರಾರು ಜನರನ್ನು ಯೋಗ್ಯದಾರಿಗೆ ತರುವವರೆಂಬದನ್ನು ಅವರು ತಿಳಿದಿರಬೇಕು. ಸ್ವಯಂಸೇವಕ ಸಂಸ್ಥೆಯು ತಮ್ಮ ಕಾರ್ಯದ ಇಂಗಿತವನ್ನು ತಿಳಿದು ಆ ಕಾರ್ಯವನ್ನು ಮಾಡುವಾಗ್ಗೆ ಸಾವಿರಾರು ಜನರು ತಮ್ಮನ್ನು ಅನುಸರಿಸುವಂತೆ ಅನಿಷ್ಟ ಕಾರ್ಯಶಕ್ತಿಗಳು ನಿಷ್ಕ್ರಿಯವಾಗುವಂತೆ ನೋಡಬೇಕು.

ಮಾರ್ಗವು ಕಠಿಣ

ಸ್ವಯಂಸೇವಕನ ಮಾರ್ಗವು ಸುಲಭವಲ್ಲ. ನ್ಯಾಯವಾದ ಕಾರ್ಯಗಳಿಗೂ ಅಸ್ಪಷ್ಟವಿಲ್ಲದೆ ಈ ದೇಶದಲ್ಲಿ ಅಮ ಇನ್ನೂ ಕಠಿಣವಾಗಿದೆ ಇಂದು ಎಷ್ಟೋ ಉಪಯುಕ್ತ ಸ್ವಯಂಸೇವಕ ಸಂಸ್ಥೆಗಳ ಕಟ್ಟಳೆಯ ಮೂಲಕ ನಿಂತುಹೋದದ್ದನ್ನು ನಾವು ನೋಡುತ್ತೇವೆ. ಕೇವಲ ಜಾತೀಯ ಸಂಸ್ಥೆಗಳ ಬಗ್ಗೆ ಈ ತರಹದ ವೃತ್ತಿಯನ್ನು ಸರಕಾರವು ತೋರುವುದು ಸಮಂಜಸವೇ ಸರಿ. ಆದರೆ ಸಾರ್ವತ್ರಿಕವಾಗಿ ಹಾಗೆ ಮಾಡುವುದು ಸರಿಯಲ್ಲ.

ಸ್ವಾತಂತ್ರ್ಯ ಸಾಧನೆಗಾಗಿ ಪ್ರಾರಂಭವಾದ ಸ್ವಯಂಸೇವಕ ಸಂಸ್ಥೆಗಳು ಕಾಯಿದೆಯ ತಾತ್ಕಾಲಿಕ ನಿಬಂಧಕ್ಕೆ ಹೆದರುವ ಕಾರಣವಿಲ್ಲ. ಕಾರ್ಯ ನಿಲ್ಲಿಸುವ ಅವಶ್ಯಕತೆಯೂ ಇಲ್ಲ. ಸೇವೆಯಲ್ಲಿ ವಿಶ್ವಾಸವಿದ್ದವರಿಗೆ ಯಾವ ಬಂಧನವೂ ಅಡ್ಡಬರಲಾರದು. ಒಂದು ಕಾರ್ಯವು ಶಿ

18ನೇ ಪುಟವನ್ನು ನೋಡಿರಿ

THE

Canara Industrial & Banking Syndicate Ltd.

(Incorporated in British India, Liability of Share-Holders Limited.)

HEAD OFFICE:- UDIPI.

Statement of affairs as on 31st August, 1941.

LIABILITIES.	Rs	A.	P	ASSETS.	Rs.	A	P
Paid-up Capital	5,81,758	0	0	Cash in hand and at Bankers at call	4,71,694	10	2
Reserve Funds	2 10,000	0	0	Investment on Govt. Securities	11,57,230	7	6
				,, on shares of other Banks & Companies	1,00,100	12	0
Deposits	32 45,857	4	11	Fully Secured Advances	13,88,337	3	7
Due to Bankers	96,185	6	7	Other advances,Bills discounted etc.	9,05,364	0	4
Bills for collection	2,89,402	3	1	Landed Properties etc., Office Premises Safes Furniture & fittings	2,46,882	15	6
Sundries including Revenue items	4,23,010	4	3	Bills for collection (per contra)	2,89,402	3	1
				Sundries including Revenue items	2,87,200	14	8
Total Rs	**48,46,213**	**2**	**10**	**Total Rs.**	**48,46,213**	**2**	**10**

"MUKUND NIVAS"
UDIPI
12th Sept 1941

We have pleasure to announce the opening of our branches at Gudlapah & Anantapur on the 26th Sept. 1941.

T. M. A. PAI,
Managing Director.

The Canara Mutual Assurance Company Ltd..

UDIPI, (South India)

LEADING FEATURES.

''CANARA MUTUAL'' was established for the purpose of enabling the public to secure full benefits of Life Assurance on most suitable and advantageous terms in a local Company over which they have absolute control. The Company was therefore constituted as a MUTUAL Company where the participating policy holders share the entire profits among themselves, there being no share-holders.

The Company underwent its First Valuation as at 31st December, 1938. It is really creditable to have based the very first Valuation on the assumption of 3½% interest yield and yet be able to declare a decent bonus and in the words of the Indian Insurance Journal ''The result of the valuation is unique in every respect and the annals of Indian Life Assurance do not furnish a single example of greater efficiency and economy.''

The Company issues all the well-known plans of assurances, the premiums charged are moderate, the Policy contracts are liberal, perfect security is obtained and on account of rigid economy exercised by the management and the Company having no need to make provisions for shareholders, the Bonus prospects are excellent.

ದತ್ತ ಮಂಡಲದಲ್ಲಿ ಬ್ಯಾಂಕುಗಳ ವ್ಯವಹಾರ
ಸ್ಥಾನಿಕ ಬ್ಯಾಂಕುಗಳಿಗೆ ಪ್ರೋತ್ಸಾಹ ಕೊಡಿರಿ

[ಶ್ರೀ ಬಿ. ವಿ. ಕೇಸಗಿರಿರಾವ್ - ಕಾರ್ಯದರ್ಶಿ ರಾಯಲಸೀಮ ಬ್ಯಾಂಕು]

ಅನಂತಪುರ, ಬಳ್ಳಾರಿ, ಕಡಪ, ಕರ್ನೂಲು ಜಿಲ್ಲೆಗಳಲ್ಲಿ 27 ಜಾಯಿಂಟ್ ಸ್ಟಾಕ್ ವ್ಯಾಪಾರೀ ಬ್ಯಾಂಕುಗಳಿವೆ. 10 ಜಿಲ್ಲಾ ಕೇಂದ್ರಗಳಲ್ಲೂ, ಉಳಿದವು ಇತರ ವ್ಯಾಪಾರೀ ಪ್ರದೇಶಗಳಲ್ಲೂ ಹಬ್ಬಿವೆ. ಜಿಲ್ಲೆಗಳಲ್ಲದೆ ಸಣ್ಣ ಪುಟ್ಟ ವ್ಯಾಪಾರೀ ಪ್ರದೇಶಗಳಲ್ಲೂ ಕೂಡ ಬ್ಯಾಂಕುಗಳು ಸ್ಥಾಪಿತವಾಗುತ್ತಲಿರುವ ಉದ್ದೇಗವು ಪ್ರದೇಶಿಯಲ್ಲೇ ಹೆಚ್ಚಾಗಿ ಬೆಳೆಯುವುದು.

ಇದಕ್ಕೆ ಕಾರಣಗಳು ಸ್ಪಷ್ಟವಾಗಿಯೂ, ಸ್ವಾಭಾವಿಕವಾಗಿಯೂ ಇವೆ. 1) ಜಿಲ್ಲೆಯ ಮುಖ್ಯ ಕೇಂದ್ರಗಳು ಜಿಲ್ಲೆಯ ದೊಡ್ಡ ರಫ್ತು ಸ್ಥಳಗಳಾಗಿರಬೇಕೆಂಬುದು ಕಾರಣವಿಲ್ಲ. 2] ಯಾವಸ್ಥಳಗಳಲ್ಲಿ ದೊಡ್ಡ ಬ್ಯಾಂಕುಗಳನ್ನಿಟ್ಟುನಡೆಸುವುದು ಅಡಚಣೆತ ರೀತ್ಯಾಕಷ್ಟವೋ ಅಂಥಾಸ್ಥಳಗಳಲ್ಲಿ ಸಣ್ಣ ಬ್ಯಾಂಕುಗಳು ವಿತವ್ಯಯದ ಸ್ವಲ್ಪಾಡಚಣೆತದಿಂದ ತಮ್ಮ ಮನ್ನಡೆಯನ್ನು ಸಾಗಿಸಿರುವುದು 3] ಬಡ್ಡಿ ವ್ಯವಹಾರಕ್ಕೆ ಸಂಬಂಧಿಸಿದ ಶಾಸನ ನಿಯಮಗಳ ಬೆಳವಣಿಗೆಯ ಜೊತೆಯಲ್ಲಿ ಜಾಯಿಂಟ್ ಸ್ಟಾಕ್ ಬ್ಯಾಂಕಿಂಗ್‌ಕೂಡ ಪ್ರಗತಿ ಹೊಂದಬೇಕಾದ ಆವಶ್ಯಕತೆ. 4] ನಾವು ಇನ್ನು ನಿರೀಕ್ಷಿಸಲ್ಪಡಬಹುದಾದ ಕೆಲ ನಿಯಮಗಳು ಆಚರಣೆಯಲ್ಲಿ ಬರಲಿವೆ. ಹಣವನ್ನು ಬಡ್ಡಿಗಾಗಿ ಕೊಡುವ ಸಾಹುಕಾರರು ತಮ್ಮ ಹೆಸರನ್ನು ರಿಜಿಸ್ಟರು ಮಾಡಿಸಿಕೊಂಡು ತಮ್ಮ ಉದ್ಯೋಗಕ್ಕೆ ಲೈಸನ್ಸು ಪಡೆಯುವುದು. ಖಾಸಗೀ ಸಂಸ್ಥೆಗಳು, ಜನರೂ, ಸಾರ್ವಜನಿಕರಿಂದ ಹಣವನ್ನು ಡಿಪಾಜಿಟ್ ಇಡಲು ಪ್ರತಿಬಂಧ. ಲೆಕ್ಕಗಳನ್ನು ಒಂದು ಶಿಸ್ತಿನಿಂದಿಟ್ಟು ಪ್ರಕಟಿಸುವುದು. ಬ್ಯಾಂಕುಗಳ ವ್ಯವಹಾರವನ್ನು ಬ್ಯಾಂಕುಗಳೂ ರಿಜಿಸ್ಟರಾದ ಬ್ಯಾಂಕರರೂ ಮಾಡುವುದು.

ಸಣ್ಣ ಪುಟ್ಟ ಬ್ಯಾಂಕುಗಳ ಬೆಳೆವಣಿಗೆಗೂ ಒಂದು ಮಿತಿಯುಂಟು. ಅವೆ ಮಿತಿಯಲ್ಲಿದ್ದರೆ ದೊಡ್ಡ ಬ್ಯಾಂಕುಗಳಂತೆ ಒಳ್ಳೆಯ ತಳಹದಿಯನ್ನುಳ್ಳವಾಗಿರುತ್ತವೆ. ಅವು ತಮ್ಮ ಜನ್ಮಸ್ಥಾನದಲ್ಲಾಗಲಿ ತಮ್ಮ ಪ್ರತಿಭೆ ಇರುವ ಪ್ರದೇಶಗಳಲ್ಲಾಗಲಿ ಯಶಸ್ವಿಯಾಗಬಲ್ಲವು. ದತ್ತಮಂತಲದ ಬ್ಯಾಂಕು ದತ್ತ ಮಂಡಲ ಕ್ಷೇತ್ರದ ಹೊರಗೆ ತನ್ನ ಕಾರ್ಯ ಕ್ಷೇತ್ರವನ್ನು ವಿಸ್ತರಿಸುವುದು ಅನುಚಿತ. ಇದಕ್ಕೆ ಕಾರಣಗಳುಂಟು. ಸ್ಥಾನಿಕ ಬ್ಯಾಂಕು ತನ್ನ ಹೆಸರಗನ್ನಯ ಸ್ಥಾನಿಕ ಅಭಿಮಾನ (Local Patriotism) ಕ್ಕೆ ವಿನಂತಿ ಮಾಡುವುದು. ಪದರಿ ಸ್ಥಳದಲ್ಲಿ ನಂಬಿಕೆ ವಿಶ್ವಾಸಗಳರುವ ಡೈರೆಕ್ಟರುಗಳು ತಮ್ಮ ಸ್ಥಾನದಲ್ಲಿ ಮಾತ್ರ ಪ್ರಬಲರಿರುವ ಎ. ಹಣವನ್ನು ಡಿಪಾಜಿಟ್ ಇಡುವವರಿಗೆ ಭದ್ರತೆಯುಂಟು.

ಹಣವನ್ನು ಕಡವಾಗಿಯೋ ಸಾಲವಾಗಿಯೋ ತೆಗೆದುಕೊಳ್ಳುವವರು ಡೈರೆಕ್ಟರುಗಳಿಗೆ ಪರಿಚಯವಿರುವರು ಡಿಪಾಜಿಟ್‌ದಾರರು ಹಣವುಯಾವರೀತಿಯಲ್ಲಿ ವಿನಿಯೋಗವಾಗಿದೆ ಯೆಂಬುಶವನ್ನು ತಿಳಿದುಕೊಳ್ಳಬಹುದು. ಡೈರೆಕ್ಟರುಗಳು ಸ್ಥಾನೀಕ ವ್ಯಾಪಾರಿಗಳಿಗೂ ಇತರ ಮುಖ್ಯಸ್ಥರಿಗೂ ಪರಿಚಯಸ್ಥರಿರುವಕಾರಣ ಅವರ ಬಳಿ ಯಾವಾಗಲಾದರೂ ಹೋಗಿ ಯಾವ ವಿಷಯಕ್ಕಾದರೂ ಮಾಹಿತಿ ಪಡೆಯಬಹುದು.

ಒತ್ತೆಯಿಂದ ಕಡವನ್ನು ಪಡೆಯುವವರಿಗೆ ಭದ್ರತೆಯುಂಟು ನೀವು ಬಂಗಾರದಮೇಲೆ ಕಡ ತೆಗೆದುಕೊಂಡು ಹೋಗಿದ್ದರೆ ನಿಮ್ಮ ಭಂಗಾರವು ಆಸ್ತಿವಂತರಾದ ನಿಮ್ಮ ಊರಲ್ಲೇ ಇರುವ ಮಹಾಶಯರೊಡನೆ ಇರುತ್ತದೆ. ಭಂಗಾರದಮೇಲೂ ಇತರ ಸಾಮಗ್ರಿಗಳಮೇಲೂ ಕಿರುವಾಯ್ದೆಯ ಸಾಲವು ಪೂರೈಯುತ್ತದೆ ಬಂದ ಸಾಮಗ್ರಿಗಳನ್ನೆಲ್ಲಾ (ಬ್ಯಾಂಕುಮೂಲಕ) ಕ್ಷೀಣೈವಾಗಿ ಪಡೆಯಬಹುದು. ಅಥವಾ ಕೆಲ ಭಾಗವನ್ನಾದರೂ ಪಡೆಯಬಹುದು.

ಸ್ಥಾನಿಕ ಬ್ಯಾಂಕುಗಳು ಅನೇಕ ವಿಧದ ಡಿಪಾಜಿಟ್‌ಗಳನ್ನೂ, ಸಾಲಗಳನ್ನೂ ಜನರ ಆವಶ್ಯಕತೆಗನುಗುಣವಾಗಿ ಏರ್ಪಡಿಸಬಹುದು. ಆದರೆ ಮುಖ್ಯ ಉದ್ದೇಶವು ಲಾಭವಿರಬಾರದು ಆದರೆ ಜನಸೇವೆಯೇ ಮುಖ್ಯವಿರಬೇಕು. ತನ್ನ ಹೇರು ಹೊರ್ಡರಿಗೆ ಅಲ್ಪಸ್ವಲ್ಪ ಲಾಭಬಂದತಾಯ್ತೆಂಬಧ್ಯೇಯವಿದ್ದರಾಯಿತು. ಸ್ಥಾನಿಕ ಬ್ಯಾಂಕುಗಳು ತಮ್ಮ ಕ್ಷೇತ್ರದಲ್ಲಿನ ಯುವಕರಿಗೆ ವಾಣಿಜ್ಯ ಶಿಕ್ಷಣಕೊಟ್ಟು ಅವರಿಗೆ ಭವ್ಯವಾದ ಭರವಸೆಯುಳ್ಳ ಉದ್ಯೋಗವನ್ನು ಒದಗಿಸಬಹುದು. ಸ್ಥಾನಿಕ ವ್ಯವಸಾಯ ಉದ್ಯೋಗ ವ್ಯಾಪಾರಗಳ ಪ್ರಗತಿಗೆ ಅದು ಸಹಾಯವಾಗಬಲ್ಲುದು. ತನ್ನ ಶಕ್ತಿಗನುಸಾರವಾಗಿ ಸ್ಥಾನಿಕ ಬ್ಯಾಂಕು ಉಪಯುಕ್ತವಾಗಿ, ಸೇವಾಯೋಗ್ಯವಾದ ಸಂಸ್ಥೆಯಾಗಬಲ್ಲುದು.

ಸ್ಥಾನಿಕ ಬ್ಯಾಂಕುಗಳನ್ನು ಪ್ರೋತ್ಸಾಹಿಸುವುದರಿಂದ ನಿಮ್ಮ ಉದ್ಯೋಗವನ್ನು ನೀವೇ ಸೃಷ್ಟಿಸಿದಂತಾಗುತ್ತೆಂಬುದನ್ನು ಮರೆಯಬೇಡಿರಿ.

Indian Central Cotton Committee.
ಭಾರತ ಕೇಂದ್ರ ಅರಳೆ ಸಂಘ.

[ಲೇಖಕರು: ಶ್ರೀ ಹಾಲಪ್ಪ ಶೇಷಾದ್ರಿಮಕ್ಕಿ, ಬಿ. ಎ., ಬಿ. ಎಲ್., ಎಂ. ಎಲ್. ಎ. ಕೇಂದ್ರ ಅರಳೆಸಂಘದ ಸದಸ್ಯರು.]

ಪೀಠಿಕೆ— 1917-18ರಲ್ಲಿ ನಿಯೋಜಿತವಾದ ಭಾರತ ಅರಳೆ ಸಂಘ (Indian Cotton Committee) ದವರ ಸಿಫಾರಸು ಮೇಲೆ 1921ನೆಯ ಮಾರ್ಚಿ ತಿಂಗಳಲ್ಲಿ ಭಾರತ ಕೇಂದ್ರ ಅರಳೆ ಸಂಘವು ಉದ್ಭವವಾಯಿತು. 1923 ರಲ್ಲಿ ಸಾಕಾದಷ್ಟು ಧನ ಸಂಚಯದೊಂದಿಗೆ ಇಂಡಿಯನ್ ಕಾಟನ್ ಸೆಸ್ ಎಂಬ ಶಾಸನ ಬದ್ಧವಾಗಿ ಈ ಸಂಘವು ಆಡಳಿತ ಕಾರ್ಯವನ್ನಾರಂಭಿಸಿತು.

ಸಂಘದಲ್ಲಿ ಬೆಳೆಯುವವರ, ವ್ಯಾಪಾರಿಗಳ, ಗಿರಣಿಮಾಲೀಕರ [ನೂಲುವವರ] ಪ್ರತಿನಿಧಿಗಳಲ್ಲದೆ ವಿವಿಧ ಸರ್ಕಾರಗಳ ವ್ಯವಸಾಯ ಖಾತೆಯ ಅಧಿಕಾರಿಗಳೂ ಇದ್ದಾರೆ ಈ ಪ್ರತಿನಿಧಿಗಳು ಬ್ರಿಟಿಷ್ ಪ್ರಾಂತ್ಯಗಳಿಂದಲೂ, ದೇಶೀ ಸಂಸ್ಥಾನಗಳಿಂದಲೂ ಆರಿಸಲ್ಪಟ್ಟಿದ್ದು, ಕಾರ್ಯಾಲಯವು ಬೊಂಬಾಯಿಯಲ್ಲಿದೆ ಕಾರ್ಯದರ್ಶಿಯು ಕಛೇರಿಯ ವ್ಯವಸ್ಥೆಯನ್ನು ಮಾಡುತ್ತಾನೆ. ಸಂಘದ ಅಧ್ಯಕ್ಷರು ದೆಹಲಿಯಲ್ಲಿರುವ ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರೀಸರ್ಚ್ ಎಂಬ ಸಂಸ್ಥೆಯ ಉಪಾಧ್ಯಕ್ಷನಿದ್ದಾನೆ

ನಿಧಿಯ ವ್ಯವಸ್ಥೆ:— ಒಂದು ಅರಳೆ ಗಂಟಿಗೆ 0-2-0 ಎರಡಾಣೆ ತೆರಿಗೆಯನ್ನು ವಿಧಿಸಿ (0-2-0 Per bale of Cotton) ಕಮಿಟಿಗೆ ಕೊಡಲಾಗುತ್ತದೆ. ಸಂಘದ ಆರ್ಥಿಕ ಪರಿಸ್ಥಿತಿಯು ಈಗ ಚೆನ್ನಾಗಿದೆ. ಪ್ರತಿ ವರ್ಷವೂ ಸಂಘವು ಹತ್ತಿಯ, ಅರಳೆ ಅಭಿವೃದ್ಧಿಗಾಗಿ 10 ಲಕ್ಷ ರೂಪಾಯಿ ಖರ್ಚು ಮಾಡುತ್ತಲಿದೆ.

ಸಂಘದ ಕಾರ್ಯ ಭಾರವು ಬಹಿರಂಗವಿಲ್ಲ. ಜನತೆಗಾಗಿ ಸಂಘದವರು ಕಾರ್ಯಕಲಾಪಗಳನ್ನು ಪ್ರಕಟಿಸುವರು. ಬಹಳ

16ನೇ ಪುಟವನ್ನು ನೋಡಿರಿ.



ಸೆಪ್ಟಂಬರ್ 30-9-41

ಸುಖ ಸಮೃದ್ಧಿಗಳಾಗಲಿ

'ನವಭಾರತ'ದ ನಾಲ್ಕನೆಯ ವಾರ್ಷಿಕ ವರ್ಧಂತಿಯ ವಿಜಯ ದಶಮೀ ಶುಭಮುಹೂರ್ತದಲ್ಲಿ ಎಲ್ಲರಿಗೂ ವಿಜಯ, ಸುಖ, ಸಮೃದ್ಧಿಯುಲಭಿಸಲೆಂದು ಪ್ರಾರ್ಥಿಸುತ್ತೇವೆ ಯುದ್ಧದ ಕಾರಣ ಜನ್ಯವಾದ ಪರಿಸ್ಥಿತಿಯಲ್ಲಿ ಪತ್ರಿಕೆಗಳವರಿಗೆ ಗಂಡಾಂತರ ಒದಗಿದೆಂತೆ ಇದೆ. ಪ್ರೋತ್ಸಾಹಕರೂ, ರಾಷ್ಟ್ರಾಭಿಮಾನಿಗಳೂ, ಜಿಲ್ಲೆಯಲ್ಲಿನ ಈ ರಾಷ್ಟ್ರೀಯ ಪತ್ರಕ್ಕೆ ಕೊಡುಗೈಯಿಂದ ಸಹಾಯ ಮಾಡಿದ್ದಾರೆ ವಿಳಿ ಇಲ್ಲ. ಲಾಭಾಶೆಗಳಿಲ್ಲದೆ ಜನ ಸೇವೆಗಾಗಿಯೇ ಪ್ರಕಟವಾಗುತ್ತಿರುವ ಈ ಪತ್ರಿಕೆಯನ್ನು ಜನತೆಯೇ ಪೋಷಿಸಬೇಕಾದುದು ಆದ್ಯ ಕರ್ತವ್ಯವೆಂದು ಬೇರೆ ಹೇಳಬೇಕಾಗಿಲ್ಲ.

ವ್ಯವಸ್ಥಾಪಕ

ಕೈಮಗ್ಗದ ನೆಯ್ಗೂರರ ದೀನಾವಸ್ಥೆ.

ಯೂರೋಪ್ ಮಹಾಯುದ್ಧದಿಂದ ಜನಿಸಿದ ಆರ್ಥಿಕ ಪರಿಸ್ಥಿತಿಯಲ್ಲಿ ಜನತೆಗೆ ಕೊಳ್ಳುವ ಶಕ್ತಿ ಕಡಿಮೆಯಾಯಿತು. ನೂಲಿನ ಬೆಲೆಯು ಬಹಳವಾಗಿ ಏರಿತು. ವರದೇಶದಿಂದ ಬರುತ್ತಿದ್ದ ಬಣ್ಣಗಳು ನಿಂತು ಹೋದವು. ನೆಯ್ಗಾರರಿರುವ ಪ್ರದೇಶಗಳಲ್ಲಿ ಒಕ್ಕೈಯ, ಪಳಿಚಿಕೆಯಾವರೂ ಆಗಲಿಲ್ಲ. ಈಕಾರಣ ಕೈಮಗ್ಗದ ನೆಯ್ಗಾರರಿಗೆ ಸಹಿಸಲಶಕ್ಯವಾದ ಪೊಡೆತವು ಬಿದ್ದಿತು.

ಹಿಂದೂಸ್ಥಾನದಲ್ಲಿ ಬ್ರಿಟಿಷ್ ರಾಜ್ಯಾರಂಭವಾದಮೇಲೆ ಅವರಲ್ಲಿಯೂ 19 ನೆಯ ಶತಮಾನದ ಕೊನೆಯ ಭಾಗದಲ್ಲೂ 20ನೆಯ ಶತಮಾನದ ಆದಿಭಾಗದಲ್ಲೂ ಬ್ರಿಟಿಷರು ತಮ್ಮ ಗಿರಣಿಮಾಲಿಗೆ ಪ್ರೋತ್ಸಾಹಕೊಡುವ ಸಲ್ಲದೇಶ ಹೇರಿದ ಕರಭಾರದಿಂದ ಇತರ ಪ್ರೋತ್ಸಾಹಗಳ ಪಟುಂಡೂ ಸ್ಥಾನದ ಕೈಮಗ್ಗಗಳಲ್ಲಿ ಶೇಕಡ ಅರ್ಧ ಭಾಗವಷ್ಟು ನಾಶವಾದವು. ಹಿಂದಿನ ಅಧಿಕಾರಿಗಳು ಆಚರಿಸಿದ ರಾಷ್ಟ್ರಘಾತಕಧೋರಣೆಯು ಬಿಳಿಯರು ಬರೆದ ಗ್ರಂಥಗಳಿಂದಲೇ ಚೆನ್ನಾಗಿ ವ್ಯಕ್ತವಾಗಿದೆ.

ತಮ್ಮ ರಾಜ್ಯದ ಜನತೆಯನ್ನು ಕ್ಷಾಮ, ಯುದ್ಧ ಮತ್ತು ಇತರ ಅಪಾಯಗಳಿಂದ ಸಂರಕ್ಷಿಸಬೇಕಾದುದು ರಾಜ್ಯಾಧಿಕಾರಿಗಳ ಕರ್ತವ್ಯ ಹಿಂದೂಸ್ಥಾನ ರಕ್ಷಣೆಗೆಂದು ಯುವ್ವನಿಧಿಗಾಗಿ ಸಂಗ್ರಹಿಸುವ ಮತ್ತು ಪ್ರಚಾರಮಾಡುವ ಕಾರ್ಯಭಾಗದ ಸಹ ಭಾಗಮಾದರೂ ಭಾರತದಲ್ಲಿ ಕೂಳಿಲ್ಲದೆ ಗೋಳಾಡುತ್ತಿರುವವರ ವಿಷಯದಲ್ಲಿ ವ್ಯಕ್ತಪಡಿಸಿದ್ದರೆ ಕೈಮಗ್ಗದವರ ಅವಸ್ಥೆ ಇಷ್ಟು ದೀನಾವಸ್ಥೆಗೆ ಬರುತ್ತಿರಲಿಲ್ಲ.

ಮದ್ರಾಸ್ ಪ್ರಾಂತ್ಯದಲ್ಲಿರುವ 10 ಲಕ್ಷ ಕೈಮಗ್ಗದ ನೆಯ್ಗಾರರ ಸಹಾಯದ ಸಲುವಾಗಿ ಮದ್ರಾಸ್ ಹ್ಯಾಂಡಲೂಮ್ ವೀವರ್ಸ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ಇವರಿಗೆ ಇಂಡಿಯಾಸರ್ಕಾರವು 60 ಸಾವಿರ ಧನ ಸಹಾಯ ನೂಡಿರುತ್ತದೆ.

ಮದ್ರಾಸ್ ಹ್ಯಾಂಡಲೂಂ ವೀವರ್ಸ್ ಕೋ ಆಪರೇಟಿವ್ ಸೊಸೈಟೀಯವರು:-

ಪ್ರಕಟಿಸಿದಪ್ರಕಾರ 3,50,000ರು ಬಟ್ಟೆಯಸರಕುಗಳನ್ನು 3 ತಿಂಗಳೊಳಗಾಗಿ ಮಾರುತ್ತಾರೆ ಸ್ವದೇಶೀಯ ವಸ್ತುಗಳಿಗೆ ಇದಕ್ಕಿಂತಹೆಚ್ಚಿನ ಪ್ರೋತ್ಸಾಹ ವಿನ್ನೇನು ಬೇಕು? ಒಂದು ಸಣ್ಣ ಸಂಸ್ಥೆಯು ಇಷ್ಟುಕೆಲಸ ಮಾಡಿದಲ್ಲಿ ಬಲಾಢ್ಯವಾದ ಸರಕಾರವು ಕೈಮಗ್ಗದ ನೇಯ್ಗಾರರಿಗೆ ಸಹಾಯ ಮಾಡಲುಯೋಜನೆಯನ್ನೇರ್ಪಡಿಸಿದರೆ ಅದು ಯಶಶ್ವಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಬ್ಯಾರಿಯಲ್ಲಿ ಈ ಸೊಸೈಟಿಯ ಶಾಖೆಯೊಂದಿದೆ. ಇಲ್ಲಿ ತಯಾರಾದ ವಸ್ತುಗಳನ್ನು ಮಾರುವರು ಸ್ಥಾಪಿತನಾಗಿ 5 ವರ್ಷಗಳಾಯಿತ್ತು. ಪ್ರಥಮ ವರ್ಷದಲ್ಲಿ 1169 ರೂ ಗಳ ವ್ಯಾಪಾರವಾಗಿದ್ದಿತು. 1941ರಲ್ಲಿ 23126ರೂ. ಗಳ ವ್ಯಾಪಾರವಾಗಿ ಕೈಮಗ್ಗದ ಬಟ್ಟೆಗಳಿಗೆ ಇಂಥಾ ಪ್ರೋತ್ಸಾಹವು ದೊರೆತರೆ ಸಂಬಂಧಿಸಿದ ಸೊಸೈಟಿಗಳೂ ನೆಯ್ಗಾರರೂ ಸದಿನಗಳನ್ನು ಕಾಣುವರು. ಪ್ರಥಮವಲ್ಲಿ ಇವರಿಗೆ ಶೀಘ್ರಸಹಾಯ ಒದಗಿಸಲು ಸರ್ಕಾರವು ಮುಂದೆ ಬರಬೇಕೆಂದು ಸೂಚಿಸುತ್ತೇವೆ.

ರಾಯಲಸೀಮ ಬ್ಯಾಂಕು ಲಿಮಿಟೆಡ್

ಇಂಡಿಯನ್ ಕಂಪನಿ ಶಾಸನದ ಕೆಳಗೆ ಸ್ಥಾಪಿತವಾದ ರಾಯಲಸೀಮಾ ಬ್ಯಾಂಕಿನ ಪ್ರಗತಿಯು ಆಶಾಜನಕವಾಗಿದೆ. ಬಳ್ಳಾರಿ ಜನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಈ ದತ್ತಮಂಡಲದ 5 ಜಿಲ್ಲೆಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಆರ್ಥಿಕ ಸಂಪತ್ತನ್ನು ಮಿಗಿಲಾಗಿಹೆಚ್ಚಿಸಲು ಈ ಬ್ಯಾಂಕಿನ ಕಾರ್ಯಾರಂಭವಾಗಿ ಈದಿನಕ್ಕೆ ಒಂದು ವರ್ಷವಾಯ್ತು. ಪ್ರಾರಂಭದಲ್ಲಿ ಅಧಿಕೃತ ಬಂಡವಲವು 5 ಲಕ್ಷ ರೂ. ಗಳಿದ್ದು ಸಾರ್ವಜನಿಕರಿಗೆ 4 ಲಕ್ಷ ರೂ. ಗಳಿಗಾಗಿ ಕೆಗೆಬಿಟ್ಟಿದ್ದಾಯ್ತು. ಆವರಲ್ಲಿ 1,30,700 ರೂ. ಗಳನ್ನು ಸಾರ್ವಜನಿಕರು ಪಡೆದು 62750 ರೂ. ಗಳನ್ನು ಈಗಾಗಲೇ ಸಲ್ಲಿಸಿರುವರು.

ಈಗಾಗಲೇ ಆದರ ಶಾಖೆಗಳು ಕೊಟ್ಟೂರು, ತಿಮ್ಮನಹಳ್ಳಿ ಮತ್ತು ಉರವಕೊಂಡೆಗಳಲ್ಲಿ ಯಶಸ್ವಿಯಾಗಿ ಕೆಲಸ ಮಾಡುತ್ತಲಿವೆ. ಈ ಜಿಲ್ಲೆಗಳಲ್ಲಿ ಪ್ರಸಿದ್ಧಿ ಇರುವ ವಿಶ್ವಾಸೀ ಶ್ರೀ ಮಂತರೇ ಈ ಬ್ಯಾಂಕುಗಳ ಡೈರೆಕ್ಟರರಾಗಿರುತ್ತಾರೆ ಒಳ್ಳಾರಿ ಜಿಲ್ಲೆಯಲ್ಲಿ ಶಾಸನ ಸಭ್ಯರೂ, ಸುಪ್ರಸಿದ್ಧ ವಕೀಲರೂ ಶ್ರೀಮಂತ ಮನೆತನಕ್ಕೆ ಸೇರಿದವರೂ ಆದ ಶ್ರೀಹಾಲರ್ವಿ ಶೇತಾರಾಮಯ್ಯನವರು ಬ್ಯಾಂಕು ಅಧ್ಯಕ್ಷರಿರುತ್ತಾರೆ. ಬ್ಯಾಂಕುಗಳ ವ್ಯವಹಾರದಲ್ಲಿ ಚನ್ನಾಗಿನುರಿತ ಶಿಕ್ಷಣ ಹೊಂದಿದ ಶ್ರೀ ಬಿ. ವಿ ಕೇಶಗಿರಿ ರಾಯರು ಉತ್ಸಾಹದಿಂದ ಕಾರ್ಯದರ್ಶಿತ್ವವನ್ನು ವಹಿಸಿರುತ್ತಾರೆ.

ಈ ಬ್ಯಾಂಕು ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹಾರೈಸುತ್ತೇವೆ.

ನವ ಭಾರತಕ್ಕೆ ಚಂದಾದಾರರಾಗಿರಿ.

ರಷ್ಯಾ—ಜರ್ಮನಿ ಯುದ್ಧದ ಗುಟ್ಟು ★

ಲೆನಿನಗ್ರಾಡ್, ಕೀವ್—ಒಡೆಸ್ಸಾ

[ಟಿ. ಬಿ. ಕೆ]

ಯೂರೋಪಿನಲ್ಲಿ ಯುದ್ಧ ಪ್ರಾರಂಭ ನಂತರ ಯುದ್ಧದಲ್ಲಿ ಪ್ರವೇಶಿಸದೆ ರಷ್ಯಾಕ್ಕೆ ಪೋಲೆಂಡಿನರ್ಧಭಾಗ, ಲಿಥುನಿಯಾ, ಎಸ್ಟೋನಿಯಾ, ಫಿನ್‌ಲೆಂಡಿನ ಭಾಗ ರುಮೇನಿಯಾದಲ್ಲಿ 3 ಜಿಲ್ಲೆಗಳು ದೊರೆತವು. ಜರ್ಮನಿಗೂ ರಷ್ಯಾಕ್ಕೂ ಹಿಂದಿನಕಾಲದಿಂದಲೂ ಬದ್ಧದ್ವೇಷವಿದ್ದು ತತ್ವಗಳ ರಾಜ್ಯಭಾರಕ್ರಮದ ಅಂತರವು ಬಹಳ ಅಲ್ಲದೆ ಹಿಟ್ಲರನು ರಾಜ್ಯಭಾರದ ಕರ್ತೃವಾದನಂತರ ರಷ್ಯಾದ ಸಮಾಜ ಸಮತಾವಾದವು (Communism) ಪ್ರಪಂಚಕ್ಕೇ ಶತ್ರುವೆಂದು ಅನೇಕ ಸಲ ಸಾರಿದ್ದನು. ಇಂಥಾ ಅಂತರವಿದ್ದೂ ಕೂಡ ಹಿಟ್ಲರನನ್ನು ರಷ್ಯಾದ ಅಧಿಕಾರಿಗಳು ಹೇಗೆ ನಂಬಿದರು? ಅವನಲ್ಲಿ ವಿಶ್ವಾಸ ವಿಟ್ಟಬಗೆ ಹೇಗೆ? ಬಾಹ್ಯ ಪ್ರಪಂಚಕ್ಕೆಲ್ಲಾ ಜರ್ಮನಿ ರಷ್ಯಾದೆ ಶಗಳು ಪರಸ್ಪರ ಸ್ನೇಹದಿಂದ ವರ್ತಿಸುತ್ತಿರುವವೆಂತಲೂ ಅನೇಕರಲ್ಲಿ ಕಲಹಕಾರಣಾಂತರಗಳು ಎಂದಿಗೂ ಹುಟ್ಟಲು ಸಾಧ್ಯವೇ ಇಲ್ಲವೆಂತಲೂ ಭಾಸವಾಗುತ್ತಿತ್ತು. ಈ ಎರಡು ರಾಜ್ಯಗಳ ಕೃತ್ರಿಮಸ್ನೇಹವು ಜಗತ್ತನ್ನೇ ವಿಸ್ಮಯಗೊಳಿಸಿತ್ತು.

ಆದರೆ ತಥ್ಯಾಂಶವು ಬೇರೆಇನ್ನಿತ್ತು. ಪಶ್ಚಿಮಭಾಗದಲ್ಲಿದ್ದ ಸಣ್ಣ ಪುಟ್ಟ ರಾಷ್ಟ್ರಗಳನ್ನೆಲ್ಲಾ ಆಕ್ರಮಿಸಿಕೊಳ್ಳಲು ಹಿಟ್ಲರನಿಗೆ ಅನುಕೂಲ ಬೆ ಕಿತ್ತು. ತನ್ನ ಬಲವಾದ ನಿರ್ಧಾನಪತೆಯಿಂದ ಇಂಗ್ಲೆಂಡನ್ನು ಧ್ವಂಸಗೊಳಿಸುವ ಆಶಯದ ಪರೀಕ್ಷೆಯಾಗಬೇಕಾದ್ದಿತ್ತು. ಬಾಲ್ಟನ್ ರಾಷ್ಟ್ರಗಳನ್ನೆಲ್ಲಾ ನುಂಗಿ ನೀರು ಕುಡಿಯಬೇಕಿತ್ತು. ರಷ್ಯಾದ ಸರ್ವಾಧಿಕಾರಿಯಾದ ಸ್ಟಾಲಿನ್ ನು ಹಿಟ್ಲರನ ಕಾರ್ಯಗಳನ್ನೆಲ್ಲಾ ಸಂಶಯಾತ್ಮಕ ದೃಷ್ಟಿಯಿಂದ ನೋಡುತ್ತಾ ಒಂದು ಕೋಟಿ ಸೈನ್ಯವನ್ನು ಸುಸಜ್ಜಿತಗೊಳಿಸಿ ದೇಶದ ಆಯಕಟ್ಟು ಪ್ರದೇಶಗಳನ್ನೆಲ್ಲಾ ಬಲಪಡಿಸುತ್ತಿದ್ದನು. ಒಂದಲ್ಲೊಂದು ದಿನ ಜರ್ಮನಿಯೊಡನೆ ಯುದ್ಧವು ತಪ್ಪಿದ್ದಲ್ಲವೆಂದು ರಷ್ಯನರೆಲ್ಲಾ ಭಾವಿಸಿದ್ದರು. ಅವರಿಗೆ ಈವಿಷಯದಲ್ಲಿ ಅನುಮಾನಗಳಿದ್ದಿಲ್ಲ. ಅಲ್ಲದೆ ಬಾಲ್ಟನ್ ರಾಷ್ಟ್ರಗಳಲ್ಲಿ ಹಿಟ್ಲರನ ಕೃತಿಭಿಯು ಬೆಳೆಯುತ್ತಾ, ನಡೆದಂತೆಲ್ಲಾ ರಷ್ಯಾದ ಸರಕಾರವು ಹಿಟ್ಲರನಿಗೆ ಎಚ್ಚರಿಕೆ ಕೊಡುತ್ತಾ ಹೋಯಿತು ಅನಿಯಮಿತವಾಗಿ ಜರ್ಮನಿಯ ಆಕ್ರಮಣವಾದಂತೆಲ್ಲಾ ಅನು ರಷ್ಯಾಕ್ಕೆ ಅಪಾಯವೇರು ಭಾವಿಸಲ್ಪಡಹತ್ತಿತು. ಯುದ್ಧದ ಅವಧಿಯನ್ನು ಮುಂದಕ್ಕೆ ತಳ್ಳಲು ಜರ್ಮನಿಯು ರಷ್ಯಾದೊಡನೆ ಅನಾಕ್ರಮಣ ಒಪ್ಪಂದ ವ್ಯಾಪಾರೀ ಒಪ್ಪಂದ ಇವನ್ನೆಲ್ಲಾ ಮಾಡಿಕೊಂಡಿತು. ಅಲ್ಲದೆ ಜರ್ಮನಿಯ ವಿದೇಶಾಂಗ ಮಂತ್ರಿಗಳಾದ ಹರವಾನ ರಿಬ್ಬನ್ ಟ್ರಾಪರು ರಷ್ಯಾಕ್ಕೆ ಅನೇಕಸಲ ವಿಮಾನದಲ್ಲಿ ಹಾರಿಹೋಗಿ ಸರ್ವಾಧಿಕಾರಿಗಳೊಡನೆ ಸ್ನೇಹಮಯ ಸಂಭಾಷಣೆಯನ್ನು ನಡೆಸಿದರು. ಇಷ್ಟೇ ಅಲ್ಲದೆ ಅಚ್ಚಿನ ರಾಷ್ಟ್ರಗಳಲ್ಲೊಂದಾದ ಜಪಾನಿನ ವಿದೇಶಾಂಗ ಮಂತ್ರಿ ಮಟ್ಸುಒಕಾರವರನ್ನು ಕರೆಸಿ ಅವರೂ ರಷ್ಯಾದೊಡನೆ ಸಂಧಿಮಾಡಿಕೊಳ್ಳಲು ಹಿಟ್ಲರನು ಪ್ರೇರೇಪಿಸಿದನು. ಇವನ್ನೆಲ್ಲಾ ಜಗತ್ತು ನೋಡಿ ಎಂಥಾ ಗಾಢ ಶತ್ರುಗಳು ಮಿತ್ರರಾದರಲ್ಲಾ ಎಂದು ಅಚ್ಚರಿಪಟ್ಟಿತು

ಆದರೆ ಇವೆಲ್ಲಾ ಹಿಟ್ಲರನ ಜಾಲ ತನ್ನ ಸ್ವಾರ್ಥ ಸಾಧನೆಗಾಗಿ ಅವನು ಏನು ಬೇಕಾದರೂ ಮಾಡಬಲ್ಲ ಅವನು ಯುದ್ಧದಲ್ಲಿ ಶೂರನೂ ಹೌದು.ರಾಜ ಕಾರಣದಲ್ಲಿ ಅತ್ಯಿ ಚತುರನೂ ಹೌದು. ಕಣ್ಣಿಗೆ ಮಣ್ಣೆರ ಚ ವುದರಲ್ಲಿ ಅವನನ್ನು ಬಿಟ್ಟರಿಲ್ಲ. ಹಿಟ್ಲರನ ಮಿಲಿಟರಿ ಯಂತ್ರವು ಎಷ್ಟು ಪೂರ್ಣತೆಯನ್ನು ಹೊಂದಿರುವುದೋ, ಅವನ ಪ್ರಚಾರ ಯಂತ್ರವೂ ಅಷ್ಟೇ ಪೂರ್ಣತೆಯನ್ನು ಹೊಂದಿದೆ.

ರಾಜ್ಯಗಳ ಆಕ್ರಮಣವೆಂದರೆ ಅಲ್ಲಿ ಬಲವಾದ ಸೈನ್ಯವನ್ನಿಡಬೇಕು. ಅವ್ಯವಸ್ಥಿತವಾದ ದೇಶದಲ್ಲಿ ಆಹಾರ ಸಾಮಗ್ರಿಗಳನ್ನೊದಗಿಸಬೇಕು. ಜನತೆಯು ತನ್ನ ನಿತ್ಯ ನೈಮಿತ್ತಿಕ ಕಾರ್ಯಗಳನ್ನೆಲ್ಲಾ ತ್ಯಾಜ್ಯ ಮಾಡಿ ಹಿಟ್ಲರನ ಕಾಂಕ್ಷೆಯನ್ನು ಪೂರೈಸಲು ಯಂತ್ರ ಸಾಮಗ್ರಿ ಬಾಂಬು ವಿಮಾನಗಳ ತಯಾರಿಕೆ ನಿಲ್ಲಬೇಕು. ಅನಾವಶ್ಯಕ ಆಕ್ರಮಣದಿಂದ, ದರ್ಪವಾದ ಅಡಳಿತದಿಂದ ಜನರ ದೇಶಾಭಿಮಾನ ಪೂರಿತ ಭಾವನೆಗಳನ್ನು ಬಗ್ಗು ಬಡಿಯಲು ಪ್ರಯೋಗಿಸುತ್ತಿರುವ ಅಸಹನೀಯ ಮತ್ತು ಕ್ರೂರವಾದ ಹಿಂಸಾಚರಣೆಗಳಿಂದ ಎಲ್ಲೆಲ್ಲಿಯೂ ಶತ್ರುಗಳು ಹೆಚ್ಚುತ್ತಿರುವುದರಲ್ಲಿ ಸಂಶಯವೇ ಇಲ್ಲ.

ಈಗಿನ ಯುದ್ಧದಲ್ಲಿ ಯುದ್ಧಾಸಕ್ತ ರಾಷ್ಟ್ರಗಳವರಿಗೆ ಬೇರೆ ದೇಶಗಳವರು ಆಹಾರ ಒದಗಿಸಬೇಕು ಅಲ್ಲದೆ ನಿತ್ಯ ಯುದ್ಧಕ್ಕೆ ಎಣ್ಣೆಯೂಬೇಕು. ವಿಮಾನ, ಟ್ಯಾಂಕು, ಲಾರಿ, ಟ್ರಕ್, ಕಾರ್, ಮೋಟರ್, ಸೈಕಲ್ ಇವುಗಳಿಗೆಲ್ಲಾ ಎಣ್ಣೆಯುಬೇಕು.

ರುಮೇನಿಯಾದೇಶದಲ್ಲಿ ದೊರೆತ ಎಣ್ಣೆಯು ಹಿಟ್ಲರನ ಬಡಬಾನಲದಂಥ ಹೊಟ್ಟೆಗೆ ಎಲ್ಲಿ ಸಾಲಬೇಕು? ಈ ಕಾರಣದಿಂದಲೇ ರಷ್ಯಾದಲ್ಲಿ ಎಣ್ಣೆ ದೊರೆಯುವ ಉತ್ಕೃಷ್ಟ ಫಲವತ್ತಾದ ದೇಶವಾದ ಯುಕ್ರೇನಿಯಾಕ್ಕೆ ಹಿಟ್ಲರನು ದಾಳಿಮಾಡಿಸಿದನು. ರಷ್ಯಾವು ಸ್ನೇಹರಾಷ್ಟ್ರ ವಾಗಿದ್ದಕಾರಣ ರಷ್ಯಾದ ಮೂಲಕ ಜರ್ಮನಿಗೆ ಒಂದು ಮಿತಿಯಿಂದ ಆಹಾರ ಸಾಮಗ್ರಿಗಳು ಬರುತ್ತಿದ್ದವು. ಬಾಲ್ಟನ್ ರಾಷ್ಟ್ರಗಳಲ್ಲ ಹಿಟ್ಲರನ ಪ್ರತಿಭೆ ಹೆಚ್ಚಿದಂತೆ ರಷ್ಯನರಿಗೆ ಬಿಸಿಹತ್ತಿತು

ರಷ್ಯಾವು ಪೂರ್ಣ ಸ್ವಾಧೀನವಾಗುವವರೆಗೆ ತನ್ನ ಆಶಯವು ನೆರವೇರುವುದಿಲ್ಲವೆಂದು ಜೂನ್ 22 ನೆಯ ತಾ. ಹಿಟ್ಲರನು ರಷ್ಯಾದಮೇಲೆ ಯುದ್ಧ ಹೂಡಿದನು. ಹಿಟ್ಲರನ ಸುಮಾರು 20 ಲಕ್ಷ ಸೈನ್ಯವು ಬಾಲ್ಟಿಕ್ ಸಮುದ್ರದ ಕಡೆಯಿಂದ ಕೆಳಗೆ ಕಪ್ಪು ಸಮುದ್ರದವರೆವಿಗೆ ಎರಡು ಸಾವಿರ ಮೈಲಿ ಅಗಲ ಪ್ರದೇಶದ ವಿಸ್ತಾರವಾದ ರಷ್ಯಾದ ಅಗಾಧ ಸೈನ್ಯದೊಡನೆ ಕಾದಾಡುತ್ತಲಿದೆ. ಇಲ್ಲಿಯವರೆವಿಗೆ ಜರ್ಮನ್ ವಾರ್ತಾ ಸಂಸ್ಥೆಗಳಿಂದ ಹೊರಬಂದ ಪ್ರಕಾರಕ್ಕೆ 8 ಲಕ್ಷ ಜರ್ಮನಿ ಸೈನಿಕರು ಯುದ್ಧದಲ್ಲಿ ಮಡಿದಿರಲು ಸಾಕು. ಅಪಾರ ಯುದ್ಧದ ಸಾಮಗ್ರಿನಾಶವಾಗಿದೆ. ರಷ್ಯಾಕ್ಕೆ 20ಲಕ್ಷ ಸೈನಿಕರೂ, ಸಾವಿರಾರು ವಿಮಾನಗಳೂ, ಯುದ್ಧ ಸಾಮಗ್ರಿಗಳೂ ನಾಶವಾಗಿರಬೇಕೆಂದು ಒಂದು ವಾರ್ತೆಯಿಂದ ಧೃಢಪಟ್ಟಿದೆ.

ಜಗತ್ತಿನಲ್ಲೇ ಭೀಕರವಾದ (ಹಿಂದೆ ಎಂದೂ ನಡೆದಿರಲಿಕ್ಕಿಲ್ಲ) ಸಂಗ್ರಾಮವು ಇಂದು ರಷ್ಯಾದಲ್ಲಿ ಸಾಗಿದೆ. ಪ್ರಾಣಹಾನಿಗೆ

14ನೇ ಪುಟವನ್ನು ನೋಡಿರಿ

ವಿಶ್ವಶಾಂತಿ

[ಲೇಖಕ— ಬಿ. ಮಾಧವಾಚಾರ್, ಕುಂದಾಪುರ]

ಸಾಮ್ರಾಜ್ಯವಾದ, ಫೇಸಿಸಮ್, ನಾಜಿಸಮ್, ಇವೇ ಮೊದಲಾದ ದುಷ್ಪ್ರವೃತ್ತಿಗಳ ಪರಸ್ಪರ ಘರ್ಷಣೆಯಿಂದಾಗಿ ಭಯಂಕರ ಯುದ್ಧ ಜ್ವಾಲೆಯೊಂದು ಉದ್ಭವಿಸಿ ಇಡಿ ಯೂರೋಪ್‌ಖಂಡವನ್ನೇ ಅಗ್ನಿಪ್ರಳಯದ ಕಡೆ ಅಮುಮುಖವಾಗಿ ತಳ್ಳುತ್ತಿದೆ. ಆಸೂಯೆ, ಆಕಾಂಕ್ಷೆಗಳಿಂದ ಪ್ರೇರಿತನಾದ ಮಾನವನು ಮಾನವನಾಗಿ ಮಾಡಿಕೊಳ್ಳುತ್ತಿರುವ ಹೆಸುಳಿಯರ, ಹಾಗೂ ವ್ಯಷ್ಟಿಗಳ ಕೊಲೆಯನ್ನು ಒಂದೇ ಸಮನೆ ಮುಂದುವರಿಸುತ್ತಿದ್ದಾನೆ. ಇಂತಹ ನರಮೇಧವು ಮಾನವನ ಇತಿಹಾಸದಲ್ಲಿ ಒಂದೇ ಮೊದಲನೆಯದು. ಹಿಂದೆ ಆವಪ್ಪಲ್ಲಾ ಬರೀ ಕೆಲವು ಮಂದಿಯ ಭಿನ್ನ ಕೊಲೆ, ಮಲ್ಲ ಯುದ್ಧ ಇಲ್ಲವೇ ಬಿಲ್ಲು ಬಾಣಗಳ ಮೂಲದ ಅಲ್ಲಷ್ಟು ಇಲ್ಲಷ್ಟು ಸಾವು ನೋವು ಇತ್ತೆ

ಇನ್ನು ಪ್ರಜಾಪ್ರಭುತ್ವದ ಅಂತಿಮ ಶಿಖರವನ್ನು ಮುಟ್ಟಿವೆವೆಂದು ವಿಶಾಲ ಜಗತ್ತಿನಮುಂದೆ ಗಟ್ಟಿಯಾಗಿ ಕೂಗಿ ಹೇಳುತ್ತಿರುವ ಅಮೇರಿಕವು ಕಡೆ ವೃಷ್ಟಿಯನ್ನು ಬೇರಿದ್ದೇ ಆದರೆ, ಮುಂಜಾನೆಯಿಂದ ಸಂಜೆಯವರಗೆ ದಣಿವಿಂದ ನುಸಿದರೂ ತೂಟ್ಟಿ ತುಂಬದು, ವಿಶ್ರಾಂತಿಸಾಲದು, ಎಂಬ ಕೂಲಿಗಾರರ ಬೊಬ್ಬೆ ಮತ್ತು ಬೇಹಶ್ಯನ ದಿಂದಲೂ, ಬುದ್ಧಿ ಶ್ರಮದಿಂದಲೂ ದೇಶದ ಸಂಪತ್ತನ್ನು ನಿರ್ಮಾಣಮಾಡುತ್ತಲಿರುವ ಕೆಲಸಗಾರರು ಒಲ್ಲಪ್ಪಿ ಸಂಘಗಳನ್ನ ಕಟ್ಟಿಕೊಂಡು ಹೋರಾಟಕ್ಕೆ ತಯಾರಾಗುತ್ತಲಿರುವ ಚಿತ್ರಗಳು ನಮ್ಮ ಕಣ್ಮುಂದೆ ಎದ್ದು ನಿಲ್ಲುವುದು ಹಿಂಮಸ್ಥಾನದ ವಾರ್ತಾಪತ್ರಿಕೆ ಎಷ್ಟು ಪರ್ಣಿಸಿದರೂ ಸ್ಪಲ್ಪ ವೇಬೇಡುವ ಕೈಗಳು ದಿನೇ ದಿನೇ ಜಾಸ್ತಿಯಾಗುತ್ತಿವೆ. ವಿಜ್ಞಾನಂತರೂ, ಮಾನವಂತರೂ ಜೀವನ ಯಾತ್ರೆಯನ್ನು ಸಾಗಿಸಲು ದಾರಿಕಾಣದೆ ಆತ್ಮಹತ್ಯ ಮಾಡಿಕೊಂಡ ದೃಷ್ಟಾಂತಗಳೂ ಇವೆ. ಬಡತನದ ಭೀಕರ ನೃತ್ಯವು ಅಸೇತು ಹಿಮಾಚಲ ಪರಿಯಂತ ತಾನೇ ತಾನಾಗಿ ಬಿಟ್ಟಿದೆ. ಜನ ಸಾಮಾನ್ಯದಲ್ಲಿ ಮತಾಂಧತೆ, ಮೂಢ ಭಕ್ತಿ, ದಾರಿದ್ರ್ಯ, ರೋಗ ರುಜಿನಗಳು, ಲಜ್ಜಾಸ ಇವುಗಳೆಲ್ಲಾ ಬುಡದವರೆಗೂ ಬೇರು ಬಿಟ್ಟಿವೆ ಎನ್ನೋ ಮಂದಿ ಭಗವಿನಿಯರಿಗೆ ಒಂದು ಹಿಡಿ ಅನ್ನ ಕೂಡ ದೊರಕ್ಕುವುದೇ ಕಷ್ಟವಾಗಿದೆ. ಮಾನವ ಮುಚ್ಚಲು ಬಟ್ಟೆ ಇಲ್ಲ ಹೀಗಾಗಿ ಕಾಶೀರಾಮೇಶ್ವರ ಮೊದಲಾದ ಯಾತ್ರಾ ಸ್ಥಳಗಳನ್ನೋ, ಬೊಂಬಾಯಿ, ಕಲಕತ್ತಾ ಮೊದಲಾದ ಶಹರಗಳನ್ನೋ ನೇರಿ ದೇಹವನ್ನು ವಿಕ್ರಯಿಸಿ ಅತಿಕಷ್ಟದಿಂದ ತಮ್ಮ ಸಾವಿನದಿನಗಳನ್ನು ಕೈಬೆರೆಳಿಂದ ಎಣಿಸುತ್ತಿದ್ದಾರೆ ಧನಿಕರ ಸ್ವಾರ್ಥವು ವಿತಿಮೀರುತ್ತಿದೆ.

ಜಗತ್ತಿನ ವ್ಯಾಪಾರಗಳೆಲ್ಲ ಕಾರಣನನ್ನು ಶೋಧಿಸಿ ತೆಗೆಯುವ ವೈಜ್ಞಾನಿಕ ಬುದ್ಧಿಯ ಇತಿಹಾಸಜ್ಞರಿಗೆ ಈ ಅನರ್ಥಗಳೆಲ್ಲಾ ಭೌತಿಕ ಕಾರಣವು ದೊರಕದೆ ಇಲ್ಲ ಲೋಕ ಕಲ್ಯಾಣವೇ ತನ್ನ ಜೀವಿತದ ಗುರಿಯಾಗಲೆಂದು ಒಯಸುವ ವೈಜ್ಞಾನಿಕರ ನಾನಾ ಶೋಧನೆಗಳಿಂದ ವಿಶ್ವವಿನೇ ಶಗಳೊಳಗೆ ವಾಹಾನ ಸೌಕರ್ಯಗಳಾಭಿವೃದ್ಧಿ, ನೈಸರ್ಗವಿದ್ಯೆ, ರಸಾಯನವಿದ್ಯೆ, ಗಣಿತವಿದ್ಯೆ ಮೊದಲಾದ ಭೌತಿಕ ವಿದ್ಯೆಗಳು ಸ್ವಚ್ಛಾರವಾಗಿ ಬಣ್ಣ ಬಣ್ಣಗಳೊಳಗಿನ ಜನಾಂಗ ಜನಾಂಗಗಳೊಳಗಿನ ಭೇಧ ಭಾವನೆಗಳೆಲ್ಲಾ ಮಾಯವಾಗಿ ಇಡೀ ವಿಶ್ವವೆಲ್ಲಾ ಒಂದೇ ಕುಟುಂಬವಾಗಿ ಬಾಳಲು ಸಾಧ್ಯವಿದೆಯೆಂಬುದು ಈಗ ಸ್ಪಷ್ಟವಾಗಿದೆ

ಹಾಗಾಗಬೇಕಾದರೆ ಇಂದಿನ ಸಮಾಜ ಪದ್ಧತಿಯಲ್ಲಿ ಒಂದು ಬದಲಾವಣೆ ಆಗಲೇಬೇಕು. ಈ ಲಾಭ ವ್ಯಾಧಾನ್ಯತೆಳ್ಳ ಬಲಶಾಹಿಯು ನಶಿಸಿ ಜನತೆಯ ಅವಶ್ಯಕತೆಗಳನ್ನು ಪೂರೈಸಲು ಸಾಲಿನ ತಯಾರಿಕೆಯಾಗಬೇಕು ಮೊಳ ಗನ್ಪೆ ಯಂತ್ರ, ಕಾರ್ಖಾನೆ, ಮೊದಲಾದ ಧನೋತ್ಪಾದಕ ಸಾಧನಗಳ ಮೇಲೆ ಎಲ್ಲಿಯ ವರೆಗೆ ವ್ಯಕ್ತಿಯ ಒಡೆತನ ವಿರುವುದೋ ಅಲ್ಲಿಯವರೆಗೆ ಇಮ್ಮನಸಿನ ಗಂಟು ಒಟ್ಟಿನಲ್ಲಿ ಇಂದಿನ **ಸಮಾಜದ ಆರ್ಥಿಕ ವ್ಯವಹಾರ ನೀತಿ. ಮತ್ತು ತತ್ಸಂರಕ್ಷಕ, ಧಾರ್ಮಿಕ ಸಂಸ್ಥೆಗಳ ನಿರ್ಮೂಲನ ಇದೇ ವಿಶ್ವಶಾಂತಿಯ ಹಾದಿ.** ಪ್ರಪಂಚದ ಕೆಲಸಗಾರರೆಲ್ಲರೂ ಒಂದಾಗಿ ಬಂಡವಲಯವಾಗವ ಸಂಧ್ಯಾಕಾಲನಿನಿಸಿದ ಈ ಸಮಯದಲ್ಲಿ ಬಂಡವಲ ಶಾಹಿಯ ಚರಮ ಗೀತೆಯನ್ನು ಹಾಡಿ ವಿಶ್ವಪ್ರೇಮದ ವೀಣೆಯನ್ನು ಭಾರಿಸುವದು ಅವರ ಕೈಯಲ್ಲಿದೆ. ಎಂದು ಪ್ರಪಂಚದಕೆಲಸಗಾರರೆಲ್ಲ ಒಂದಾಗಿ ತಮ್ಮ ಸಂಕಲ್ಪವನ್ನು ಕಿತ್ತೆಸೆದು ನವಯುಗದ ಸ್ಥಾಪನೆಯನ್ನು ಮಾಡುವರೋ ಅಂದೇ ವಿಶ್ವಶಾಂತಿ! ಶಾಶ್ವತಶಾಂತಿ! ಪ್ರಗತಿ! ಶ್ರಮ ಜೀವಿಗಳ ಶತ್ರುಗಳಾದ ಹಿಟ್ಲರ ಮುಸೋಲಿನಿಗಳ ಪತನ ದೊಂದಿಗೇ ಈ ಕಾರ್ಯವು ಆರಂಭವಾಗಲಿ.

ಸಿರುಗುಪ್ಪ ತಾಲೂಕು ಗ್ರಾಮೋದ್ಯೋಗಸ್ಥರ ಸಂಘ ತೀರ್ಮಾನಗಳು.

ಬಳ್ಳಾರಿ ಜಿಲ್ಲಾ ಸಿರುಗುಪ್ಪ ತಾಲೂಕು ಗ್ರಾಮೋದ್ಯೋಗಸ್ಥರ ಸಂಘದ ಸಭೆಯು 8-9-41 ನೆಯ ದಿನ ಸಿರುಗುಪ್ಪೆಯಲ್ಲಿ ಸಮಾವೇಶವಾಗಿ ಈ ಕೆಳಗಿನ ತೀರ್ಮಾನಗಳನ್ನು ಅಂಗೀಕರಿಸಿತು.

1] ನಮ್ಮ ಕೇಂದ್ರ ಸಂಘವಾದ ರಾಯಲಸೀಮ ಗ್ರಾಮೋದ್ಯೋಗಸ್ಥರ ಸಂಘ [ಮುಖ್ಯ ಕಛೇರಿ ಪೆನುಕೊಂಡ] ವನ್ನು ಮದ್ರಾಸ್ ಸರಕಾರದವರು ತಮ್ಮ No M S. 90/3.5-11 ರ ಆಜ್ಞೆಯಲ್ಲಿ ಪುಂಜೂರು ಮಾಡಿದ್ದಕ್ಕಾಗಿ ಈ ಸಭೆಯು ಅವರಿಗೆ ಅಭಿನಂದನೆಗಳನ್ನರ್ಪಿಸುತ್ತದೆ.

2] ಜಿಲ್ಲಾ ರೂರಲ್ ಡೆವಲಪ್‌ಮೆಂಟ್ ಕಮಿಟಿಯಲ್ಲಿ ಗ್ರಾಮೋದ್ಯೋಗಿಗಳಿಗೂ ಕೂಡ ಒಂದು ಸಭ್ಯಸ್ಥಾನವನ್ನು ಕೊಡಲು ಬಳ್ಳಾರಿ ಜಿಲ್ಲಾ ಕಲೆಕ್ಟರ್ ದ್ವಾರಾ ಮದ್ರಾಸ್ ಸರಕಾರದವರನ್ನು ಕೇಳಲು ಈ ಸಭೆಯು ತೀರ್ಮಾನಿಸುತ್ತದೆ

3] ಸರಕಾರದ ರಜಾದಿನಗಳನ್ನು ಸೂಚಿಸುವ ಪಟ್ಟಿಯೊಂದನ್ನು ಗ್ರಾಮೋದ್ಯೋಗಿಗಳಿಗೆ ಪ್ರತಿ ವರ್ಷವೂ ಒದಗಿಸಬೇಕೆಂದು ಸರಕಾರದವರನ್ನು ಕೋರಲು ಈ ಸಭೆಯು ನಿಶ್ಚಯಿಸುತ್ತದೆ.

4] ಇತರ ಸರಕಾರಿ ನೌಕರರಿಗೆ ಈಗಿನ ಪರಿಸ್ಥಿತಿಯಲ್ಲಿ ಆಹಾರ ಸಾಮಗ್ರಿಗಳ ತುಟ್ಟಿಯ ಕಾರಣ ಕೊಡಲ್ಪಡುತ್ತಿರುವ ಅಧಿಕ ವೇತನವನ್ನು (Dearness-Allowance) ಗ್ರಾಮೋದ್ಯೋಗಿಗಳಿಗೂ ಕೂಡ ಕೊಡಬೇಕೆಂದು ಕೋರುವ ತೀರ್ಮಾನವನ್ನು ಈ ಸಭೆಯು ಪುಸ್ಕರಿಸುತ್ತದೆ

5] ಬಳ್ಳಾರಿ ಜಿಲ್ಲಾ ಕಲೆಕ್ಟರವರ ಪ್ರವಾಸ ಕಾರ್ಯಕ್ರಮವು ಗ್ರಾಮೋದ್ಯೋಗಿಗಳ ಸಂಘಕ್ಕೂ ತಿಳಿಯಲು ಕಲೆಕ್ಟರ್

13ನೇ ಪುಟವನ್ನು ನೋಡಿರಿ

ರಾಯಲಸೀಮ ಬ್ಯಾಂಕು ಲಿಮಿಟೆಡ್.

[ಇಂಡಿಯಾ ಸರ್ಕಾರದ ಕಂಪನಿ ಶಾಸನಗಳನ್ನನುಸರಿಸಿ ಸ್ಥಾಪಿಸಲ್ಪಟ್ಟಿದೆ.

ಮುಖ್ಯ ಕಾರ್ಯಾಲಯ: ಬಳ್ಳಾರಿ.

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಈ ಜಿಲ್ಲೆಗಳ ಆರ್ಥಿಕ ಅಭಿವೃದ್ಧಿಗಾಗಿ ಸ್ಥಾಪಿಸಲಾಗಿದೆ

ಅಧಿಕೃತ ಭಂಡವಾಳ	ರೂ.	5,00,000
ಜನತೆಗಾಗಿ ಜಾಹೀರ್ಮಾಡಿದ್ದು	,,	4,00,000
ಚಂದಾ ಆದದ್ದು	,,	1,30,700
ವಸೂಲ್ಮಾಡಿದ ಹಣ	,,	62,750

ಪ್ರಥಮ ವರ್ಷದ ಪ್ರಗತಿ

ಡಿಪಾಜಿಟ್ಟುಗಳು.	31—10—1940	31—8—1941
ಫಿಕ್ಸೆಡ್	ರೂ. Nil	66,130
ಚಾಲ್ತಿ	,, 3,173	13,193
ಸೇವಿಂಗ್ಸ	,, 1,231	16,051
ಇತರ	,, 40	723
ಸಾಲಗಳು.		
ಭಂಗಾರ	,, 520	20,343
ಮಾಲು	,, Nil	25,013
ಇತರ	,, Nil	6,140
ಇತರ ಆಸ್ತಿ		
ಸರ್ಕಾರದ ಬಾಂಡುಗಳು	,, 13,300	20,538
ಬ್ಯಾಂಕುಗಳಲ್ಲಿರುವ ಹಣ	,, 32,502	22,582
ಕೈಯಲ್ಲಿ ನಗದು	,, 5770	28,681
ಒಟ್ಟು ವ್ಯವಹಾರ ಮೊತ್ತ—	ರೂ. 1,14,774	1,67,180

ಸೂಚನೆಗಳು:— [1] ತಿಮ್ಮನಚರ್ಲ. [ಗುಂತಕಲ್] [2] ಕೊಟ್ಟೂರು. [3] ಆರವಕೊಂಡ

ಬಿ. ವಿ. ಶೇಷಗಿರಿರಾವ್, ಬಿ ಕಾಂ ಕಾರ್ಯದರ್ಶಿ | ಹೆಚ್. ಸೀತಾರಾಮರೆಡ್ಡಿ, ಬಿ. ಎ., ಬಿ. ಎಲ್., [ಎಂ ಎಲ್ ಎ.] ಡೈರೆಕ್ಟರುಗಳ ಪೂರ್ತಿ ಅನ್ವೇಷರು

12ನೇ ಫುಟಿನಿಂದ ಬಂದದ್ದು

ರವರನ್ನು ಕೇಳಿಕೊಳ್ಳಬೇಕೆಂದಾಯಿತು.

6] ಜಿಲ್ಲಾಕಲೆಕ್ಟರ್‌ರವರು ಸೆರೆಗೆ ಬಂದಾಗ ಗ್ರಾಮೋದ್ಯೋಗಿಗಳ ಕುಂದು ಕೊರತೆಗಳನ್ನು ಅವರ ಮುಂದೆ ಅರ್ಜಿಯ ರೂಪದಲ್ಲಿಟ್ಟು ಪರಿಹಾರವನ್ನು ಕೇಳಲು ನಿಶ್ಚಿತವಾಯಿತು

7] ಮದ್ರಾಸ್ ಸರಕಾರದವರು ಗ್ರಾಮೋದ್ಯೋಗಿಗಳ ಸಂಘಕ್ಕೆ ಹಮ್ಮಿಕಾರ ಮುದ್ರೆಯನ್ನೊತ್ತಲು ವಿಧಿಸಿದ 9 ನಿಯಮಗಳನ್ನೂ ಒಪ್ಪಲು ತೀರ್ಮಾನವಾಯಿತು.

8] ತಿರುಗುಪ್ಪೆ ಗ್ರಾಮದಲ್ಲಿ 1942ನೇ ಜನವರಿ ತಿಂಗಳಲ್ಲಿ ಸಂಘದ ಮುಖ್ಯ ಸಭೆಯನ್ನು (General body) ನಡೆಸಲು ತೀರ್ಮಾನವಾಯಿತು.

9] ತಾಲೂಕು ಗ್ರಾಮೋದ್ಯೋಗಿಗಳ ಸಂಘದ ಹೆಸರಿನಿಂದ ತಿರುಗುಪ್ಪೆ ಪೋಸ್ಟಾಫೀಸಲ್ಲಿ ಸೇವಿಂಗ್ಸ ಲೆಕ್ಕವನ್ನಿಡಲು ಪೋಸ್ಟ ಅಧಿಕಾರಿಗಳನ್ನು ಕೇಳಲು ನಿಶ್ಚಿತವಾಯಿತು.

ಶಿ. ವಿರುಪಾಕ್ಷಗೌಡ
ಉಪಾಧ್ಯಕ್ಷ
ಸಣ್ಣನಗೌಡ ನಿಟ್ಟೂರು
ಕಾರ್ಯದರ್ಶಿ

ವೈಸ್ರಾಯರ ಅವಧಿ ಮತ್ತೊಂದು ವರ್ಷ

ಭರತಖಂಡವಲ್ಲಿ ವೈಸ್ರಾಯರಾಗಿರುವ ಲಾರ್ಡ್ ಲಿನಲಿತ್‌ಗೌವರ ಅಧಿಕಾರವಧಿಯು 1943ನೆಯ ಏಪ್ರಿಲ್ ವರೆಗೆ ಬೆಳೆಸಲಾಗಿದೆ ಯೆಂದು ಸರ್ಕಾರದ ಪ್ರಕಟನೆ ಹೊರಟಿದೆ.



ಸಮುದ್ರ ಯುದ್ಧ

೧೫ ಅಂಗುಲ ಕೊಳವೆಯಿಂದ ಹೊಡೆದ ಗುಂಡುಗಳು.

ಒಂದು ಯುದ್ಧದ ಹಡಗು ಇನ್ನೊಂದು ಯುದ್ಧದ ಹಡಗಿನ ಮೇಲೆ ಗುಂಡುಹಾರಿಸುವ ದೃಶ್ಯ ಈ ಚಿತ್ರದಲ್ಲಿ ಭೂಮಧ್ಯ ಸಮುದ್ರದ ಬ್ರಿಟಿಷ ನಾವೆಯು ಲಿಬ್ಯದ ಇಟಾಲಿಯರ್ ಕ್ಷೇತ್ರಗಳ ಮೇಲೆ ಗುಂಡು ಹಾರಿಸುವದನ್ನು ನೋಡಬಹುದು.

11ನೇ ಪುಟದಿಂದ ಬದ್ದ

ಲಕ್ಷ್ಯಕೊಡದೆ ರಷ್ಯನರು ಲಕ್ಷಗಟ್ಟಲೆ ಮಂದಿ ಬರುತಿರುವರು ಒಂದೆರಡು ತಿಂಗಳಲ್ಲಿ ರಷ್ಯನನ್ನು ಆಕ್ರಮಿಸಿಕೊಳ್ಳಿರಿ ನಮ್ಮ ಹಿರಿಯ ಪುಟ್ಲರನ ಹೇಳಿಕೆಯು ವ್ಯರ್ಥವಾಯಿತು.

ಆದರೂ ಈ 3 ತಿಂಗಳೊಳಗಾಗಿ ರಷ್ಯಾದ ಬಹು ಮುಖ್ಯ ಪ್ರದೇಶಗಳೂ ಜರ್ಮನ್ನರಿಗೆ ಕೈ ಬಿಗಿಯೂ ಜಮ ನಿಗೆ ವಶವಾಗಿವೆ ಳೆಗಳವು ಪ್ರಾರಂಭವಾಗುವುದರೊಳಗಾಗಿ ಲೆನಿನಗ್ರಾಡ ಕೀವ್ ಮತ್ತು ಒಡಿಸ್ಸಾಗಳನ್ನು ಆಕ್ರಮಿಸಿಕೊಳ್ಳಲು ಹಿಟ್ಲರನು ತನ್ನ ಸರ್ವ ಶಕ್ತಿಯನ್ನು ಉಪಯೋಗಿಸುತ್ತಿರುವನು, ಪ್ರಮುಖ ರಣರಂಗವಲ್ಲಿರುವ ಸೈನ್ಯದ ಭಾಗವನ್ನು ಕರೆಸಿಕೊಂಡನು

ಲೆನಿನಗ್ರಾಡ ಕೀವ್ ಒಡಿಸ್ಸಾಗಳ ಪತನವೆಂದರೆ ರಷ್ಯಾವು ಬಹಳ ಕಾಲ ತಲೆ ಎತ್ತದಂಥ ಹೊಡೆತವು ಬೀಳುವುದೆಂಬುದನ್ನು ನೆನಪಿನಲ್ಲಿಡಬೇಕು. ಲೆನಿನಗ್ರಾಡದ ಆಕ್ರಮಣದಿಂದ ರಷ್ಯಾಕ್ಕೆ ಮರ್ಮಾನ್ಸ್ಕ ರನ್ನೆಯು ಮುಚ್ಚಲ್ಪಟ್ಟು ರಷ್ಯಾದ ಪೂರ್ವ ರಾಜಧಾನಿಯ ಸಂಪರ್ಕ್ಯಕ್ತ ಯಾಂತ್ರಿಕ ಕೇಂದ್ರಗಳಿಂದ ಒದಗತ್ತಿದ್ದ ಸಾಮಗ್ರಿಗಳೆಲ್ಲಾ ನಿಂತುಹೋಗುತ್ತವೆ ಜರ್ಮನರಿಗೆ ಅಲ್ಲಿಂದ ಮಾಸ್ಕೋದವರೆಗೆ ದಾರಿ ಮಾತ್ರ ಅನುಕೂಲವಾಗುತ್ತದೆ ಇದೂ ಅಲ್ಲದೆ ಇನ್ನೂ ಹೆಚ್ಚಿನ ಉಪಾಯವೆಂದರೆ ಕೆಸ್ಪಿಯನ್ ಸ್ಟಾಲಿನ್‌ಗ್ರಾಡ್‌ಗಳನ್ನ ರಷ್ಯಾದ ಬಾಲ್ಟಿಕ್ ನಾವೆಯ ಗತಿ ಏನಾಗುವುದೋ ಊಹಿಸುವುದೂ ಕಷ್ಟವಾಗುತ್ತದೆ.

ಕೀವ್ ಮತ್ತು ಒಡಿಸ್ಸಾಗಳ ಪತನ ನೇನೂ ಸಾಧಾರಣವಾದುದಲ್ಲ ಅವುಗಳ ಪತನದಿಂದ ನೀಪರ್ ನದಿಯ ಪೂರ್ವಭಾಗದ ಫಲವತ್ತಾದ ಪ್ರದೇಶವಾದ ಕ್ರಿವಿಯು ಮತ್ತು ಕಾಕಸಸ್ ಪ್ರದೇಶಗಳಿಗೆ ಎಣ್ಣೆಯ ಗಣಿಗಳು ಜರ್ಮನರ ವಶವಾಗಲು ಬಾಗಿಲು ತೆರೆದಂತಾಗುತ್ತದೆ. ಕಪ್ಪು ಸಮುದ್ರದ ಮೂಲಕ ಒಲ್ಡೇರಿಯಾ ರುಮೇನಿಯಾ ಬಂದರುಗಳ ದ್ವಾರಾ ರಷ್ಯಾದ ಯುಕ್ರೈನ ಭಾಗದ ದಾಳಿಯು ನಡೆಯಲಿದೆಯೆಂದು ಗೊತ್ತಾಗಿದೆ.

ಈಗಾಗಲೇ ರಷ್ಯಾವು ಬಲ್ಗೇರಿಯಾವನ್ನು ಎಚ್ಚರಿಸಿದೆ ಬಲ್ಗೇರಿಯಾವನ್ನು ತನ್ನ ಕಪಿಮುಷ್ಟಿಯಲ್ಲಿ ಜರ್ಮನಿಯು ಇಟ್ಟಿದೆ ಪ್ರಜೆಗಳು ರಷ್ಯಾದೊಡನೆ ಸ್ನೇಹ ಹೊಂದಿದ್ದರೂ ಅವರ ಆಟವು ಸಾಗುವಂತಿಲ್ಲ ಮುಂದೆ ಬರುವ ಕಾಲವೆ ನಾ ಸಾಧಾರಣವಾದುದಲ್ಲ. ಯುದ್ಧದ ಭೀಕರತೆ ತೀಕ್ಷ್ಣತೆ ಅಧಿಕವಾಗತಾ ಹೋಗುವುದೆ. ಹಳಿಗಳವೆ ಆಗಸುನನವರೂ ಯುದ್ಧವು ನಿಲ್ಲಲಿಕ್ಕಿಲ್ಲ. ಹಳಿಗಳನ್ನೆಲ್ಲಿ ಬೆಚ್ಚಗಿರಲು ಈ 3 ಪಟ್ಟಣಗಳನ್ನು ನಷ್ಟಮಾಡಿಕೊಳ್ಳುವ ಹವಣಿಕೆಯಲ್ಲಿದ್ದಾರೆ ಜರ್ಮನರಿಗೆ ಮಳೆಗಿಂತಲೂ ಛಳಿಯೇ ಅನುಕೂಲ

ರಷ್ಯಾದೇಶಕ್ಕೆ ತೀಕ್ಷ್ಣಸಹಾಯವು ಒದಗಿಸಲ್ಪಟ್ಟಿರಿ ಒಳ್ಳೆಯದು. ಬರೀ ಬಾಯಿ ಮಾತುಗಳಿಂದ ಪ್ರಚಾರ ಕಾರ್ಯಕ್ರಮದಿಂದ ಏನೂ ಉಪಯೋಗವಿಲ್ಲ ರಷ್ಯಾದ ಭವಿಷ್ಯವೆಂದರೆ ಬ್ರಿಟನ್ನಿಗೂ ಕೂಡೆ ಗಾಢವಾದ ಸಂಬಂಧವಿದೆ. ಈಕಾರಣ ಬ್ರಿಟನ್ನಿನವರೂ ಅವರ ಸ್ನೇಹಿತರಾದ ಅಮೆರಿಕನರೂ ರಷ್ಯಾಕ್ಕೆ ತೀಕ್ಷ್ಣಸಹಾಯ ಒದಗಿಸುವುದು ಅವರ ಶ್ರೇಯಸ್ಸಿಗೇಸರಿ.

ಬಳ್ಳಾರಿ ನಗರ ವಾರ್ತೆಗಳು

ನಾಡಹಬ್ಬ:- 22ನೇ ಸ್ಯಾಮ್ಯುಸಿಪಲ್ ಹೈಸ್ಕೂಲಿನ ಆವರಣದಲ್ಲಿ ನಾಡ ಹಬ್ಬದ ಕಾರ್ಯಕ್ರಮಗಳು ಈ ಪ್ರಕಾರ ನಡೆದವು. ಶ್ರೀ ಎನ್. ಕೆ. ಕುಲಕರ್ಣಿಯವರು ಶ್ರೀ ಕೆ. ಗುರುರಾಜರಾಯರಧ್ಯಕ್ಷತೆಯಲ್ಲಿ ನಮ್ಮನಾಡಿನ ಉದಯಕಾಲ, 23 ನೆಯ ತಾ. ಸಾಯಂಕಾಲ ಶ್ರೀ ವಿದ್ವಾನ್ ತಿರುಮಲೇಶರು ಶ್ರೀ ಬಿ. ಎಂ. ರೇವಣಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ 'ಕನ್ನಡತಿಯ ಗುಟ್ಟು' 24 ನೆಯ ಸಾ ಶ್ರೀ ಶರ್ವ ವಿದ್ವಾನ್ ಇವರು ಶ್ರೀ ಡಿ. ಯಸ್. ಹನುಮಂತರಾಯರಧ್ಯಕ್ಷತೆಯಲ್ಲಿ 'ಸಾಹಿತ್ಯ ಮತ್ತು ಜೀವನ' 25 ನೆಯ ತಾರೀಕು ಶ್ರೀ ಬೆಳ್ಳಾವೆ ನರಹರಿಶಾಸ್ತ್ರಿಗಳು ಶ್ರೀ ಪತಿ ರಾಯರಧ್ಯಕ್ಷತೆಯಲ್ಲಿ 'ಕನ್ನಡದಲ್ಲಿ ಸಂಸ್ಕೃತದ ಸ್ಥಾನ' 26 ನೆಯ ತಾ. ಶ್ರೀ ಕಸ್ತೂರಿಯವರು ಶ್ರೀ ಟಿ. ಸುಬ್ರಹ್ಮಣ್ಯಂರವರ ಧ್ಯಕ್ಷತೆಯಲ್ಲಿ 'ಮಕ್ಕಳೂ ಸಾಹಿತ್ಯವೂ' ಶ್ರೀ ಎ. ಯಸ್. ದೇಸಾಂಡೆಯವರು ಶ್ರೀ ಭೀಮಲಿಂಗಯ್ಯರಧ್ಯಕ್ಷತೆಯಲ್ಲಿ 'ನಮ್ಮ ಸಾಹಿತ್ಯದ ಮೇಲ್ಮೆ' ಎಂಬ ವಿಷಯಗಳ ಮೇಲೆ ರಸವತ್ತಾದ ಮತ್ತು ಕ್ರಾಂತಿಕರವಾದ ಅಭಿಪ್ರಾಯಗಳನ್ನು ಸುಲಲಿತ ಕನ್ನಡ ಭಾಷೆಯಲ್ಲಿ ಹೇಳಿದರು. 28 ನೆಯ ಆದಿತ್ಯವಾರ ಶ್ರೀಮತಿ ಎಸ್. ಶಕುಂತಲಾ ಬಾಯಿಯವರು ಶ್ರೀಮತಿ ಸುಶೀಲಾ ಶಾಮರಾಯರಧ್ಯಕ್ಷತೆಯಲ್ಲಿ ಜಗತ್ತಿನ ವಿಷ್ಣಡೆಯೂ, ಸ್ತ್ರೀಯರೂ ಎಂಬ ವಿಷಯದ ಮೇಲೆ ಭಾಷಣ ಕೊಟ್ಟರು. ಅದಿನ ಸ್ತ್ರೀಯರಿಗಾಗಿಯೇ ಕಾದಿರಿಸಲಾಗಿತ್ತು. ಈ ವಾರದಲ್ಲಿ ಶ್ರೀ ಎಸ್ ವಿಶ್ವೇಶ್ವರರಾಯರಿಂದ ಲಾವಣಿಯೂ, ಶ್ರೀ ನಾರಾಯಣ ಶಾಸ್ತ್ರಿಗಳ ಬಸವೇಶ್ವರ ವಚನಗಳ ಪಠನೆ, ಕುಮಾರಿ ಸುಶೀಲಾ ನೃತ್ಯ ಇವುಗಳಿಂದ ಮನೋರಂಜನೆಯಕಾರ್ಯವೇರ್ಪಟ್ಟಿತ್ತು.

ಹಿಂದೀ ಮತ್ತು ಹರಿಜನವಾರ:- ಜಿಲ್ಲಾ ಹರಿಜನ ಸೇವಕ ಸಂಘ ಮತ್ತು ಜಿಲ್ಲಾ ಹಿಂದೀ ಪ್ರೇಮಿ ಮಂಡಲದವರು ಶ್ರೀಮಾನ್ ಸ್ವಕಾರವಾಗಿ ಹರಿಜನ ಮತ್ತು ಹಿಂದೀ ವಾರಗಳನ್ನು ತಮ್ಮ ಉದ್ದೇಶ ಸಾಧನೆಗೆ ಉತ್ಸಾಹ ಕೊಡುವದೆಂ ಸಲುವಾಗಿ ನೆರವೇರಿಸಿದರು.

ಆಚಾರ್ಯ ಕೃಪಾಲಿನಿ:- ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಕೃಪಾಲಿನಿಯವರು 23 ನೆಯ ಸಾಯಂಕಾಲ ಇಲ್ಲಿಗೆ ದಯಮಾಡಿಸಿ ಶ್ರೀ ಶೀತಾರಾಮರೆಡ್ಡಿಯವರ ಗೃಹದಲ್ಲಿ ಅಲ್ಪಾಹಾರವನ್ನು ಮುಗಿಸಿಕೊಂಡು ಕ್ರಿಶ್ಚಿಯನ್‌ಟೋಕೇಸ್‌ದಲ್ಲಿ 'ಸದ್ಯದ ಪರಿಸ್ಥಿತಿಯ ಮೇಲೆ ಭಾಷಣ ಕೊಟ್ಟು ಸಾಯಂಕಾಲ ಹೊಸನೇಟಿಗೆ ತೆರಳಿದರು.

ಶ್ರೀ ಕೇಶವನಾಥ್ ಕರ್ನಾಟಕಿ
ಇವರ
ಭರತ ನಾಟ್ಯದಲ್ಲಿನ ವಂದು ದೃಶ್ಯ

ಬಳ್ಳಾರಿ ಜಿಲ್ಲೆ

ಹೊಸಪೇಟೆ:— 22 ನೆಯ ತಾರೀಖಿನಿಂದ ಪ್ರತಿನಿತ್ಯ ಸಾಯಂಕಾಲ 5-30ಕ್ಕೆ ದಿವ್ಯಜ್ಞಾನ ಸಮಾಜ ಭವನದಲ್ಲಿ ನಾಡ ಹಬ್ಬದ ಕಾರ್ಯಕ್ರಮಗಳು ಆರಂಭವಾದವು. ಸುಪ್ರಸಿದ್ಧ ಭಾಷಣಕಾರರಾದ ಶ್ರೀ ವಿನಾಯಕರಾವ್ ಗೋಕಾಕ, ಬೇಂದ್ರೆ. ಮನೋಹರರಾವ್ ದೇಶಪಾಂಡೆ ಕಸ್ತೂರಿ, ರುಬೇನ್ ಇವರ ಭಾಷಣಗಳಾದವು. 29 ನೆಯ ದಿನ ಬಹುಮಾನಗಳನ್ನು ಹಂಚುವುದರಲ್ಲಾಯಿತು. ಈ ವಾರ ನಾನಾವಿಧದ ಒಟ್ಟಿಪಾಟ ಮೇಲಾಟ ಈಸುವ ಪದ್ಯ ದಾಟುಗಳೂ ಮತ್ತು ಕವಿತೆ, ನಿಬಂಧ, ವಕ್ತೃತ್ವ ಮುಂತಾದ ಸ್ಪರ್ಧೆಗಳೂ ಏರ್ಪಾಟಾಗಿದ್ದವು 23 ನೆಯ ತಾ. ಸಾಯಂಕಾಲ ಆಚಾರ್ಯ ಕೃಪಾಲಿನಿಯವರು 'ಸದ್ಯದ ಪರಿಸ್ಥಿತಿ'ಯ ಮೇಲೆ ಭಾಷಣ ಕೊಟ್ಟರು.

ಅಸ್ಪೃಶ್ಯತಾ ನಿವಾರಣೆ:— ಶ್ರೀ ದೇವಾಯಿ ನವರ ಸ್ವಯತ್ನ ಮತ್ತು ದೀನರಾದ ಹರಿಜನರ ಮೇಲೆ ಅನವರತವಿರುವ ನಿಸ್ಸೀಮ ಪ್ರೇಮದ ಪ್ರತಿಫಲವಾಗಿ ಅಲ್ಲಿ ಹರಿಜನ ಕೇರಿಯಲ್ಲಿ ಭಜನೆ ಮಂದಿರವು ಸ್ಥಾಪಿತವಾಗಲನುವಾಯಿತು. ಬಳ್ಳಾರಿಯಿಂದ ಈ ಕಾರ್ಯಕ್ಕಾಗಿಯೇ ಆಹ್ವಾನಿತರಾದ ಶ್ರೀ ಟಿ. ಬಿ. ಕೇಶವರಾಯರು ಭಜನೆ ಮಂದಿರದ ಪ್ರಾರಂಭೋತ್ಸವವನ್ನು 22 ನೇ ತಾ. ಸಾಯಂಕಾಲ ನೆರವೇರಿಸಿ ನೆರೆದ ಹಿಂದೂ ಮತ್ತು ಹರಿಜನ ಸೋದರರಿಗೆ ಹರಿಜನೋದ್ಧಾರದ ಮೇಲೆ ಒಂದು ಘಂಟೆಯವರಿಗೆ ಸದುಪದೇಶಕೊಟ್ಟರು. ಶ್ರೀ ಅ-ಬಣ್ಣನವರು ವಂದನಾರ್ಪಣೆ ಮಾಡಿದನಂತರ ಪ್ರಸಾದವು ಹಂಚಲ್ಪಟ್ಟ ಮೇಲೆ ಸಭೆಯು ಮುಕ್ತಾಯವಾಯಿತು.

ಈ ಕೆಳಗಣ ಮಹಾಶಯರು ಕೇರಿಯಲ್ಲಿ ಪಂಚಾಯ್ತಿದಾರರಾಗಿ ಭಜನೆ ಮಂದಿರದ ಮತ್ತು ಇತರ ಏರ್ಪಾಟುಗಳ ವ್ಯವಸ್ಥೆಯನ್ನು ಮಾಡಲಿರುವರು.

ಶ್ರೀ ಶಿಂಗನಾಥನಹಳ್ಳಿ ಹುಲುಗಪ್ಪ	ಅಧ್ಯಕ್ಷ
,, ವಗ್ಗಪ್ಪನೋರ ಬಸಪ್ಪ	ಕಾರ್ಯದರ್ಶಿ
,, ಭೀಕೇರಪ್ಪನೋರ ಹುಲುಗಪ್ಪ	
,, ಎ. ಭೀಕೇರಪ್ಪ	
,, ನಿಂಗಪ್ಪನೋರ ಹುಲುಗಪ್ಪ	

9ನೇ ಪುಟದಿಂದ ಬಂದದ್ದು

ಮುಖ್ಯ ವಿಷಯಗಳು ಅಲ್ಲಿ ಚರ್ಚಿಸಲ್ಪಡುತ್ತವೆ. ಪರಿಶೋಧನಾ ಕಾರ್ಯಕ್ಕೆ ಅಧಿಕ ಹಣವು ವಿನಿಯೋಗಿಸಲ್ಪಡುತ್ತಲಿದೆ. ಬೀಜಗಳನ್ನು ಹೆಂಚುವ ಕಾರ್ಯಕ್ಕೂ ಮಹತ್ವ ಕೊಡಲಾಗುತ್ತಿದೆ. ಪರಿಶೋಧನೆಗಾಗಿ, ಆರ್ಥಿಕ ನ್ಯಾಯಸ್ಥಿಗಾಗಿ. ಮಾರ್ಕೆಟ್ ಅಂಶಗಳಿಗಾಗಿ ವಿವಿಧ ಉಪಸಮಿತಿಗಳೇರ್ಪಟ್ಟು ಆ ಮೂಲಕ ಕಾರ್ಯವು ಸಿಸ್ತಾಗಿ ನಡೆಯುತ್ತಲಿದೆ.

ಉದ್ದೇಶ ಕಾರ್ಯಗೌರವ

ಹತ್ತಿಯಬೆಳೆ-ಗುಣ-ಅಧಿಕ್ಯದಲ್ಲಿ ವೃದ್ಧಿ ಮಾಡಿ ಮೂರುವಸ್ಟಳದಲ್ಲಿ ಬೆಳೆಯುವ ರೈತರಿಗೆ ಒಳ್ಳೆಯ ಬೆಲೆಯನ್ನು ಒದಗಿಸಬೇಕೆಂಬ ಉದಾತ್ತ ಉದ್ದೇಶವನ್ನು ಸಂಘದ ವರಿಟ್ಟುಕೊಂಡಿರುವರು. ವಿಜ್ಞಾನ ಶಾಸ್ತ್ರ ರೀತ್ಯಾ ವ್ಯವಸಾಯವನ್ನು ಅಭಿವೃದ್ಧಿಗೆ ತರುವ ಪರಿಶೋಧನೆಗಳಲ್ಲಿಯೂ, ಒಳ್ಳೆಯ ಬೀಜಗಳನ್ನೊದಗಿಸುವ ಕಾರ್ಯದಲ್ಲಿ ಸಹಾಯವನ್ನೀಯುವದರಲ್ಲೂ ಮುಖ್ಯವಾಗಿ ಸಂಘದವರು ತೊಡಗಿರುವರು. ಸಂಘದ ಪ್ರತಿನಿಧಿಗಳಲ್ಲಿ ಅನೇಕ ಹಿತ ಸಂಬಂಧಗಳಿದ್ದರೂ, ಹತ್ತಿಯನ್ನು ಬೆಳೆಯುವ ರೈತನ ವಿಚಾರಕ್ಕೇ ಪ್ರಥಮ ಗಮನವು ಕೊಡಲಾಗುತ್ತಿದೆ.

ಆಯೋಗ್ಯನಾದ ಮತ್ತು ಕೀಳು ತರಗತಿಯ ಹತ್ತಿ ಬೆಳೆಯುವುದನ್ನು ತಡೆಯಲು, ಬೆಳೆಗೆ ಹಬ್ಬುವ ರೋಗ ರುಜನಗಳನ್ನು ದೂರುಮಾಡಲು ಶಾಸನಗಳ ಏರ್ಪಾಟಿಗಾಗಿ ಅರಳಿ ಸಂಘದವರು ಸೂಕ್ತ ಸಲಹೆಗಳನ್ನೀಯುವರು. ಪರದೇಶದ ಹತ್ತಿ ಸಂಬಂಧವ ರೋಗವನ್ನು ತಡೆಯುವವ ಕ್ಕಾಗಿ ಇಂಡಿಯಾ ಸರಕಾರದವರು ಮಾಡಿದ ಶಾಸನಕ್ಕೆ ಕಾರಣರು ಸಂಘದವರೇ ಎಂದು ಹೇಳಲಡ್ಡಿಯಿಲ್ಲ.

ದೇಶೀಯ ಸಂಸ್ಥಾನಗಳಲ್ಲೂ, ವಿವಿಧ ಪ್ರಾಂತ್ಯಗಳಲ್ಲೂ ಸ್ಥಾಪಿತವಾದ ವ್ಯವಸಾಯ ಇಲಾಖೆಯವರಿಗೆ ಸಲಹೆ ಸೂಚನೆಗಳನ್ನಿತ್ತು ಸಹಾಯ ಮಾಡುವುದೂ ಸಂಘದ ಕಾರ್ಯವಾಗಿದೆ. ಹತ್ತಿಯನ್ನಾಗಲಿ ಅರಳಿಯನ್ನಾಗಲಿ ಮಿಶ್ರಮಾಡದಂತೆಯೂ, ಒಳ್ಳೇಬೆಲೆ ಬರುವ ಮಾರ್ಕೆಟ್‌ಗಳನ್ನು ಏರ್ಪಡಿಸುವುದರಲ್ಲೂ ಸಂಘದವರು ಪ್ರಮುಖ ಭಾಗವನ್ನು ವಹಿಸುತ್ತಲಿರುವರು.

ಪರಿಶೋಧನೆ ಮತ್ತು ಬೀಜಗಳನ್ನು ಹೆಂಚುವಿಕೆಯ ಕಾರ್ಯಕ್ಕಾಗಿ ಮದ್ರಾಸ್ ಪ್ರಾಂತಕ್ಕೆ ಅರಳಿ ಸಂಘದಿಂದ ಧನ ಸಹಾಯವು ಬರುತ್ತಿದೆ. ಆದಾನಿಯಲ್ಲಿ ಈಗ 'ಮುಂಗಾರಿ ಯೋಜನೆ' ಯು Mungari Scheme ಜಾರಿಯಲ್ಲಿದೆ. ಕೆಂಪು ಭೂಮಿಗಳಲ್ಲಿ ಹತ್ತಿಯಬೆಳೆ ಗುಣವನ್ನು ಸುಧಾರಿಸಿ ಪಶ್ಚಿಮ ಭಾಗದ ಗುಣಕ್ಕನ್ವಯ (Westerns) ಮುಂಗಾರಿಯ ಉತ್ಪತ್ತಿಯನ್ನು ಹೆಚ್ಚಿಸುವುದೇ ಆದವಾನಿ ಪರಿಶೋಧನೆಯ ಕಾರ್ಯವಾಗಿದೆ. ಈ ಭಾಗಗಳಿಗೆ 'ಬೀಜಗಳನ್ನು ಹಂಚುವ' ಯೋಜನೆಯೊಂದಿದೆ ಪ್ರಾಂತೀಕ ಸರಕಾರದವರೇತಕ್ಕೋ ಇದನ್ನು ಜಾಗರೆತರಲ್ಲಿ. ಇದಕ್ಕಾಗಿ ಪ್ರಯತ್ನಗಳು ನಡೆದಿವೆ. ಇದೇ ಉದ್ದೇಶದಿಂದಲೇ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಮತ್ತು ರೆಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟಿಸ್‌ರವರು ಆದವಾನಿಯನ್ನು ಸಂಪರ್ಕಿಸಿ ಹೋಗಿರಬೇಕೆಂದು ತಿಳಿದಿದೆ.

ಕೇಂದ್ರ ಅರಳಿ ಸಂಘವು ಹಿಂದೂಸ್ತಾನದಲ್ಲಿಯೇ ಪ್ರಮುಖ ಬೆಳೆಯಾದ ಹತ್ತಿಯ ಪ್ರಗತಿಗಾಗಿ ಇನ್ನೂ ಅನೇಕ ವಿಧದಲ್ಲಿ ದುಡಿಯುತ್ತಲಿದೆ.

ಆಂಧ್ರ-ಕರ್ನಾಟಕ

ಆಂಧ್ರರಲ್ಲೇ ಇರಲಿ ಕರ್ನಾಟರಿರಲಿಲ್ಲಿ,
ಆಂಧ್ರಕರ್ನಾಟಕಾಳಗನಲ್ಲೆ ನಿಲಲಿ.
ಸಾಂಧ್ರಭಾರತ ವೈಕ್ಯಸಂತ್ರವೆಲ್ಲರಿಗಿರಲಿ,
ಆಂಧ್ರರೂ ಕರ್ನಾಟರೂ ಕೂಡಿಬರಲಿ. 1

ಬಾಷೆಕಲಹಗಳಿಂದ ಹೇಸಿಗೆಯುತಾನಾಯ್ತು,
ವಾಸಿಪಂತಗಳೆಲ್ಲ ಭಾರತಕೆ ಬರಿದಾಯ್ತು;
ದಾಸರಾದೆವುತಾಡೆ ನಮ್ಮ ಕಲಹವ ನೋಡಿ,
ಹೇಸವರು ಪರರು ಪ್ರಾರುಷವೆಲ್ಲಿ ನೋಡಿ. 2

ಜಾತಿಭೂತಗಳೆದ್ದು ಭೀತಿಹುಟ್ಟಿಸುತಿಹವು
ನೀತಿರೀತಿಗಳೆಲ್ಲ ಸೊರಗಿ ಕೊರಗುತಲಿಹವು;
ಸಾತಿಶಯದಭಿಮಾನಪರನಿಂದೆ ಪಂಹಾಸೆ,
ಗೇತರದು ನೆಲೆಯಿನ್ನು ಜನ ತಿಳಿದಿರಲಿ. 3

ಕಟ್ಟಪಾಟುಗಳಲ್ಲಿ ಹುರುಳಿಲ್ಲ ತಿಳಿರದಲಿ.
ಕಟ್ಟುವರು ಕಾಗೆಗಳ ಗರುಡನೆನಿಪಿಕೆಯೊಳ್ಳಲ್ಲಿ
ಕಟ್ಟಳೆದು ಕಾಗೆ ಕಾ! ಕಾ! ಎಂದು ಹಾರಾಡಿ,
ರಟ್ಟುಮಾಡಲು ಜವತೆಯಳುವ ದದನೋಡಿ. 4

ಸಿರಿಯಿಹರು ಬಡಜನರ ರಕುತ ಹೀರುತಲಿಹರು,
ಸಿರಿಗಾಗಿ ನರರು ನರರನು ತಿಂಬರು;
ಸಿರಿಯಿರಲು ಬಡವರನ. ಧಿಕ್ಕಾರಗೆಯ್ಯುವುದು
ಸರಿಯಲ್ಲವಿದು ನಾಡೆ ಸಮತೆಯಿರಲಿ. 5

ನಶ್ವರದ ಜೀವನದೊಳಮರತೆಯಬೆಳಕಿರಲಿ,
ವಿಶ್ವಾಸನೇ ವಿಶ್ವಶ್ವಾಸವಾಗಿರಲಿ;
ವಿಶ್ವಪ್ರೇಮದೆ ಜನತೆ ತುಂಬಿತುಳುಕುತಲಿರಲಿ
ಶಾಶ್ವತದ ಕೀರುತಿಯು ನಲಿದು ಬರಲಿ. 6

ಬರೆದವರು ಈ "ತಿರುಮಲೇಶ" ಬ್ಯಾಸಾರಿ.

ನವಭಾರತಕ್ಕೆ ಚಂದಾದಾರರಾಗಿರಿ.

ಮಹಾತ್ಮ ಗಾಂಧಿಯವರಿಂದಲೇ ಭಾರತಕ್ಕೆ ಉದ್ಧಾರ

ಬಳ್ಳಾರಿಯಲ್ಲಿ ಆಚಾರ್ಯ ಕೃಪಾಲಿನಿಯವರ ಉಜ್ವಲಭಾಷಣ

ಅಖಿಲಭಾರತ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಿನಿಯವರು 22 ನೆಯ ತಾ. ಸಾಯಂಕಾಲ ಕೃಷ್ಣಾ ಟಾಕೀಸಿದಲ್ಲಿ ಮೊದಲು ಹಿಂದೂಸ್ಥಾನೀ ಭಾಷೆಯಲ್ಲೂ, ನಂತರ ಇಂಗ್ಲೀಷಿನಲ್ಲೂ, ಸದ್ಯದ ಪರಿಸ್ಥಿತಿಯ ಮೇಲೆ ವಕ್ತಾಯಿಸುತ್ತು ಹೀಗೆ ಹೇಳಿದರು.

ಗಾಂಧಿಯವರು ದೀರ್ಘಾಯುಗಳಾಗಿ ಬಾಳಲಿ

ಸೋದರ ಸೋದರಿಯರೇ ! ಇಂದು ನಾವು ಪರ್ವಕಾಲದಲ್ಲಿ ಇಲ್ಲಿ ಕೂಡಿರುತ್ತೇವೆ. ಇದು ಗಾಂಧಿ ಜಯಂತಿ ದಿನವಾಗಿದೆ. ವರ್ಷಕ್ಕೊಂದುಸಲ ಅವರಹಾ ಪುರುಷನ ಜನ್ಮದಿನವನ್ನಾಚರಿಸಿ ಅವನಿಗೆ ಭಗವಂತನು ದೀರ್ಘಾಯುವನ್ನು ಕೊಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ 73 ವರ್ಷದ ಆಯುಸ್ಸಿನಿಂದ ಇನ್ನೂ ನಮ್ಮ ಮಧ್ಯದಲ್ಲಿಯೇ ಇದ್ದಾನೆ. ದೇಹದ ಅಂಗಾಂಗಗಳೂ, ಮೆದುಳೂ ಫಲ್ಟಯಾಗಿವೆ ನಮ್ಮ ನಾಯಕನಾದ ಅತನಿಗೆ ಭಗವಂತನು ದೀರ್ಘಾಯುವನ್ನು ಕೊಡಲೆಂದು ನಾನೆಲ್ಲಾ ಪ್ರಾರ್ಥಿಸೋಣ

ಗಾಂಧೀಜೀಯ ಕಾರ್ಯ ಮತ್ತು ಜೀವನದ ಮೇಲೆ ಬೀರಿದ ಪ್ರಭಾವ:—

ಹಿಂದೆ ಮಹಾ ಪುರುಷರೆಷ್ಟೋ ಆಗಿ ಹೋದರು. ಬುದ್ಧ, ಮಹಮ್ಮದ್ ಕ್ರೈಸ್ತ ಇವರೆಲ್ಲಾ ದೇಶದ ಧಾರ್ಮಿಕ ಜೀವನದಲ್ಲಿ ಕ್ರಾಂತಿಯನ್ನು ಮಾಡಿದರೂ, ಅವರ ಕಾರಣ ದೊಡ್ಡ ಸಾಮ್ರಾಜ್ಯಗಳು ಉದ್ಭವಿಸಿ ನಾಶವಾದವು. ನಾಶವಾಗದಿರುವುದಕ್ಕಲ್ಲವೆ. ಅವರ ಉದ್ದೇಶವೆಂದರೆ ಧಾರ್ಮಿಕ ಸುಧಾರಣೆ. ಆದರೆ ಗಾಂಧಿಯು ಕ್ರಾಂತಿಕಾರಿ ಇತೀ ಭಾರತ ದೇಶದ ಜೀವನದ ಪ್ರತಿಯೊಂದು ತಾಲೂಕುಗಳ ಮೇಲೂ ಅತನ ಪ್ರಭಾವ ಬಿದ್ದಿದೆ. ಉಡುಪು ಎಂಥಾದ್ದು ಧರಿಸಬೇಕು? ಊಟವು ಹೇಗಿರಬೇಕು? ನಾವು ಯಾವ ಪದಾರ್ಥಗಳನ್ನು ಎಲ್ಲಿ ಕೊಳ್ಳಬೇಕು ನಮ್ಮ ನಿತ್ಯ ಜೀವನದ ಮತ್ತು ರಾಜಕೀಯ ರಂಗದ ಗುರಿಯೇ ನಿರಬೆಕ್ಕು ಎಂಬುದನ್ನೆಲ್ಲಾ ಇಂದು ಗಾಂಧಿಯು ನಮಗೆ ಕಲಿಸುತ್ತಿರುವನು ಗಾಂಧಿಯ ರಂಗಕ್ಕೆ ಬರುವ ಪೂರ್ವದಲ್ಲಿ ಭಾವನೆಗಳಲ್ಲೂ ಗುಲಾಮಗಿರಿ ಇದ್ದಿತು. ಆದರೆ ಗಾಂಧಿಯು ಬಂದಮೇಲೆ ರಾಷ್ಟ್ರೀಯತೆಯ ತೇಜಸ್ಸು ಹೆಚ್ಚಿತು. ಬಾನರ್ಜಿ ಎಂಬುವ ಕಾಂಗ್ರೆಸ್ ಅಧ್ಯಕ್ಷರಿದ್ದವರೊಬ್ಬರು ಸ್ವಪ್ನದಲ್ಲೂ ಇಂಗ್ಲೀಷ್ ಕನಸುಗಳನ್ನು ಕಾಣುತ್ತಿದ್ದರು. ಅವರಿಗೆ ಇಂಗ್ಲೀಷಿನವರೆಂದರೆ ಪಂಚಪ್ರಾಣವಿದ್ದಿತು. ತೀರ್ಮಾನಿಸುವ ನಿರ್ಣಯಗಳಾದರೂ ಆಳುವ ರಾಜರ ಭಕ್ತಿಯಿಂದ ಆರಂಭವಾಗುತ್ತಿದ್ದವು. ಈಗಿರುವ ಸಪ್ರೂ ಶಾಸ್ತ್ರಿಗಳಾದರೂ ಬ್ರಿಟಿಷ ಸರಕಾರವನ್ನು ಬಯ್ಯುವರು, ಅವರಾದರೂ ತಮ್ಮ ಧೋರಣೆಯಲ್ಲಿ ಕಾರ್ಯಾಸಕ್ತರಾಗುವ ಲಕ್ಷಣಗಳನ್ನೇ ಸೂಚಿಸುವುದಿಲ್ಲ. ಮಹಾತ್ಮಗಾಂಧಿ ಅಖಿಲಭಾರತ ಚರಖಾಸಂಘ ಅಖಿಲಭಾರತ ಗ್ರಾಮೋದ್ಯೋಗಸಂಘ ಅಖಿಲಭಾರತ ಹರಿಜನ ಸೇವಕಸಂಘ ಗಳನ್ನು ಸ್ಥಾಪಿಸಿ ಲಕ್ಷಾಂತರ ಜನರಿಗೆ ಅನ್ನಾಹಾರಗಳನ್ನು ಒದಗಿಸಲು ಕಾರಣನಾಗಿದ್ದಾನೆ ಹೇಳುವುದೊಂದು ಮಾಡುವುದೊಂದು ಎಂಬ ತತ್ವವು ಅತನ ಜೀವನದಲ್ಲೇ ಇಲ್ಲ ತನ್ನ ಕೃತಿಯಿಂದ ಪ್ರಯೋಗವನ್ನು ನಡೆಸಿ ನಂತರ ಜನತೆಗೆ ಪ್ರಯೋಗಿಸುವನು. ಅತನ ಪ್ರಯೋಗವೆಲ್ಲಾ ಸತ್ಯ ಅಹಿಂಸೆ ಎಂಬ ಶಾಲೆಯಲ್ಲೇ ನಡೆದಿವೆ. ಇದಕ್ಕೇ ನಾ ಮುಚ್ಚುಮರೆಇಲ್ಲ. ಹಿಂಸಾವಾದಿಗಳಂತೆ ಗುಪ್ತಚರಣೆಯ ಕಾರ್ಯಕ್ರಮವಿಲ್ಲ. ಭಯವು ಲೇಶಾಂಶವೂ ಇಲ್ಲ.

ಕಾಂಗ್ರೆಸ್ ಬೇಡಿಕೆ:-

ಗಾಂಧಿಯನ್ನು ಹೊರಕ್ಕೆದೂಡಿ ಪೂನಾ ನಿರ್ಣಯವನ್ನು ಮಾಡಿ ಹಿಂದೂಸ್ಥಾನಕ್ಕೆ ರಾಷ್ಟ್ರೀಯ ಸರಕಾರವು ಬೇಕೆಂಬ ಬೇಡಿಕೆಯನ್ನು ಕಾಂಗ್ರೆಸ್ ಮುಂದೊತ್ತಿತು ಇಂಡಿಯಾ ಸರಕಾರವವರು ಸ್ವೀಕರಿಸಲಿಲ್ಲ. ರಾಷ್ಟ್ರೀಯ ಸರಕಾರವಿಂದ ಕಾಂಗ್ರೆಸ್‌ನಲ್ಲಿ ಒಡಕುಂಟಾಗುತ್ತಿತ್ತು. ದೇಶದ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿ ಸರಕಾರದ ಇಚ್ಛೆಯ ಪ್ರಕಾರ ಯುದ್ಧ ಸಹಾಯ ಕಾರ್ಯದಲ್ಲಿ ಕಾಂಗ್ರೆಸ್ ತೊಡಗಬೇಕಿದ್ದಿತು. ಇಂಗ್ಲೀಷಿನವರು ರಾಜಕಾರಣೀ ಚತುರರಲ್ಲಿ. ಕಾಂಗ್ರೆಸನ್ನು ಒಡೆಯಲು ಇದಲ್ಲದೆ ಬೇರೆ ಉಪಾಯವಿರಲಿಲ್ಲ. ಇರಲಿ.

ಭಾಷಣ ಸ್ವಾತಂತ್ರ್ಯ:-

ಮತ್ತೆ ನಾವೆಲ್ಲಾ ಗಾಂಧಿಯನ್ನು ಶರಣು ಹೋಗಬೇಕಾಯ್ತು. ಗಾಂಧೀಜೀಯವರು ಬ್ರಿಟಿಷ ಸರಕಾರಕ್ಕೆ ಇಂಥಾ ಸಂದರ್ಭದಲ್ಲಿ ತೊಂದರೆ ಕೊಡಬಾರದೆಂದು ವೈಯಕ್ತಿಕ ಸ್ವಾತಂತ್ರ್ಯ ಕ್ಕಾಗಿಯತ್ನಿಸಿದರು. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಕೂಡ ಅವಕಾಶ ದೊರೆಯಲಿಲ್ಲ.

ಸತ್ಯಾಗ್ರಹ:-

ಅಂಥಾ ಸಂದರ್ಭದಲ್ಲಿ ಗಾಂಧೀಜಿಯಿಂದ ಒಪ್ಪಲ್ಪಟ್ಟ ವ್ಯಕ್ತಿಗಳು ಸತ್ಯಾಗ್ರಹ ವಾಚರಿಸಬೇಕೆಂಬುದನ್ನು ಆಚರಣೆಗೆ ತರಲಾಯಿತು. ಕೆಲವೇ ಜವಾಬ್ದಾರೀಯುವಕರು ಗಾಂಧಿಯನ್ನು ಟೀಕಿಸುತ್ತಾರೆ ಟೀಕಾಕಾರರಿಗೆ ನಾನು ಹೇಳುವುದಿಷ್ಟೆ. ಸೈನಿಕ ದಳಾಧಿಪತಿಗೆ ಸೈನ್ಯದ ಬಲಾ ಬಲಗಳು ಹೇಗೆ ಗೊತ್ತುಂಟೋ ಹಾಗಿಯೇ ಗಾಂಧಿಗಾವರೂ ತನ್ನ ಸೈನ್ಯದ ಮೇಲಾಗಿ ದೇಶದ ಬಲಾ ಬಲಗಳು ಗೊತ್ತುಂಟು. ಸಾಮೂಹಿಕ ಸತ್ಯಾಗ್ರಹ ವನ್ನೇಕೆ ಪ್ರಾರಂಭಿಸಲಿಲ್ಲವೆನ್ನುವರು? ಅವರಿಗೆ ತಿಳುವಳಿಕೆಸಾಲದು ಪರಿಸ್ಥಿತಿಯ ಅರಿವು ಅಂತ ರಾಷ್ಟ್ರೀಯ ಪರಿಸ್ಥಿತಿಯು ಆಗು ಹೋಗು ಮೇಲಾಗಿ ದೇಶದ ನೀತಿಯ ಮನಸ್ಸು ಗಾಂಧಿಗಿಂತ ಬೇರೊಬ್ಬರಿಗೇನುಗೊತ್ತು? ದೇಶದ ಸಾಮಗ್ರಿ ವಸ್ತು ವಿಶೇಷವು ಎಂಥಹದೆಂಬುದು ಅತನಿಗೇಗೊತ್ತು! ಅತನು ತನ್ನ ಪ್ರಾಣಕ್ಕೆ ಹೆದರುವವನೇ? ಎಂದಿಗೂಇಲ್ಲ

ಅತನಲ್ಲೇ ನಮ್ಮ ಭರವಸೆ ವಿಶ್ವಾಸಗಳನ್ನಿಡಬೇಕು:-

ಸಮತಾವಾದಿಗಳಾದ ಪಂಡಿತ ಜವಹರಲಾಲರೂ, ಸುಭಾಸಚಂದ್ರಬೋಸರೂ ಅಧ್ಯಕ್ಷರಿದ್ದ ಕಾಲಕ್ಕೆ ಯಾವ ಸಭೆಗಾಗಲಿ ಗಾಂಧಿ ಇಲ್ಲದಿದ್ದಕ್ಕೆ ಕಷ್ಟವೆಂಬುದನ್ನು ಮನಗಂಡರು. ಗಾಂಧಿಯು ಕಾಂಗ್ರೆಸ್ ನೊಳಗಿರಲಿ ಹೊರಗಿರಲಿ ಸುಜಾತ ಸೂತನೆಗಳಿಗೆ ಕಾರ್ಯಕಾರಿಣೀ ಸಮಿತಿಯು ಅಲ್ಲೇ ಹೋಗಬೇಕು ಬೇರೆಗತ್ಯಂತರವಿಲ್ಲ ಇಟಲಿ ರಷ್ಯಾ ಜರ್ಮನಿಗಳಲ್ಲಿ ಅತನು ಹುಟ್ಟಿದ್ದರೆ ಅಲ್ಲಿನ ಸರ್ವಾಧಿಕಾರಿಗಳಿಗಿಂತಲೂ ಪ್ರಬಲವಾದ ಸ್ಥಾನವು ಅತನಿಗೆ ದೊರೆಯುತ್ತಿತ್ತು. ಈ ಕಾರಣ ನಮ್ಮ ನಾಯಕನಾದ ಅತನಲ್ಲೇ ನಾವು ವಿಶ್ವಾಸವಿಡಬೇಕು.

ಸಮಗೆ ಸ್ವರಾಜ್ಯಬೇಕು:—

ಪರಕೀಯರ ರಾಜ್ಯವು ಎಷ್ಟೇ ಒಳ್ಳೆಯದಿರಲಿ ಅದು ನಮಗೆ ಬೇಡ ನಮಗೆ ಬೇಕಾಗಿರುವುದು ನಮ್ಮ ರಾಜ್ಯ ನಮ್ಮ ರಾಜ್ಯದಲ್ಲಿ ಎಷ್ಟೇಕಷ್ಟ ತೊಡಕುಗಳು ಬಂದರೂ ಸಹಿಸೋಣ ಮಹಾತ್ಮಗಾಂಧಿಯ ನಾಯಕತ್ವದಲ್ಲಿ ನಮ್ಮ ಗುರಿಯನ್ನು ಸಾಧಿಸೋಣ.

Visit our Stores & be satisfied.

ಈ ದಿನವೇ ನಮ್ಮಂಗಡಿಗೆ ಬನ್ನಿರಿ, ನೋಡಿಕೊಂಡು, ಧರಿಸಿ ಆನಂದಿಸಿರಿ.

WANT TO LOOK IMPRESSIVE?

Then you need up-to date and

Ready made clothings

Suits, Coats, Pants, Suits, Hallarms, Blouses Frocks, & Underwares of all sizes, & Varieties, Qualities most suitable and most modern beitting rich & poor avaiable at reasonable Rates

ನಿಮಗೆ ಬೇಕೋ?

- ವಕ್ತಿತ್ವದ ಪ್ರತಿಭೆ—
- ಜನತೆಯಲ್ಲಿ ಗೌರವ—
- ಸಭೆಗಳಲ್ಲಿ ಆದರ—
- ಬಂಧು ಮಿತ್ರರಲ್ಲಿ ಪ್ರೇಮ—

ಹಾಗಾದರೆ

ಅಂದ ಚಂದ, ಅಧುನಿಕ ಸಿಸ್ಟಿನ ವಿವಿಧ ಬಗೆಗಳ ಅಬಾಲ ವೃದ್ಧರ.

ತಯಾರಾದ ಉಡುಪು

ಸೂಟು, ಕೋಟು, ಪರ್ಟು, ಪಾಂಸು, ಶರ್ಟ್, ಬ್ಲೌಜಾಂ ಒಳಬಟ್ಟೆ. ಬಾಲಬಾಲೆಯರಿಗೆ ದೊಡ್ಡವರಿಗೆ ಸರಿಹೊಗ್ಗುವ ಉಡುಪು ಬಡವರಿಗೂ, ಶ್ರೀಮಂತರಿಗೂ ಯೋಗ್ಯವಾದ ಸಮೂಹದ ದರ ಬೆಲೆಗಳಲ್ಲೂ ದೊರೆಯುತ್ತವೆ.

Raja Dress Mfg. Co,

Car Street BELLARY.

Pro.- S Rajagopal.

ರಾಜಾ ಡ್ರೆಸ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ,

ಕೇರು ಬಜಾರು, ಬಳ್ಳಾರಿ.

7ನೇ ಪುಟದಿಂದ ಬಂದದ್ದು

ರ್ಬಂಧಿಸಲ್ಪಟ್ಟರೆ ಎರಡನೆಯದನ್ನು ಪ್ರಾರಂಭಿಸಬೇಕು.

ಶಿಕ್ಷಣ

ರಾಷ್ಟ್ರದ ಹಿತಕ್ಕೆ ಪ್ರಜ್ಞೋದಕವಾ ಹೆಂತಹ ಶಿಕ್ಷಣವನ್ನು ಸ್ವಯಂಸೇವಕರು ತಮ್ಮ ಮುಂದೆ ಇಟ್ಟುಕೊಂಡಿರಬೇಕಾದಂತಹ ತತ್ವಗಳ ಮೇಲೆ ಅವರ ಕಾರ್ಯಾದಿಗಳ ಗತಿಯು ಅವಲಂಬಿಸಿರುತ್ತದೆ. ಸ್ವಯಂಸೇವಕರಿಗೆ ಶಾರೀರಿಕ ಶಿಕ್ಷಣದ ಹೊರತು ಅವರ ಕಾರ್ಯ ಬಾಧಿಕ ಭಾಗವನ್ನು ಸುಧಾರಿಸುವದರ ಸಲುವಾಗಿ ಪುಸ್ತಕೀ ವಿದ್ಯೆಯೂ ಅವಶ್ಯವಾಗಿದೆ. ಬೇರೆ ಬೇರೆ ದೈನಿಕ ವಿಷಯಗಳ ಜ್ಞಾನ, ಪ್ರಥಮ ಚಿಕಿತ್ಸೆಗಳ ಬಗ್ಗೆ ಅವರಿಗೆ ದೊರೆತ ಶಿಕ್ಷಣವು ಬಹಳ ಸಹಾಯಕಾರಿಯಾಗುತ್ತದೆ. ಕೇವಲ ಓದಿದರೆ ನಡೆಯಲಾರದು. ಓದಿದ್ದನ್ನು ಪ್ರಯೋಗದಲ್ಲಿ ತರುವಂತಹ ಶಿಕ್ಷಣವೂ ಅವರಿಗೆ ದೊರೆಯಬೇಕು. ಪ್ರತಿಷ್ಠಾನದ ಆವಶ್ಯಕತೆಯ ವೇಳೆಗಳು ಸ್ವಯಂಸೇವಕರಿಗೆ ಅನೇಕಸಲ ಬರುವವು. ಅವುಗಳನ್ನು ಎದುರಿಸುವ ಶಕ್ತಿಯು ಅವರಲ್ಲಿ ಇರಬೇಕಾಗುವುದು.

ಸ್ವಯಂಸೇವಕರ ದೇಹವು ಆರೋಗ್ಯಯುಕ್ತವೂ ಮನಸ್ಸು ನಿರ್ಮಲವೂ ಇರಬೇಕು. ಅವರ ಮನಸ್ಸು ಗ್ರಾಹಕವಿರಬೇಕು. ಆದರೆ ಪೂರ್ವಗ್ರಹ, ತಪ್ಪುಕಲ್ಪನೆ ದ್ವೇಷಗಳಿಗೆ ಅದರಲ್ಲಿ ಎಡೆ ಇರಕೂಡದು. ಮನುಷ್ಯ ಮನುಷ್ಯರಲ್ಲಿ ಅವರಿಗೆ ಭೇದವು ತೋರಕೂಡದು. ನಿಸ್ವಾರ್ಥಿಯರದಿದ್ದರೆ ಅವನು ನಿಜವಾದ ರಾಷ್ಟ್ರೀಯ ಸೇವಕನಾಗಲಾರನು. ನಿಸ್ವಾರ್ಥಿಯು ಕೊನೆಗೆ ತನ್ನನ್ನೇ ಮೋಸಗೊಳಿಸಿಕೊಳ್ಳವನು.

ಸುಲಭವು ಅಲ್ಲ; ಅಸಾಧ್ಯವೂ ಅಲ್ಲ

ಸೂಟು, ಕೋಟು, ಶರ್ಟು, ಬನೀನು, ಸಿಕ್ಕೆರ್, ಪೈಜಾಮ ಬ್ಲೌಟ್ಸ್, ಬ್ಲೌಸುಗಳಿಗೆ ದೊಡ್ಡವರಿಗೆ ಸಂಹೋಗುವ ಉಡುಪು ಬಡವರಿಗೂ ಶ್ರೀಮಂತರಿಗೂ ಯೋಗ್ಯವಾದ ಸಮೂನೆದರ ಬಾವಾಗ್ಯ ದೊರಯುತ್ತವೆ.

Raja Dress Mfg. Co,

Car Street BELLARY.

Pro S Rajagopal

ರಾಜಾ ಡ್ರೆಸ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ,

ಕೇರು ಬಜಾರು, ಬಳ್ಳಾರಿ.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ ನಮ್ಮ ಹೆಸರಿರುವ ಹಳೆ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇಪ್ಪೀಚ್ ಕೊಟ್ಟರಿ ಹೊಸ ವಸ್ತುಗಳನ್ನು ಕೊಡುತ್ತೇವೆ ವಾಚ್ ಎಂಡ ವಾಚು ಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಕನ್ನಡ ಭಗವದ್ಗೀತೆ.

ಶ್ರೀ ಕೃಷ್ಣ ಪರಮಾತ್ಮನ ದಿವ್ಯವಾಣಿಯಿಂದ ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಬೋಧಿಸಲ್ಪಟ್ಟ ಭಗವದ್ಗೀತೆಯ ಗಂಭೀರಾರ್ಥವನ್ನು ಸರಳವಾದ ಕುಸುಮ ಷಟ್ಪದಿಯ ಪದ್ಯ ಶೈಲಿಯಲ್ಲಿ ಕರ್ನಾಟಕದ ಸುಪ್ರಸಿದ್ಧ ಕವಿಗಳಲ್ಲೊಬ್ಬರಾದ ಶ್ರೀ ಎಂ. ಎಸ್. ಸುಬ್ಬಣ್ಣನವರು ಗ್ರಂಥ ರಚನೆ ಮಾಡಿದುವರು. ಇದಕ್ಕೆ ಅನೇಕ ಪಂಡಿತರ ಪ್ರಶಂಕಯು ದೊರೆತಿದೆ. ಕನ್ನಡಿಗರೆಲ್ಲಾ ಇದನ್ನು ಕೈ ಕನ್ನಡಿಯಾಗಿ ಮಾಡಿಕೊಳ್ಳಲು ಸುಸಂಧಿ. ಸ್ವಲ್ಪ ಪ್ರತಿಗಳಿವೆ. ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್.

ಬೆಲೆ 0—12—0 ಪೋಸ್ಟು ಖರ್ಚು ಪ್ರತ್ಯೇಕ.

ಕಾಲಿನ ಸುಬ್ಬಣ್ಣ, ಮರ್ಚೆಂಟು, ಬಳ್ಳಾರಿ.

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ

The Rates of Subscription.

Annual

Local 2—0—0

Moffusil 3—0—0

6 Months

Local 1—4—0

Moffusil 1—10—0

ಚಂದಾ ವಿವರ

ಬಳ್ಳಾರಿಯವರಿಗೆ 2-0-0

ಹೊರಗಿನವರಿಗೆ 3-0-0

೬ ತಿಂಗಳಿಗೆ

ಬಳ್ಳಾರಿಯವರಿಗೆ 1- 4-0

ಹೊರಗಿನವರಿಗೆ 1-10-0

Nava Bharat, Bellary.

REG. No. 3937.

Sri _____

_____

Printed at Vittal Press, Car Street Edited & Published by T. B. Keshava Rao, Bellary.

Reg. M. No. 3937. ' ವಂದೇ ಮಾತರಂ '

ನವಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೩ ಬಳ್ಳಾರಿ ಅಕ್ಟೋಬರ್ ೧೯ನೇ ಭಾನುವಾರ ೧೯೪೧. ಟಿ. ಪಿ. ಕೇಶವರಾವ.

ರಾವ ಬಹದ್ದೂರು ಸಿ. ಹನುಮಂತಗೌಡರು ಸ್ವರ್ಗಸ್ಥರಾದರು.

ರಾಯರು ಹಂಪೆಯಲ್ಲಿ ಎಷ್ಟು ಚೊರುಗಲ್ಲುಗಳಿಗೆನೆ; ಯಾವ ಯಾವ ಕಲ್ಲು ಎಂತೆಂತಹ ಕಥೆ ಹೇಳುತ್ತವೆ; ಯಾವ ರೀತಿಯಲ್ಲಿ ಕೃಷ್ಣದೇವರಾಯ ಪಾದುಕಾರಿಯಾಗಿ ನಡದು ಹೋಗುತ್ತಿದ್ದ; ರಾಮರಾಯನ ಗದ್ದಿಯೆಂದರೇನು; ವಿಠಲಗುಡಿಯ ಸಪ್ತಸ್ವರ ಮಂಟಪದ ವೈಭವನೇನು ಈ ಬಗೆಯ ನೂರಲ್ಲ ಸಾವಿರಾರು ಪ್ರಶ್ನೆಗಳಿಗೆ ನಿಂತಲ್ಲೆ ಶಾಸ್ತ್ರೋಕ್ತವಾಗಿ, ರಸಭರಿತವಾಗಿ ಉತ್ತರವಿತ್ತು, ಸ್ವೀ ಕ್ಷಕರ ಹೃದಯವೆಲ್ಲ ಅಭಿಮಾನದ ಕಿಚ್ಚನ್ನು ಮರುಕೊಳಿಸಿ, ವೈಭವದಿನಗಳ ನಿಜಯಸಗರವೇ ಕಣ್ಮುಗಳಮುಂದೆ ನಿಂತುನಲಿವಂತೆ ಮಾಡಬಲ್ಲ ಶಕ್ತಿ ಒಬ್ಬ ಶನ್ನಿಡಿಗರಿಗಿತ್ತು. ಆವರು ರಾವ್ ಬಹದ್ದೂರ್ ಸಿ. ಹನುಮಂತಗೌಡರು.

ಹಂಪೆಯು ಜಗದಾಕರ್ಷಕ ಕೇಂದ್ರಗಳಲ್ಲೊಂದಷ್ಟೆ ಅಲ್ಲಿಗೆ ವೈಸರಾಯರುಗಳೇನು, ಗವರ್ನರುಗಳೇನು, ದೇಶವಿದೇಶಗಳ ಕಲಾಯಾತ್ರಿಕರೇನು, ಇತಿಹಾಸ ಸಂಶೋಧಕರೇನು ಸಾವಿರಗಟ್ಟಲೆ ಪ್ರತಿವರ್ಷವೂ ಬಂದು ಹೋಗುವರು. ಅಪರಿಗೆಲ್ಲ ಶ್ರೀ ಹನುಮಂತಗೌಡನು ತೋರಿಸಿದರುಂಟು. ಅವರು ಬಣ್ಣಿಸಿದರುಂಟು. ಸುಮಾರು ೨೦ ವರ್ಷಗಳಕಾಲ ಅವರು ಒಂದೇ ಸಮನಾಗಿ, ಅಪೂರ್ವ ಶ್ರದ್ಧಾಸಕ್ತಿಯಿಂದ ಹಂಪೆಯ ಗತವೈಭವ ಪರಿಚಯವನ್ನು ಬಂದವರಿಗೆಲ್ಲ ಮಾಡಿಸುತ್ತ ಬಂದರು. ಅವರು ಮನ್ನೆ ಗುರುವಾರ ಬೆಳಿಗ್ಗೆ ಹೊಸಪೇಟೆಯಲ್ಲಿ ಸ್ವರ್ಗಸ್ಥರಾದರೆಂಬ ದುಃಖವಾರ್ತೆಯನ್ನು ತಿಳಿಸಲು ನಮಗೆ ಬಹಳ ವಿಷಾದವಾಗುತ್ತದೆ.

ಶ್ರೀ ಹನುಮಂತಗೌಡರು ಒಳ್ಳೆ ಸಾಹಿತಿಗಳು. ಕನ್ನಡ ಭಾಷಾ ಸಾಹಿತ್ಯದಲ್ಲಿ ಅವರ ಅಭಿಮಾನ ಅಷ್ಟಿಷ್ಟಲ್ಲ. ಕರ್ನಾಟಕ ಸಾಹಿತ್ಯ ಪರಿಷತ್ಕಾರ್ಯವಲ್ಲಿ ಅವರೂ ನೆರವಾಗಿ ಯೋಗ್ಯಪ್ರಮಾಣವ ಸೇವೆಸಲ್ಲಿಸಿದ್ದಾರೆ. ರಾವ್ ಬಹದ್ದೂರರು ಸ್ವಯಂ ಲೇಖಕರು. ಹಲವು ನಾಟಕಗಳನ್ನೂ ಸಹ ಬರೆದಿದ್ದಾರೆ. ಬಳ್ಳಾರಿ ಸುತ್ತಮುತ್ತಣ ಪ್ರಾಂತ್ಯದಲ್ಲಿ ಕನ್ನಡ ಧ್ವಜವನ್ನು ಹಿಡಿದೆತ್ತಿ ನಿಲ್ಲಿಸಿದ ವೀರಾಗ್ರಣಿಗಳು. ಹನುಮಂತಗೌಡರು ಇಪ್ಪತ್ತು ವರ್ಷಗಳ ಹಿಂದೆ ನೋಡಬೇಕಾಗಿತ್ತು, ಕೇಳಬೇಕಾಗಿತ್ತು ಶ್ರೀ ಹನುಮಂತಗೌಡರ ಕೀರ್ತಿ ಪ್ರತಾಪ. ಇವರು ತಮ್ಮ ಆಯುಷ್ಯವನ್ನೆಲ್ಲ ಕನ್ನಡ ಭಾಷೆ, ಕನ್ನಡನಾಡು ಇವುಗಳ ಉದ್ಧಾರ ಕಾರ್ಯಕ್ಕಾಗಿ ವಿನಿಯೋಗಮಾಡಿ ಶಾಶ್ವತ ಶಾಂತಿ ಸಾಮ್ರಾಜ್ಯವನ್ನು ಸೇರಿದರು. ಪರಮಾತ್ಮನು ಅವರಾತ್ಮಕ್ಕೆ ನಿತ್ಯಾನಂದವನ್ನು ಕೊಡುವನೆಂದು ನಾವು ನಂಬಿದ್ದೇವೆ. ಕನ್ನಡನಾಡಿಗಾಗಿ ಮಡಿವನರೇ ಧನ್ಯರು.

(V. K.)

ಬಳ್ಳಾರಿ.

ರಾಜಕೀಯ ಭಾಷಣಗಳು:- 11 ನೆಯ ತಾ. ಸಾಯಂಕಾಲ ಶ್ರೀ ಕಲ್ಲೂರು ಸುಬ್ಬರಾಯರೂ, ಶ್ರೀ ಭಕ್ತವತ್ಸಲಂ (ಮದ್ರಾಸು) ಇವರು ಸಾಂಬಮೂರ್ತಿ ಮೈದಾನದಲ್ಲಿ ಶ್ರೀ ಪೆರುಮಾಲಸ್ವಾಮಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸದ್ಯದ ಪರಿಸ್ಥಿತಿಯನ್ನೇಲೆ ಭಾಷಣಗಳನ್ನು ಕೊಟ್ಟರು. "ಗಾಂಧೀಜಿಯವರ ನಾಯಕತ್ವದಲ್ಲಿ ಸತ್ಯಾಗ್ರಹವು ಯಶಸ್ವಿಯಾಗಿದೆ. ಸರಕಾರವರು ತಮಗೆ ಬೇಕಾದವರನ್ನು ಹಿಡಿಯುವುದು, ಬೇಡಾದವರನ್ನು ಬಿಡುವುದು ಇದರ ಮೇಲಿಂದ ಇಂಡಿಯಾ ರಕ್ಷಣಾಶಾಸನದ ಬೆಲೆ ಹೋಯಿತೆಂದು ಹೇಳಬಹುದು. ಬ್ರಿಟಿಷ್ ತಜ್ಞರಿಂದ ಸ್ವರಾಜ್ಯಬರುವುದೆಂದೂ, ಅವರು ಹೇಳಿಕೆಗಳನ್ನು ಕೊಡಲೆಂದೂ ಕೆಲವರು ಆಶಿಸುವರು. ಇದರಲ್ಲಿ ಅರ್ಥವಿಲ್ಲ. ಪ್ರಜಾಶಕ್ತಿಯಲ್ಲೇ ಸರ್ವಸ್ವವೂ ಇದೆ. ರೂಸವೆಲ್ಟ್ ಚರ್ಚಿಲರ ನುಡಿಗಳು ನಮ್ಮವಾಲಿಗೆ ನೀರಿನಲ್ಲಿನ ಬರವಣಿಗೆ ಇದ್ದಂತೆ ಈಕಾಲದಲ್ಲಿ ಯಾವ ಸಂಧಿ ಮಾತುಕತೆಗಳಿಗೂ ಬೆಲೆಯಿಲ್ಲ ಈ ಕಾರಣ ನಮ್ಮಶಕ್ತಿಯನ್ನು ನಾವು ಬೆಳೆಸಿಕೊಂಡು ಮುಕ್ತರಾಗಬೇಕು ಎಂದು ಶ್ರೀ ಸುಬ್ಬರಾಯರು ಹೇಳಿದರು.

" ಸತ್ಯಾಗ್ರಹ ಪರಿಣಾಮವ ಪಟ್ಟಯನ್ನು ಈಗಲೇ ತೆಗೆಯುವುದು ಒಳ್ಳೆಯದಲ್ಲ. ಇಂಗ್ಲೆಂಡು ಈ 2 ವರ್ಷಗಳಲ್ಲಿ ಸಾಧಿಸಿರುವುದೇನು ಎಂದು ಕೇಳಿದರೆ ಎಷ್ಟು ನ್ಯಂಗ್ಯವಾಗುವುದೋ ಅಷ್ಟೇ ಸತ್ಯಾಗ್ರಹದ ಲಾಭ ನಷ್ಟಗಳನ್ನು ವಿಚಾರಿಸುವುದೂ ಅಸಾಧುವಾಗಿದೆ. ಯುದ್ಧದ ಬಲಾಬಲ ದಂಡೂತ್ರೆ ವಗೈರೆ ನಿರ್ಣಯಿಸುವುದರಲ್ಲಿ ಚರ್ಚಿಲ್ಲರು ಎಷ್ಟು ಸಮರ್ಥರೋ ದೇಶದ ಈಗಿನ ಪರಿಸ್ಥಿತಿಯಲ್ಲಿ ಸತ್ಯಾಗ್ರಹವನ್ನು ನಡೆಯಿಸುವ ವಿಷಯಕ್ಕೆ ನಾಯಕರಾದ ಗಾಂಧೀಜಿಯವರು ಸಮರ್ಥರಿದ್ದಾರೆ. ಕಾಂಗ್ರೆಸ್ ಶಕ್ತಿಯು ಬೆಳೆದಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಕಾಂಗ್ರೆಸ್‌ನವರಿಗೆ ಅಧಿಕಾರಲಾಲಸೆಇಲ್ಲ ಯಾವ ಉದ್ಯಮವಾಗಲಿ ಪ್ರಜೆಗಳ ಬೆಂಬಲದಿಂದ ನಡೆಯಬೇಕು. ಗಾಂಧೀಜೀಯವರ ಉದ್ಯಮಕ್ಕೆ ಪ್ರಜೆಗಳ ಬೆಂಬಲವಿದೆ. ಎಂಮೊ ಶ್ರೀ ಭಕ್ತವತ್ಸಲಂರವರು ಹೇಳಿದರು. ಶ್ರೀ ಸುಬ್ರಹ್ಮಣ್ಯಂರವರು ಇಂಗ್ಲಿಷ್ ಭಾಷಣವನ್ನು ಕನ್ನಡದಲ್ಲಿ ಭಾಷಾಂತರಿಸಿದರು.

ವಿದ್ಯಾವಿಷಯ:- ಜಿಲ್ಲಾವಿದ್ಯಾಧಿಕಾರಿಗಳಧ್ಯಕ್ಷತೆಯಲ್ಲಿ ಮ್ಯು. ಹೈಸ್ಕೂಲ್‌ನಲ್ಲಿ ಅನಂತಪುರ ಕಾಲೇಜು ಪ್ರೊಫೆಸರ್ ಶ್ರೀ ಪಿ. ಆರ್. ಕೃಷ್ಣಸ್ವಾಮಿಯವರು "ವಿದ್ಯೆಯ ವೈಶಿಷ್ಟ್ಯ" ಎಂಬ ವಿಷಯವನ್ನು ಕುರಿತು ಶ್ರೇಷ್ಠಮಟ್ಟದ ಭಾಷಣವನ್ನು ಕೊಟ್ಟರು.

ಬಳ್ಳಾರಿ ಜಿಲ್ಲಾ ವಾರ್ತೆಗಳು.

ಹೊಸಳ್ಳಿ (ಕೂಡ್ಲಿಗಿ) - ಇಲ್ಲಿಗೆ ಜಿಲ್ಲಾ ಬೋರ್ಡಿನವರು ಆಸ್ಪತ್ರೆಯನ್ನು ದಯಪಾಲಿಸಿದ್ದರೂ ಔಷಧಗಳಿಲ್ಲ. ಔಷಧಗಳಿಲ್ಲದೆ ಡಾಕ್ಟರರವರಾದರೂ ಏನು ಮಾಡಬೇಕು? ಔಷಧಗಳ ವ್ಯವಸ್ಥೆ ಮಾಡದೆ ಡಾಕ್ಟರರವರನ್ನು ಕಳುಹಿಸುವದರಲ್ಲಾದರೂ ಏನರ್ಥವೋ ಗೊತ್ತಿಲ್ಲ 4—5 ತಿಂಗಳು ವ್ಯರ್ಥ ಸಂಬಳ ಕೊಡಬೇಕು. ಜಿಲ್ಲಾ ಬೋರ್ಡಿನವರು ಈಕಡೆ ಲಕ್ಷ್ಯ ಕೊಟ್ಟು ಶೀಘ್ರದಲ್ಲೇ ಔಷಧಗಳನ್ನು ಕಳುಹಿಸುವ ವ್ಯವಸ್ಥೆ ಮಾಡಿಯಾರೆಂದು ನಂಬಲಾಗಿದೆ.

ಹಿರಿಯಾಳು—ಇಲ್ಲಿಗೆ ಜ. ಬೋ ವಿದ್ಯಾಧಿಕಾರಿಗಳಾದ ಶ್ರೀ ಬಾಲಸುಂದರಂ ರವರು ಬಂದು ಶಾಲೆಯನ್ನು ನೋಡಿ ತಕ್ಕ ಸಲಹೆ ಸೂಚನೆಗಳನ್ನು ಕೊಟ್ಟು ಹೋದರು. ಶಾಲಾ ಸಂದರ್ಶಕರ ಆಗೌರವ ವರ್ತನೆಯ ಬಗ್ಗೆ ಸೂಕ್ತ ಚರ್ಯೆಯನ್ನು ತೆಗೆದುಕೊಳ್ಳುವರೆಂದು ಗೊತ್ತಾಗಿದೆ

ಹರಪನಹಳ್ಳಿ—ಇಲ್ಲಿ ಸುಮಾರು 20 ವರ್ಷಗಳಿಂದಲೂ ಭಜನೆ ನಡೆಯುತ್ತಿದ್ದು 2 3 ವರ್ಷಗಳಿಂದಲೂ ನಿಂತಿರುವುದು ವಿಷಾದಜನಕವಾಗಿದೆ. ಭಜನೆಯೆಂದರೆ ಭಗವದ್ಭಕ್ತಿ ಪ್ರದರ್ಶನ ಸ್ಥೂಲವೇ ಅಲ್ಲ. ಆದರೆ ಮಧುರವಾಗಿ ಹಾಡಿ - ತಮ್ಮ ಗಾನ ಕಲೆಯನ್ನು ಶಾಸ್ತ್ರೀಯವಾಗಿ ವೃದ್ಧಿಪಡಿಸಿಕೊಳ್ಳಲವಕಾಶವಿರುವ ಯುವಕರಿಪ್ಪೇ ಜನರಿರುವರು. ಭಜನ ಮಂದಿರದ ಉಪಯೋಗಗಳಿಷ್ಟೇ ಇನೆ ಭಜನೆಯಿಂದಿರವನ್ನು ಸ್ಥಾಪಿಸಲು ಯತ್ನಿಸುತ್ತಿರುವ ಸುಹಾಶಯರಿಗೆ ಸಹಾಯಮಾಡಿ ಗಾನ ಕಲೆಗೂ ಪ್ರೋತ್ಸಾಹಕೊಡಲು ಕೋರಲಾಗಿದೆ. ಮೇಗಳಪೇಟೆ ಬೋರ್ಡ ಹಿಂದೂ ಬಾಲಕರ ಶಾಲೆಯನ್ನು ಸರಕಾರದ ಸಿಯಮಗಳ ಪ್ರಕಾರಕ್ಕೆ ಅಭಿವೃದ್ಧಿಗೆ ತಂದು ಶ್ರೀ ಕೊಟ್ರಗೌಡರೂ ಉಳಿದ ಉಪಾಧ್ಯಾಯರೂ ಯತ್ನಿಸಿ ಯಶಸ್ವಿಯಾಗಿದ್ದಾರೆ. ಉಳಿದ ಶಾಲೆಗಳವರೂ ಸಾಕಾದಷ್ಟು ಪ್ರಯತ್ನಮಾಡುತ್ತಿರುವರೆಂದು ನಂಬಲಾಗಿದೆ.

ಕೊಟ್ಟೂರು—ವ್ಯಾಪಾರದ ಸೀಸನ್ ಇನ್ನೂ ಸ್ವಾರಂಭವಾಗಲಿದೆ. ಆಲೂರು ಪ್ರಾಂತ್ಯ ಫ್ಲೇಗ್ ಇರುವುದೆಂಬುದು ಕೇಳುತ್ತೇವೆ. ಅಲ್ಲದೆ ಹರಪನಹಳ್ಳಿಯಲ್ಲಿ ಇಲಿಗಳು ಬೀಳುತ್ತಲಿವೆಯೆಂದು ಖಚಿತವಾದ ಸುದ್ದಿ ಇದೆ. ಈ ಕಾರಣ ಅಂಟುರೋಗದ ನಿವಾರಣೋಪಾಯಗಳನ್ನು ಶೀಘ್ರವಾಗಿ ಆರೋಗ್ಯ ಖಾತೆಯವರು ತೆಗೆದುಕೊಳ್ಳಬೇಕು. ಇಲ್ಲಿ 8 ಖಾಸಗಿ ಶಾಲೆಗಳೂ, 2 ಗ್ರಾಂಟು ಶಾಲೆಗಳೂ ಇದ್ದು ಸರಕಾರದ ನಿಯಮಗಳ ಪ್ರಕಾರಕ್ಕೆ ಬೋರ್ಡ ಶಾಲೆಗಳು ತೃಪ್ತಿಕರವಾಗಿರಲು ತಡೆಯಾಗಿದೆ ಬೋರ್ಡು ಶಾಲೆಗಳಲ್ಲಿ ಸರಿಯಾಗಿ ಕೆಲಸ ನಡೆಯದಿದ್ದುದಕ್ಕೆ ಇಷ್ಟು ಪ್ರೈವೇಟ್ ಶಾಲೆಗಳು ಯಟ್ಟಿದವೆಂದು ಹೇಳುವುದರಲ್ಲಿ ಸ್ವಲ್ಪ ಸತ್ಯಾಂಶವುಂಟು. ಪ್ರೋಷಕರೂ - ತಂದೆ - ತಾಯಿಗಳೂ - ಉಪಾಧ್ಯಾಯರೂ ಸೇರಿ ಭವಿಷ್ಯದರಿ ಬೋರ್ಡ ಶಾಲೆಗಳ ಅಭಿವೃದ್ಧಿಯಾಗುವುದೆಂಬ ವಿಶ್ವಾಸವನ್ನು ಇಂಥಾ ಸಹಕಾರವಾದೀತೆಂದು ಆತಿಸ-ತ್ತೇವೆ. ಗಚ್ಚಿನ ಮತಿಯ ಗ್ರಾಂಟು ಶಾಲೆಯು ಎಲ್ಲಾ ನಿಯಮಗಳನ್ನೂ ಪೂರೈಸಿ ಸರಕಾರದ ನಿಬಂಧನೆಗಳ ಪ್ರಕಾರ ಸಿದ್ದರೂ ತೃಪ್ತಿಕರವಾಗಿದೆ. ಶಾಲೂ ಕಿನ ಜನೆಕ ಗ್ರಾಂಟು ಶಾಲೆಗಳಿಗೂ ಇದೇ ಹಣೆಯ ಬರಹವಾಗಿದೆ ಜೀವನಕ್ಕೆ ಪರಿತಪಿಸುತ್ತಿರುವ ಈ ಕಾಲದಲ್ಲಿ ಆರ್ಥಿಕ ವಿಷಮ ಪರಿಸ್ಥಿತಿಯಲ್ಲಿ ಗ್ರಾಂಟು ಶಾಲಾ ಮಾಸ್ತರರ ಸಂಕಷ್ಟವನ್ನು ತಾಲೂಕಿನ ಪರಿಷ್ಕಾಧಿಕಾರಿಗಳು ದೂರಮಾಡುವರೆಂದು ಕೋರುತ್ತೇನೆ.

ಜಿಲ್ಲಾ ಬೋರ್ಡಿನ ಪ್ರಾಥಮಿಕ ಶಾಲೆಗಳು.

ಲೇಖಾಂಕ 3 [ಉಪಾಧ್ಯಾಯ ಮಿತ್ರ]

5-10-15 ವರ್ಷಗಳ ಸರ್ವಿಸು, ಮಕ್ಕಳು ಮರಿ ಮಧ್ಯವಯಸ್ಸು ಸಾಲದ್ದಕ್ಕೆ ಕಲವರಿಗೆ ಲೋಯರ್‌ಗ್ರೇಡು ಇಂಥಹ ಉಪಾಧ್ಯಾಯರನ್ನು ಮನೆಗೆ ಕಳ ಹಿಸಿದರೆ ಅವರೆಲ್ಲಿ ಹೋಗಬೇಕು? ನಿರುದ್ಯೋಗ ಪ್ರಪಂಚ ನಿರಾಶಾವಾತಾವರಣ, ದಯೆ ದಾಕ್ಷಿಣ್ಯಗಳಿಲ್ಲದ ಸಾರ್ವಜನಿಕರು. ಹೀಗಿದ್ದು ಹೊಸದಾಗಿ ಜೀವನೋಪಾಯ ಮಾರ್ಗಗಳನ್ನು ಕಲ್ಪಿಸಿಕೊಳ್ಳುವ ಮಾರ್ಗಗಳೇ ಇಲ್ಲದಾಗಿದೆ. ಈಕಾರಣ ವೇ.ಲಧಿಕಾರಿಗಳಿಂದ ಬಂದ ಬ್ರಹ್ಮಾಸ್ತ್ರವು ಜಿಲ್ಲಾಬೋರ್ಡಿನವರಿಂದ ಪ್ರಯೋಗಿಸಲ್ಪಟ್ಟದ್ದೇತಡ ನಿಷ್ಕಾಸಕ್ತರಾದ ಉಪಾಧ್ಯಾಯರನ್ನೂ ವಿದ್ಯುದ್ವೇಗದ ಚಲನೆಯಾಗಿ ಶಾಲೆಗಳು ಅಭಿವೃದ್ಧಿಹಾದಿಯಲ್ಲಿ ಶೀಘ್ರಗಾಮಿಗಳಾಗಿವೆಯೆಂದು ತಿಳಿಸಲು ನನಗೆ ಸಂತೋಷದ ಸುದ್ದಿಯಾಗಿದೆ.

ನಿಯಮಗಳನ್ನು ಪೂರೈಸಲು ಯಾವ ಉಪಾಯಗಳನ್ನೇ ಕೈಕೊಳ್ಳಲಿ. ಶಾಲೆಗಳುಳಿದರೆ ಸಾಕೆಂಬುದು ನನ್ನ ಅಭಿಮತ. ಡೆಪ್ಯುಟಿ ಇನಸ್ಪೆಕ್ಟರಿಗಾದರೂ ಹೃದಯವಿಲ್ಲವೆ? ತಮ್ಮ ದೇಂಜುಗಳಲ್ಲಿ 5-6 ಶಾಲೆಗಳನ್ನು ಮಾತ್ರ ಉಳಿಸಿಕೊಂಡು ಡಿಪಾರ್ಟುಮೆಂಟು ಟಿಸ್ಸುಗಳಲ್ಲಿ ಫೆ.ಲಾಗುವ ಶಾಲೆಗಳನ್ನೆಲ್ಲಾ ಮುಚ್ಚಿಸಲು ಅವರಾದರೂ ಹೇಗೆ ಸಿದ್ಧರಾಗುವರು? ತಕ್ಕ ಸಲಹೆ ಸೂಚನೆ ಕೊಡಲಿ ಅಧವಾ ಅಭಿವೃದ್ಧಿಗೆಬಂದ ಬರಲಿರುವ ಶಾಲೆಗಳನ್ನು ಮುಚ್ಚಬಾರದೆಂದು ಪ್ರತಿಭಟಿಸಲಿ. ೭೦ಸುಳಿದ ಬಳ್ಳಾರಿ ಜಿಲ್ಲೆಯಲ್ಲಿ ರೆಕಗ್ನಾಯಜಡ್ ಶಾಲೆಗಳು ಅವು ಮಿಷ್ಟವೇ ಇರಲಿ ಗ್ರಾಂಟೇ ಇರಲಿ ಇಂಥಾ ಪ್ರದೇಶಗಳಲ್ಲಿ ಸರಕಾರದ ನಿಯಮಗಳನ್ನೆಲ್ಲಾ ಲಾಗೂಮಾಡುತ್ತಾ ಹೋದರೆ ಬೋರ್ಡಿನ ಉಪಾಧ್ಯಾಯರು ಎಲ್ಲಿ ಉಸಿರು ಹಾಕಿಕೊಳ್ಳಬೇಕು? ನಿರಕ್ಷರತೆಯನ್ನು ನಿರ್ಮೂಲಮಾಡಲು ಹೊರಟಿರುವ ಪ್ರಸಾಚಿವ ನಾಗರೀಕ ದೇಶಗಳ ಉದಾಹರಣೆಯು ಗಲಾಮಗಿರಿಯ ದುರ್ದೈವೀ ಹಿಂದೂಸ್ಥಾನದಲ್ಲಿ ಹೇಗೆ ಅನುಕರಿಸಲ್ಪಟ್ಟೀತು? ಅಲ್ಲದೆ ಸಾರ್ವಜನಿಕಾಭಿಪ್ರಾಯವು ಫಲಿಸಿಲ್ಲ. ಉಪಾಧ್ಯಾಯರು ಸಂಘಟಿತರಿಲ್ಲ ಸಂಘಟಿತರಾಗಲು ಅವಕಾಶಕೊಡುವುದೇ ಇಲ್ಲ. ಉಪಾಧ್ಯಾಯ ಸಂಘಗಳು ಹುಟ್ಟಿದರೂ ವಿದ್ಯಾಖಾತೆಯ ಅಧಿಕಾರಿಗಳ ಬಾಲಬಡೆಯುವ ಸಂಸ್ಥೆಗಳಾಗಬೇಕು. 'ಜೋಕುಕುಂ ಸರಕಾರ' ಎನ್ನುವ ಮನೋಭಾವನೆಯನ್ನು ಬೆಳೆಸಬೇಕು. ಹೀಗಿದ್ದರೆ ಪ್ರಗತಿಯೆಲ್ಲಿ?

ಬದುವ ಜಿಲ್ಲ ಸಂಬಳವೂ ತಿಂಗಳು ತಿಂಗಳು ತಿಂಗಳಿಗೆ ಸರಿಯಾಗಿ ಕ್ರಮವಾಗಿ ಬಾರದು. ಬರುವುದರೊಳಗಾಗಿ ಅದಕ್ಕೆ 2-3 ರಷ್ಟು ಸಾಲವಿರುತ್ತದೆ. "ಸಂಬಳ ಬಂತೆನ್ರೀ ಮೇಷ್ಟ್ರೆ" ಎಂದು ಕೇಳುವ ತಾತ್ಕಾಲಿಕ ಒಡೆಯರು ಸಿದ್ಧರಿರುತ್ತಾರೆ. ಸಾಂಸಾರಿಕ ತಾಪತ್ರಯಗಳ ಗೋಳಿನ ಮೇಳವು ಮನೆಯಲ್ಲಿ ಎಡೆಬಿಡದೆ ಊದುತ್ತಿರುತ್ತದೆ. ದೇಹದ ಕ್ಷೀಣತೆ, ಅತ್ಯೌರ್ಬಲ್ಯ ಮತ್ತು ಸ್ಫೂರ್ತಿ ಶೂನ್ಯರಾಗಿದ್ದಾರೆ ಈಗಿನ ಉಪಾಧ್ಯಾಯರು. ಅವರಿಗೆ ಹೊಡೆದಾಡುವ ಬಲವೆಲ್ಲಿಂದ ಬರಬೇಕು? ಹೊಟ್ಟೆತುಂಬ ಅನ್ನಕೊಟ್ರೆ, ವಿದ್ಯಾಭ್ಯಾಸಕ್ಕೆ ಕುಂದೆಲ್ಲಿ? ಡಿ. ಪಿ. ಇ. ರವರಾದ ಸ್ಥಾಥಂರವರ ದೇಶದಲ್ಲಿ ಉಪಾ

7ನೇ ಪುಟವನ್ನು ನೋಡಿರಿ

ಬಳ್ಳಾರಿ ಜಿಲ್ಲಾ ಬೋರ್ಡು.

೧೯೪೦-೪೧ ವಾರ್ಷಿಕ ವರದಿಯ ಮುಖ್ಯಾಂಶಗಳು.

ಶ್ರೀ ಆರ್. ನಾಗನಗೌಡರು ದಿನಂಬರು 9ನೆಯ ತಾ. ವರೆಗೆ ಅಧ್ಯಕ್ಷರಿದ್ದರು. ಅವರು ಜಿಲ್ಲೆಯಲ್ಲಿ 106 ದಿನಗಳು ಸಂಚರಿಸಿದರು. 1941ರೂ. ಗಳ ಪ್ರಯಾಣ ಖರ್ಚು ಅವರಿಗೆ ಸಲ್ಲಿಸಲ್ಪಾಯಿತು. ಉಪಾಧ್ಯಕ್ಷರಾದ ಶ್ರೀ ಲೋಕಿರೆಡ್ಡಿಯವರು ದಿಸೆಂಬರ್ 9ನೆಯ ತಾ॥ ನಿಂದೆ ಅಧ್ಯಕ್ಷರ ಕಾರ್ಯವನ್ನು ನೋಡಿಕೊಳ್ಳುತ್ತಿರುವರು. ಅವರು ವರ್ಷಾಂತ್ಯದೊಳಗಾಗಿ 55 ದಿನಗಳು ಸಂಚರಿಸಿ 529 ರೂ. ಪ್ರಯಾಣ ಖರ್ಚು ಪಡೆದರು.

ಬೋರ್ಡಿನ ಶಿಬ್ಬಂದಿ ಖರ್ಚಿಗಾಗಿ ಕಳೆದ ವರ್ಷ 29031 ರೂ. ವ್ಯಯವಾಗಿದ್ದು ಈ ವರ್ಷ 20907 ರೂ. ಖರ್ಚಾಗಿರುವುದು ಶುಭ ಸೂಚನೆಯನ್ನು ನೀಡಿದೆ. ಸರ್ಕಾರದವರು ನಿಶ್ಚಯಿಸಿದ ಮಟ್ಟಿಗೆ ನೌಕರರ ಸಂಬಳ ವೇತನಗಳಿರುವುದಾದರೂ ಈ ಕದಮಿಯು ಹೇಗಾಯ್ತೆಂಬುದರ ವಿವರವನ್ನು ತಿಳಿಸಿದ್ದರೆ ಚೆನ್ನಾಗಿತ್ತು.

ರಸ್ತೆಗಳ ವಿಧ	ವಿಸ್ತಾರ	ವಾರ್ಷಿಕ ಖರ್ಚು	ಮೈಲು ಗಳಿಕೆ	ಸರ್ಕಾರದಿಂದ ಬಂದಹಣ
ಟ್ರಂಕು ರಸ್ತೆ	111-7½	61544 ರು.	619 ರು	63.640
ಮುಖ್ಯ ರಸ್ತೆಗಳು	182-0	43237 ,,	337 ,,	24392
ಎರನೆಯ ತರಗತಿ ರಸ್ತೆಗಳು	319-1	33815 ,,	105 ,,	
ಹಳ್ಳಿಯ ದಾರಿಗಳು	443-0	25289 ,,	56 ,,	ಇಲ್ಲ

ಟ್ರಂಕು ರಸ್ತೆಯನ್ನು ಬಿಟ್ಟರೆ ಮುಖ್ಯ ರಸ್ತೆಗಳು ತೃಪ್ತಿಕರವಾಗಿಲ್ಲ. ಅಲ್ಲದೆ ಎರಡನೆಯ ತರಗತಿ ಮತ್ತು ಹಳ್ಳಿಯ ದಾರಿಗಳು ಬಹಳ ಕ್ಷೀಣಾವಸ್ಥೆಯಲ್ಲಿವೆ. ಖರ್ಚು ಮಾಡುವ ಹಣದ ಬಹುಭಾಗವಾದರೂ ರಸ್ತೆಗಳಿಗಾಗಿ ಉಪಯೋಗವಾಗುವುದೋ ಇಲ್ಲವೋ ನೋಡಿಕೊಳ್ಳಲು ಸಾಧ್ಯವಾದ ವಿಚಾರಣ ಸಮಿತಿ ಇಲ್ಲ. ಮುಖ್ಯವಾದ ರಸ್ತೆಗಳೆಂದರೂ ಆದವಾನಿ, ಎಮ್ಮಿಗನೂರು, ಬಳ್ಳಾರಿ, ಸಿರುಗುಪ್ಪ, ಹೊಸಪೇಟೆ, ಕಂಪ್ಲಿ, ತೋರಣಗಲ್ಲು, ಕೊಟ್ಟೂರು ರಸ್ತೆ ಮತ್ತು ಕೊಟ್ಟೂರು; ಹರಪನಹಳ್ಳಿ ರಸ್ತೆಗಳು ತೃಪ್ತಿಕರವಿಲ್ಲ. ಸೇತುವೆ ಕಲ್ವರ್ಟು ಕಟ್ಟಬೇಕು. ಹಳ್ಳಿಗಳ ಮೇಲೆ ದಾರಿಗಳಾಗಬೇಕು. ವೈಪನ್ನರವರ ಸಪ್ತ ವಾರ್ಷಿಕ ಯೋಜನೆಯು ಕಲ್ಲಿನ ರಥದಂತೆ ಸಾವಕಾಶವಾಗಿ ಹೋಗುತ್ತಲಿದೆ. ಹಳ್ಳಿಯ ರಸ್ತೆಗಳ ಅಭಿವೃದ್ಧಿಗೆ ಬೋರ್ಡಿನವರು ಪಂಚಮ ವರ್ಷದ ಯೋಜನೆಯನ್ನು ಇಟ್ಟಿರು. ದೃವ್ಯಾನದಿಂದ ಬಿಟ್ಟುಕೊಟ್ಟರು. ಹಳ್ಳಿಗಳ ರಸ್ತೆಗೆ ಬಹಳ ಗಮನ ಕೊಡಬೇಕು. ಬಳ್ಳಾರಿ ಜಿಲ್ಲಾ ಸರಹದ್ದಿನಲ್ಲಿ ತುಂಗಭದ್ರಾ ನದಿಗೆ ರಸ್ತೆಯ ಸೇತುವೇ ಇಲ್ಲ. ದೇಶನೂರು ಹತ್ತಿರ ಸೇತುವೆಯನ್ನು ಕಟ್ಟುಬೇಕೆಂದು ಪತ್ರ ವ್ಯವಹಾರ ನಡೆಸಿರುವರು. ಫಲಿತಾಂಶಗೊತ್ತಿಲ್ಲ. ಈ ಸೇತುವೆಯನ್ನು ಕಟ್ಟುವ ಮೊದಲು ಪಶ್ಚಿಮ ದಿಕ್ಕಿನಲ್ಲಿ ಹಡಗಲಿ ಸಮೀಪದ ಸೋವೇನ ಹಳ್ಳಿ ಬಳಿ ಸೇತುವೆ ಕಟ್ಟುವುದರ ಲಾಭ ನಷ್ಟಗಳನ್ನೂ ಆಲೋಚಿಸುವುದು ಒಳ್ಳೆಯದು. ಅಂತು ಜಿಲ್ಲೆಯ ವ್ಯಾಪಾರಾಭಿವೃದ್ಧಿಗೆ ತುಂಗಭದ್ರಾ ದಾಟಿ ಹೈದರಾಬಾದ್, ಮುಂಬಯಿ ಪ್ರಾಂತಗಳನ್ನು ಸೇರಲು ಸೇತುವೆಯೊಂದು ಅತ್ಯಂತಾವಶ್ಯಕವೆಂಬುದು ನಿರ್ವಿವಾದಾಂಶವಾಗಿದೆ.

ಪ್ರಾಥಮಿಕ ಶಾಲೆಗಳು 358 ಇದ್ದು ಜಿಲ್ಲಾ ಬೋರ್ಡಿನವರು ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ರೂ. 2,24827 ಖರ್ಚು ಮಾಡಿದರು. ಬೋರ್ಡಿನವರಿಂದ 7 ಮಧ್ಯಮಿಕ ಶಾಲೆಗಳೂ, ಮುನಿಸಿಪಾಲಿಟಿ ಮತ್ತು ಮಿಷನ್‌ನವರಿಂದ 6 ಶಾಲೆಗಳೂ ನಡೆಸಲಾಗುತ್ತಿವೆ. 10 ಸಾವಿರ ಜನರ ಸಂಖ್ಯೆಗೆ 31 ಜನರು ಮುಖ್ಯಮಿಕ ವಿದ್ಯಾಭ್ಯಾಸದಲ್ಲಿ ತೊಡಗಿರುತ್ತಾರೆ. ಬೋರ್ಡಿನ ಸೆಕೆಂಡರಿ ಶಾಲೆಗಳಲ್ಲಿ 714 ವಿದ್ಯಾರ್ಥಿಗಳಿದ್ದಾರೆ. ಜಿಲ್ಲಾ ವಿದ್ಯಾಧಿಕಾರಿಗಳು ಶಾಲೆಗಳು ವಿಷಯಕ್ಕೆ ಸದಭಿಪ್ರಾಯವನ್ನು ಕೊಟ್ಟರುತ್ತಾರೆ. ಪತಗಲಿ ಶಾಲೆಯ ಹಿಂದಿನ ಮುಖ್ಯೋಪಾಧ್ಯಾಯರ ಕಾಲಕ್ಕೆ ಕಟ್ಟು ಈಗಿನ ಹೊಸ ಮುಖ್ಯೋಪಾಧ್ಯಾಯರ ಕಾಲದಲ್ಲಿ ಅಭಿವೃದ್ಧಿಗೆ ಬರಲೆಂದು ಹಾರೈಸಿದ್ದಾರೆ. ಮಾಧ್ಯಮಿಕ ವಿದ್ಯಾಭ್ಯಾಸಕ್ಕಾಗಿ ರೂ. 79037 ವ್ಯಯವಾಗಿದೆ.

ಈ ವರ್ಷ ಹೊಸದಾಗಿ ಕೊಡ್ಲಿಗಿ ತಾ॥ ಹೊಸಳ್ಳಿಯಲ್ಲಿ ಆಸ್ಪತ್ರೆಯನ್ನು ಪ್ರಾರಂಭಿಸಲಾಗಿದೆ. ಆರೋಗ್ಯ ಶಾಖೆಯವರು ಸಾಕಾದಷ್ಟು ಕೆಲಸ ಮಾಡಿರುವರು. **ಜಿಲ್ಲೆಯಲ್ಲಿನ ಆರೋಗ್ಯ ಪರಿಸ್ಥಿತಿಯನ್ನು ಸುಧಾರಿಸಲು ತುಂಗೆಬದ್ರಾ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಜಿಲ್ಲಾ ಬೋರ್ಡು ಕೋರುತ್ತದೆ.**

ರಷ್ಯದಲ್ಲಿ ಭಯಂಕರ ರಕ್ತ ಪ್ರವಾಹ.

ನೈಜಾಮ ಬ್ರಿಯಾನಸ್ಯ ಕೈಬಿಟ್ಟುವು

ಜರ್ಮನರು ಬಲಾಢ್ಯವಾದ ಸೈನ್ಯಗಳಿಂದಿಗೆ ರಷ್ಯನ ಸೈನ್ಯಗಳನ್ನು ಮೂಲೋತ್ಪಾಟನೆಮಾಡುವ ಕಾರ್ಯದಲ್ಲಿ ತೊಡಗಿರುವರು. ಹಿಟ್ಲರನು ತನ್ನ ಭಾಷಣದಲ್ಲಿ ಸೂಚಿಸಿದಂತೆ ಅತಿ ಭಯಂಕರ ಯುದ್ಧದ ಪರಿಣಾಮವಾಗಿ ರಕ್ತ ಪ್ರವಾಹವು ಎಡೆಬಿಡದೆ ಹರಿಯುತ್ತಲಿದೆ. ಶವಗಳು ರಾಸಿರಾಸಿಯಾಗಿ ಬಿದ್ದಿವೆ. ಗಾಯಾಳುಗಳ ಚೀತ್ಕಾರವೂ, ರಣವಾದ್ಯಗಳ ನಾದವೂ ನಭೋಮಂಡಲವನ್ನು ಭೇದಿಸುತ್ತಲಿವೆ. ನಾಜಿ ಸೈನ್ಯವು ತಮ್ಮ ಕಪ್ಪನೆಪ್ಪಗಳಿಗೆ ಹೆದರದೆ ವೈಜಿಮಾ ಬ್ರಿಯಾನಸ್ಕ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡು ಮಾಸ್ಕೋದತ್ತ ನುಗ್ಗುತ್ತಿರುವದು. ಮಾಸ್ಕೋ ನಗರವನ್ನು ಏದು ಕಡೆಗಳಿಂದ ಜರ್ಮನರು ಮುತ್ತುವ ಸೂಚನೆಗಳು ತೋರಿಬರುತ್ತಲಿವೆ. ಈವಾರದೊಳಗಾಗಿ ಮೂರೂವರೆ ಲಕ್ಷ ರಷ್ಯನ ಸೈನಿಕರು ಜರ್ಮನರ ಸೆರೆಯಾಳುಗಾಗಿದ್ದಾರೆಂದೂ, ಜರ್ಮನರು ಮಾಸ್ಕೋವಿಗೆ 65 ಮೈಲಿ ದೂರದಲ್ಲಿದ್ದಾರೆಂದೂ ಗೊತ್ತಾಗಿದೆ. ದೊಡ್ಡ ತೋಪುಗಳನ್ನು ಹಾರಿಸಲನುವಾಗುವಷ್ಟು ದೂರಕ್ಕೆ ಜರ್ಮನರು ಬಂದಿರುವರೆಂದೂ ಅವರೇ ಪ್ರಕಟಿಸಿದ್ದಾರೆ

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ, ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary

40

ಮಾಸ್ಕೋ—ಲೆನಿನ್‌ಗ್ರಾಡ—ಯುಕ್ರೇನ ಕೈಬಿಟ್ಟರೆ
ರಶಿಯಕ್ಕೆ ಅಪರಿಮಿತ ಹಾನಿ.

ರಶಿಯದ ಪ್ರಮುಖ ಔದ್ಯೋಗಿಕ ಕೇಂದ್ರಗಳೆಲ್ಲ ಪಶ್ಚಿಮ ಭಾಗದಲ್ಲಿರುವುದು ಸರ್ವಶ್ರುತ. ಆದರೆ ಈ ಔದ್ಯೋಗಿಕ ಕೇಂದ್ರಗಳಮೇಲೆ ಹಿಟ್ಲರನ ಕಾಕದೃಷ್ಟಿ ಹೆಚ್ಚಿದ್ದರಿಂದ ವಿಶೇಷತಃ ಜರ್ಮನಿಯು ವರ್ಸಾಯಿ ಒಪ್ಪಂದದ ಕರಾರುಗಳನ್ನು ಮುರಿದು ಶಸ್ತ್ರೀಕರಣ ಚಳವಳಿಯನ್ನು ಜೋರಿನಿಂದ ಸಾಗಿಸಿ ಭಾವೀ ಯುದ್ಧದ ಸಿದ್ಧತೆಯನ್ನು ನಡಿಸಿದ್ದರಿಂದ ಸೊವ್ಹಿಯಟ್ ಸರಕಾರದವರು ಈ ಔದ್ಯೋಗಿಕ ಕೇಂದ್ರಗಳನ್ನು ಒಂದೊಂದಾಗಿ ಪೂರ್ವಕ್ಕೆ ಸ್ಥಳಾಂತರಿಸಹತ್ತಿರುವರು. ಆದರೂ ಯುಕ್ರೇನ, ಮಾಸ್ಕೋ, ಲೆನಿನಗ್ರಾಡ ಭಾಗಗಳಲ್ಲಿ ಉತ್ಪತ್ತಿಯು ಹೆಚ್ಚಿದ್ದನ್ನು ಯಾರೂ ಅಲ್ಲಗಳೆಯರು ಆದಕಾರಣವೇ ಜರ್ಮನರು ಈ ಭಾಗದಲ್ಲಿ ತಮ್ಮ ದಾಳಿಯನ್ನು ಹೆಚ್ಚಿಸಿರುವರು. ಈ ದಾಳಿಯಲ್ಲಿ ರಶಿಯನ್ನರು ಪರಾಭವ ಹೊಂದಿದರೆ ಅವರಿಗೆ ಅಪರಿಮಿತ ಹಾನಿಯಾಗುವುದೆಂಬುವುದರಲ್ಲಿ ಸಂದೇಹವಿಲ್ಲ. ಎಷ್ಟು ಕಾರಖಾನೆಗಳನ್ನು ಪಶ್ಚಿಮದಿಂದ ಪೂರ್ವಕ್ಕೆ ಸ್ಥಳಾಂತರಿಸಿದ್ದಾರೆಂಬುದನ್ನು ನಿಶ್ಚಯದಿಂದ ಹೇಳಲಿಕ್ಕೆ ಬರದಿದ್ದರೂ ಜರ್ಮನ್ ಮತ್ತು ಇಟಾಲಿಯನ್ನರು ಈ ಯುದ್ಧವನ್ನು ಸಾರುವ ಮೊದಲು ಅನೇಕ ವರ್ಷಗಳ ಹಿಂದೆಯೆ ಸೊವ್ಹಿಯಟರು ಈ ಯೋಜನೆಯನ್ನು ಕೈಕೊಂಡರೆಂಬುದು ನಿಶ್ಚಿತ.

ಕಚ್ಚಾ ಮಾಲುಗಳು.

ಆದರೆ ಹೀಗೆ ಮಾಡುವಲ್ಲಿ ವಿಳಿಬಿಟ್ಟ ಕಾರಣಕ್ಕಿಂತ ಕಚ್ಚಾ ಮಾಲುಗಳ ಪೂರೈಕೆಯ ಅನುಕೂಲತೆಯ ಕಾರಣವು ಮಹತ್ವದ್ದೆಂದು ಹೇಳಬಹುದಾಗಿದೆ. ರಶಿಯದಂಥ ವಿಶಾಲ ದೇಶದಲ್ಲಿ ವಾಹನ ಸೌಕರ್ಯಗಳು ಸಾಕಷ್ಟಿಲ್ಲದ್ದರಿಂದ ಕಚ್ಚಾ ಮಾಲು ಸಿಕ್ಕದೆ ಇದ್ದ ಸ್ಥಳಗಳಲ್ಲಿ ಕಾರಖಾನೆಗಳನ್ನು ಸ್ಥಾಪಿಸಿದರೆ ಬಹಳ ತೊಂದರೆಯಾಗುವುದೆಂದೆನಿಸಿದ್ದರಿಂದ ಸೊವ್ಹಿಯಟರು ಪೂರ್ವಭಾಗಕ್ಕೆ ಔದ್ಯೋಗಿಕ ಕೇಂದ್ರಗಳನ್ನು ಸ್ಥಳಾಂತರಿಸಿದರು. ಕಚ್ಚಾ ಮಾಲಿಗಾಗಿ ಹೊರಗಿನ ದೇಶಗಳನ್ನವಲಂಬಿಸಬಾರದೆಂಬದೂ ಈ ಯೋಜನೆಯ ಉದ್ದೇಶ. ರಶಿಯದಲ್ಲಿ ಕಲ್ಲಿದ್ದಲು ಪೆಟ್ರೋಲಿಯಮು ಮತ್ತು ಕಬ್ಬಿಣ ಸಾಕಷ್ಟು ಸಿಕ್ಕುವುದಲ್ಲದೆ ಅಲ್ಯುಮಿನಮ್ಯು, ತಾಮ್ರ, ಸೀಸ, ಮ್ಯಾಂಗಾನೀಜುಗಳು ಹೆಚ್ಚು ಪ್ರಮಾಣದಲ್ಲಿ ಸಿಕ್ಕುವುವು. ಆದರೆ ತಾಮ್ರ, ರಬ್ಬರ ಮೊದಲಾದ ಹಲವು ಆವಶ್ಯಕ ಸಾಮಾನುಗಳನ್ನೂ ಯಂತ್ರಗಳನ್ನೂ ಇನ್ನೂ ಹೊರಗಿನಿಂದಲೇ ತರಿಸಬೇಕಾಗುವುದು. ಅದರೂ ರಶಿಯದ ಉತ್ಪತ್ತಿಯನ್ನು ಹೆಚ್ಚಿಸುವಲ್ಲಿ ವಿಧವಿಧ ವ್ಯಯತ್ನಗಳನ್ನು ಮಾಡಲಾಗುತ್ತದೆ.

ಹತ್ತಿಯನ್ನು ಹೆಚ್ಚಾಗಿ ಹೊರಗಿನಿಂದಲೆ ಮೊದಲು ತರಿಸಲಾಗುತ್ತಿತ್ತು. ಆದರೆ ಇತ್ತೀಚ್ಚಲಾಗಿ ರಶಿಯನ್ ತುರ್ಕಸ್ತಾನ ಅಜರಬೆಜನ ಮತ್ತು ಯುಕ್ರೇನದಲ್ಲಿ ಹತ್ತಿ ಬೆಳೆಯತ್ತಿದ್ದು ಮಧ್ಯ ಏಶಿಯವೆಲ್ಲಿಯ ನೀರಾವರಿ ಯೋಜನೆಗಳು ಮನಗಿದ ಬಳಿಕ ಇನ್ನೂ ಹೆಚ್ಚಾಗಿ ಹತ್ತಿ ಬೆಳೆಸಲಾಗುವುದು. ಚಪ್ಪಲಿ ಸೊಲಾದವುಗಳನ್ನು ಟ್ರಾನ್ಸ್‌ಕಾಕೇಶಿಯದಿಂದ ತರಿಸಲಾಗುವುದು. ರಬ್ಬರಿನ ಉತ್ಪತ್ತಿಗಾಗಿಯೂ ರಶಿಯನ್ನರು ಯೋಜನೆಮಾಡಿರುವರು. ಯಂತ್ರ ಮತ್ತು ಯಂತ್ರೋಪಕರಣಗಳು ರಶಿಯದಲ್ಲಿಯೇ ತಯಾರಾಗುವ ಯೋಜನೆಯನ್ನೂ ಭರದಿಂದ ಮಾಡಿರುವರು. ವಿಮ್ಯದ್ಯೋಜನೆಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಇನ್ನೂ ಹೊರಗಿನಿಂದಲೆ ತರಿಸಬೇಕಾಗುವದು. ಇನ್ನು ಹೆಚ್ಚು ಪ್ರಮಾಣದಲ್ಲಿ ಈ ಸಾಮಗ್ರಿಗಳನ್ನು ಸಿದ್ಧಪಡಿಸಬೇಕೆಂದು ಬಗೆದರೂ ಜರ್ಮನರು ಶಸ್ತ್ರೀಕರಣ ಯೋಜನೆಯನ್ನು ಕೈಕೊಂಡದ್ದರಿಂದ ಪೂರ್ವ ಮತ್ತು ಪಶ್ಚಿಮ ಪ್ರದೇಶಗಳ ರಕ್ಷಣೆಗಾಗಿ ಬೇರೆ ಬೇರೆ ಯೋಜನೆಗಳನ್ನು ಕೈಕೊಳ್ಳಬೇಕಾದ್ದರಿಂದ ಅದು ಸಾಧ್ಯವಾಗಲಿಲ್ಲ. ಇದಕ್ಕಾಗಿ ಹೇರಳ ಹಣವನ್ನು ವೆಚ್ಚ ಮಾಡಬೇಕಾಯಿತು.

ಪೂರ್ವಪ್ರದೇಶದ ಔದ್ಯೋಗಿಕ ಕೇಂದ್ರಗಳು.

ಹೊಸದಾಗಿ ಸ್ಥಳಾಂತರಿಸಿದ ಮತ್ತು ಪ್ರಗತಿಹೊಂದಿದ ಔದ್ಯೋಗಿಕ ಕೇಂದ್ರಗಳೆಲ್ಲ ಹೆಚ್ಚಾಗಿ ವೋಲ್ಗಾ ಮತ್ತು ಉರಲ್ ಭಾಗಗಳಲ್ಲಿ ಟ್ರಾನ್ಸ್‌ಸಾಯ ಬೇರಿಯನ್ ರೇಲ್ವೆದಲ್ಲಿ ನೊವ್ಹಿಬರ್ಕಸುತ್ತಲೂ ಕುಜನೆಝುದಲ್ಲಿ ಮಧ್ಯ ಏಶಿಯದಲ್ಲಿ ಪೂರ್ವ ಕಾಜಕಸ್ತಾನದಲ್ಲಿರುವವು. ಇನ್ನೆಲ್ಲ ಪ್ರದೇಶಗಳಿಗಿಂತ ವೋಲ್ಗಾ ಉರಲ್ ಪ್ರದೇಶವು ಹೆಚ್ಚು ಮಹತ್ವದ್ದು. ಈ ಭಾಗದಲ್ಲಿ ಔದ್ಯೋಗಿಕ ಕೇಂದ್ರಗಳು ಹೆಚ್ಚು. ಮಾಸ್ಕೊ, ಲೆನಿನಗ್ರಾಡಯು ಕ್ರೇನಗಳನ್ನು ಬಿಟ್ಟರೆ ಈ ಭಾಗದಲ್ಲಿಯೇ ಕೇಂದ್ರಗಳು ಹೆಚ್ಚು. ತಾಮ್ರದ ಉತ್ಪತ್ತಿಯಲ್ಲಿ ಈ ಪ್ರದೇಶಕ್ಕೇ ಪ್ರಥಮ ಸ್ಥಾನವಿದ್ದು ಕಬ್ಬಿಣಕ್ಕೆ ಎರಡನೆಯ ಸ್ಥಾನವಿದೆ. ಆದರೆ ಈ ಭಾಗದಲ್ಲಿ ಕಲ್ಲಿದ್ದಲು ಸಾಕಷ್ಟು ಸಿಕ್ಕದಿರುವುದರಿಂದ ಕುಜನೆಜ ಕಾಜಕಸ್ತಾನದಂಥ ದೂರ ಪ್ರದೇಶದಿಂದ ಇದನ್ನೂ ತರಿಸಬೇಕಾಗುವದು. ಆದರೂ ಈ ಪ್ರದೇಶದಲ್ಲಿ ಖನಿಜಗಳು ಮತ್ತು ಔದ್ಯೋಗಿಕ ಉತ್ಪತ್ತಿಗಳು ಹೆಚ್ಚು. ಅಭಿವೃದ್ಧಿ ಹೊಂದುತ್ತಿರುವುದೆಂಬುದೂ ನಿರ್ವಿವಾದವಾದುದು. ಮ್ಯಾಗ್ನಿಟೊಗೊರಸ್ಕ್‌ದು ರಶಿಯದಲ್ಲಿಯ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆಗಳಲ್ಲಿ ಪ್ರಮುಖವಾದ ಒಂದು ಕೇಂದ್ರವು ಕಳೆದ ಜೂನದಲ್ಲಿ ನಿಜನಿಟ್ಯಾಗಿಲ್‌ದಲ್ಲಿ ಪ್ರತಿವರ್ಷ 6ಲಕ್ಷ ಟನ್‌ಗಿಂತ ಹೆಚ್ಚು ಕಬ್ಬಿಣ ಮತ್ತು 20 ಲಕ್ಷ ಟನ್ ಸಿಗ್ ಆಯರ್ನ್ ಮತ್ತು 15 ಲಕ್ಷ ರೋಲ್ಡ್‌ಮೆಟಲ್ ಸ್ವಲ್ಪ ದಿನಗಳಲ್ಲಿ ಹೊರಡುವಂತೆ ಹೊಸ ಕಾರಖಾನೆಯನ್ನು ಹಾಕಲಾಯಿತು. ಸ್ವೆರ್ಡ್ಲೋವಸ್ಕದ ಹತ್ತರ ರೆವಡಾವದಲ್ಲಿ ತಾಮ್ರದ ಒಂದು ಕಾರಖಾನೆಯನ್ನು ತೆರೆಯಲಾಯಿತು. ಟ್ರಾನ್ಸ್‌ಕಾಕೇಶಿಯದಲ್ಲಿ ಎಣ್ಣೆ ಕಾರಖಾನೆಗಳವೆ. 1939 ರಲ್ಲಿ 20 ಲಕ್ಷ ಟನ್ ಎಣ್ಣೆಯೂ ಸಿಕ್ಕಿದ್ದರೆ ಈಗ ಮತ್ತಷ್ಟು ಹೆಚ್ಚಾಗಿದೆ. 1942 ರಲ್ಲಿ 485 ಟನ್ ಎಣ್ಣೆ ಬೇಕೆಂದು ಲೆಕ್ಕ ಹಾಕಿದ್ದರೆ ಸುಮಾರು 100 ಕ್ಕೆ 15 ರವ್ಯ

ಪೋಲ್ಗಾ ಉರಲ್ ಪ್ರದೇಶದಲ್ಲಿ ಸಿಕ್ಕುವುದು.

ಆದರೆ ಮಾಸ್ಕೋ ಪ್ರದೇಶಕ್ಕೆ ಸರಿಗಟ್ಟಲಾರದು.

ಈ ರೀತಿಯಾಗಿ ಹೊಸದಾಗಿ ಸ್ಥಾಪಿಸಿದ ಕೇಂದ್ರಗಳು ಎಷ್ಟೇ ಪ್ರಸಿದ್ಧವಿದ್ದರೂ ಯುರೋಪ ರಷಿಯದಲ್ಲಿಯು ಔದ್ಯೋಗಿಕ ಕೇಂದ್ರಗಳನ್ನಿವು ಸರಿಗಟ್ಟಲಾರವು. ವಿಶೇಷತಃ ಎಂಜಿನಿಯರಿಂಗ ಶಾಖೆಯಲ್ಲಿ ಮಾಸ್ಕೋ, ಲೆನಿಗ್ರಾಡ, ಖಾರಕವಗಳು ಮೊನ್ನೆ ಮೊನ್ನಿನವರೆಗೆ ಪ್ರಸಿದ್ಧವಿದ್ದವು. ಮಾಸ್ಕೋ ನಗರವು ಎಲೆಕ್ಟ್ರಿಕಲ್ ಎಂಜಿನಿಯರಿಂಗ ಯಂತ್ರೋಪಕರಣಗಳ ತಯಾರಿಕೆ ಮಾಡುವದರಲ್ಲಿ ಪ್ರಸಿದ್ಧವಿರುವದಲ್ಲದೆ ನೋಟರ ಕಾರಖಾನೆಗಳು ಇಲ್ಲಿರುವವು ಅಲ್ಲದೆ ಜವಳಿ ಉದ್ಯೋಗ ಧಂ ವೆ ಯೂ ಇಲ್ಲಿ ಬೆನ್ನಾಗಿ ಸಾಗುತ್ತದೆ. ಲೆನಿಗ್ರಾಡದಲ್ಲಿ ಹಡಗ ಕಟ್ಟುವದು ಮತ್ತು ಉಕ್ಕಿನ ಎಂಜಿನಿಯರಿಂಗ ಕೆಲಸವು ದೊಡ್ಡ ಪ್ರಮಾಣದಲ್ಲಿ ಸಾಗುವದಲ್ಲದೆ ರಬ್ಬರ ಸಿದ್ಧಮಾಡುವ ಕಾರಖಾನೆಯೂ ಇವೆ. ಟಲಾನಗರವು ಹಿಂದಿನಿಂದಲೂ ಎಂಜಿನಿಯರಿಂಗ ಕ್ಕೆ ಪ್ರಸಿದ್ಧವಿದ್ದು ಯುದ್ಧ ಸಾಮಗ್ರಿಗಳನ್ನು ಹೇರಳವಾಗಿ ತಯಾರಿಸುವ ಕೇಂದ್ರವಾಗಿದೆ. ಯುದ್ಧ ಸಾಮಗ್ರಿಗಳಿಗಾಗಿ ಸದ್ಯಕ್ಕೆ ಈ ನಗರವನ್ನು ಎಷ್ಟರಮಟ್ಟಿಗೆ ಅವಲಂಬಿಸಬೇಕಾಗುವುದೆಂಬದನ್ನು ನಿಶ್ಚಿತವಾಗಿ ಹೇಳಲಿಕ್ಕೆ ಬರದಿದ್ದರೂ ರಷಿಯವು ಹೆಚ್ಚಾಗಿ ಈ ಪ್ರದೇಶಗಳಿಂದ ಯುದ್ಧ ಸಾಮಗ್ರಿ ಪಡೆಯುತ್ತಿರುವದು.

ಯುಕ್ರೇನದಲ್ಲಿ

ಇವೆಲ್ಲಕ್ಕೂ, ಹೆಚ್ಚು ಮಹತ್ವದ್ದೆಂದರೆ ಜರ್ಮನ್ ಕಣ್ಣಿಟ್ಟಿರುವ ಯುಕ್ರೇನವು ನಾಲ್ಕು ಪ್ರಮುಖ ನಗರಗಳ ಕೇಂದ್ರಗಳಾಗಿವೆ. ಖಾರಕವು (ದೊಡ್ಡ ಉದ್ಯೋಗಗಳ ಕೇಂದ್ರವು) ಓಡಿಸಾ, ಕೀವ ಮತ್ತು ನಿಪ್ರೋಪೆಟ್ರೋವಸ್ಕಗಳು ರಷಿಯದ 4 ದೊಡ್ಡ ಕೇಂದ್ರಗಳಲ್ಲಿ ನಾಲ್ಕು ಕೇಂದ್ರಗಳು ಯುಕ್ರೇನದ ಹೊರಗಿರುವ ರಸ್ತವು ಸುಡಾನವು ಹಿಂದಿನಿಂದಲೂ ಯಂತ್ರೋಪಕರಣಗಳನ್ನು ಉತ್ಪತ್ತಿ ಮಾಡುತ್ತಲಿದೆ. ನೀಪರನ ಪಶ್ಚಿಮಕ್ಕೆ ಕ್ರಿಶಾಲಾಗ್ ಕಬ್ಬಿಣದ ಅದಿರುಗಳಿವೆ. ನಿಕೊಪೋಲದಲ್ಲಿ ಮ್ಯಾಂಗನೀಜ ಕಣಿವಿಗಳಿವೆ. ಓಡಿಸಾ ನಿಕಾಲಿನ ಮತ್ತು ಬೆರಸನ್‌ಗಳಲ್ಲಿ ಹಡಗ ತಯಾರ ಮಾಡುವ ಕಾರಖಾನೆಗಳಿವೆ. ನದಿಯ ಪೂರ್ವಕ್ಕೆ ಅನೇಕ ಔದ್ಯೋಗಿಕ ಕೇಂದ್ರಗಳಿವೆ ಯಲ್ಲದೆ ಪ್ರಸಿದ್ಧ ಡಾನಖಾಸ ಕಲ್ಲಿದ್ದಲಿ ಕಣಿವಿದೆ. ಈ ಪ್ರದೇಶದಲ್ಲಿಯ ಸಂಪತ್ತಿಯನ್ನು ತಿಳಿಸುವ ಅಂಕಿಗಳನ್ನು 1940 ನ್ನು ನೋಡಬಹುದು. ರಷಿಯದಲ್ಲಿಯ ಒಟ್ಟು ಉತ್ಪತ್ತಿಯಲ್ಲಿ ಕಲ್ಲಿದ್ದಲಿ 1938 ನೂರಕ್ಕೆ 60 ಪಿಗ್ ಐರನ್, 617 ಕಬ್ಬಿಣ, ಉದಯ 63, ರೋಲ್ಡ್ ಸ್ಟೀಲ್ 47·8 ಶಕ್ಕರೆ 68. ದಾಸ್ತ [1938) ೨೨·7ಬ ಕ್ಕಲತನದ ಯಂತ್ರೋಪಕರಣ 70, ಮ್ಯಾಂಗನೀಜ 34·9 ಆಲ್ಯಮಿನಂ 72·1, ಯಂತ್ರಗಳನ್ನು ತಯಾರಿಸುವದು 20, ಸುಪರಫಾಸ್ಫೇಟ್ಸ್ 40, ಸೋಡಾ 80.

ದೂರ ಪ್ರದೇಶಕ್ಕೆ ಸಾಮಗ್ರಿ ಮುಟ್ಟಿಸಬಹುದೋ?

ಈ ಪ್ರದೇಶದ ಕರ್ಕ ಭೂಮಿಯು ಬಹಳ ಪ್ರಸಿದ್ಧವಿದ್ದುದರಿಂದ ಇದು ಒಕ್ಕಲತನದ ಬೀಡು. ರಷಿಯದ ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ 18ರಷ್ಟು ಇಲ್ಲಿಯ ಇರುವದು. ಇತೀ ಸೋವಿಯೆಟ್ ರಷಿಯದಲ್ಲಿ 10 ಕ್ಕೆ 2ರಷ್ಟು ಭೂಮಿಯಲ್ಲಿ ಬಿತ್ತುವ ಕೆಲಸ ನಡೆಯುತ್ತಿದ್ದರೆ ಈ ಭಾಗದಲ್ಲಿ ಒಂದು ಐದಾಂಶದಷ್ಟು ಭೂಮಿಗಳಲ್ಲಿ ಬೆಳೆ ಬೆಳೆಯಲಾಗುತ್ತದೆ. ಇದಂ ನೈಸರ್ಗಿಕ ಸಂಪತ್ತು ಒಳ್ಳೆ ಪ್ರಸಿದ್ಧವಾದುದು.

ನರಕೇಯದಾಳಯ ಭೀತಿ ಮಾತ್ರ ಯಾವಾಗಲೂ ಇದಕ್ಕೆ ಇದೆ. ರಷಿಯದ ಪೂರ್ವಭಾಗ ಮತ್ತು ಏಶಿಯನ್ ರಷಿಯದ ನಡುವೆ ಬಹಳ ಅಂತರವಿದ್ದು, ಒಳ್ಳೇ ಪರಿಣಾಮಕಾರಕವಾಗಿದೆ. ನಾಜ್ಜಿಗಳು ವಯಸ್ಕೋವನ್ನು ವಶಪಡಿಸಿಕೊಂಡರೂ ಮ್ಯಾಗ್ನೆಟೋಗರ್ಸ್ಕ ಕಾರಖಾನೆಗಳ ಮೇಲೆ ಬಾಂಬು ಒಗೆಯಬೇಕಾಡರೆ ಅವರ ವೈಮಾನಿಕರಿಗೆ 850 ಮೈಲು ಪ್ರವಾಸ ಮಾಡಬೇಕಾಗುವದು. ಆದರೂ ಈ ಅಂತರದಿಂದ ಲಾಭವಿದಮ್ಮೆ ಹಾನಿಯೂ ಇದೆ. ಏಕಂದರೆ ದೇಶವು ಬಹಳ ವಿಶಾಲವಾದ್ದರಿಂದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಾಮಗ್ರಿಗಳನ್ನು ಕಳಸಲಿಕ್ಕೆ ಬಹಳ ತೊಂದರೆಯಾಗುವದು. ಜರ್ಮನ್‌ರ ಕಾಕವೃಷ್ಟಿ ಬೀಳದಂತೆ ರಷಿಯದ ಉದ್ಯೋಗಸ್ಥರು ಸಾಮಗ್ರಿಗಳನ್ನೆಲ್ಲ ರಕ್ಷಿಸಿದರೂ ಅವುಗಳನ್ನೆಲ್ಲ ಸಕಾಲಕ್ಕೆ ಎಲ್ಲ ಅವಶ್ಯಕ ಸ್ಥಳಗಳಿಗೆ ಮುಟ್ಟಿಸುವ ವ್ಯವಸ್ಥೆಯನ್ನು ರೇಲ್ವೆಗಳು ಮಾಡಲು ಶಕ್ತವಿರುವವೋ ಎಂಬುದು ಮಹತ್ವದ ವಿಷಯ. ಸೈನಿಕರಿಗೆ ಮದ್ದು ಗುಂಡುಗಳನ್ನು ಮತ್ತು ಕಾರಖಾನೆಗಳಿಗೆ ಕಲ್ಲಿದ್ದಲಿಯನ್ನು ದೂರದ ವರೆಗೆ ಧಾಳ್ಯು ಮುಟ್ಟಿಸಲು ಈ ರೇಲ್ವೆಗಳು ಸಮರ್ಥವಾದರೆ ದೊಡ್ಡದೊಂದು ಪ್ರಶ್ನೆ ಬಗೆಹರಿಸಿದಂತಾಗುವುದು.

ಈಗ ಜರ್ಮನರ ಕೈಯಲ್ಲಿ ಹೋದ ಮಹತ್ವದ ಪ್ರದೇಶಗಳಲ್ಲಿ ರಷಿಯದ ಜೀವನ ಸರ್ವಸ್ವವೆಲ್ಲ ಹೋಗಿದೆಂಬುದು ಮೇಲಿನ ವಿವೇಚನೆಯಿಂದ ಗೊತ್ತಾಗುವದು. ಪೂರ್ವ ಪ್ರದೇಶದಲ್ಲಿ ರಷಿಯದ ಔದ್ಯೋಗಿಕ ಕೇಂದ್ರಗಳಿದ್ದರೂ ಮಾಸ್ಕೊ ಲೆನಿನಗ್ರಾಡ ಮತ್ತು ಯುಕ್ರೇನಗಳಂಥ ಮಹತ್ವದ ಸ್ಥಳಗಳು ಕೈಬಿಡುವುದರಿಂದ ರಷಿಯಕ್ಕೆ ಒಳ್ಳೆ ಆಘಾತವಾಗುವುದೆಂಬುದೂ ಮೇಲಿನ ವಿವೇಚನೆಯಿಂದ ಗೊತ್ತಾಗುವದು. ಹೀಗಿದ್ದರೂ ರಷಿಯನ್ನರು ಕಡುಗಲಿಗಳಂತೆ ಕಾದುತ್ತಿರುವದು ನಿಜವಾಗಿಯೂ ಆನಂದ ತಿಳಿಯವಲ್ಲವೇ ?

' ಕರ್ಮವೀರ. '

ಉತ್ತಮ ಕಾಫಿ ಪುಡಿ

ಬೆಲೆ ಸುಲಭ ಗುಣವತ್ತಿಕೆ !!

ನಮ್ಮಲ್ಲಿ ಶ್ರೇಷ್ಠವಾದ ಕಾಫಿಬೀಜಗಳಿಂದ ಏನೂ ಮಿಶ್ರವಿಲ್ಲದೆ ತಯಾರಿಸಿದ ಸುವಾಸನೆ ಮತ್ತು ರುಚಿಯುಳ್ಳ ಅತ್ಯುತ್ತಮ ಕಾಫಿಪುಡಿಯು ತಯಾರಾಗುತ್ತದೆ. ಇದನ್ನೇ ಎಲ್ಲರೂ ಉಪಯೋಗಿಸುವರು. ಒಂದು ಸಲದ ಪರೀಕ್ಷೆಯು ಅದರ ಶ್ರೇಷ್ಠಗುಣವನ್ನು ನಿಮಗೆ ತಿಳಿಸುವುದು. ಇಂದೇ ಕೊಂಡು ಉಪಯೋಗಿಸಿರಿ

ನಮ್ಮಲ್ಲಿ ಮದ್ರಾಸು ಸಕ್ಕರೆಯೂ ದೊರೆಯುವುದು

The Mysore Coffee Works,

Gold Smith St, BELLARY.

ದಿ ಮೈಸೂರು ಕಾಫಿವರ್ಕ್ಸ್ ಎಂ. ಎಸ್. ರಾವ್ ಅಂಡ್ ಬ್ರದರ್, ಅಕ್ಕಸಾಲ ಬೀದಿ, ಬಳ್ಳಾರಿ.

42

ರಾಯಲಸೀಮ ಬ್ಯಾಂಕು, ಲಿಮಿಟೆಡ್.

ಇಂಡಿಯಾ ಸರ್ಕಾರದ ಕಂಪನಿ ಶಾಸನಗಳನ್ನನುಸರಿಸಿ ಸ್ಥಾಪಿಸಲ್ಪಟ್ಟಿದೆ.

ಮುಖ್ಯ ಕಾರ್ಯಾಲಯ:. **ಬಳ್ಳಾರಿ.**

ಪ್ರಥಮ ವರ್ಷದ ಪ್ರಗತಿ

ಡಿಪಾಜಿಟ್ಟುಗಳು.	31—10— 940	30—9—1941
ಫಿಕ್ಸೆಡ್	ರೂ. Nil	61,930
ಷಾಲ್ತಿ	,, 3,173	35,122
ಸೇವಿಂಗ್ಸ	,, 1,231	16,621
ಇತರ	,, 40	678
ಸಾಲಗಳು.		
ಭಂಗಾರ	,, 520	21,673
ಮೂಲು	,, Nil	28,441
ಇತರ	,, Nil	6,264
ಇತರ ಆಸ್ತಿ		
ಸರ್ಕಾರದ ಬಾಂಡುಗಳು	,, 13,300	22,538
ಬ್ಯಾಂಕುಗಳಲ್ಲಿರುವ ಹಣ	,, 32,502	49,910
ಕೈಯಲ್ಲಿ ನಗದು	,, 5770	25,477
ಒಟ್ಟು ವ್ಯವಹಾರ ಮೊತ್ತ	ರೂ. 1,14,774	1,93,653

ಶಾಖೆಗಳು: [1] **ತಿಮ್ಮನಚರ್ಲ.** [ಗುಂತಕಲ್] [2] **ಕೊಟ್ಟೂರು.** [3] **ಉರವಕೊಂಡ**

ಬಿ. ವಿ. ಶೇಷಗಿರಿರಾವ್, ಬಿ. ಕಾಂ ಕಾರ್ಯದರ್ಶಿ. | ಹೆಚ್. ಸೀತಾರಾಮರೆಡ್ಡಿ, ಬಿ. ಎ., ಬಿ. ಎಲ್., [ಎಂ ಎಲ್ ಎ.] ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ರಷ್ಯದ ದಂಡುಗಳು ಭೇದಿಸಲ್ಪಟ್ಟವು.

ಜರ್ಮನರು ಮಾಸ್ಕೋ ಸಮೀಪಿಸುತ್ತಿರುವರು.

ಜರ್ಮನರು ತಮ್ಮ ಅಸಂಖ್ಯಾತ ದಂಡುಗಳೊಡನೆ ಮಾಸ್ಕೋ ಸಮೀಪಿಸುತ್ತಿರುವರೆಂದೂ ರಷ್ಯನ ದಂಡುಗಳೇ ಕಲಿತನದಿಂದ ಕಾದಾಡುತ್ತಿದ್ದರೂ ಹಿಂದಕ್ಕೆ ಸರಿಯಬೇಕಾಯ್ತೆಂದೂ ಒಂದು ಪ್ರಕಟನೆ ಹೇಳುತ್ತದೆ. ಮಾಸ್ಕೋನಗರದಲ್ಲಿ ಗಂಡಾಂತರ ಪರಿಸ್ಥಿತಿಯು ಸಾರಲ್ಪಟ್ಟಿರುವಂತೆ.

ರಷ್ಯನ ಸರ್ವಾಧಿಕಾರಿಗಳಾದ ಸ್ಟಾಲಿನರವರು ಯುದ್ಧರಂಗಕ್ಕೆ ತೆರಳಿ ಯುದ್ಧದ ಪ್ರಗತಿಯನ್ನು ನೋಡಿಬಂದರು.

ಹಿಂದೂಸ್ಥಾನ.

ಸತ್ಯಾಗ್ರಹದ ಬಗ್ಗೆ ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿ ಮತ್ತೆ ಮತ್ತೆ ಸತ್ಯಾಗ್ರಹ ನಡೆಸಬೇಕೆಂದೂ ರೋಗಿಗಳಾದವರು ಹಿಂದುಳಿದು ವಿಧಾಯಕಕಾರ್ಯಮಾಡಬೇಕೆಂದೂ ಮಹಾತ್ಮ ಗಾಂಧಿಯವರು ಹೇಳಿಕೆ ಕೊಟ್ಟಿದ್ದಾರೆ.

ಬೆಂಗಳೂರುನಗರದ ಬಳಿ ಬೊಮ್ಮಸಂದ್ರ ಎಂಬೂರಿನ ಹತ್ತಿರ ಕೆಲ ಸೈನಿಕರು ಕ್ರೂರ ರೀತಿಯಲ್ಲಿ ವರ್ತಿಸಿ ಹಳ್ಳಿಗರಿಗೆ ಭಾಯಮಾಡಿದ ಪ್ರಯುಕ್ತ ಒಬ್ಬರು ಸತ್ತಿರುವರು. ಕೆಲವರಿಗೆ ಭಾಯಗಳಾಗಿವೆ

ಅಖಿಲಭಾರತ ಕಾಂಗ್ರೆಸ್ ಸಮಿತಿಯಾ ದೀಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಜಯಪ್ರಕಾಶನಾರಾಯಣರು ತಮ್ಮ ಪಕ್ಷಕ್ಕೆ ಬೆಂಬಲ ಒದಗಿಸಲು ಹಣ ಪಡೆಯಲು ಕ್ರಾಂತಿಕಾರೀ ಪಕ್ಷಗಳ ಸಹಾಯಕ್ಕೆ ಒಳಗೊಳಗೇ ಯತ್ನಿಸಿದರೆಂದು ಸರಕಾರದ ಪ್ರಕಟನೆ ಹೊರಟಿದೆ.

ಸರಸ್ವತೀ ಲೇಹ್ಯ

(A good brain and nervine Tonic)

ಧಾತು ನಷ್ಟ—ಯಾ-ದೌರ್ಬಲ್ಯ-ಕುಸುನು ವ್ಯಾಧಿ-ಎದೆ ಯುಬ್ಬಸ-ಕೆಮ್ಮು ಕ್ಷಯ ಮತ್ತು ಉನ್ಮಾದ-ಪೈತ್ಯ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿ ಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು ಆಯುರಭಿ ವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧ ಮೊಡನೆ ಅನುಮಾನ ಪತ್ರ. ವ್ಯಾಪಾರದ ಗುರ್ತಿಂಟು ರಿ. 2404.

೧ಕೇರಿಗೆ ೧-೪-೦

೨ ತೇರು ಸೀಸೆ ೩-೪-೦

ಹಾಂಡುರಂಗ ಮೆಡಿಕಲ ಹಾಲ, ರಾಜೋಲು (ಇ. ಗೋದಾವರಿ)

ಸ್ಟಾಕಿಸ್ಟ್:- **ತೋರಣಗಲ್ಲು ಮರೆಪ್ಪ, ಬಳ್ಳಾರಿ.**

ಎಳ್ಳೆಣ್ಣೆ.

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟ.

(ಇವರ **AS** ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ)

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **AS** ಟೀಲನ್ನು ಗಮನಿಸಿ ಕೊಳ್ಳಿರಿ. ಮೋಸಹೋಗಬೇಡಿರಿ

ದೊರೆಯುವ ಸ್ಥಳ:- 1.) ಎಂ. ಹುಶೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ಐ ಯಾ. ಗಿರಿ ಅಂಡ್ ಸನ್ಸ್, ಬಳ್ಳಾರಿ.

2ನೇ ಪುಟವನ್ನು ನೋಡಿರಿ

ಧ್ಯಾಯರು ಇಷ್ಟು ನಿಸ್ಪೃಹಾಯರಿರುವರೇನು? ಅಲ್ಲಿ ಸಾಕ್ಷರತೆಗಾಗಿ ಎಂಥಾ ಪ್ರಯತ್ನಗಳು ನಡೆದಿವೆ? ಹಿಂದೂಸ್ಥಾನದ ಪರಿಸ್ಥಿತಿಯೇನು? ಮದ್ರಾಸ್ ಅಧಿಸತ್ಯದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಎರಡು ಕೋಟಿ ರೂಪಾಯಿಗಳು ವ್ಯಯವಾಗುತ್ತದೆ. ಸಾಕಾದಷ್ಟು ಪ್ರತಿಫಲವಿಲ್ಲೆನ್ನುತ್ತಾರೆ. ಆದರೆ ಡಿ. ಪಿ. ಐ. ಅವರ ಡೈಸ್ಟಿಟಗಳು ಜಿಲ್ಲಾ ನಿರ್ವಾಧಿಕಾರಿಗಳು ಅವರ ಸಹೋದ್ಯೋಗಿಗಳು ಇವರಿಗೆಲ್ಲಾ ಸಂಬಳ ಎ ವರ್ಷಕ್ಕೆ ಎಷ್ಟು ಖರ್ಚಾಗುತ್ತದೆ? ಅದರ ಪ್ರತಿಫಲವೇನು? ಎರಡು ಕೋಟಿ ರೂಪಾಯಿಗಳಲ್ಲಿ ತನಿಪಾಲು ಈ ಭಾಗಕ್ಕೆ ಎಷ್ಟು ಖರ್ಚಾಗುತ್ತದೆ? ಇದನ್ನು ಯಾರು ನಿರ್ಧಾರಿಸಬೇಕು?

ಸಮುದ್ರದಂಥ ಜಲಾಯೆಯಲ್ಲಿ ಎಲ್ಲ ಕಡೆಗೂ ಕಳ್ಳರಿರುವಂತೆ ವಿದ್ಯಾಪ್ರತಿಯಲ್ಲೂ ಕೆಲಕಳ್ಳ ಉಪಾಧ್ಯಾಯರಿರಬಹುದು. ಶಿಕ್ಷಣಾಧಿಕಾರಿಯವರನ್ನು ಶಿಕ್ಷಿಸಲು ಯಾರು ಬೇಡವೆನ್ನುತ್ತಾರೆ? ಆದರೆ ಎಲ್ಲಾ ಉಪಾಧ್ಯಾಯರನ್ನೂ ಶಿಕ್ಷಿಸುವ ಅಥವಾ ತೊಂದರೆಗೀಡುಮಾಡುವ ನೀತಿಯು ಒಳ್ಳೆಯದಲ್ಲವೆಂದು ನಾನು ಸೂಚಿಸುತ್ತೇನೆ.

ಶ್ರೀ ಕೆ. ಆರ್. ಶಾನುಭೋಗರ ನಿಧನ.

ಬಳ್ಳಾರಿಯ ಕ್ಯಾನರಾ ಇಂಡಸ್ಟ್ರಿಯಲ್ ಮತ್ತು ಬ್ಯಾಂಕಿಂಗ್ ಸಿಂಡಿಕೇಟಿನ ಏಜಂಟರಾಗಿದ್ದ ಶ್ರೀ ಕೆ. ಆರ್. ಶಾನುಭೋಗರು ತಮ್ಮ 30 ನೆಯ ವಯಸ್ಸಿನಲ್ಲಿಯೇ ಟೈಫಾಯಿಡ್ ಜ್ವರದಿಂದ 13-10-41 ನೆಯ ತಾ॥ ಸಿಕಂದರಾಬಾದ್ ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರೆಂದು ತಿಳುಹಿಸಲು ವಿಷಾದಿಸುತ್ತೇವೆ. ಬಳ್ಳಾರಿ ಶಾಖೆಯು ಸ್ಥಾಪಿತವಾದಂದಿನಿಂದ ಸುಮಾರು 5-6 ವರ್ಷಗಳಿಂದ ಕಾರ್ಯಕ್ಷಮತೆ ವರ್ತಕರೊಡನೆ ಉದಾರ ವ್ಯವಹಾರ, ಸ್ನೇಹಿತರೊಡನೆ ಪ್ರೇಮಮಯ ಬಳಿಕೆಯಿಂದ ಇವರು ಎಲ್ಲರ ಪ್ರಿಯರಾಗಿದ್ದರು. ಈ ಪ್ರಾಂತ್ಯ ಕೆಗೆಯಲ್ಲಿ ಅನೇಕ ಶಾಖೆಗಳ ಯಶಸ್ಸಿಗೆ ಇವರೂ ಸಹ ಕಾರಣರಾಗಿದ್ದರು. ಇವರ ಕುಟುಂಬದವರಿಗೆ ಸಹಾನುಭೂತಿಯನ್ನರ್ಪಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ.

ವಿಚಿತ್ರ ಮರಣ.

ಬಳ್ಳಾರಿ 'ನವಭಾರತ' ಸಂಪಾದಕರಿಗೆ

ಬಳ್ಳಾರಿ ಜಿಲ್ಲಾ ಸಿರುಗುಪ್ಪೆ ತಾಲೂಕು ಬೀರಹಳ್ಳಿ ಗ್ರಾಮದಲ್ಲಿ ಈಗ ಒಂದು ತಿಂಗಳೊಳಗಾಗಿ ಐದು ಜನರು ವಿಚಿತ್ರ ರೀತಿಯಲ್ಲಿ ಮರಣ ಹೊಂದಿರುವರು. ಸುಮಾರು ಮಧ್ಯರಾತ್ರಿ ಸುಮಾರಕ್ಕೆ ಎನೋ ಹುಳವು ಕಡಿದಂತಾಗಿ ಕಡಿಯಲ್ಪಟ್ಟ ವ್ಯಕ್ತಿಯು ಏಳಬೇಕಾಗುತ್ತದೆ. ಕಡಿಯಲ್ಪಟ್ಟ ಸ್ಥಳದಲ್ಲಿ ಕಡಲೆಹಾಳು ಗಾತ್ರದ ಒಂದು ಗುಳ್ಳೆಯಾಗುತ್ತದೆ. ಎದ್ದವ್ಯಕ್ತಿಯು ಸ್ತ್ರೀಯಾಗಲಿ, ಪುರುಷನಾಗಲಿ, ಹಾವು ಕಡಿದಂತೆ ಅರ್ಧಘಂಟೆಯೊಳಗಾಗಿ ಮೂರ್ಛೆಬಿದ್ದು ಸಾಯುವರು. ಮನೆಯಲ್ಲಿ ಎಲ್ಲಿ ಹುಡುಕಿದರೂಸಹ ಯಾವ ಹುಳವಾಗಲಿ, ಜೇಳಾಗಲಿ, ಹಾವಾಗಲಿ ಗೋಚರವಾಗಿಲ್ಲ. ಇದರಿಂದ ಸತ್ತವರ ಮನೆಯವರು ಭಾಬರಿಯಿಂದ ಮನೆಬಿಟ್ಟು ದೇರೆಕಡೆ ವಾಸವಾಗಿರುತ್ತಾರೆ. ಇಂಥಾ ವಿಚಿತ್ರಮರಣದಿಂದ ಊರೆಲ್ಲಲ್ಲಾ ಕಳವಳವುಂಟಾಗಿದೆ. ಹೀಗೆಯೇ ಆಗಸಲದಿನ್ನೆಯಲ್ಲಿ 3 ತಿಂಗಳಿಗೊಂದುಸಲ, 6 ತಿಂಗಳಿಗೊಂದುಸಲದಂತೆ ಜನರು ಸಾಯುತ್ತಲೇ ಇರುವರು. ಆಊರಿನಲ್ಲಿ ಗೌಡರಾದ ಶ್ರೀ ವಿರುಪಾಕ್ಷರೆಡ್ಡಿಯವರು 1½ ತಿಂಗಳಕೆಳಗೆ ಈಪ್ರಕಾರವಾದ ವಿಚಿತ್ರ ಮರಣಕ್ಕೆ ಈಡಾದರು. ಇದನ್ನು ಸರಕಾರದವರೂ, ಆರೋಗ್ಯಶಾಖೆಯವರೂ ತಕ್ಷಣವೇ ವಿಚಾರಿಸಿ ಪರಿಶೋಧನೆ ಮಾಡಿ ಜನರ ಭಯವನ್ನು ದೂರಮಾಡಲು ಕೋರುತ್ತೇನೆ. ಈವಿಷಯಕ್ಕೆ ತಹಶೀಲ್ದಾರ್, ಹೆಲ್ತ್ ಆಫಿಸರ್, ಜಿಲ್ಲಾಬೋರ್ಡು ಅಧ್ಯಕ್ಷರು ಶ್ರೀ ಶೇಷಾರಾಮರೆಡ್ಡಿಯವರಿಗೆ ಅರ್ಜಿಹಾಕಲಾಗಿದೆ.

ಒಂದು ತಿಂಗಳೊಳಗಾಗಿ ಬೀರಹಳ್ಳಿಯಲ್ಲಿ ಈ ಪ್ರಕಾರವಾಗಿ ವಿಚಿತ್ರಮರಣಕ್ಕೀಡಾದವರು ಐದು ಜನ.

1) ವಡ್ಡರನಾಗಮ್ಮ ವಯಸ್ಸು 22
2) ಕಬ್ಬೇರ ಮಾರೆಕ್ಕ ,, 40
3) ವಡ್ಡರನಾಗಪ್ಪನ ಮಗ 7
4) ,, ಮಗಳು 10
5) ಈಡಿಗ ದೇವಕ್ಕನ್ನ ಹೆಚ್ಚೈಳಿ 24

ಅಂಣಾಜಿ ಗೌಡ, ಬೀರಹಳ್ಳಿ.

ಪ್ರಾಥಮಿಕ ಶಾಲೆಗಳು

ಜಿಲ್ಲಾಬೋರ್ಡು ಸದಸ್ಯರೂ ಬಳ್ಳಾರಿಯ ಸುಪ್ರಸಿದ್ಧ ವಕೀಲರೂ ಆದ ಶ್ರೀ ಹೆಚ್. ಕ. ಗುರುಬಸವರಾಜರು ಹೀಗೆ ಬರೆಯುತ್ತಾರೆ.

"ಸಂಬರಿಧಿಸಿದ ಜಿಲ್ಲಾಬೋರ್ಡುಗಳ ಅಧಿಪತ್ಯ ಕೆಳಗೆ ಡಿ. ಪಿ. ಐ. ರವರು ಪ್ರಾಥಮಿಕ ಶಾಲೆಗಳ ವಿಷಯಕ್ಕೆ ಇಂಥಾ ಅಜ್ಞೆನೂಡಿರುವುದು ವಿಷಾದಕರವಾಗಿದೆ. ಈಗ ಇರುವ ಶಾಲೆಗಳ ಸಂಖ್ಯೆಯೇ ಕಡಮೆ ಇದ್ದು ಅವುಗಳಲ್ಲಿ ಬಹುಭಾಗ ಮುಚ್ಚಲ್ಪಟ್ಟಿರೆ ಸರಕಾರವು ತನ್ನ ಕರ್ತವ್ಯವನ್ನು ಮರೆತಂತಾಗುವುದು. ನಿರಕ್ಷರತೆಯು ಇನ್ನೂ ಹೆಚ್ಚಾಗುವುದು. ರೈತನು ಕೊಡುವ ತೆರಿಗೆಗೆ ಪ್ರತಿಫಲವೇನು ದೊರೆತಂತಾಯಿತು? ಶಾಲೆಗಳನ್ನಭಿವೃದ್ಧಿಮಾಡಲು ತಕ್ಕ ಪ್ರಯತ್ನಮಾಡುವುದು ಬಿಟ್ಟು ಮುಚ್ಚಿದರೇನು ಪ್ರಯೋಜನ? ಡಿ. ಇ. ಓ. ರವರೂ ಅವರ ಡೈಸ್ಟಿಟಗಳೂ ಶಾಲೆಗಳನ್ನು ಸುಗಿಕಾಲದಲ್ಲಿ ನೋಡಿ ಹಾಜರಿ ಕಡಮೆ ಇರುವುದೆಂದು ವರದಿಮಾಡಿರುವಂತೆಗೊತ್ತಾಗಿದೆ. ಎಲ್ಲಾ ವಿಚಾರಮಾಡಿ ಈಆರ್ಡರನ್ನು ರದ್ದುಮಾಡಲೆಂದು ಕೋರುತ್ತೇನೆ.

ಎಂಪೈರ್ ಆಫ್ ಇಂಡಿಯ

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಸ್ಥಾಪನೆ - ೧೮೯೭.

ಆಸ್ತಿಪಾಸ್ತಿಗಳು 5,60,00,000, ರೂ.ಗಳಿಗೆಮೀರಿದೆ

ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುವನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ವಿಜಿಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಛೇರಿ:
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚು ಕಛೇರಿ:
ಡಿಸ್ಪ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೆಗೌಡ ರಸ್ತೆ,
ಬೆಂಗಳೂರು ಸಿಟಿ.

ಎಸ್ ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ..

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳುನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ತೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ವೇಸ್ಟ್ ಎಂಡ್ ನಾಚುರಲ್ಲೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ಕನ್ನಡ ಭಗವದ್ಗೀತೆ.

ಶ್ರೀ ಕೃಷ್ಣ ಪರಮಾತ್ಮನ ದಿವ್ಯವಾಣಿಯಿಂದ ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಬೋಧಿಸಲ್ಪಟ್ಟ ಭಗವದ್ಗೀತೆಯ ಗಂಭೀರ ಧ್ವನಿಯನ್ನು ಸರಳವಾದ ಕುಸುಮ ಷಟ್ಪದಿಯ ಪದ್ಯ ಶೈಲಿಯಲ್ಲಿ ಕರ್ನಾಟಕದ ಸುಪ್ರಸಿದ್ಧ ಕವಿಗಳಲ್ಲೊಬ್ಬರಾದ ಶ್ರೀ ಎಂ. ಎಸ್. ಸುಬ್ಬಣ್ಣನವರು ಗ್ರಂಥ ರಚನೆ ಮಾಡಿರುವರು. ಇದಕ್ಕೆ ಅನೇಕ ಪಂಡಿತರ ಪ್ರಶಂಸೆಯು ದೊರೆತಿದೆ. ಕನ್ನಡಿಗರೆಲ್ಲರೂ ಇದನ್ನು ಕೈಕನ್ನಡಿಯಾಗಿ ಮಾಡಿಕೊಳ್ಳಲು ಸುಸಂಧಿ. ಸ್ವಲ್ಪ ಪ್ರತಿಗಳನ್ನೆ. ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್.

ಬೆಲೆ 0—12—0 ಪೋಸ್ಟು ಖರ್ಚು ಪ್ರತ್ಯೇಕ.

ಕಾಲವ ಸುಬ್ಬಣ್ಣ, ಮರ್ಚೆಂಟು, ಬಳ್ಳಾರಿ.

NAVA BHARAT BELLARY.
With which is incorporated Congress Bulletin
THE LEADING NATIONAL WEEKLY.
ನವ ಭಾರತ ಬಳ್ಳಾರಿ.
ಉಜ್ವಲ ನಾಷ್ಟ್ರೀಯ ವಾರ ಪತ್ರಿಕೆ.

The Rates of Subscription
Annual
Local 2—0—0
Moffusil 3—0—0
6 Months
Local 1—4—0
Moffusil 1-10—0

ಚಂದಾ ವಿವರ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1- 4-0
ಹೊರಗಿನವರಿಗೆ 1-10-0

Nava Bharat, Bellary.

REG. No. 3937.

Sri _____

Printed at Vittal Press, Car Street Edited & Published by T. B. Keshava Rao, Bellary.

Reg. M. No. 3937. 'ವಂದೇ ಮಾತರಂ'

ನವಚಾರಕ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೪ ಬಳ್ಳಾರಿ ಅಕ್ಟೋಬರ್ ೩೦ನೇ ಭಾನುವಾರ ೧೯೪೧. ಟಿ. ಪಿ. ಕೈಲಾಸಂ

ಎಂಪೈರ್ ಆಫ್ ಇಂಡಿಯಾ

ಸ್ಥಾಪನೆ- ೧೯೮೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000, ರೂ. ಗಳಿಗೆ ಮಿಾರಿದೆ

ಈ ಕಂಪನಿಯನ್ನು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಆಯ್ಕೆಮಾಡಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ ಇಲ್ಲವೇ ನಿಮ್ಮಂತರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ:
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಪ್ರಾಂತ ಕಚೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ,
ಬೆಂಗಳೂರು ಸಿಟಿ.

ಜಪಾನ್ ಮೇಲೆ ಬೀಳುವುದೇ ?

ಅಲ್ಲಿನ ಮಂತ್ರಿ ಮಂಡಲದಲ್ಲಿ ಬದಲಾವಣೆ

ರಾಜಕುಮಾರ ಕೊನೋಯಿಯವರ ಸರಕಾರವು ರಾಜೀನಾಮೆಯನ್ನು ಒಪ್ಪಿಸಿತೆಂದು ಅಧಿಕಾರಯುತವಾಗಿ ಪ್ರಕಟಿಸಲಾಗಿದೆ. ರಾಷ್ಟ್ರದ ನೀತಿ ಕುರಿತು ಮಂತ್ರಿಗಳೆಲ್ಲ ಒಂದು ಒಪ್ಪಂದಕ್ಕೆ ಬರಲು ಅಸಾಧ್ಯವಾದುದೇ ಇದಕ್ಕೆ ಕಾರಣ. ರಾಜಕುಮಾರ ಕೊನೋಯಿಯವರ 'ಕಾಮು ನೋಡುವ' ಚಿತ್ತವೃತ್ತಿಯ ಮಂತ್ರಿಮಂಡಲವು ಕೇವಲ ೨ ತಿಂಗಳ ಕಾಲ ಅಧಿಕಾರ ನಡೆಸಿದಂತಾಯಿತು.

ಸಂಗ್ರಾಮ ಸಚಿವರಾದ ಲೆಫ್ಟಿನೆಂಟ್ ಜನರಲ್ ಹಿಡೇಕಿ ಟೋಜೋರವರಿಗೆ ಹೊಸ ಮಂತ್ರಿಮಂಡಲವನ್ನು ರೂಪಿಸುವಂತೆ ಚಕ್ರವರ್ತಿಗಳು ಸೂಚನೆ ಮಾಡಿದ್ದಾರೆ ಹಿರಿಯ ರಾಜಕಾರಣ ವೇತ್ತರನ್ನೆಲ್ಲ ಕೇಳಿ, ಟೋಜೋರವರಿಗೆ ಮಹಾ ಪ್ರಧಾನರ ಅಧಿಕಾರ ಕೊಡಲಾಯಿತು ಹೊಸ ಮಂತ್ರಿಮಂಡಲವು "ಸಂಗ್ರಾಮ ಮಂತ್ರಿಮಂಡಲ" ವೆಂತೆರುವುದೆಂದು ಹೇಳಲಾಗಿದೆ.

ಜಪಾನು ಸೇನೆಗಳೆಲ್ಲ ಸಿದ್ಧವಾಗಿರಬೇಕು

ಜಪಾನು ಅಧಿಕಾರಿಗಳ ಎಚ್ಚರಿಕೆ

ಜಪಾನು ಸೇನೆಗಳೆಲ್ಲ ಮುಂದೊದಗುವ ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಾಗಿರಬೇಕೆಂದು ಜಪಾನ್ ಅಧಿಕಾರಿಗಳೊಬ್ಬರು ಎಚ್ಚರಿಕೆಯಿತ್ತಿದ್ದಾರೆ.

ಜಪಾನು ಅಮೆರಿಕದ ನಿಜಾರದಲ್ಲಿ ಕೊಂಚ ಗಡುಸಾಗಿ ವರ್ತಿಸತೊಡಗಿದೆ "ಜೋಕೆ! ಜಪಾನು ನೌಕಾಬಲವು ಎಟು ಹಾಕಲು ಸಿದ್ಧವಾಗಿದೆ" ಎಂಬುದಾಗಿ ಈ ದಿನ ಟೋಕಿಯೋದಲ್ಲಿ ಜಪಾನ್ ಅಧಿಕಾರಿಗಳೊಬ್ಬರು ಅಮೆರಿಕ ಸರಕಾರಕ್ಕೆ ಎಚ್ಚರಿಕೆಯಿತ್ತರಂತೆ. ಐಸ್‌ಲೆಂಡ್ ಮತ್ತು ಬ್ರಿಟಿಷ್ ದ್ವೀಪಗಳ ಸಮುದ್ರ ಕ್ಷೇತ್ರಗಳಲ್ಲಿ ಅಮೆರಿಕದ ಸಾಮಾನು ಹಡಗುಗಳಿಗೆ ಸಂಗ್ರಾಮ ನೌಕೆಗಳನ್ನು ಕಾವಲು ಹಾಕುವುದಾದರೆ, ಜಪಾನ್ ಅಮೆರಿಕಗಳ ಬಾಂಧವ್ಯಕ್ಕೆ ಭಂಗ ಬರುವುದೆಂದು ಅವರು ಹೇಳಿದರು.

ಕಾಂಗ್ರೆಸ್ ಮಹಾ ಸಭೆಯು ಅಮೆರಿಕದ ಸಾಮಾನು ಹಡಗುಗಳಲ್ಲಿ ಸಿರಂಗಿಗಳನ್ನಿಡುವ ವಿಚಾರ ಚರ್ಚೆಯಲ್ಲಿ ತೊಡಗಿರುವ ಈ ಸಮಯದಲ್ಲಿ ಅಮೆರಿಕ ಸಾರ್ವಜನಿಕಾಭಿಪ್ರಾಯವು ಅದಕ್ಕೆ ವಿರುದ್ಧವಾಗುವಂತೆ ಮಾಡಲು ನಾಜಿಗಳ ಪ್ರೇರಣೆ

6ನೇ ಪುಟವನ್ನು ನೋಡಿರಿ.

46



ಅಕ್ಟೋಬರ್ 26-10-41

Victoria women and children hospital.

The Victoria Women and Children Hospital popularly known as the Gosha Ladies' Hospital in Bellary is primarily intended to serve the needs of the 26,789 women in Bellary besides 8,903 children in the town according to the 1941 Census The number of births for the year was over 2,000 of which as many as 128 were still births. The total number of labour cases attended to by qualified midwives was only 869. The infantile mortality stood as high as 477. The Gosha Ladies Hospital, in the above setting, is really impressive. It has to perform a stupendous task, especially being the only place in the whole town barring the Misson Hospital far away where labour cases could be attended. But there being only twenty three beds only, it is a common sight to see that every inch of available space in the pials of the hospital being used up for extra-beds in unusually sick seasons. High or low, people of all kinds lookforward eagerly to this Hospital in times of need. A feature in the recent past is the fact of people from the adjoining districts resorting to this hospital, despite the existence of similar medical facilitities in their own districts. This is a tribute to the abilities of the staff of the hospital and their renown no doubt, but the additional strain further imposes greater congestion. It is indisputable that a hospital of this importance needs much more facilities than are now existing. Firstly, there is no special paying ward; is it too much to hope that some Philanthrepic Gentlemen in Bellary will comeforward to build, a cheap but requisite, special ward in the vast Government land adjoining the quarters of the Lady Doctor near the hospital ? No charity can be more humanitarain than such a one The hospital too needs at least a single nurse While the Headquarters Hospital cortains as many as ten nurses, the Government would seem to be satisfied with allocating only two midwives and no nurse at all to this hospital. We hope this grievance will be removed ere long.

Dr. Mrs. John the present doctor in charge of the hospital, must be paid a well-deserved tribute for the various improvements (drainage scheme, opening of new gates, increase of beds etc) that were effected in the hospital during her regime. The greatest quality in a doctor is the milk of human kindness, apart from professional efficiency. That she has it is proved by the popularity of the hospital now as against the apathy of the public to resort to it before her time. We wish that Bellary is given the privilge of having her services for a longer time than the period of three years fixed recently. Apart from the doubtful utility of such a rule vis a vis the medical service, the needs of Bellary justify an extension to her se vice and it is to be hoped that the authorities will take note of the public opinion in this respect, as also in regard to the various other improvements suggested above.

ವಿಲೇಜು ಪಂಚಾಯ್ತಿ ಬಿಲ್.

ಈ ಶಾಸನಕ್ಕೆ ಸಾರ್ವಜನಿಕರು ಅಭಿಪ್ರಾಯಗಳನ್ನು ಕೊಡುವ ಅವಧಿಯನ್ನು ಸರಕಾರದವರು 16 ನವಂಬರ್ 1.41 ರವರೆಗೆ ಬೆಳೆಸಿರುವರೆಂದು ಸರಕಾರದ ಸೂಚನೆಯೊಂದು ತಿಳಿಸುತ್ತದೆ.

ಹಿರಿಯಾಳು.

ವಿಲೇಜು ಪಂಚಾಯ್ತಿ ಬೋರ್ಡು ಆದ್ಯ ಕ್ಷರಾದ ಶ್ರೀ ರಂಜಾನುಸಾಹೇಬರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಸೇರಿ ಸರಕಾರದ ವಿಲೇಜು ಪಂಚಾಯ್ತಿ ಬಿಲ್ ಖಂಡಿಸುವದರಲ್ಲಿ ಒಂದಿತು. ನಿರ್ಣಯವು ಸರಕಾರಕ್ಕೆ ಹೋಗಿದೆ.

★ ರಶಿಯದ ಕಾಳಿನ ಕಣಜ ಒಡೆಸ್ಸಾ ★

ಸೋವ್ಹಿಯೆಟ್ ರಶಿಯದ ಕಾಳಿನ ಅತಿ ದೊಡ್ಡ ಬಂದರವಾದ ಓಡೆಸ್ಸಾ ಬಂದರವು ನಾಜಿಗಳ ಕಾಕದೃಷ್ಟಿಯ ಕೇಂದ್ರವಾಗಿದೆ. ಪೃಥದಿಂದ ಈ ಬಂದರವು 130 ಮೈಲು ದೂರವಿದೆ. ಓಡೆಸಾ ವಾರ್ಗವಾಗಿ ದಿಗ್ಬಂಧನ ಮಾಡಿದರೆ ರಶಿಯದ ಮೇಲೆ ದಾಳಿ ಮಾಡುವನೆಂದು ಕೆಲ ತಿಂಗಳ ಹಿಂದೆ ಬಾಲ್ಕನದಲ್ಲಿಯ ಜರ್ಮನ್ನ ಅಧಿಕಾರಿಗಳು ಬಡಾಯಿ ಕೊಚ್ಚುತ್ತಿದ್ದರು.

ಆದರೆ ಓಡೆಸಾಕ್ಕೆ ಯುದ್ಧದ ಪರಿಚಯ ಚನ್ನಾಗಿದೆ. ರಕ್ತಪಾತ, ಕ್ರಾಂತಿಗಳು ಅದರ ಹುಟ್ಟು ಬೆಳವಣಿಗೆಯಲ್ಲಿಹಾಸು ಹೊಕ್ಕಾಗಿವೆ. ೧೯೧೭ ರಲ್ಲಿ ಕ್ರಾಂತಿಯಿಂದ ಇಡೀ ರಶಿಯನೆರಕ್ತದಲ್ಲಿ ನೆನೆದಾಗ ಓಡೆಸಾವನ್ನು ಕೂಡಲೆ ಈ ರಕ್ತದ ತಿರುಗಣಿಯಲ್ಲಿ ಎಳೆಯಲಾಯ್ತು. ವ್ಯಾಪಾರ ಮತ್ತು ರಾಜಕೀಯ ದೃಷ್ಟಿಯಿಂದ ಯುಕ್ರೇನದ ರಾಜಧಾನಿಯಾದ ಕೀವ ಪಟ್ಟಣದ ಕೆಳಗೇ ಓಡೆಸ್ಸಾ ಬರುತ್ತದೆ.

ಕೆರೆನಸ್ಕಿಯ ಅಲ್ಪ ಕಾಲಾನಧಿಯು ಅಡಳಿತವಾದ ಮೇಲೆ ಬಿಡುಗಡೆಗಾಗಿ ಹೋರಾಡಿ ಯುಕ್ರೇನಿಯನ್ನರು ಓಡೆಸ್ಸಾವನ್ನು ಆಕ್ರಮಿಸಿದರು. ಆದರ ಅವರ ವಿಜಯ ಬಹಳ ದಿನ ತಾಳಲಿಲ್ಲ. ೧೯೧೮ ರ ಪ್ರಾರಂಭದಲ್ಲಿ ಬೊಲಶೇವ್ಹಿಕ ಕೊಲಿಕಾರರು ರಶಿಯದ ಕಪ್ಪ ಸಮುದ್ರದ ನೌಕಾಪಡೆಯೊಂದಿಗೆ ಕೂಡಿ ಈ ಬಂದರವನ್ನು ವಶಪಡಿಸಿಕೊಂಡು ಸೋವ್ಹಿಯೆಟ್ಟ ಪ್ರಜಾಸತ್ತೆಯನ್ನು ಸಾರಿದರು ಆಗ ಕೂಡಿತ ತಾ ಓಡೆಸ್ಸಾವ ರಕ್ತಸ್ನಾನವು ಮುಗಿಯಲಿಲ್ಲ.

ಮೇಲಿನ ಘಟನೆಯಾಗಿ ೬ ವಾರಗಳು ಮುಗಿದಿದ್ದಿಲ್ಲ ಅಷ್ಟರೊಳಗಾಗಿ ಜರ್ಮನ್ನ್ ಕೇಂದ ಸರಕಾರದ ಸೇನೆಗಳು ಯುಕ್ರೇನವ ಬಹುಭಾಗವನ್ನು ಆಕ್ರಮಿಸಿದವು. ಯುಕ್ರೇನದ ಜಮೀನುದಾರರು ತಮ್ಮ ಹೊಲಗಳೆಲ್ಲ ಹೋಗುವನೆಂದು ಅಂಜಿತ ಮನ್ನು ಳಿಸಬೇಕೆಂದು ಬೇಡಿದ್ದರಿಂದಹೀಗೆ ಮಾಡಲಾಯತು. ಜರ್ಮನರು ತಾವು ಸುವ್ಯವಸ್ಥೆಯನ್ನು ಪ್ರಸ್ಥಾಪಿಸಲು ಬಂದಿರುವದಾಗಿ ಆಗ ಸಾರಿ ಸಾರಿ ಹೇಳಿದರು. ಅವ್ದರಿಂದ ತಾವು ಯುಕ್ರೇನಿಯನ್ನರಿಗೆ ಸ್ವಾತಂತ್ರ್ಯಕೊಡಿಸಲು ಸಹಾಯ್ಯ ಮಾಡಲು ಬಂದಿರುನೆನೆಂದು ಹೇಳಿದರು. ಇದು ತುಂಬ ಸುಳ್ಳಾಗಿದ್ದಿತು. ಆಗಿನ ಜರ್ಮನಿಯ ಸಾಮ್ರಾಜ್ಯದ ದಂಡುಗಳು ಈಗಿನ ನಾಜಿ ದಂಡುಗಳಂತೆ ಲೂಟಿ ಮಾಡುವದರಲ್ಲಿಯೆ ನಿಜವಾಗಿ ತೊಡಗಿದ್ದವು. ಕೇಂದ್ರ ಶಕ್ತಿನೆಲಕ್ಕೆ ಕುಕ್ಕರಿಸಿದ ಕೂಡಲೆ ಈ ದಂಡುಗಳೆಲ್ಲ ಈ ಪ್ರದೇಶವನ್ನು ಬಿಟ್ಟು ಗೊಟ್ಟುಹೋದವು

ಆ ನಂತರ ಫ್ರೆಂಚ್ ದಂಡುಗಳು ಬಂದವು ಯುಕ್ರೇನಿಯದ ಪರಿಸ್ಥಿತಿಯನ್ನು ಪರಿತೀಲಿಸುವದೂ ಬೋಲಶೆವ್ಹಿಕರ ವಿರುದ್ಧ ಸೈನಿಕ ದಾಳ ಮಾಡುವದೂ ಅವುಗಳ ಮುಖ್ಯ ಕೆಲಸವಾಗಿತ್ತು. ಆದರೆ ಅವರಿಗೆ ಈ ಕಾಲವೇನೂ ಸುಖಕರವಾಗಲಿಲ್ಲ. ಯುಕ್ರೇನಿಯನ್‌ರು ಒಳ್ಳೆ ಸ್ವಾಭಿಮಾನಿಗಳಾಗಿ ಕಂಡರು (ಆಗಲೂ ಹಿಟ್ಲರನ ಪಂಚಮದಳವಲ್ಲಿತ್ತು.) ಫ್ರೆಂಚರ ಸೈನಿಕ ಆರ್ಥಿಕ ಮತ್ತು ರಾಜಕೀಯ ಹಿಡಿತಗಳನ್ನು ಪ್ರತಿಭಟಿಸಿ ಅಲ್ಲಗಳೆದರು. ಫ್ರೆಂಚರ ಪ್ರಯತ್ನಗಳು ವಿಫಲವಾದವು ೧೯೧೯ ರಲ್ಲಿ ಕೊನೆಗೆ ಸೋವ್ಹಿಯೆಟ್ ಹಿಡಿತಕ್ಕೆ ಯುಕ್ರೇನವು ಓಡೆಸ್ಸಾ ಸಹಿತ ಒಳಪಟ್ಟಿತು.

ಆಗಿನಿಂದ ಅವರಿಗೆ ಅಂದರೆ ಯುಕ್ರೇನಿಯನ್ನರಿಗೆ ಸಾಕಷ್ಟು ಸ್ವಾತಂತ್ರ್ಯವನ್ನು ಕೊಡಲಾಗಿದೆ.

ಈ ಗೊಂದಲದ ಕಾಲದಲ್ಲಿ ಸ್ವಾಭಾವಿಕವಾಗಿ ಓಡೆಸ್ಸಾ ಹಾಳು ಹಂಪೆಯಾಗಿತ್ತು. ಈ ಅವಧಿಯಲ್ಲಿ ಫ್ರೆಂಚಹಡಗುಪಡೆ ಈ ಬಂದರವನ್ನು ತೋಫಿನ ಗುಂಡಿಗೆ ಗುರಿಯನ್ನಾಗಿ ಮಾಡಿದ್ದವು. ಒಟ್ಟಿಗೆ ಈ ಅಶಾಂತಿ ಕಾಲದಲ್ಲಿ ಒಂದೆರಡಾಂಶ ಮನೆಗಳು ಗಂಡಾನಿಂದ, ಉರಿಯಿಂದ, ಲೂಟಿಯಿಂದ ಹಾಳಾದವು. ಸುದ್ಯೆವದಿಂದ ಈ ಪ್ರದೇಶದ ಹವಾಮಾನವು ಮೆದುವಾಗಿದೆ. ಈ ಹಾಳುಬೀಳುಗಳಿಂದ ರೋಗ ರುಜಿನಗಳೇನೂ ಬೆಳೆಯಲಿಲ್ಲ ಈಗಿನ ಜರ್ಮನ ದಾಳಿಯಿಂದ ರಶಿಯದಲ್ಲಿ ಭೀಕರವಾದ ಬರಗಾಲ ತಾಂಡವಾಡುವದೆಂದು ಚರ್ಚಿಲ್ಲರು ಜಗತ್ತಿಗೇ ಎಚ್ಚರಿಕೆ ಕೊಟ್ಟಿದ್ದಾರೆ. ಈಹಿಂದೆ ಹೇಳಿದ ಕಾಲದಲ್ಲಿಯೂ ಇಲ್ಲಿ ಬರಗಾಲ ಎಲ್ಲೆಲ್ಲೂ ಕಾಣಿಸಿಕೊಂಡಿತು.

ಯುಕ್ರೇನವು ಯುರೋಪದ ಧಾನ್ಯದ ಕಣಜವೇ ಆಗಿದ್ದರೂ ಆಗ ಬರಗಾಲವೇನೂ ತಪ್ಪಲಿಲ್ಲ.

ಆಗ ಈ ಬರಗಾಲದ ಬವಣೆಗೆ ಕೇಡಾದವರು ಬರಿ ರಶಿಯನ್ನರಷ್ಟೇ ಅಲ್ಲ; ಯಾಕಂದರೆ ಜಗತ್ತಿನ ದೊಡ್ಡ ದೊಡ್ಡ ಬಂದರಗಳಲ್ಲಿರುವಂತೆ ಓಡೆಸ್ಸಾದಲ್ಲಿಯೂ ಎಲ್ಲ ದೇಶದ ಜನರೂ ಇದ್ದರು ಅಲ್ಲಿಯನಿವಾಸಿಗಳು ಯುಕ್ರೇನಿಯನ್ನರೆ ಇದ್ದರೆ. ಅವರಲ್ಲದೆ ಯಹೂದಿಗಳು, ತಾರ್ತರರು, ಗ್ರೀಕರು, ಜರ್ಮನರು, ಪೋಲರು ಮತ್ತು ಅಮೇರಿಕನ್ನರೂ ಇರುವರು. ಓಡೆಸಾದ ಜನಸಂಖ್ಯೆ ೬ಲಕ್ಷವಿದೆ ಈ ಪಟ್ಟಣ ಯಾವಾಗಲೂ ರಾಜಕೀಯ ಕಾರಸ್ಥಾನದ ಸ್ಥಳವೆಂದು ಪ್ರಸಿದ್ಧವಾಗಿದೆ. ೧೯೧೭ ರಲ್ಲಿ ರಶಿಯದಲ್ಲಾದ ಕ್ರಾಂತಿಯ ಕಾಲದಲ್ಲಿ ಕೆಲ ಸಗಾರರು ಸರಕಾರದ ವಿರುದ್ಧ ಬಂಡೆದ್ದು ದಂಡುಗಳೊಡನೆ ಹೋರಾಡಿದರು. ಈ ಏಳ್ಗೆಯನ್ನು ಅವರ್ಣನೀಯವಾದ ಶ್ರೌರ್ಯದಿಂದಬಗ್ಗುಬಡಿಯಲಾಯಿತು. ಕೊಟ್ಟ ಶಿಕ್ಷೆ ಭಯಂಕರ ವಾಗಿತ್ತು. ಆಗ ಆ ಶಿಕ್ಷಾಸತ್ರಕ್ಕೆ ಅಂಜಿ ೮೦ ಸಾವಿರ ಜನರೂ ಓಡೆಸ್ಸಾವನ್ನು ಬಿಟ್ಟು ಓಡಿಹೋದರಂತೆ.

ಹೋದ ಯುದ್ಧ ಮುಗಿದ ಮೇಲೆ ಹಳೆ ಭಾಂಡಾರವನ್ನೆಲ್ಲ ಓಡೆಸ್ಸಾ ಮರಳಿಪಡೆಯಿತು. ಜನಸಂಖ್ಯೆಯೂ ೧೫ ಲಕ್ಷ ವಿರಬಹುದೆ. ಕ್ರಿಸ್ತಪೂರ್ವದೆ ಇತಿಹಾಸವಿದ್ದರೂ ಆ ನಗರವನ್ನು ಅತ್ಯಂತಆಧುನಿಕವನ್ನಾಗಿ ಮಾಡಿದವರೆ ಜರೆ ರಶಿಯದ ಪ್ರಸಿದ್ಧ ಮುತ್ಸದ್ದಿ ಕೌಂಟವಿಟ್ಟೆ ಎಂಬವನು ಯುರೋಪದ ಪ್ರಗತಿಪರರಾಷ್ಟ್ರಗಳಲ್ಲಿ ರಶಿಯವು ಒಂದುಸ್ಥಾನವನ್ನು ಪಡೆಯುಬೇಕಾಗಿದ್ದರೆ ರಶಿಯವು ಔದ್ಯೋಗೀಕರಣ ಹೊಂದಲೇ ಬೇಕೆಂದು ಸಾರಿ ಅಪ್ರಕಾರ ಉದ್ಯೋಗ ಧಂದೆಗಳನ್ನು ಪ್ರಾರಂಭಿಸಿ ಪ್ರಗತಿಯ ಜಾಲನೆ ಕೊಟ್ಟನು; ವ್ಯಾಪಾರವನ್ನು ಬೆಳಸಿದನು. ಇತ್ತಳೆದಕಾಲು ಶತಮಾನದಲ್ಲಿ ಹೊಸ ಹೊಸ ಕಟ್ಟಡಗಳಾಗಿವೆ ಆಗಿನ ಅಶಾಂತಿ ಕಾಲದಲ್ಲಿ ಊರಿಗೆ ಉರಿಹಚ್ಚಲು ಕಟ್ಟಿಗೆ ತೊಲೆ ಜಂತಿಗಳನ್ನು ಹಿರಿದು ಮನೆಗಳನ್ನು ಉಧ್ವಸ್ತ ಮಾಡಿದ್ದರು ಈಗ ಅಲ್ಲಿ ಸಾವಿರ ಗಟ್ಟಲೆ ಹೊಸ ಮನೆಗಳು ಕಟ್ಟಲಾಗಿದ್ದು ಬಂದರ ಸ್ಥಳಕ್ಕೆ ಬೇಕಾಗುವ ಎಲ್ಲ ಅಧುನಿಕ ಸಲಕರಣೆಗಳನ್ನೆ. ಈ ಬಂದರ ದಿಂದ ಗೋದಿ, ಸಕ್ಕರೆ, ಮನಕರು ಮತ್ತು ಕಟ್ಟಿಗೆಗಳು ಭಾರಿ ಪ್ರಮಾಣದಲ್ಲಿ ನಿರ್ಯಾತವಾಗುತ್ತವೆ.

ಅಲ್ಲಿಯ ಒಂದು ವೈಶಿಷ್ಟ್ಯವೆಂದರೆ ಅಲ್ಲಿಯ ಜನ ಜಗತ್ತಿನ ನಾನಾ ದೇಶಗಳಿಂದ ಬಂದವರಿಯವರಿಂದ ಎಲ್ಲಾಗೂಸಾಮಾನ್ಯವಾದ ಎಪ್ಪರೆಂಟೊ ಎಂಬಸಾರ್ವತ್ರಿಕ ಭಾಷೆಯ ಪ್ರಯೋಗವು ಅಲ್ಲಿಯಶಸ್ವಿಯಾಗಿದೆಯೆಂದು ಹೇಳಬಹುದು. ಎಪ್ಪೆ

೧ನೇ ಪುಟವನ್ನು ನೋಡಿರಿ

48

ವರ್ಧಾದಲ್ಲಿ ಮಹಾತ್ಮಗಾಂಧಿಯವರೊಡನೆ ವಿಚಾರ ವಿನಿಮಯ

ಸರದಾರ ವಲ್ಲಭಭಾಯೀಪಟೇಲರು ತಮ್ಮ ಮಗಳಾದ ಮಣಿ ಜೆನ್‌ರವರೊಡನೆ 20 ನೆಯ ತಾ. ಬಂದರು. ಡಾಕ್ಟರ್ ರಾಜೇಂದ್ರಪ್ರಸಾದ ಆಚಾರ್ಯ ಕೃಪಾಲಿನಿಯವರೂ ವರ್ಧಾದಲ್ಲೇ ಇದ್ದಾರೆ. ಮದ್ರಾಸಿನ ಹಿಂದಿನ ಪ್ರಧಾನಮಂತ್ರಿಗಳಾದ ಶ್ರೀ. ರಾಜಗೋಪಾಲಾಚಾರ್ಯರು 21 ನೆಯ ತಾ ವರ್ಧಾಕ್ಕೆ ಬಂದಿರುವರು. ಶ್ರೀ ಜಮುನಾಲಾಲಬಜಾಜ, ರಾಜೇಂದ್ರಪ್ರಸಾದ, ಕೃಪಾಲಿನಿ ಮತ್ತು ಜನಶಾಮಲ್‌ದಿಂಗಗುತ್ತರವರು 19 ನೆಯ ತಾ. ಗಾಂಧೀಜಿಯವರನ್ನು ಕಂಡು ಮಾತಾಡಿದರು. ಸರ್ಕಾರಿಕ ಮಿಟೀಸಭೆಯು ನೇರುವುದಿಲ್ಲ ಆದರೆ ವಿಡುಗಡೆಹೊಂದಿನ ಮುಖಂಡರು ರಾಜಕೀಯಪರಿಸ್ಥಿತಿ ವಿಮರ್ಶಿಸಲು ಮಹಾತ್ಮರ ಬಳಿಬರುವುದು ಮಾಡಿಕೆಯಾಗಿದೆ.

ಪಂಡಿತ ಜವಾಹರಲಾಲರ ಪತ್ರ

ಖಾದಿಯು ಕೋಟ್ಯಂತರ ಜನರಿಗೆ ಸಂದೇಶಕೊಡುವುದಾಗಿದೆ.

"ವಿಶ್ವವು ಕ್ಷಣ ಕ್ಷಣಕ್ಕೆ ವ್ಯತ್ಯಾಸ ಹೊಂದುತ್ತಿದೆ. ಹೀಗಿರುವಾಗ ನಾವು ಕೈಗಳನ್ನು ಕಟ್ಟಿಕೊಂಡು ಕೂಡಬಾರದು; ನಮ್ಮ ಮನಸ್ಸಿಗೆ ತುಕ್ಕು ಹಿಡಿಸಬಾರದು; ಖಾದಿಯು ನಮ್ಮ ಕೋಟ್ಯವಧಿ ಜನರಿಗೆ ಆಶೆಯ ಸಂದೇಶವನ್ನು ಕೊಡುವುದಾಗಿದೆ. ಈ ವಿಚಾರವನ್ನು ನಾನು ಮನಗಂಡಿದ್ದೇನೆ." ಎಂಬುದಾಗಿ ಪಂಡಿತ ಜವಹರಲಾಲರು ದೆಹರಾಡೂನ್ ಸೆರೆಮನೆಯಿಂದ ವಿಮೋಚಿತ ಗಾಂಧೀಆಶ್ರಮದ ಕಾರ್ಯದರ್ಶಿಗಳಿಗೆ ಪತ್ರ ಬರೆಯುತ್ತ ತಿಳಿಸಿದ್ದಾರೆ.

"ಖಾದಿ ಪ್ರಗತಿ ಕಂಡು ನನಗೆ ಸಂತೋಷವಾಗಿದೆ. ಆದರೆ ಪ್ರಗತಿಯು ಬಹಳ ಚುರುಕಿನಿಂದ ಆಗದೆ ಇರುವುದನ್ನು ಕಂಡು ಮನಸ್ಸಿಗೆ ವೇಸರಿಕೆಯಾಗಿದೆ. ನಮ್ಮ ಕಾರ್ಯ ಮಾರ್ಗದಲ್ಲಿ ವೈವಿಧ್ಯವೇ ಇಲ್ಲವಾಗಿದೆ. ಇನ್ನು ಕೊಂಚ ಬುದ್ಧಿ ಚಾತುರ್ಯ, ವಿಶಾಲವಾದ ಮನೋಭಾವ, ಈ ಗಿರುವ ಸ್ಥಿತಿಗತಿಗಳ ವಿಚಾರದಲ್ಲಿ ನಿಕಟವಾದ ಪರಿಶೀಲನೆ ಇವುಗಳು ಈಗ ಅಗತ್ಯ. ಸಂಗ್ರಾಮಸಮಯನೇ ಖಾದಿ ಪ್ರಚಾರಕ್ಕೆ ಸಕಾಲ. ಈ ವಿಚಾರ ಕುರಿತು ನಾವು ಏನುಮೆರೆಸಿದೇ ಇರುವುದಕ್ಕಾಗಿ ವಿಷಾದಿಸಬೇಕಾಗಿದೆ

"ಈಗಮೂರು ವರ್ಷಗಳ ಹಿಂದೆ ಚೀನಾದಲ್ಲಿ ಎಲ್ಲವಸ್ತುಗಳನ್ನೂ ಗ್ರಾಮಕೈಗಾರಿಕೆಗಳ ಮೂಲಕ ತಯಾರಿಸಲು ಕೈಗಾರಿಕೆ ಸಹಕಾರಸಂಘಗಳನ್ನು ಏರ್ಪಡಿಸುವ ಪ್ರಯತ್ನವೊಂದು ನಡೆಯಿತು. ಜಪ್ಪಿನ ಪರಿಸ್ಥಿತಿಯೇ ಬೇರೆ ಯುನ್ನಾನ್‌ದಲ್ಲಿ ಭಾಗವಹಿಸಿರುವುದು ಎಲ್ಲರಿಗೂ ತಿಳಿದೇ ಇದೆ ಹೀಗಿದ್ದರೂ ಈ ವ್ಯವಸ್ಥೆಯು ಬೆಳೆದುದನ್ನು ಕಂಡರೆ ಆಶ್ಚರ್ಯವಾಗುತ್ತದೆ. ಅಲ್ಲೀಗ 20,000 ಕ್ಕಿಂತ ಹೆಚ್ಚು ಕೈಗಾರಿಕೆ ಸಂಘಗಳು ಫಲಕಾರಿಯಾಗಿ ಕೆಲಸಮಾಡುತ್ತಿವೆ ಈ ಚಟುವಟಿಕೆಯು ಚೀನದ ಆರ್ಥಿಕ ರಚನೆಯು ಕಳಚಿ ಬೀಳದಂತೆ ರಕ್ಷಿಸಿತು ಚೀನದ ಮಿಲಿಟರಿ ಪ್ರತಿಭಟನೆಗಿಂತ ಇದು ಮುಖ್ಯವಾದುದೆಂಬುದು ವ್ಯಕ್ತಪಡಿಸಿದ ಇರಲಾರದು. ಈ ಉದಾಹರಣೆಯಿಂದ ನಾವು ಕಲಿಯುವುದಾದರೂ ಏನು? ಯಾವುದಕ್ಕೂ ಒಂದು ಬಗೆಯ ವಾತಾವರಣ ಬೇಕು. ಅನುಕೂಲ ವಾತಾವರಣದಲ್ಲಿ ಯಾವ ಚಟುವಟಿಕೆಯಾದರೂ ಅರಣ್ಯದ ಬೆಂಕಿಯಂತೆ ಹೆಚ್ಚುತ್ತದೆ. ನಾವು ತಪ್ಪಿಗೆ ಕಾರಣವೆ ದೀರ್ಘಾಲೋಚನೆ ಮಾಡಿ ಕಾರ್ಯಭಾರ ನಡೆಸಿದ ಹೊರತು ಖಾದಿ ಸಂದೇಶವು ನಮ್ಮ ಕೋಟ್ಯವಧಿ ಜನರ ಕಿವಿ ನುಟ್ಟುವುದಿಲ್ಲ" ಎಂದು ತಿಳಿಸಿದ್ದಾರೆ.

ಜಿಲ್ಲಾ ವಾರ್ತೆಗಳು.

ಕುರುಗೋಡು:— ಸರ್ಕಾರದವರು ಇದನ್ನು ಮಾದರಿ ಹಳ್ಳಿಯಾಗಿ ಮಾಡಲು ನಿಶ್ಚಯಿಸಿರುತ್ತಾರೆಷ್ಟೆ. ಆರ್ ಡಿ ಒ ರವರು 15ನೆಯ ತಾರೀಖು ಎಲಿಮೆಂಟರಿ ಶಾಲೆಯಲ್ಲಿ ಗ್ರಾಮೋದ್ಧಾರದ ಮೇಲೆ ಉಪನ್ಯಾಸ ಕೊಟ್ಟು ಸರ್ಕಾರದ ಪ್ರಯತ್ನಗಳೊಂದಿಗೆ ಸಾರ್ವಜನಿಕ ಸಹಕಾರವಿಲ್ಲದಿದರೆ ಏನೂ ನಡೆಯದೆಂದು ಹೇಳಿ ಗ್ರಾಮವರೇ ಒಂದು ಸಮಿತಿಯನ್ನು ನಿರ್ಮಿಸಿಕೊಳ್ಳಲು ಸೂಚಿಸಿದರು. ಸಮಿತಿಯವರು ಗ್ರಾಮೋದ್ಧಾರದ ಬಗ್ಗೆ ಮಾಂಸಾತ್ಮಕವಾಗಿ ಸಲಹೆಗಳನ್ನು ಕೊಡಬೇಕು.

ಅಧ್ಯಕ್ಷ- ಮರಿಬಸವನಗೌಡರು, ಉಪಾಧ್ಯಕ್ಷರು ಕೆ. ಶೇಷಗಿರಿಶೆಟ್ಟಿ, ಇತರ ಸದಸ್ಯರು– ಚಂದ್ರಶೇಖರಪ್ಪ, ಚಂದ್ರಶೇಖರಾಚಾರಿ, ಯೂಸ್ಫ್ ಕಾಸಿಂಸಾಹೇಬು, ಶ್ರೀರಾಮುಲು, ಡಾ|| ಶ್ರೀನಿವಾಸರಾವು, ರಾಮಮೂರ್ತಿ [ಆರ್. ಐ]

ಹಿರಿಯೂರು- ಸದ್ಯದ ರಾಜಕೀಯ ಪರಿಸ್ಥಿತಿಯ ಮೇಲೆ ಬಳ್ಳಾರಿಯ ಶ್ರೀ ಜೆ. ನಾಗಭೂಷಣಂ ಮತ್ತು ಶ್ರೀ ಟಿ. ಬಿ. ಕೇಶವರಾಯರು 22ನೆಯ ಸಾಯಂಕಾಲ ಭಾಷಣ ಕೊಟ್ಟರು.

ಬಳ್ಳಾರಿ ನಗರ ವಾರ್ತೆಗಳು.

ಹರಿಜನ ಸಂಘದವಾರ್ಷಿಕೋತ್ಸವ:— ಕಲೆಕ್ಟರ್ ಫೈಜ್ ಸಾಹೇಬರವರ ಅಧ್ಯಕ್ಷತೆಯಲ್ಲಿ 23 ನೆಯ ತಾ. ಸಾಯಂಕಾಲ ಸಂಘದ ಹಸ್ಪಿಲಕಟ್ಟಡದಲ್ಲಿ ಜಿಲ್ಲಾಹರಿಜನಸೇವಕ ಸಂಘದ 9 ನೆಯ ವಾರ್ಷಿಕೋತ್ಸವವು ನಡೆಯಿತು. ಕ್ಯಾಂತಿಕ ಸಂಘದ ಶ್ರೀ ಪಾಂಡೇಶ್ವರರು ಹರಿಜನೋದ್ಧಾರದ ಮೇಲೆಮಾತಾಡಿದರು. ಕಲೆಕ್ಟರವರು ಹರಿಜನೋದ್ಧಾರದಮೇಲೆ ಬಹಳ ಸಹಾನ ಭೂತಿಯುಂಟಮಾತಾಡಿ ಸಮಾಜ ಸುಧಾರಣೆಯ ಕಾರ್ಯವು ಸಾಪ ಕಾಶವಾಗಿ ಸಾಗಬೇಕೆಂತಲೂ ಇದರಲ್ಲಿ ಅತುರತೆಯು ಒಳ್ಳೆಯದಲ್ಲವೆಂದೂ ವ್ಯಕ್ತಪಡಿಸಿದರು. ರಂಗಾಚಾರ್ಯರು ಎಲ್ಲರಿಗೂ ವಂದಿಸಿದರು.

ನವ್ಯಸಾಹಿತ್ಯಸಮ್ಮೇಲನ:- ಆಂಧ್ರಸಭೆಯ ಅಧಿಪತ್ಯದಲ್ಲಿ ಮ್ಯು. ಹೈಸ್ಕೂಲಿನಲ್ಲಿ ಒಂದು ದಿವಸದವರೆಗೆ ನಡೆಸಿದ್ದ ವಿದ್ವಾಂಸರು ಆಂಧ್ರಸಾಹಿತ್ಯವನ್ನು ವಿವಿಧರಂಗಗಳ ಮೇಲೆ ಚಿನ್ನಾನೋತ್ತೇಜಕ ಉಪನ್ಯಾಸಗಳನ್ನು ಕೊಟ್ಟರು. ಶ್ರೀಮತಿ ಮುನ್ನಾಬಾಯಮ್ಮ ಮೊದಲಾದ ಅನಂತಕೃಷ್ಣನ್ ಮೂರ್ತಿ, ಶಿವಶಂಕರ ಶಾಸ್ತ್ರಿ, ನಾರಾಯಣಾಚಾರ್ಯ, ನಮ್ಮಾಳ್ವಾರು, ಜಡಿನಿಬಾಸಿರಾವು ಇವರೇ ಭಾಷಣಕಾರರು

ಹಿಂದೀಪ್ರಚಾರ:- ಜಿಲ್ಲಾ ಹಿಂದೀ ಪ್ರೇಮಮಂಡಲವು ಆಶ್ರಯದಲ್ಲಿ ಮ್ಯು. ಹೈಸ್ಕೂಲಿನಲ್ಲಿ ಶ್ರೀಮತಿ ದುರ್ಗಾಬಾಯಮ್ಮನವರು 'ಭಾರತಜೀವನದಲ್ಲಿ ಹಿಂದಿಯಸ್ಥಾನ' ದ ಬಗ್ಗೆ 24 ನೆಯ ತಾ. ಸ್ತ್ರೀ ತರ್ಕದಾಯಕ ಉಪನ್ಯಾಸವನ್ನು ಕೊಟ್ಟರು.

ಟಾಗೂರ ಸಾಹಿತ್ಯ:- 23 ನೆಯ ತಾ. ಸಾಯಂಕಾಲ ಶ್ರೀರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಬೆಳಗಾಂಪ್ರೊಫೆಸರ್ ಶ್ರೀ ರೂಬನ್‌ರವರು ಸಾರ್ವಜನಾಭವನದಲ್ಲಿ 'ಟ್ಯಾಗೂರ ಸಾಹಿತ್ಯ' ದ ಮೇಲೆ ಒಳ್ಳೆಯ ಭಾಷಣ ಕೊಟ್ಟರು.

ಒಡೆಸ್ಸಾ ನಗರವು ರುಮೇನಿಯಾ ದೇಶಕ್ಕೆ ಸೇರಿಸಿಕೊಳ್ಳಲಾಯಿತು.

ರಾಯಲಸೀಮ ಬ್ಯಾಂಕು ಲಿಮಿಟೆಡ್.

[ಇಂಡಿಯಾ ಸರ್ಕಾರದ ಕಂಪನಿ ಶಾಸನಗಳನ್ನನುಸರಿಸಿ ಸ್ಥಾಪಿಸಲ್ಪಟ್ಟಿದೆ.]

ಮುಖ್ಯ ಕಾರ್ಯಾಲಯ:- ಬಳ್ಳಾರಿ.

ಪ್ರಥಮ ವರ್ಷದ ಪ್ರಗತಿ

ವಿವಾಜಿಟ್ಟುಗಳು.	31—10—1940	30—9—1941
ಫಿಕ್ಸೆಡ್	ರೂ. Nil	61,930
ಚಾಲ್ತಿ	,, 3,173	35,122
ಸೇವಿಂಗ್ಸ	,, 1,231	16,621
ಇತರ	,, 40	678
ಸಾಲಗಳು.		
ಭಂಗಾರ	,, 520	21,673
ಮೂಲು	,, Nil	28,441
ಇತರ	,, Nil	6,264
ಇತರ ಆಸ್ತಿ		
ಸರ್ಕಾರದ ಬಾಂಡುಗಳು	,, 13,300	22,538
ಬ್ಯಾಂಕುಗಳಲ್ಲಿರುವ ಹಣ	,, 32,502	49,910
ಕೈಯಲ್ಲಿ ನಗದು	,, 5770	25,477
ಒಟ್ಟು ವ್ಯವಹಾರ ಮೊತ್ತ	ರೂ. 1,14,774	1,93,653

ಶಾಖೆಗಳು: [1] ತಿಮ್ಮಸಮುದ್ರ. [ಗುಂತಕಲ್] [2] ಕೊಟ್ಟೂರು. [3] ಉರವಕೊಂಡ

ಬಿ. ವಿ. ಶೇಷಗಿರಿರಾವ್, ಬಿ ಕಾಂ, ಕಾರ್ಯದರ್ಶಿ. | ಹೆಚ್. ಶೇಷಾರಾಮರೆಡ್ಡಿ, ಬಿ. ಎ., ಬಿ. ಎಲ್., [ಎಂ ಎಲ್ ಎ.] ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ಅಮೆರಿಕದ ನೀತಿಯೇನು ?

ಜಪಾನಿನಲ್ಲಿ ಹೊಸ ಮಂತ್ರಿ ಮಂಡಲದ ಸ್ಥಾಪನೆಯಾದ ಕೂಡಲೇ ಸೈಬೀರಿಯದ ಮೇಲೆ ಕವನವನ್ನು ಆರಂಭಿಸಲಾಗುವುದೆಂದು ಅಮೆರಿಕದ ಪತ್ರಿಕೆಗಳೂ ರೇಡಿಯೋಗಳೂ ತಿಳಿಸಿವೆ.

"ರಷ್ಯ ಪತನವು ಖಂಡಿತವೆಂದು ಜಪಾನು ತಿಳಿದು, ಮುಂದಡಿಯಿಡಲು ಕಾತುರವಾಗಿದೆ ಜಪಾನು ಮುಂದೆ ಹೊರಟರೆ ನೀವು ಕೂಡ ಚಲಿಸಬೇಕಾಗುತ್ತದೆ" ಎಂದು ಸೆನೇಟರ್ ಹಿಲ್‌ರವರು ತಿಳಿಸಿದರು.

ಸಂಪೂರ್ಣವಾಗಿ ಆಕ್ಸಿಸ್ ರಾಷ್ಟ್ರಗಳಿಗೆ ಅನುಕೂಲವಾದ ಸರಕಾರವು ಸ್ಥಾಪಿತವಾದರೆ ನೀವು ಅತ್ಯಂತ ಕ್ರೂರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ– ಎಂದು ಪುತ್ತೊಬ್ಬ ಸೆನೇಟರ್‌ರವರು ಹೇಳಿದರು

ಜಪಾನು ಒಂದು ವೇಳೆ ಏಟು ಹಾಕದರೆ, ಅಮೆರಿಕವು ಏನು ಮಾಡುವುದೆಂಬುದು ಸ್ಪಷ್ಟವಾಗಿಲ್ಲ. ಜಪಾನನ್ನು ಸಂತಯಿಸಲು ಹೊರತುವುದಿಲ್ಲವೆಂದೂ ಮತ್ತು ಜಪಾನಿನ ಮೇಲೆ ಮಿಲಿಟರಿ ಕಾರ್ಯಕ್ರಮವನ್ನು ಕೂಡ ಕೈಗೊಳ್ಳುವುದಿಲ್ಲವೆಂದೂ ಹೇಳುತ್ತಿರಲಾಗಿದೆ. ಪಶ್ಚಿಮದಲ್ಲಿ ಹರ್ ಹಿಟ್ಲರನಿಗೆ ವಿರುದ್ಧವಾಗಿ ನಡೆಯುತ್ತಿರುವ ಯುದ್ಧಕ್ಕೆ ಅಗತ್ಯವೆನಿಸುವ ಸಾಧನ ಸಂಪತ್ತುಗಳು ಫೋಲಾಗುವಂತೆ ಅಮೆರಿಕವು ಪೆಸಿಫಿಕ್‌ನಲ್ಲಿ ಮಿಲಿಟರಿ ಕಾರ್ಯಕ್ರಮವನ್ನೂ ಕೈಗೊಳ್ಳಲಾರದು ಎಂಬುದಾಗಿ 'ಸ್ಯೂಯಾರ್ಕ್‌ಟೈಮ್ಸ್' ಪತ್ರಿಕೆಯು ಬರೆದಿದೆ.

ಡಾ. ನಾಗನಗೌಡರ ಬಿಡುಗಡೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಬಳ್ಳಾರಿಜಿಲ್ಲಾ ಬೋರ್ಡುಗಳ ಅಧ್ಯಕ್ಷರಾದ ಶ್ರೀ ನಾಗನಗೌಡರು 18 ನೇ ತಾ. ತಿರುಚಿನಾಪಳ್ಳಿ ಜೈಲಿನಿಂದ ಬಿಡುಗಡೆಯಾಗಿ 19 ನೇ ತಾ. ಸಾಯಂಕಾಲ ಹೊಸಪೇಟೆ ಸೇರಿದರು. ಬಳ್ಳಾರಿ ಹೊಸಪೇಟೆಗಳಲ್ಲಿ ಇವರಿಗೆ ಅದ್ಭುತಸ್ವಾಗತವಾಯಿತು.

ಶ್ರೀ ಎ. ವೀರಾಸ್ವಾಮಿ

ಬಳ್ಳಾರಿಯ ಅಡ್ವೊಕೇಟರಾದ ಶ್ರೀ ವೀರಾಸ್ವಾಮಿಯವರು ಬೆಳಗಾಂ ಜೈಲಿನಲ್ಲಿರುವುದು ಸರಿಯಷ್ಟೆ! ಅವರನ್ನು 'ಕ್ಲಾಸಿ ನಿಂದ ಬಿ ಕ್ಲಾಸಿಗೆ ವರ್ಗಾಯಿಸಿರುವರು.

— ಮದ್ರಾಸಿನಲ್ಲಿ ಶ್ರೀ ರಾಜಗೋಪಾಲಾಚಾರ್ಯರ ವರನ್ನು ಸಹ್ಯಾನಿಸಲು ಕೂಡಿದ ಸಭೆಯಲ್ಲಿ ಹಿಂದೂ ಮುಸಲ್ಮಾನರನ್ನು ಸಮಭಾವನೆಯಿಂದ ಕಾಂಗ್ರೆಸ್ ಮಂತ್ರಿವರ್ಗವು ನೋಡಿತೆಂದು ರಾಜಾಜಿಯವರು ಹೇಳಿದರು. ಮುಸ್ಲಿಂಲೀಗಿನ ಸದಸ್ಯರಾದ ಬಸೀರ ಅಹ್ಮದ್ ಸೈಯ್ಯದ್‌ರವರು ಕಾಂಗ್ರೆಸ್ ಮಂತ್ರಿವರ್ಗವನ್ನು ಸ್ವೀಕರಿಸಿ ಹಿಂದೂ-ಮುಸ್ಲಿಂ ಸಮಸ್ಯೆಯನ್ನು ಬಗೆಹರಿಸಲು ವಿನಂತಿ ಮಾಡಿದರು.

3ನೇ ಪುಟದಿಂದ ಬಂದದ್ದು

ರಂಭೂ ಎಂಬುದೆ ಆ ಭಾಷೆಯಾಗಿದ್ದು ಎನ್ನಲಾಗಿದೆ. ಎಂಬಶಿಕ್ಷಣಸಂಸ್ಥೆಯಿದೆ. ವಿಜ್ಞಾನದ ಪ್ರಗತಿಗೆ ರಷಿಯನ್ನರು ಬಹಳ ಸಹಾಯ ಮಾಡಿದ್ದಾರೆ ಅಲ್ಲಿ ಅವರು ಸ್ಥಾಪಿಸಿದ ಕೃಮಿಶಾಸ್ತ್ರ ಮಂದಿರವು ರಷಿಯದಲ್ಲಿ ಯೇ ಶ್ರೇಷ್ಠವಾದದ್ದು. ಇದಲ್ಲದೆವೈದ್ಯಕೀಯ, ಶಾಸ್ತ್ರೀಯ ಹಾಗೂ ಒಕ್ಕಲತನದ ವಿದ್ಯಾಲಯಗಳವೆ. ಅಲ್ಲಿ ಯಹೂದೀಯರ ತೈಕ್ಷಣಿಕ ಗ್ರಂಥಾಲಯವೂ ದೆಇ.

(ಕರ್ನಾಟಕ)

ರಷ್ಯಾ ಸರ್ಕಾರ ಮಾಸ್ಕೋ ಬಿಟ್ಟಿತು.

ಕುಜೆಬಿಷೆವ ಹೊಸ ರಾಜಧಾನಿ

ಎರಡು ಕಡೆಯೂ ಘೋರ ನಷ್ಟ.

ಮಾಸ್ಕೊ ಕದನದಲ್ಲಿ ಜರ್ಮನಿ ಮತ್ತು ರಷ್ಯಾ ಸೇನೆಗಳೆರಡಕ್ಕೂ ಭಯಂಕರ ನಷ್ಟವಾಗುತ್ತಿದೆ. ಪಶ್ಚಿಮದ ಕಡೆಯಂತೂ ಅತ್ಯಂತ ಕ್ರೂರವಾದ ಕಾದಾಟ ನಡೆಯುತ್ತಿದೆ.

ಕೆಲವು ಕಡೆಗಳಲ್ಲಿ ಜರ್ಮನರು ಮುಂದೆ ನುಗ್ಗಿದ್ದರೂ ಕೂಡ ಮಾಸ್ಕೊ ಮೊಹಿಂಕೋರವರ ಸೇನೆಯು ಅಚ್ಚಳಿಯದೇ ಇದೆಯೊಂದೂ ನಾಜಿಗಳನ್ನು ಎದುರಿಸಿ ರಷ್ಯನರು ಕ್ರೂರವಾಗಿ ಹೊಡೆದಾಡುತ್ತಿದ್ದಾರೆಂಬಂತೂ ತಿಳಿಸಲಕ್ಷಗ್ಗಿದೆ ಜರ್ಮನ್ ಅಪಾರ ಟ್ಯಾಂಕೆಗಳನ್ನೂ, ವಿಮಾನಗ್ಗಳನ್ನೂ ರಣಾಂಗಣಕ್ಕೆ ತರುತ್ತಿದ್ದಾರೆ.

ರಷ್ಯ ಸರ್ಕಾರವು ವಿದೇಶೀಯ ರಾಯಭಾರಿಕೇರಿಗಳೂ ಮತ್ತು ಕಾರ್ಸೊಲೇಟ್ ಕಚೇರಿಗಳೂ ಮಾಸ್ಕೋದಿಂದ ಪರ್ಗಾಯಿಸಲ್ಪಟ್ಟವೆಂದು ವರ್ತಮಾನಬಂದಿದೆ. ಅವು ಎಲ್ಲಿಗೆ ಹೋಗಿವೆಯೆಂಬುದು ಗೊತ್ತಿಲ್ಲ. ಅದರೆ ಮಾಸ್ಕೋ ನಗರಕ್ಕೆ ಪೂರ್ವದಲ್ಲಿ ೫೦೦ ಮೈಲಿದೂರದಲ್ಲಿರುವ ಕುಜೆಬಿಷೆವ ಎಂಬುದನ್ನು ರಷ್ಯದತಾತ್ಕಾಲಿಕ ರಾಜಧಾನಿಯೆನ್ನಾಗಿ ಮಾಡಿಕೊಳ್ಳಲಾಗಿದೆಯೆಂಬುದು ಗೊತ್ತಾಗಿದೆ.

ಸ್ವೀಡನ್ನಿನ ರಾಯಭಾರಿಗಳು ಮಾಸ್ಕೋಬಿಟ್ಟರೆಂಬ ಸುದ್ದಿಯು ಸ್ಟಾಕ್ ಹೋಂನಲ್ಲಿ ದೃಢಪಟ್ಟಿದೆ. ರಷ್ಯ ಸರ್ಕಾರವು ಮಾಸ್ಕೋ ಬಿಟ್ಟಿದ್ದರೂ, ಮಾಸ್ಕೋ ನಗರವು ಪತನವಾಗುವುದು ಖಂಡಿತವೆಂದು ತಿಳಿಯಲಾಗದು.

ರುಮೇನಿಯರು ಒಡೆಸ್ಸಾವನ್ನು ಪ್ರವೇಶಿಸಿದರೆಂದೂ, ಬೀದಿಗಳಲ್ಲಿ ಕದನವಾಗುತ್ತಿದೆಯೆಂದೂ ಜರ್ಮನರೂ ರುಮೇನಿಯನರೂ ಪ್ರಕಟಿಸಿದ್ದಾರೆ ಇದು ನೃಷ್ಟವಿಲ್ಲ.

ಜರ್ಮನಿ ಸರ್ಕಾರದ ಪ್ರಕಟನೆ

ಬರ್ಲಿನ್ ಅ ೧೬

ಮಾಸ್ಕೋದಿಂದ ೧೦೦ ಕಿಲೋಮಿಟರುಗಳಷ್ಟು ದೂರದಲ್ಲಿ ಮಾಸ್ಕೋ ಕೊರ ರಕ್ಷಣೆವ್ಯೂಹದಲ್ಲಿ ಕ್ರೂರ ಹೊಡೆದಾಟವಾಗುತ್ತಿ ಯೆಂದೂ ಕಾಲುಗಾ ಮತ್ತು ಟಾಲಿನಿನ್ ಇವೆರಡು ಮುಖ್ಯ ನಗರಗಳು ಹಲವು ದಿನಗಳಿಂದ ತನ್ನ ಕೈವಶವೆಂದೂ ಜರ್ಮನರು ಪ್ರಕಟಿಸಿದ್ದಾರೆ.

ಡಲಾಡಿಯರ್, ಬ್ಲೂಮ್ ಮತ್ತು ಗೇಮಲಿನ್ ಅವರನ್ನೆಲ್ಲ ಒಂದು ಕೋಟೆಯಲ್ಲಿ ಬಂಧಿಸಲಾಗುತ್ತದೆ.

ವಿಚಿ, ಅ. ೧೬

ಯುದ್ಧವು ಆರಂಭವಾದಾಗ ಫ್ರಾನ್ಸಿನ ಮಹಾಪ್ರಧಾನರಾಗಿದ್ದ ಎಂ. ಡಲಾಡಿಯರ್, ಎಂ. ಲಿಯನ್ ಬ್ಲೂಂ (ಸೋಷಿಯಲಿಸ್ಟ್‌ಮಾಜಿ ಮಹಾಪ್ರಧಾನರು) ಮತ್ತು ಮಾಜಿದಂಡನಾಯಕರಾದ ಜನ್ ಗೇಮಲಿನ್ ಇವರನ್ನು ಒಂದು ಕೋಟೆಯಲ್ಲಿ ಬಂಧಿಸಬೇಕೆಂದು ಮೊರ್ಷಲ್ ಪೆಟೆನ್ನರು ಆಜ್ಞೆ ಮಾಡಿದ್ದಾರೆಸ್ಸೆ ಫ್ರಾನ್ಸಿನ ಪತನವಾದಾಗ ಮಹಾಪ್ರಧಾನರಾಗಿದ್ದ ಎ. ಸಾಲ್‌ರೇನಾಡ್ ಮುಂತಾದವರನ್ನು ಕೂಡ ಬಂಧನದಲ್ಲಿಡಲಾಗಿದೆ.

ಮಾಸ್ಕೋ ಬಿದ್ದರೂ ಯುದ್ಧ ನಿಲ್ಲದು

ರಷ್ಯನರ ಪ್ರತಿಭಟನೆ ಕೊಂಚವೂ ಕುಗ್ಗಿಲ್ಲ

ನಾಜಿಗಳ ಬಲವು ಅಧಿಕವಾಗಿದ್ದರೂ ಕೂಡ ರಷ್ಯನರ ಪ್ರತಿಭಟನೆಯನ್ನಾಗಲಿ, ಅವರ ದೃಢಸಂಕಲ್ಪವನ್ನಾಗಲಿ ಮುರಿಯಲು ಅವರು ಶಕ್ತರಾಗಿಲ್ಲವೆಂದು 'ಇಜ್‌ವೆಸ್ಟಿಯಾ' ಎಂಬ ಪತ್ರಿಕೆಯು ತಿಳಿಸುತ್ತಿದೆ. ರಣರಂಗಕ್ಕೆ ಹೆಚ್ಚಿನ ಸೇನೆಯನ್ನು ಕಳುಹಿಸುತ್ತಿರುವುದರಿಂದ ರಷ್ಯಾದ ಬಲವು ಅಧಿಕವಾಗುತ್ತಿದೆಯೆಂದು ತಿಳಿಸಿದೆ. "ರಷ್ಯದ ಪ್ರಜಾಕೋಟಿಯಲ್ಲ ಅಖಂಡ ಸೇನೆಯಂತೆ ಎದ್ದು ನಿಂತಿದೆ. ಎಲ್ಲರೂ ಯೋಧರೆ. ತಾತ್ಕಾಲಿಕವಾಗಿ ಶತ್ರುಗಳಿಗೆ ನಷ್ಟವಾಗಿದ್ದರೂಕೂಡ, ಕಟ್ಟ ಕಡೆಯಲ್ಲಿ ಜಯವಾಗುವವರೆಗೆ ಹೊಡೆದಾಡಬೇಕೆಂದು ರಷ್ಯನರು ಸಂಕಲ್ಪಮಾಡಿದ್ದಾರೆ" ಎಂಬುದಾಗಿ ಆದು ಬರೆದಿದೆ.

ಮಾಸ್ಕೋ ನಗರದ ನಿವಾಸಿಯನರು ರಕ್ಷಣೆಕಾರ್ಯಗಳಲ್ಲಿ ತೊಡಗಿದ್ದಾರೆ. ನಗರದಿಂದ ಬಹು ದೂರದಲ್ಲಿ ಕಂದಕಗಳನ್ನು ಅಗೆಯುತ್ತಿದ್ದಾರೆ. ಶತ್ರುಗಳು ನುಗ್ಗಿ ಬರಲು ಅವಕಾಶವಾಗದಂತೆ ಮಾಡುತ್ತಿದ್ದಾರೆ

ಲೆನಿನ್‌ಗ್ರಾಡ್ ರೇಡಿಯೋ ಸೂಚನೆ

ಲೆನಿನ್‌ಗ್ರಾಡ ವೀರರು ರೇಡಿಯೋ ಮೂಲಕ ಮಾಸ್ಕೋ ರಕ್ಷಣೆಗಾಗಿ ಸೂಚನೆಕೊಡುತ್ತ 'ನಾವು ಲೆನಿನ್‌ಗ್ರಾಡ್ ವೀರರ ಉದಾಹರಣೆಯನ್ನು ಅನುಸರಿಸಿ ಸಾವಿರಾರು ಮಂದಿ ನಾಜಿಗಳು ಲೆನಿನ್‌ಗ್ರಾಡ್ ಮಾರ್ಗಗಳಲ್ಲಿ ಮಾಸ್ಕೋ, ಒಡೆಸ್ಸಾ, ನ್ಯಾಜಮಾ, ಬ್ರಿಯಾನ್ಸ್ಕ್ ರಂಗಗಳಲ್ಲೂ ರಕ್ತ ಚೆಲ್ಲಿದ್ದಾರೆ. ನಾವು ಬಲವನ್ನು ಗಳಿಸಿ, ಜಯಸಂಪಾದಿಸೋಣ ನಾವು ಮಾಡಬೇಕಾದ ತ್ಯಾಗಕ್ಕೆ ಹೆದರದಿರೋಣ' ಎಂದು ತಿಳಿಸಿದರು.

1ನೇ ಪುಟದಿಂದ ಬಂದದ್ದು

ಯಂತೆ ಜಪಾನರು ಕುಹಕವೃತ್ತಿಗೆ ಕೈಹಾಕಿದ್ದಾರೆ.

ಪೆಸಿಫಿಕ್ ಸಾಗರದ ವಿಚಾರ ಕುರಿತು ಜಪಾನಿಗೂ ಮತ್ತು ಅಮೆರಿಕಕ್ಕೂ ನಡೆಯುತ್ತಿರುವ ಸಂಧಾನದಲ್ಲಿ ಬಿಕ್ಕಟ್ಟುಂಟಾದುದೇ ಜಪಾನಿನ ಮಂತ್ರಿಮಂಡಲದ ಬದಲಾವಣೆಗೆ ಕಾರಣವೆಂದು ತಿಳಿಸಲಾಗಿದೆ.

ಶಾಲೆಗಳನ್ನು ಮುಚ್ಚ ಬೇಡಿರಿ ಒಂದು ವರ್ಷದ ಅವಧಿಯನ್ನು ಕೊಡಿರಿ.

ಹಿರೆಯಾಳಿನಲ್ಲಿ ಸಾರ್ವಜನಿಕಸಭೆ.

22ನೆಯ ತಾರೀಖು ಬುಧವಾರ ಸಾಯಂಕಾಲ ಪ್ರಾಥಮಿಕ ಶಾಲಾ ಭವನದಲ್ಲಿ ಶ್ರೀ ರಂಜಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಹಿಂದೂ ಮುಸಲ್ಮಾನರ ಸಭೆಯು ಸೇರಿದ್ದಿತು. ಪ್ರಾರ್ಥನಾನಂತರ ಬಳ್ಳಾರಿ ಅಡ್ವೊಕೇಟರಾದ ಶ್ರೀ ನಾಗಭೂಷಣಂರವರು ವಿದ್ಯಾಭ್ಯಾಸದ ಲೋಪಗಳನ್ನು ಹೇಳಿದರು. ಶ್ರೀ ಕೇಶವಯ್ಯನವರು ಡೈರೆಕ್ಟರವರ ಆರ್ಡರಿನ ವಿವರಗಳನ್ನು ತಿಳಿಸಿ ಹಿಂದುಳಿದ ಬಳ್ಳಾರಿ ಜಿಲ್ಲೆಯಲ್ಲಿ ನಿಯಮಗಳ ಪಾಲನೆಯು ಸಾಧ್ಯವಿಲ್ಲೆಂದೂ ಸರಕಾರದವರು ಪ್ರಾಥಮಿಕ ವಿದ್ಯಾಭ್ಯಾಸದ ಅಭಿವೃದ್ಧಿಗೆ ಬೇರೆ ಮಾರ್ಗಗಳನ್ನು ಅವಲಂಬಿಸಬೇಕೆಂದೂ ಹೇಳಿದನಂತರ ಈ ಕೆಳಗಿನ ನಿರ್ಣಯಗಳು ತೀರ್ಮಾನಿಸಲ್ಪಟ್ಟವು

1] ಬಳ್ಳಾರಿ ಜಿಲ್ಲೆಯ ಹಿರೇಹಾಳನ ಹಿಂದೂ ಮುಸಲ್ಮಾನರನ್ನೊಳಗೊಂಡ ಈ ಸಾರ್ವ ಜನಿಕ ಸಭೆಯು, ಶಾಲೆಗಳು ಅವರ ನಾಲ್ಕು ನಿಯಮಗಳಲ್ಲಿ ಉತ್ತೀರ್ಣವಾಗದಿದ್ದರೆ ನಿರುಪಯೋಗ ಶಾಲೆಗಳೆಂದು ಮುಚ್ಚಲ್ಪಡಬೇಕೆಂಬ ಜಾರಿಯಾಗಿರುವ ವಿದ್ಯಾಖಾತೆಯ ಡೈರೆಕ್ಟರವರ ಆರ್ಡರನ್ನು ನಿಷೇಧಿಸುತ್ತದೆ.

2] ಶೇಕಡ 25 ಶಾಲಾಯೋಗ್ಯ ವಯಸ್ಸಿನ ಬಾಲಕಿಯರಿರಬೇಕೆಂಬ ಮತ್ತು ಹೋದವರ್ಷ ಸರಾಸರಿ ಹಾಜರಿಯು 20 ಇಟ್ಟು ಈ ವರ್ಷ 30 ಇರಬೇಕೆಂಬ ಎರಡು ನಿಯಮಗಳು ಕಠಿಣವೆಂದೂ ಅದರಲ್ಲಿಯೂ ಹಿಂದುಳಿದ ಬಳ್ಳಾರಿ ಜಿಲ್ಲೆಗೆ ಇದನ್ನು ಅನ್ವಯಿಸಬಾರದೆಂದೂ ಈ ಸಭೆಯು ಸರಕಾರವನ್ನು ಕೋರುತ್ತದೆ.

3] ಬೋರ್ಡು ಮತ್ತು ಪಂಚಾಯ್ತಿ ಶಾಲೆಗಳಿರುವ ಪ್ರದೇಶಗಳಲ್ಲಿ ಗ್ರಾಂಟು ಶಾಲೆಗಳಿಗೆ ರೆಕಗ್ನಿಷನ್ ಕೊಡಬಾರದೆಂದು ಈ ಸಭೆಯು ವಿದ್ಯಾ ಖಾತೆಯ ಡೈರೆಕ್ಟರವರನ್ನು ಬೇಡುತ್ತದೆ.

4] ಮುಸಲ್ಮಾನರು ಅತ್ಯಂತ ಬಡವರಿದ್ದು ವಿದ್ಯಾಭ್ಯಾಸದಲ್ಲಿ ಇತರ ವರ್ಣಗಳಿಗಿಂತ ಬಹಳ ಹಿಂದುಳಿದಿರುವ ಕಾರಣ. ಸರಕಾರದವರು ಸದರಿ ನಿಯಮಗಳನ್ನು ಅವರಿಗೆ ಅನ್ವಯಿಸಬಾರದೆಂದೂ ಅವರ ವಿಷಯಕ್ಕೆ ಹೆಚ್ಚು ಸೌಲಭ್ಯವನ್ನು ತೋರಿಸಬೇಕೆಂದೂ ಈ ಸಭೆಯು ಸರಕಾರವನ್ನು ಪ್ರಾರ್ಥಿಸುತ್ತದೆ.

ಉತ್ತಮ ಕಾಫಿ ಪುಡಿ

ಬೆಲೆ ಸುಲಭ ! ಗುಣಕ್ಕಧಿಕ !

ನಮ್ಮಲ್ಲಿ ಶ್ರೇಷ್ಠವಾದ ಕಾಫಿಬೀಜಗಳಿಂದ ಏನೂ ಮಿಶ್ರವಿಲ್ಲದೆ ತಯಾರಿಸಿದ ಸುವಾಸನೆ ಮತ್ತು ರುಚಿಯುಳ್ಳ ಅತ್ಯುತ್ತಮ ಕಾಫಿಪುಡಿಯು ತಯಾರಾಗುತ್ತದೆ. ಇದನ್ನೇ ಎಲ್ಲರೂ ಉಪಯೋಗಿಸುವರು. ಒಂದು ಸಲದ ಪರೀಕ್ಷೆಯು ಅದರ ಶ್ರೇಷ್ಠಗುಣವನ್ನು ನಿಮಗೆ ತಿಳಿಸುವುದು. ಇಂದೇ ಕೊಂಡು ಉಪಯೋಗಿಸಿರಿ

ನಮ್ಮಲ್ಲಿ ಮದ್ರಾಸು ಸಕ್ಕರೆ ದೊರೆಯುವುದು

The Mysore Coffee Works,

Gold Smith St, BELLARY.

ದಿ ಮೈಸೂರು ಕಾಫಿವರ್ಕ್ಸ್, ಎಂ. ಎಸ್. ರಾವ್, ಅಂಡ್ ಬ್ರದರ್, ಅಕ್ಕಸಾಲೆ ಬೀದಿ, ಬಳ್ಳಾರಿ.

3] ಒಂದು ಪಕ್ಷ ಡೈರೆಕ್ಟರವರು ಪ್ರತಿಯೊಂದು ತಾಲೆಯೂ ನಾಲ್ಕು ನಿಯಮಗಳಲ್ಲಿ ಉತ್ತೀರ್ಣವಾಗಲೇಬೇಕೆಂದು ನಿಶ್ಚಯಿಸಿದರೆ ಹಿಂದುಳಿದ ಬಳ್ಳಾರಿ ಜಿಲ್ಲೆಗೆ ಕನಿಷ್ಟಕ್ಕೆ ಒಂದು ವರ್ಷದ ಅವಧಿಯನ್ನಾದರೂ, ಕೊಡಬೇಕೆಂದೂ ಅಲ್ಲಿಯವರೆಗೂ ಉಪಾಧ್ಯಾಯರನ್ನಾಗಲೀ ಶಾಲೆಗಳನ್ನಾಗಲಿ ತೆಗೆಯಬಾರದೆಂದೂ ಈ ಸಭೆಯು ಸರಕಾರದ ವಿದ್ಯಾಖಾತೆಯವರನ್ನು ಬೇಡುತ್ತದೆ.

ವಿಜ್ಞಾನ ಮತ್ತು ವೈಚಿತ್ರ್ಯ

"ಹಿಟ್ಲರನ ತಲೆನೋವು"

ಅಮೇರಿಕೆಯ ಅದ್ಭುತ ವಿಮಾನ ನೌಕೆ

ಅಮೇರಿಕೆಯು "ಬಿರ್ಡ್" ಎಂಬ ಅದ್ಭುತವಾದ ವಿಮಾನ ನೌಕೆಯನ್ನು ಕಟ್ಟಿದ್ದು ಅದರ ಪ್ರಾಯೋಗಿಕ ಉಡ್ಡಾಣವು ವೊಸ್ಟ್‌ಸಂಟೂ ಮೊನಿಕಾದಲ್ಲಿ ನಡೆಯಿತು. ಇದಕ್ಕೆ 'ಹಿಟ್ಲರನ ತಲೆನೋವು' ಎಂದು ಹೆಸರಿಡಲಾಗಿದೆ.

ಈ ನೌಕೆಯು ೧೧ ಸಾವಿರ ಗ್ಯಾಲನ್ ಎಣ್ಣೆಯನ್ನು ಒಯ್ಯಬಲ್ಲದು. ಮತ್ತು ಅದರ ಬಾಂಬ ಒಜ್ಜೆಯು ೧೮ ಟನ್ ಇರುವದು. ಅದರಲ್ಲಿ ಅದರ ರಕ್ಷಣೆಗಾಗಿ ದೊಡ್ಡ ದೊಡ್ಡ ತೋಪುಗಳು ಇರುವವು. ಮತ್ತು ೨೪ ಸ್ಪೇಶನಗಳೊಡನೆ ಟೆಲಿಫೋನ ಜೋಡಣೆಯಿದೆ.

ಪ್ರಾಯೋಗಿಕ ಉಡ್ಡಾಣದಲ್ಲಿ ೬ ಯುದ್ಧ ವಿಮಾನಗಳು ಅದರ ರಕ್ಷಣೆಗೆ ಹೋಗಿದ್ದವು. ೨ ಲಕ್ಷ ೫೦ ಸಾವಿರ ಪೌಂಡುಗಳಿಗೆ ಇದರ ವೆಚ್ಚ ಇಳಿಸಲಾಗಿದ್ದು ಮೊದಲನೇಮಿನಿಟಿನ ಉಡ್ಡಾಣದ ಫ್ರೀ ಮಿಯಮ್ ೨೦೫೦೦ ಪೌಂಡು ಇತ್ತು. ಮತ್ತು ಮುಂದೆ ಅದು ಒಂದು ತಾಸಿಗೆ ೭೫೦ ಪೌಂಡು ಆಯಿತು

ಸುಟ್ಟ ಗಾಯಗಳಿಗೆ ಉಪ್ಪಿನ ಸ್ನಾನ

ಸುಟ್ಟ ಗಾಯಗಳಿಗೆ ಉಪ್ಪಿನ ನೀರಿನ ಸ್ನಾನವು ಒಳ್ಳೆ ಪರಿಣಾಮಕಾರಿಯಾಗಿ ಕಂಡು ಬಂದಿದೆ. ಲಂಡನ ದಾಳಿಯಲ್ಲಿ ೧೫ ತಿಂಗಳದೊಂದು ಚಿಕ್ಕ ಕೂಸು ಬಾಂಬನ ಆಘಾತಕ್ಕೆ ಸಿಲುಕಿಛಯಂಕರ ಗಾಯಗೊಂಡಿತ್ತು. ಕಾಲು, ಕೈ, ಮೋರೆ, ತಲೆಗಳೆಲ್ಲ ಗಾಯಗಳಾಗಿದ್ದವು. ಅದು ಬದುಕುವ ಆಶೆ ಇರಲಿಲ್ಲ. ಆದರೆ ಅದಕ್ಕೆ ಕೆಲವು ದಿವಸ ಉಪ್ಪಿನ ನೀರಿನ ಸ್ನಾನ ಮಾಡಿಸಿ ಇಲೆಕ್ಟ್ರಿಕ್ ಬಲ್ಬುಗಳಿಂದ ಕಾಯ್ದು ಕೊಡಲಾಗಿ ಗಾಯಗಳೆಲ್ಲ ಮಾಯ್ದು ಅದು ಆರೋಗ್ಯ ಆಲಿದಾಡತೊಡಗಿತು.

(ಕರ್ಮವೀರ)

ಗಾಳಸೆಪ್ — ಜರ್ಮನರು ಈ ಕ್ಷೇತ್ರವನ್ನು ಹಿಡಿಯುವುದಾದರೆ ರಷ್ಯನರೂ ಇಂಗ್ಲೀಷರೂ ಕಲೆತು ಬಾಕೂ ವಗೈರೆ ಪ್ರದೇಶಗಳಲ್ಲಿನ ಎಣ್ಣೆಯ ಕ್ಷೇತ್ರಗಳನ್ನು ಸಂರಕ್ಷಿಸುವರೆಂಬ ಗೊತ್ತಾಗಿದೆ.

ಜಪಾನ ಸೇನೆಯ 33 ಡಿವಿಜನ್ನುಗಳು ಮಂಚೂರಿಯಗಡಿಯಲ್ಲಿ ಇವೆಯೆಂದು ಗೊತ್ತಾಗಿದೆ.

ರಷ್ಯಾಕ್ಕೆ ಅಮೆರಿಕಾವು 3 ಕೋಟಿ ಡಾಲರುಗಳ ಸಾಲವನು ಕೊಟ್ಟಿರುವುದಾಗಿ ಪ್ರಕಟವಾಗಿದೆ

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟೆ.

ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಸಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **A. S.** ಲೇಬಲನ್ನು ಗಮನಿಸಿ. ಕೊಳ್ಳಿರಿ. ನೋಡಿ ಉಪಯೋಗಿಸಿರಿ.

ದೊರೆಯುವ ಸ್ಥಳ:- 1.) ಎಂ. ಪುಟ್ಟೇಂಚಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸಾಯಂದ ಬೆಲೆಗೆ ದೊರೆಯುತ್ತವೆ ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿಸಿ ಒಮ್ಮೆ ಬಂದು ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary.

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ಪೈತ್ಯ ನಗ್ಗೆರೆ ಇನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ರುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು ಆಯುರಭಿನ್ಯದಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ-ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೪-೦

ನ್ಯಾಕಿಸ್ಟ್ಸ್. **ತೋರಣಗಲ್ಲು ಮರಿಪ್ಪ, ಬಳ್ಳಾರಿ.**

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳುಸಮ್ಮುಖದಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ ನಮ್ಮ ಹೆಸರಿರುವ ಹೆಳೆಯ ವಸ್ತುಗಳನ್ನು ಕೊಟ್ಟು ಮಾಡಿಸಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ: ಫೋನ್ಸ್ ಎಂಡ ನಾಚು ಗ ಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆ ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಕನ್ನಡ ಭಗವದ್ಗೀತೆ.

ಶ್ರೀ ಕೃಷ್ಣ ಪರಮಾತ್ಮನ ದಿವ್ಯವಾಣಿಯಿಂದ ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಬೋಧಿಸಲ್ಪಟ್ಟ ಭಗವದ್ಗೀತೆಯ ಗಂಭೀರ ಧ್ವನಿಯನ್ನು ಸರಳವಾದ ಕುಸುಮ ಷಟ್ಪದಿಯ ಪದ್ಯ ಶೈಲಿಯಲ್ಲಿ ಕರ್ನಾಟಕದ ಸುಪ್ರಸಿದ್ಧ ಕವಿಗಳಲ್ಲೊಬ್ಬರಾದ ಶ್ರೀ ಎಂ. ಎಸ್. ಸುಬ್ಬಣ್ಣನವರು ಗ್ರಂಥ ರಚನೆ ಮಾಡಿರುವರು. ಇದಕ್ಕೆ ಅನೇಕ ಪಂಡಿತರ ಪ್ರಶಂಸೆಯು ದೊರೆತಿದೆ. ಕನ್ನಡಿಗರೆಲ್ಲರೂ ಇದನ್ನು ಕೈಕನ್ನಡಿಯಾಗಿ ಮಾಡಿಕೊಳ್ಳಲು ಸುಸಂಧಿ. ಸ್ವಲ್ಪ ಪ್ರತಿಗಳಿವೆ. ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್.

ಬೆಲೆ 0—12—0 ಪೋಸ್ಟು ಖರ್ಚು ಪ್ರತ್ಯೇಕ.

ಕಾಲವ ಸುಬ್ಬಣ್ಣ, ಮರ್ಚೆಂಟು, ಬಳ್ಳಾರಿ.

NAVA BHARAT BELLARY.
With which is incorporated Congress Bulletin
THE LEADING NATIONAL WEEKLY.

ನವ ಭಾರತ ಬಳ್ಳಾರಿ.
ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual
Local 2—0—0
Moffusil 3—0—0

6 Months
Local 1—4—0
Moffusil 1-10—0

ಚಂದಾ ವಿವರ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0

೬ ತಿಂಗಳಿಗೆ
ಬಳ್ಳಾರಿಯವರಿಗೆ 1. 4-0
ಹೊರಗಿನವರಿಗೆ 1-10-0

Nava Bharat, Bellary.

REG. No. 3937.

Sri

Reg. M. No. 3937. ' ವಂದೇ ಮಾತರಂ '

ನವಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೫ ಬಳ್ಳಾರಿ ನವಂಬರ್ ೩ನೇ ಭಾನುವಾರ ೧೯೩೧. ಟಿ. ಪಿ. ಕೇಶವನಾಥ್

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೮೯೭.
ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,
ಆಸ್ತಿಪಾಸ್ತಿಗಳು 5,60,00,000, ರೂ. ಗಳಿಗೆ ಮಿಾರಿದೆ

ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಛೇರಿ:
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚು ಕಛೇರಿ:
ಡಿಸ್ಪ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ,
ಬೆಂಗಳೂರು ಸಿಟಿ.

ವಿಜ್ಞಾನಿಯ ಸೇವೆ

(ಬಿ. ಮಾಧವಾಚಾರ್, ಕುಂದಾಪುರ)

ಇಂದಿನ ಜಗತ್ತಿನ ಚಿತ್ರ ಒಂದನ್ನು ಬರೆಯಬೇಕೆಂದು ನಿರ್ಧರಿಸಿ ಕೈಯ್ಯಲ್ಲಿ ಲೇಖನಿಕೆಯನ್ನು ಹಿಡಿದೊಡನೆ ನಮ್ಮ ಕಣ್ಮುಂದೆ ಬಂದು ನಿಲ್ಲುವ ದೃಶ್ಯವೆಂದರೆ ಇಂದು ಯುದ್ಧಾಸ್ತ್ರರಾಷ್ಟ್ರಗಳಲ್ಲಿ ನಡೆಯುತ್ತಿರುವ ಸಂಹಾರಕಾರ್ಯಗಳ ಪರಂಪರೆ.

ಜಗತ್ತಿನ ವಿಚಿತ್ರ ವ್ಯಾಪಾರಗಳನ್ನೆಲ್ಲ ಕಂಡು ಬೆರಗಾಗಿ ಅವುಗಳಲ್ಲಿ ಹಿನ್ನೆಲೆಯಾಗಿ ಯಾವುದೋ ಅಗೋಚರವಾದ ಮೈನೀಕಾರಣವನ್ನು ಊಹಿಸುವ ಸ್ವಭಾವದ ಅದೃಷ್ಟವಾದಿಯು ಈ ಅನರ್ಥಗಳೆಲ್ಲ "ದೈವ ಸಂಕಲ್ಪ" ವೆಂಬ ಒಂದೇ ಉತ್ತರವನ್ನು ಕೊಟ್ಟಾನು. ಕೊಂಚ ಮುಂದುವರಿದ ವಿದ್ಯಾವಂತನ ಬುದ್ಧಿಗೆ ಈ ಘೋರ ಕೃತ್ಯಗಳೆಲ್ಲ ಮುಂದುವರಿದ ವಿಜ್ಞಾನದ ಪರಿಣಾಮವೆನಿಸುವುದು. ಅದರೆ ವಿಚಾರ ಪ್ರಿಯರಿಗೆ ಈ ಮಾತಿನಲ್ಲಿ ಸಾಂಶವು ಬಹಳ ಕಮ್ಮಿ ಎಂಬ ಅಂಶವು ವ್ಯಕ್ತವಾಗದೆ ಇರದು. ದೋಷ ಗರ್ಭಿತವಾದ ರಾಜಕೀಯ ಸಂಸ್ಥೆಗಳ ಹಿಡಿತಕ್ಕೊಳಗಾಗಿ, ಬಂಡವಲದ ಸೊಕ್ಕಿನಿಂದಲೋ ಅಧೀನ ತರಿಸಿಕೊಳ್ಳಬೇಕೆಂಬ ಅಸುರೀ ಆಕಾಂಕ್ಷೆಗಳಿಂದ ಪ್ರೇರಿತರಾದ ದುರುಳರ ಭೀತಿಗೊಳಗಾಗಿ ವಿಜ್ಞಾನಿಯು ತನ್ನ ಪೂರ್ಣ ಸೇವೆಯನ್ನು ಮಾನವ ಸಮಾಜಕ್ಕೆ ಸಲ್ಲಿಸಲು ಸಮರ್ಥನಿಲ್ಲ. ಇದು ನಾವು ಚೆನ್ನಾಗಿ ನೆನಪಿನಲ್ಲಿಡಬೇಕಾದ ವಿಷಯ.

ಸೂರ್ಯನಿಂದ ಉಪಯೋಗವನ್ನು ಪಡೆಯದವರಾರುಂಟು? ಆದರೆ ಅದಿಷ್ಟು ಮಂದಿ ಅವನ ಕಡೆ ಕಣ್ಣೆತ್ತಿ ನೋಡಿ ವಿಚಾರ ಪರತೆಯನ್ನು ಹೊಂದಿರುವರು? ಅಂಶಯೇ ಮಾನವ ವರ್ಗಕ್ಕೆ ಮಹದುಪಕಾರವನ್ನು ಮಾಡುತ್ತಲಿರುವ ವಿಜ್ಞಾನಿಯ ಕಡೆ ಮನಸ್ಸು ಓಡಿಸುವವರು ಬಹಳ ಕಮ್ಮಿ. ಅದರಲ್ಲೂ ಮತ ಪಕ್ಷಪಾತಿಗಳಾದ ಭಾರತೀಯರಿಗೇಕೋ ಅದು ರುಚಿಸದು. ಅದರೆ ನಾನಾ ವೈಜ್ಞಾನಿಕ ಶೋಧನೆಗಳಿಂದ ಪ್ರಾಪ್ತವಾದ ಜ್ಞಾನದ ಸದುಪಯೋಗ ಹಾಗೂ ದುರುಪಯೋಗದಿಂದ ಮಾನವ ಇತಿಹಾಸವೇ ಬದಲಾಯಿಸುತ್ತಿರುವುದನ್ನು ಕಣ್ಣು ತೆರೆದು ಉಳ್ಳವರು ಗಮನಿಸಿಯೇ ಇದ್ದಾರೆ. ಅಂದ ಬಳಿಕ ವಿಜ್ಞಾನಿಯ ಸರಿಯಷ್ಟು ಎಲ್ಲರಿಗೂ ಆಗಬೇಕಲ್ಲವೇ?

8ನೇ ಪುಟವನ್ನು ನೋಡಿರಿ

54

THE NAVA BHARAT
ನವ ಭಾರತ
ಸಂಪಾದಕ-ಟಿ.ಆರ್.ಕೇಡನಲಾಪ್ಪೆ

ಅಕ್ಟೋಬರ್ 2-11-41

ವಿದ್ಯಾಖಾತೆ ಮುಖ್ಯಾಧಿಕಾರಿ ಶ್ರೀ ಸ್ಥಾಪಂರವರ ಭಾಷಣ

ಈ ಸಂಚಿಕೆಯ ಬೇರೊಂದೆಡೆಯಲ್ಲಿ ನುದ್ರಾಸು ವಿದ್ಯಾಖಾತೆಯ ಮುಖ್ಯಾಧಿಕಾರಿ ಶ್ರೀ ಸ್ಥಾಪಂರವರ ಭಾಷಣವನ್ನು ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಷ್ಟು ಮಾತ್ರ ಪ್ರಕಟಿಸಲಾಗಿದೆ. ತಮ್ಮ ಆಡಳಿತ ಕಾಲವಧಿಯಲ್ಲಿ ಅಂದರೆ ಕಳೆದ 5 ವರ್ಷಗಳ ಕಾಲವಧಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಸ್ಥಾಪಿಸಿರುತ್ತಾರೆ ಅಲ್ಲದೆ ತಮ್ಮ ಉದ್ದೇಶ ಸಾಧನೆಯಲ್ಲಿ ಸಾಕ್ಷರತೆ, ಹೊಸದಾಗಿ ನಮ್ಮನ್ನು ಸೇರಿಸಿಕೊಳ್ಳುವವರ ವಿದ್ಯಾಭ್ಯಾಸದ ಜವಾಬ್ದಾರಿ, ಮುಂದುವರಿಸುವವರ ಶ್ರೇಣಿಗೆ ತರುವುದು, ಮತ್ತು ಸ್ತ್ರೀ ವಿದ್ಯಾಭ್ಯಾಸದ ಅವಶ್ಯಕತೆ ಇವುಗಳಿಗೆ ಸ್ಥಾನಾನ್ಯತೆಯನ್ನು ಕೊಟ್ಟಿರುತ್ತಾರೆ.

ಅವರ ಭಾಷಣದಲ್ಲಿ ಒಡೆದು ಕಾಣುವುದೆಂದರೆ ಕೆಳ ಶ್ರೇಣಿಯ ನೌಕರರಿಗೆ (ಉಪಾಧ್ಯಾಯರಿಗೆ) ಎಷ್ಟೇಕಷ್ಟವಾಗಲಿ ತಮ್ಮ ಉದ್ದೇಶವನ್ನು ತೀಕ್ಷ್ಣವಾಗಿ ಸಾಧಿಸುವುದು. ಸಂಖ್ಯೆಗಳನ್ನು ನೋಡಿ ಆನಂದಿಸುವ ಪಾಶ್ಚಿಮಾತ್ಯ ಮನೋಧರ್ಮಕ್ಕನುಸರಿಸಿ ಈ 5 ವರ್ಷಗಳ ಪ್ರಾಥಮಿಕ ವಿದ್ಯಾಭ್ಯಾಸ ಪ್ರಗತಿಯು ಸ್ಥಾಪಂರವರಿಗೆ ಸಂತೋಷವನ್ನುಂಟುಮಾಡಿದೆ. ಆದರೆ ನಿರೀಕ್ಷಿಸಿದಷ್ಟು ಆಭಿವೃದ್ಧಿಯು ಕಾರ್ಯತಃ ಆಗಿಲ್ಲವೆಂದು ಎಲ್ಲರೂ ಒಪ್ಪಿಕೊಳ್ಳಬೇಕು. ಅಪೂರ್ಣ ಶಾಲೆಗಳು, ಪೂರ್ಣ ಶಾಲೆಗಳಾಗಲೆ, ಹೆಚ್ಚು ಹೆಚ್ಚಾಗಿ ಬಾಲಕಿಯರು, ಗಂಡು ಹುಡುಗರ ಶಾಲೆಗಳಲ್ಲಿ ಸೇರಲಿ ವಿದ್ಯಾಖಾತೆಯವರ ನಿಯಮಗಳೆಲ್ಲಾ ಫಲಿಸಲ್ಪಡಲಿ, ಇವೆಲ್ಲಾ ಅಂಕೆಗಳ ಚಮತ್ಕಾರ, ಶಾಲೆಗಳನ್ನು ಪೂರ್ಣ ಶಾಲೆಮಾಡಬಾರದೆಂಬ ವಿಚಾರಣಾಧಿಕಾರಿಗಳ ಕನಿಕರದ ಪರಿಣಾಮ.

ಎಲ್ಲಿಯವರೆಗೂ ಉಪಾಧ್ಯಾಯರು ನಿಜಾವಸ್ಥೆಯಲ್ಲಿರುತ್ತಾರೋ, ಅಲ್ಲಿಯವರೆಗೂ ಸಂಬಳ ಅಕ್ರಮ ಸಂದಾಯಗಳೇದ ಕೊಳಲಿ ಬಳಲುತ್ತಿರುವರೋ ಅಲ್ಲಿಯ ವರೆವಿಗೂ ಶಾಲೆಗಳ ನಿಜವಾದ ಅಭಿವೃದ್ಧಿಯು ಸ್ಪಷ್ಟವಾಗಿ ಕಾಣುವುದೆನ್ನಲು ಬೇಕು. ಹೊಟ್ಟೆತುಂಬ ಅನ್ನ ಹಾಕಿದರೆ ಇರುವ ಅಲ್ಪ ಹಾಜರಿಯಲ್ಲಾದರೂ ಅಭಿವೃದ್ಧಿಯನ್ನು ತೋರಿಸಲು ಉಪಾಧ್ಯಾಯರಿಗೆ ಶಕ್ತಿಸಾಮರ್ಥ್ಯಗಳು ಇರುತ್ತವೆ. ಇನ್ನೊಂದು ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಪ್ರಾಥಮಿಕ ಶಾಲೆಗಳು ಭಿದ್ರವಿಚ್ಛಿದ್ರ ಆಡಳಿತಗಳಿಗೆ ಒಳಪಟ್ಟು ನಿಯಮಿತ ನಿಬಂಧನೆ ಪಾಠ್ಯಕ್ರಮ ವಿಸ್ತಾರಗಳಿಲ್ಲದೆ ಹೊಲಸಾಗಿವೆ. ಜಿಲ್ಲಾ ಬೋರ್ಡ ಮುನಿಸಿಪಾಲಿಟಿ ಮಿಷನ್ ಸಂಚಾಯಿ ಬೋರ್ಡು ಗ್ರಾಂಟು ಶಾಲೆಗಳಾಗಿ ವಿವಿಧ ಆಡಳಿತಗಳಿಗೆ ಹೊಂದಿಕೊಂಡಿವೆ. ಇವುಗಳ ಸಾಧಕ ಬಾಧಕಗಳನ್ನು ವರ್ಣಿಸಬೇಕೆಂದರೆ ದೊಡ್ಡ ಪುರಾಣವಾದೀತು. ಈ ಆಡಳಿತಗಳನ್ನೆಲ್ಲಾ ತಪ್ಪಿಸಿ ಒಂದೇ ಆದೇಶ ವನ್ನಿಟ್ಟು ಉಪಾಧ್ಯಾಯರಿಗೆ ಸಕ್ರಮ ಮತ್ತು ಸರಿಯಾದ ಮಾನಿಕ ಸಂಬಳಕ್ಕೆ ಡೈರೆಕ್ಟರವರು ಏತಕ್ಕೆ ಏರ್ಪಡಿಸಬಾರದಿತ್ತು ?

ಸರಕಾರದ ಸಹಾಯವಾದರೋ ಸಂಸ್ಥೆ ಸಂಸ್ಥೆಗೂ ಭಿನ್ನವಾಗಿದೆ. ಸ್ಥಾಪಂರವರು ಹೇಳುವಂತೆ ಶೇಕಡ 90 ಭಾಗ ವಿದ್ಯಾಖಾತೆಯ ಖರ್ಚನ್ನೆಲ್ಲಾ ಸರ್ಕಾರವೇ ಭರಿಸಬೇಕಾಗಿದೆ. ಹೀಗಿದ್ದು ಪ್ರಾಥಮಿಕ ಶಾಲೆಗಳನ್ನೆಲ್ಲಾ ಒಂದೇ ಆಡಳಿತದಲ್ಲಿಡಬಾರದೇಕೆ ?

ಇನ್ನು ಸಾರ್ವಜನಿಕ ಸಹಾಯದ ವಿಷಯ. ಡೈರೆಕ್ಟರವರು ಹೇಳುವಂತೆ ತಮ್ಮ ವಿನಂತಿಗೆ ಮಾನ್ಯ ಮೊರೆಯಿದಿದುವಾಗ ಪಾಪ! ಉಪಾಧ್ಯಾಯ ಬಡ ಜಂತುಗಳನ್ನಾರು ಲಕ್ಷಿಸಬೇಕು? ಅನೇಕ ಹಳ್ಳಿಗಳಲ್ಲಿ ಉಪಾಧ್ಯಾಯರನ್ನು ನಿಕೃಷ್ಟ ದೃಷ್ಟಿಯಿಂದ ನರುಗಳಿಗಿಂತಲೂ ಕಡೆಯಾಗಿ ನೋಡುತ್ತಾರೆ. ಸಮಯ ಸಂದರ್ಭಬಂದರೆ ಒಂದೂ ರೂಪಾಯ್ಕಿ ಕೈಗಡವೂ ಹೊರೆಯುವುದಿಲ್ಲ. ಆಗದಿರಲಿ ಉನ್ನತ ಸಿಕ್ಕುವುದಿಲ್ಲ. ಜನ ಬಾಲಕರಿಗೆ ಮಧ್ಯಾನ್ಹದೂಟ - ಪಾಟಿ ಪುಸ್ತಕಗಳಿಗೆ ಸಹಾಯಮಾಡುವುದೂ ಬೆಟ್ಟಗಿರಲಿ ತಮ್ಮ ಜೀವನಕ್ಕೇ ಕೃತಾವಸ್ಥೆ ಇವೆ ಸ್ಥಳಗಳಲ್ಲಿ ಸಾಹೇಬರವರಿಗೆ ನಮ್ಮ ಹಳ್ಳಿ ಜೀವನದ ಅನುಭವವು ಇಲ್ಲೆನ್ನಬೇಕು.

ಈ ಕಾರಣ ಸ್ಥಾಪಂ ಸಾಹೇಬರು ಧೀರ್ಘವಾಗಿ ಆಲೋಚಿಸಿ ನಿಯಮ ನಿಬಂಧನೆಗಳನ್ನು ಆಚರಣೆಗೆ ತರುವುದರಲ್ಲಿ ಹೃದಯತೂನ್ಯತೆಯನ್ನು ತೋರಿಸಬಾರದೆಂದು ಆಶಿಸುತ್ತೇವೆ

ಶಾಲೆಗಳ ಅಭಿವೃದ್ಧಿಗೆ ಒಂದು ವಿಜ್ಞಪ್ತಿ.

ಸಕ್ರಮ ಮತ್ತು ಸರಿಯಾದ ಸಂಬಳ ಬಲಾತ್ಕಾರ ವಿದ್ಯಾಭ್ಯಾಸ, ಉಪಾಧ್ಯಾಯರ ಪರದಿಗಳಿಗೆ ಬಿಲ್ಲೆ, ಉತ್ತಮ ಪಾಠಶಾಲೆಗಳನ್ನಾಗಿ ಮಾಡಿಸುವರಿಗೆ ಇನ್‌ಕ್ರಿಮೆಂಟು ಶಾಲೋಪಕರಣಗಳ ಪೈಜ್ಞಿನ ಪೂರೈಕೆ ಪದೇಪದೇ ವರ್ಗಮಾಡಿ ಕೊಲ್ಲುವುದನ್ನು ತಪ್ಪಿಸುವ ಉಪಾಯ, ಇವುಗಳನ್ನೆಲ್ಲಾ ಅನುಕೂಲಮಾಡಿಕೊಟ್ಟಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ನಾರ್ಥಕತೆಯೂ ನಿರಕ್ಷರತೆಯ ನಾಶವೂ ಶ್ರೀಘ್ರವಾಗಿ ಆಗುವುದರಲ್ಲಿ ಸಂದೇಹವಿಲ್ಲ.

ಬಳ್ಳಾರಿನಗರ

ವೀರಶೈವ ವಿದ್ಯಾವರ್ಧಕಸಂಘದ ಉನ್ನತಶಾಲೆಗೆ ಅಪ್ಪಣೆ

ಮದ್ರಾಸು ವಿದ್ಯಾಪಿ ಜೆಯ ಮುಖ್ಯಾಧಿಕಾರಿಗಳು ಕೆಲಸರ್ತುಗಳನ್ನು ಸೂಚಿಸಿ ಅವಕ್ಕೊಳಪಟ್ಟು ಉನ್ನತ ಪಾಠಶಾಲೆಯ ಸ್ಥಾಪನೆಯನ್ನು 1942-43 ರಲ್ಲಿಸಾಡಲು ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದವರಿಗೆ ಅಪ್ಪಣೆ ಕೊಟ್ಟಿರುತ್ತಾರೆ. ಪೂರ್ಣ ಉನ್ನತಪಾಠಶಾಲೆಗಾಗಿ ರೂ50,000 ಗಳ ಶಾಶ್ವತನಿಧಿಯು ಇರಬೇಕು. ಈಗ 25,000ರೂಪಾಯಿಗಳನ್ನು ರೇವಣಿಮಾಡಿ ಉಳಿದರ್ಧವನ್ನು ಎರಡುವರ್ಷಗಳೊಳಗಾಗಿ ತುಂಬಬೇಕು. ಒಂದು ವರ್ಷದೊಳಗಾಗಿ [1942-43] ಯೋಗ್ಯವಾದ ಶಾಲಾಕಟ್ಟಡವನ್ನು ಪೂರೈಸಬೇಕು. ಸದ್ಯದಲ್ಲಿ 3 ಮತ್ತು 4 ನೆಯ ಫಾರಂಗಳನ್ನು ಪ್ರಾರಂಭಿಸಿ ಇನ್ಸಾಪ್ಟರ್ಯೆರ ಮತ್ತು ಶಾಲೋಪಕರಣಗಳ ವಿಷಯಕ್ಕೆ ವಿಧಿಸಲಾದ ನಿಯಮ ನಿಬಂಧನೆಗಳನ್ನು ಪಾಲಿಸಬೇಕು. ಇಂಗ್ಲಿಷ್ ಹೊರತು ಉಳಿದ ಪಾಠಗಳನ್ನು ಕನ್ನಡದಲ್ಲೇ ನಡಸಬೇಕು. ತರಗತಿಗಳನ್ನು ಪ್ರಾರಂಭಿಸಿದ 6 ತಿಂಗಳುಗಳೊಳಗಾಗಿ ಯಲ್ಲಾ ನಿಯಮಗಳನ್ನೂ ತೃಪ್ತಿಪಡಿಸಿ ಶಾಲೆಯ ಸ್ವೀಕಾರಕ್ಕೆ Recognition ಅರ್ಜಿ ಇತ್ತಬೇಕು.

ಕೊಟ್ಟೂರು:—

ಕರ್ನಾಟಕ ಉಚಿತ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವವು 2-1141 ನೆಯ ಭಾನುವಾರ ಸಾಯಂಕಾಲ ಶ್ರೀ ಡಾಕ್ಟರ್ ನಾಗನಗೌಡರ ಅಧ್ಯಕ್ಷತೆಯಲ್ಲಿ ನೆರವೇರಲಿದೆ ಸರ್ವರೂ ಆಗಮಿಸಲು ಅಧ್ಯಕ್ಷರು ಕೋರಿದ್ದಾರೆ

ಮದ್ರಾಸು ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾದ

ಶ್ರೀ ಸ್ಟಾಥಂರವರ ಭಾಷಣ

ಪ್ರಾಥಮಿಕ ಪಾಠಶಾಲೆಗಳು, ನಿಯಮಪಾಲನೆ ಏಡೆಡ್ ಶಾಲೆಗಳಿಗೆ ಈಗಾಗಲೇ ಹೆಚ್ಚಿಸಿರುವ ಗ್ರಾಂಟು.

ಮದ್ರಾಸು ಪ್ರಾಂತ್ಯದ ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾದ ಶ್ರೀ ಆರ್. ಯಂ. ಸ್ಟಾಥಂರವರು 25-10-41 ನೆಯ ಸನಿ ನಾರ ಸಾಯಂಕಾಲ ಸ್ತ್ರೀಯರಿಗಾಗಿ ಇರುವ ಕ್ರಿಶ್ಚಿಯನ್ ಕಾರೇಜಿನಲ್ಲಿ ಉಪನ್ಯಾಸ ಕೊಡುತ್ತಾ, ಕಳೆದ 5 ವರ್ಷಗಳಲ್ಲಾದ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಗತಿಯನ್ನು ವಿವರಿಸಿ ವಿದ್ಯೆಗೆ ಸಂಬಂಧಿಸಿದ ಕೆಲ ಸಮಸ್ಯೆಗಳ ಸ್ಪಷ್ಟೀಕರಣ ಮಾಡಿದರು. ಅವರ ಭಾಷಣದ ಮುಖ್ಯಾಂಶಗಳನ್ನು ಈ ಕೆಳಗೆ ಕೊಡಲಾಗಿದೆ

"ವಿದ್ಯಾಭ್ಯಾಸದ ವಿಷಯಕ್ಕೆ ಸರಕಾರದವರಿಗೆ ನಾಲ್ಕು ಮುಖ್ಯ ಉದ್ದೇಶಗಳುಂಟು 1] ಈ ಪ್ರಾಂತ್ಯದಲ್ಲಿ ಸಾಕ್ಷರತೆಯನ್ನು ಸಾಧ್ಯವಾದಷ್ಟು ಶೀಘ್ರವಾಗಿ ಹೆಚ್ಚಿಸುವುದು 2] ಸರಕಾರದವರ ನೀತಿಯು ಕಾರ್ಯಾಚರಣೆಗೆ ತರಲ್ಪಡುವ ಕಾರ್ಯ ಅಂದರೆ ಸಾರ್ವಜನಿಕರಿಂದ ತೆರಿಗೆಯ ಮೂಲಕವಾಗಿ ಸಂಗ್ರಹಿಸಿದ ಹಣದ ಭಾಗವು ಶಾಲೆಗಳಿಗೂ ವಿದ್ಯಾಪ್ರಚಾರಯತ್ನಗಳಿಗೂ ಸದ್ವಿನಿಯೋಗವಾಗುವುದು. 3] ಹಿಂದುಳಿದ ಕ್ಷೇತ್ರಗಳಲ್ಲಿ ಹಿಂದುಳಿದವರ ಶಾಲೆಗಳ ಮತ್ತು ವಿದ್ಯಾಭ್ಯಾಸ ಕ್ರಮವನ್ನು ಮುಂದುವರಿದ ಪ್ರಗತಿಪರ ಜನಾಂಗ ಮತ್ತು ಕ್ಷೇತ್ರಗಳ ವಿದ್ಯಾಭ್ಯಾಸ ಮಟ್ಟಕ್ಕೆ ತರುವುದು. 4] ಪ್ರಸ್ತುತ ವಿದ್ಯಾಭ್ಯಾಸ ಕ್ರಮದಲ್ಲಿ ಬಾಲಕನ ನಿತ್ಯಾಭ್ಯಾನಕ್ಕಿಂತಲೂ ಬಾಲಕಿಯ ನಿತ್ಯಾಭ್ಯಾಸವು ಅತಿ ಮುಖ್ಯವೆಂಬ ನಂಬಿಕೆಯನ್ನು ದೃಢಪಡಿಸುವುದು

ಜನತೆಯ ಪ್ರಾಥಮಿಕ ವಿದ್ಯಾಭ್ಯಾಸದ ಕೆಳಶ್ರೇಣಿಯು ಪೂರ್ಣವಾಗಲು 5 ವರ್ಷಗಳು ಬೇಕೆಂದು ನಾವು 1936 ರಲ್ಲೇ ನಿಶ್ಚಯಿಸಿದ್ದರೂ, ಪ್ರಾಂತ್ಯದ 49,100 ಎಲಿಮೆಂಟರಿ ಶಾಲೆಗಳಲ್ಲಿ, 7100 ಶಾಲೆಗಳು ಮಾತ್ರ 5 ತರಗತಿಗಳಕಂದ ಕೂಡಿದಶಾಲೆಗಳಾಗಿದ್ದವು, ಬಲಾತ್ಕಾರ ವಿದ್ಯಾಭ್ಯಾಸಕ್ರಮವು ಜಾರಿಯಲ್ಲಿರುವ ಪ್ರದೇಶಗಳಲ್ಲೂ ಕೂಡ [ಬಾಲಕಿಯರಿಗಾಗಿ] ಸಾಕಷ್ಟಿದಷ್ಟು ಶಾಲೆಯು ಇವರಿಲ್ಲದೆ ಒಂದೆರಡು ತರಗತಿಗಳಲ್ಲೇ ನಡುಗರು ಕೊಳೆಯಬೇಕಾಗಿದ್ದಿತಲ್ಲದೆ ಶಾಲೆಯಲ್ಲಿ ಕಳೆದ 4-5 ವರ್ಷಗಳ ಕಾಲವು ನಿರರ್ಥಕವಾಗುವ ಅಂಶವು ಮುಖ್ಯವಾಗಿದ್ದಿತು ಈ ಕಾರಣ ವಿದ್ಯಾಭ್ಯಾಸಕ್ಕೋಸ್ಕರ ಖರ್ಚಾಗುತ್ತಿರುವ ಹಣವನ್ನು ಕಡಮೆ ಮಾಡದೆ ಅದು ಸದ್ವಿನಿಯೋಗವಾಗುವಂತೆ ಮಾಡಬೇಕಾದರೆ ಮತ್ತು ಪ್ರಾಂತ್ಯದ ಸಾಕ್ಷರತೆಯನ್ನು ಹೆಚ್ಚಿಸಬೇಕಾದರೆ ಪ್ರಾಥಮಿಕ ವಿದ್ಯಾಭ್ಯಾಸವು ಉದ್ದೇಶವನ್ನು ಸಾರ್ಥಕಗೊಳಿಸಬೇಕೆಂದರೆ ಐದು ತರಗತಿಗಳುಳ್ಳ ಪೂರ್ಣ ಪಾಠ ಶಾಲೆಗಳು ಯೋಗ್ಯ ಶಿಕ್ಷಣ ಹೊಂದಿದ ಉಪಾಧ್ಯಾಯರಿಂದ ಕೂಡಿರಬೇಕೆಂಬುದನ್ನು ಮದ್ರಾಸ್ ಸರಕಾರದವರು 1936 ರಲ್ಲಿ ನಿಶ್ಚಯಿಸಿದರು.

ಹಿಂದುಳಿದ ವರ್ಗಗಳ ಪ್ರಗತಿ:-

ಹಿಂದುಳಿದ ವರ್ಗದವರಿಗಾಗಿ ಸಹಾನುಭೂತಿಯನ್ನು ನಾನೆಲ್ಲಾ ವ್ಯಕ್ತಪಡಿಸುತ್ತಿರುವೆನು ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಕಷ್ಟ. ಸಾರ್ವಜನಿಕರಿಂದ ವಸೂಲಾದ ಹಣದಿಂದ ಪ್ರಾರಂಭಿಸಲ್ಪಟ್ಟ ಶಾಲೆಗಳಲ್ಲಿ ಎಲ್ಲಾ ಮತದವರಿಗೂ ಪ್ರವೇಶವಿರಬೇಕೆಂಬ ತತ್ವವನ್ನು 1941 ರಲ್ಲಿಯೇ ಸರಕಾರದವರು ಕ್ರೂರವಾದ ರೀತಿಯಲ್ಲಿ ಜಾರಿಗೆ ತಂದು ಹಾಗೆ ಪ್ರವೇಶವಿಲ್ಲದ ಶಾಲೆಗಳನ್ನೆಲ್ಲಾ ಕೆತ್ತು ಹಾಕಿದರು. ಹಿಂದುಳಿದ ಕ್ಷೇತ್ರಗಳಲ್ಲಿ ತೀರ ಕೆಟ್ಟ ಶಾಲೆ ಕೂಡಲಿಕ್ಕೆ ಸ್ವಲ್ಪವಾದರೂ ಅಯೋಗ್ಯ ಉಪಕರಣ ಅತ್ಯಲ್ಪ ಯೋಗ್ಯತೆಯ ಉಪಾಧ್ಯಾಯ ರಿರ್ವಾದೆಂದು ಸಾಮಾನ್ಯವಾಗಿ ಹೇಳುವುದರಲ್ಲಿ ಅತಿಶಯ ಇಲ್ಲ ಇದನ್ನೆಲ್ಲಾ ಸರಕಾರದವರಿಂತು 1937ರಲ್ಲಿ ನುಂದುವರಿದ ಕ್ಷೇತ್ರಗಳಲ್ಲಿ ಮುಂದುವರಿದ ಜಾತಿಗಳವರಲ್ಲಿ ವಿದ್ಯೆಯ ಪ್ರಗತಿಯು ಹೇಗಿದೆಯೋ ಹಾಗೆಯೇ ಹಿಂದುಳಿದವರೂ ಉನ್ನತಿಗೆ ಬರಬೇಕೆಂದು ತೀರ್ಮಾನಿಸಿ ವಿದ್ಯಾಖಾತೆಯ ಮೂಲಕ ತಕ್ಕ ಕಾರ್ಯಕ್ರಮವನ್ನು ಜಾರಿಯಲ್ಲಿ ತಂದರು.

ಸ್ತ್ರೀವರ್ಗದ ಸಾಕ್ಷರತೆ—

1931ರ ಜನಗಣನೆಯ ಪ್ರಕಾರಕ್ಕೆ ಈ ಪ್ರಾಂತ್ಯದಲ್ಲಿ ಸ್ತ್ರೀಯರಲ್ಲಿ ಅಕ್ಷರಸ್ಥರು ಶೇಕಡ 2-5 ರಂತೆ ಇದ್ದರು. ಈ ಹತ್ತು ವರ್ಷಗಳೊಳಗಾಗಿ ಅಂದರೆ 1941 ನೆಯ ಜನಗಣನೆ ಪ್ರಕಾರಕ್ಕೆ ಶೇಕಡ 6-3 ರಂತೆ ಇದ್ದಾರೆ. ಶೇಕಡ 150 ಹೆಚ್ಚಿದಂತಾಯಿತು. ಇದು ಹಿಂದೊಸ್ಥಾನದಲ್ಲೇ ಮಹತ್ವವಾದ ವಿಷಯ. ಸ್ತ್ರೀ ವಿದ್ಯಾಭ್ಯಾಸವು ಅತಿ ಕಡಮೆ ಇರುವ ಕಾಲದಲ್ಲಿ ಆಶಾದಾಯಕವಾದ ಮತ್ತೊಂದು ಅಂಕವೆಂದರೆ 5 ವರ್ಷಗಳೊಳಗಾಗಿ ಶಾಲೆಗಳಲ್ಲಿ 2,35,000 ಬಾಲಿಕೆಯರು ಹೆಚ್ಚಿರುವರು. ಶಾಲೆಗಳಲ್ಲೆಲ್ಲಾ ಈ ವರ್ಷ 10,80,000 ಬಾಲಿಕೆಯರಿದ್ದಾರೆ. ಮೊದಲಿನ ತರಗತಿಗೆ ಸೇರಿ ಒಂದೆರಡು ವರ್ಷಗಳಲ್ಲಿ ಬಿಡುವ ವಾಡಿಕೆ ಇದ್ದಿತು. 5-6 ವರ್ಷಗಳಲ್ಲಿ ಈ ಭಾಗದಲ್ಲಿ ಸ್ವಲ್ಪ ಅಭಿವೃದ್ಧಿ ಯಾಗಿದೆ. 5 ನೆಯ ತರಗತಿಯವರೆಗೂ ಒಬ್ಬ ಬಾಲಿಕೆಯು ಓದುವುದಾದರೆ ಸಾಕ್ಷರತೆಯನ್ನು ಶಾಶ್ವತವಾಗಿಟ್ಟುಕೊಳ್ಳುವಹುದೆಂದು ನಮ್ಮೆಲ್ಲರ ಅಭಿಪ್ರಾಯ 1935ರಲ್ಲಿ ಪ್ರಾಂತ್ಯದ ಶಾಲೆಗಳ 5 ನೆಯ ತರಗತಿಯಲ್ಲಿ 30 ಸಾವಿರ ಬಾಲಿಕೆಯರು ಮಾತ್ರ ವಿದ್ದರು ಈಗ 83 ಸಾವಿರ ಬಾಲಿಕೆಯರಿದ್ದಾರೆ ಮತ್ತು 4-5 ತರಗತಿಗಳಲ್ಲಿರುವ ಬಾಲಕಿಯರ ಪ್ರಮಾಣವೂ ಪ್ರಾಯಶಃ ಸಂತೋಷವನ್ನು ತೃಪ್ತಿಕರವಾಗಿ ಹೆಚ್ಚಾಗುತ್ತಲಿದೆ.

ಪೂರ್ಣ ಪಾಠಶಾಲೆಗಳು:—

ಎಲ್ಲಾ ಕಡೆಗೂ ಪೂರ್ಣಪಾಠ ಶಾಲೆಗಳಿದ್ದು ಅವುಗಳ ಸಹಾಯಾರ್ಥವಾಗಿ ಸ್ವಲ್ಪ ಮಾತ್ರ ಫೀಡರ್ ಶಾಲೆಗಳಿರಬೇಕೆಂಬುವ ತತ್ವವನ್ನು ನಾವು ಮಾನ್ಯಮಾಡಿದ್ದರಿಂದ ವಿದ್ಯಾಭ್ಯಾಸದಲ್ಲಿ ಇಂಥಾ ಒಳ್ಳೆಯ ಅಭಿವೃದ್ಧಿ ಬರಲು ಕಾರಣವಾಯಿತು. ಕ್ರಮೇಣ ಎಲ್ಲಾ ಪಾಠ ಶಾಲೆಗಳೂ ಪೂರ್ಣ ಶಾಲೆಗಳಾಗಿ ಮಾರ್ಪಡಿಸಬೇಕೆಂಬುದೇ ನಮ್ಮ ಧ್ಯೇಯ.

ಈಗ ಇರುವ 34,888 ಬಾಲಕರ ಶಾಲೆಗಳಲ್ಲಿ ಐದು ತರಗತಿಗಳ ಪೂರ್ಣ ಶಾಲೆಗಳು 31,741 ಇವೆ. 1343 ಫೀಡರ್ ಶಾಲೆಗಳಿವೆ. 1804 ಶಾಲೆಗಳು ಮಾತ್ರ ಪೂರ್ಣವಾಗಬೇಕಾಗಿವೆ. 4324 ಬಾಲಿಕೆಯರ ಶಾಲೆಗಳಲ್ಲಿ 3749 ಐದು ತರಗತಿಗಳ ಪೂರ್ಣಶಾಲೆಗಳು 32 ಫೀಡರ್ ಶಾಲೆಗಳು 543 ಪೂರ್ಣವಾಗಬೇಕಾಗಿವೆ. ಅಂದರೆ ಒಟ್ಟಿನಲ್ಲಿ 39212 ಶಾಲೆಗಳಲ್ಲಿ 36865 ಶಾಲೆಗಳು ಸರಕಾರದ ನೀತಿಯನ್ನು ತೃಪ್ತಿಪಡಿಸಿವೆ ಪೂರ್ಣ ಪಾಠ ಶಾಲೆಗಳನ್ನಾಗಿ ಮಾರ್ಪಡಿಸುವ ಕಾರ್ಯವು 1937 ರಿಂದಲೇ ಪ್ರಾರಂಭವಾಗಿ ಇಷ್ಟು

10ನೇ ಪುಟವನ್ನು ನೋಡಿರಿ

ಮಾ॥ ಗಾಂಧಿಯವರ ಹೇಳಿಕೆ.

ಯುದ್ಧ ಮುಗಿಯುವವರೆಗೆ ಸಾಮೂಹಿಕ ಸತ್ಯಾಗ್ರಹವಿಲ್ಲ.

ಸತ್ಯಾಗ್ರಹಿಗಳ ಆದರ್ಶಕ್ಕಾಗಿ ಹೇಳಿಕೆಗಳನ್ನು ಕೊಡಲು ನನಗೆ ಇಷ್ಟವಿಲ್ಲ ಸ್ಥಾನಿಕ ಮುಖಂಡರಿಲ್ಲದ ಕಡೆ ಸ್ವಯಂ ಕರ್ತರಾಗಿರಬೇಕೆಂಬುದು ನನ್ನ ಉದ್ದೇಶ. ಅಂಧಾ ಹೇಳಿಕೆಯನ್ನು ಕೊಡುವ ಸಮಯವು ಈಗ ಬಂದಿದೆ ಬಂಧ ಮುಕ್ತರಾದ ಪ್ರಮುಖರನೇಕರು ನನ್ನಲ್ಲಿಗೆ ಒಂದು ಮಾತಾಡಿದ ಮೇಲೆ ದೇಶದಲ್ಲಾ ಊಹೆಗಳಿಗೆ ಕಾರಣವಾಗಿದೆ. ಬೋಬಾಯಿ ನಿರ್ಣಯದ ವಿಷಯಕ್ಕೆ ಕೆಲವರಿಗೆ ಅನುಮಾನ ಕೆಲವರಿಗೆ ಪೂರ್ಣ ವಿಶ್ವಾಸವುಂಟು. ನನಗೆ ಅಂಧಾ ವಿಶ್ವಾಸವಿದ್ದ ಕಾರಣವೇ ದೇಶವನ್ನೆಲ್ಲಾ ಸತ್ಯಾಗ್ರಹ ಸಂಗ್ರಾಮದಲ್ಲಿ ಕೆಡವಿದೆನು. ನನ್ನ ಕಾರ್ಯ ಸಾಫಲ್ಯವನ್ನು ಕುರಿತು ನನಗೇನೂ ಅನುಮಾನಗಳಿಲ್ಲ

ಉತ್ಪನ್ನ ದೊಸ್ಯವಾದ ಮಾತಾವರಣ, ಸ್ವಲ್ಪ ಒಸರು ಮಾತ್ರವೇ ಸತ್ಯಾಗ್ರಹದಲ್ಲಿ ಭಾಗವಹಿಸಿತ್ತಿರುವುದು ಜೈಲಿನಿಂದ ಒಂದು ಸಲ ಹೊರಬಿದ್ದವರು ಪುನಃ ಒಂದು ಸಲ ಸತ್ಯಾಗ್ರಹಾಜರಿಸದಿರುವುದು, ಅನೇಕ ಸತ್ಯಾಗ್ರಹಿಗಳಲ್ಲಿ ಸತ್ಯ ಅಹಿಂಸೆ ಭಾವನೆಗಳ ಅಭಾವವಿರುವುದು, ಶಿಕ್ಷರಗತಿಯ ಸತ್ಯಾಗ್ರಹಿಗಳಿಗೆ ಉಪಕ್ಯ ಆಹಾರವನ್ನು ಕೊಟ್ಟು ತನ್ಮೂಲಕ ಅವರ ಆರೋಗ್ಯವು ಹಾಳಾಗಿ ಮತ್ತೊಂದು ಸಲ ಸತ್ಯಾಗ್ರಹವಾಚರಿಸಲು ಅಯೋಗ್ಯರನ್ನಾಗಿಮಾಡುವ ವಿಧಾನ, ಇಳಿದಾಸರಿಗೆ ಸತ್ಯಾಗ್ರಹದ ಮುಖಿಲಕ ಹೆಚ್ಚಿನ ತೊಂದರೆಯನ್ನು ಕೊಡುವುದು, ಮೀಟಿಂಗ್, ಮತ್ತು ಇತರ ಪ್ರದರ್ಶನಗಳಲ್ಲದೆ ನೀತಿ ಮತ್ತು ಕಾರ್ಯಕ್ರಮದಲ್ಲಿ ಪರಿವರ್ತನೆಯಾಗದೆ ಕಾಂಗ್ರೆಸ್ ಸಂಸ್ಥೆಯು ಚೇತನಾಶೂನ್ಯವಾಗಿರುವುದು ಅಲ್ಲದೆ ಶಾಸನ ಸಭೆಗಳ ಚಟುವಟಿಕೆಯನ್ನು ಪುನರುತ್ಪಾದನೆಮಾಡಿ ಅಧಿಕಾರ ಸ್ವೀಕರಿಸುವುದು. ಈ ವಿಷಯಗಳಿಗಾಗಿ ನನ್ನೆದೆಗೆ ತಕರಾರುಗಳು ಬಂದಿವೆ.

ಅಹಿಂಸಾ ಚಳುವಳಿಯಲ್ಲಿ ಆರಂಭಶೂರತ್ವದಿಂದ ಕೂಡಿದ ಉತ್ಸಾಹಕ್ಕೆ ಸ್ಥಾನವಿಲ್ಲ. ತೊಂದರೆಯು ಪ್ರದರ್ಶನಗಳಂತೆ ಪ್ರಾರಂಭ ಕಾಲಕ್ಕೆ ಸಹಾಯಕಾರಿಯಾಗಬಹುದು. ಅಹಿಂಸಾ ಸಂಗ್ರಾಮದಲ್ಲಿ ಪ್ರಾರಂಭದಿಂದ ಕೊನೆಯವರೆಗೂ ನಿಲ್ಲಿಸಿ ಇಲ್ಲಿಸಿ ಚಟುವಟಿಕೆಗಳಾಗಲಿ ಪ್ರದರ್ಶನಗಳಾಗಲಿ ಹಿಂಸಾಕಾರ್ಯವಲ್ಲಿ ಪರಿಣಮಿಸಿ ಅಹಿಂಸಾ ಸಂಗ್ರಾಮಕ್ಕೆ ಆತಂಕಗಳನ್ನು ಕಲ್ಪಿಸುತ್ತವೆ. ನಮ್ಮ ಯೋಜನೆಯ ಪ್ರಕಾರ ಸ್ವಲ್ಪ ಜನರು ಮಾತ್ರ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿರುವುದು ಸ್ವಾಭಾವಿಕವಾಗಿದೆ. ನಾವು ಆರಿಸಿದವರು ಸ್ವಲ್ಪ ಮಾತ್ರ ಪ್ರತಿನಿಧಿಗಳಿರುವ ಕಾರಣ ಪಟ್ಟಿಯು. ಒಂದೆಲ್ಲೊಂದು ದಿನ ಮುಗಿಯಬೇಕು ಆರಿಸುವ ಪದ್ಧತಿಯನ್ನು ಬಿಟ್ಟು ಯಾರು ಬೇಕಾದರೂ ಅರ್ಜಿ ಇಡಬಹುದೆಂದು ನಾನು ಹೇಳಿದರೆ-ಲೆಕ್ಕವಿಲ್ಲದಷ್ಟು ಅರ್ಜಿಗಳು ಬರುವಷ್ಟೆಂದು ನನಗೆ ಗೊತ್ತು. ಅಂಥಾ ಅರ್ಜಿಗಳ ಮಾತ್ರಾ ಪಾತ್ರತೆಯನ್ನು ವಿಮರ್ಶಿಸುವ ಯಂತ್ರವು ನನ್ನಲ್ಲಿಲ್ಲ ಅದು ಸಾಮೂಹಿಕವಾಗಿ ಒಬ್ಬ ವ್ಯಕ್ತಿಯ ಪರೀಕ್ಷೆ ಮತ್ತು ಆರಿಕೆಯ ಶಕ್ತಿಗೆ ಅಸಾಧ್ಯವಾಗುವುದು. ಅಂಧಾ ಸಾಮೂಹಿಕ ಕಾರ್ಯಕ್ಕೆ ಈಗ ಸಮಯವಿಲ್ಲ. ಜಾತಿ ಜಾತಿಗಳಲ್ಲಿ **ಐಕ್ಯವಿತ್ಯವಿಲ್ಲದೆ ಸಾಮೂಹಿಕ ಚಳುವಳಿಯನ್ನು ನಡೆಸಿದರೆ ದೇಶದಲ್ಲಿ ಆಂತರ್ಕಲಹ ಪ್ರಬಲಿಸುವುದು. ಆದರಿಂದ ಸ್ವಾತಂತ್ರ್ಯವು ಪ್ರಾಪ್ತವಾಗಲಾರದು.** ಅಲ್ಲಿ ಪೂರ್ಣ ಅಹಿಂಸಾ ತತ್ವಕ್ಕೆ ಅದು ವಿರುದ್ಧವಾಗಿದೆ. ಅಂತಃಕಲಹವನ್ನು ನಾವು ಎದುರಿಸಲೇ ಬೇಕಾದ್ದಾದರೆ ಬರಲಿ ಆದರೆ ಅದು ಕಾಂಗ್ರೆಸ್ ಮೂಲಕ ನನಗೆ ಗೊತ್ತಿದ್ದವರಿಗೆ ಬರಲಾರದು.

ಒಂದು ಸಲ ಹೊರಬಿದ್ದವರು ಪುನಃ ಒಳಹೋಗಲು ಹಿಂಜರಿಯುತ್ತಿರುವರು. ಇದು ಹಿಂದೂಸ್ಥಾನಕ್ಕೆ ವಿಚಿತ್ರ ಅನುಭವದ ಮಾತಾಗಿದೆ. ನಾನು ದಕ್ಷಿಣ ಆಫ್ರಿಕದಲ್ಲಿ ಹೀಗೆ ಮಾಡಿದ್ದೆ. ಅಲ್ಲಿನ ತ್ಯಾಗವೇ ಈಗಿನ ಪರಿಸ್ಥಿತಿಯಲ್ಲಿಇಲ್ಲಿಯೂ ಬೇಕು. ವ್ಯಕ್ತಿಯ ತ್ಯಾಗಕ್ಕೆ ಒಂದು ಪದ್ಧಿಲ್ಲ ಹಿಂದಿನ ಸಂಗ್ರಾಮಗಳಲ್ಲಿ ಒಬ್ಬರನ್ನೇ ಅನೇಕ ಸಲ ಕಳುಹಿಸಬೇಕಾದ ಪ್ರಸಂಗ ಬಂದಿದ್ದಿಲ್ಲ. ಈಗ ಅದು ಅನಿವಾರ್ಯವಾಗಿದೆ ಇನ್ನಾವ ಮಾರ್ಗವನ್ನನುಸರಿಸಲು ನಾಧ್ಯವಿಲ್ಲ. ಒಬ್ಬರ ಬದಲು ಮತ್ತೊರ್ವರನ್ನು ಕಳುಹಿಸುವ ಸೂಚನೆಯೊಂದಿದೆ ಆದರೆ ಇದು ಸ್ವಯಂತ್ಯಾಗದ ಮಾತಲ್ಲ **ಪೂರ್ಣ ತ್ಯಾಗವಿಲ್ಲದೆ ನಾವು ಪೂರ್ಣಸ್ವಾತಂತ್ರ್ಯವನ್ನು ಹೇಗೆ ಪಡೆಯುವೆವು?** ನಮ್ಮ ಘನೋದ್ದೇಶಕ್ಕೆ ಘನವಾದ ತ್ಯಾಗವು ಬೇಕು. ಬಂದ ದೈಲ್ಲ ಒರಲಿ ಮೇಲಿಂದ ಮೇಲೆ ಜೈಸಿಯಾಗುವವರೇ ಈ ಸಂಗ್ರಾಮದ ಲೆಕ್ಕದಲ್ಲಿ ಸೇರುವರು. ಅವರು ಸ್ವಲ್ಪ ಜನರಿದ್ದರೂ ಪರವಾ ಇಲ್ಲ. ಕಾಯಿಲೆ ಇರುವರು ವಾಸಿಯಾಗುವವರೆಗೆ ಹೋಗುವುದನಾನಶಕ. ಒಂದು ವಾರದೊಳಗಾಗಿ ಒಳಹೋಗಬೇಕೆನ್ನುವ ಅರ್ಧವನ್ನು ಕೆಲವರು ನನ್ನ ಹೇಳಿಕೆಯಿಂದ ನೂಡುವರು. ಪ್ರತಿಯೊಂದು ಉಪಾಕರಣವೂ ಅವರ ಗುಣಗಳಿಂದ ಪರೀಕ್ಷಿಸಲ್ಪಡಬೇಕು. ಬಿಡುಗಡೆಯಾದ 72 ಘಂಟೆಯೊಳಗಾಗಿ ಎರಡು ಸಲವೂ ವಿನೋಬ ರವರು ಒಳಹೊಕ್ಕರು. ಇವರು ಬಿಡುಗಡೆಯಾವನೆಂತಂ ನನ್ನ ಬಳಿಬರಬೇಕಾಗಿದ್ದಿತು. ಈ ಕಾರಣ ಇಷ್ಟಾದರೂ ತಡವಾಯಿತು ಪ್ಯಾರೇಲಾಲರಿಗೆ 3 ನೇ ಸಲ ಒಳಹೋಗಲು ಒಂದು ತಿಂಗಳು ಬೇಕಾಯಿತು. ಕಾರಣಗಳನ್ನೆಲ್ಲಾ ಇಲ್ಲಿ ವಿವರಿಸುವದನಾವಶ್ಯಕ. ಅನಾನುಕೂಲ ಪರಿಸರಗಳಿಂದೊದಗಿದ ಕಾರಣಗಳಿಗಾಗಿ ತಡವಾದರೆ ಉಪಾಯವಿಲ್ಲ. ಆದರೆ ಮೋಸ ಡಂಭಾಚಾರವು ಹೋಗಬೇಕು. ಸತ್ಯಾಗ್ರಹ ಚಳುವಳಿಯಲ್ಲಿ ಸತ್ಯದ ಆಚರಣೆಯೊಂದು ಅಕ್ಷರಶಃ ಇದರಿಂದ ಉಳಿದ ಲೋಪಗಳನ್ನು ಕ್ಷಮಿಸಬಹುದು. ಸತ್ಯಾಗ್ರಹದ ಆಚರಣೆಯು ಕೆಲ ಮುಖ್ಯ ಕಾರಣಗಳಿಂದ ಆಗದಿದ್ದರೆ, ಆಜ್ಞಾಪಕರು ನನ್ನ ಸೂಚನೆಗಳನ್ನು ಹೈತ್ಪರ್ಷಕವಾಗಿ ಪಾಲಿಸಿ ವಿಧಾಯಕ ಕಾರ್ಯಕ್ರಮದಲ್ಲಿ ತೊಡಗಬೇಕು. ಸತ್ಯಾಗ್ರಹಸಂಗ್ರಾಮದಲ್ಲಿ ವಿ

9ನೇ ಪುಟವನ್ನು ನೋಡಿರಿ

ರಷ್ಯದ ರಾಜಧಾನಿ ಮಾಸ್ಕೋ

ಕ್ರೆಮಲಿನ್ ಅರಮನೆ.

ಲಂಡನ್ನಿಗೂ ನೆಪೋಲಿಯನ್ನಿಗೂ ಇರುವ ವ್ಯತ್ಯಾಸವಿಷ್ಟೆ. ನೆಪೋಲಿಯನ್ನನು ಮಾಸ್ಕೋ ನಗರವನ್ನು ಮುಟ್ಟಿದನು. ಆದರೆ ಹಿಟ್ಲರನು ಕ್ರೆಮಲಿನ್ನಿನ ಚಿತ್ರಗಳನ್ನು ನೋಡಿ ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಹೀಗೆಂಬುದಾಗಿ, ರಷ್ಯದ ವಿದೇಶಾಂಗ ಶಾಖೆಯ ಉಸಪಚಿವರಾದ ಶ್ರೀ ಲೋಜೋ ವಸ್ಕಿಯವರು ಕೆಲವು ದಿವಸಗಳ ಕೆಳಗೆ ಹೇಳಿಕೆ ಇತ್ತಿದ್ದರು

ಮಾಸ್ಕೋನಗರವನ್ನು ಗೆದ್ದು ಕ್ರೆಮಲಿನ್ನಲ್ಲಿ, ಕುಳಿತು, ರಷ್ಯದ ನಾಯಕರನ್ನು ಬರಮಾಡಿಕೊಳ್ಳಬೇಕೆಂಬುದು ಹಿಟ್ಲರನ ಇಷ್ಟ. ಸೋತುಹೋದ ಫ್ರಾನ್ಸಿನ ನಾಯಕರನ್ನು ಆತನು ಬರಮಾಡಿಕೊಂಡುದು ಫೋಚ್‌ರವರ ಸುಪ್ರಸಿದ್ಧ ರೈಲ್ವೆಗಾಡಿಯಲ್ಲಿ. ಆದರೆ ರಷ್ಯದ ವಿಚಾರದಲ್ಲಿ ಹಿಟ್ಲರನ ಈ ಉದ್ದಿಶ್ಯವು ನೆರವೇರುವಹಾಗಿಲ್ಲ. ಕ್ರೆಮಲಿನ್ ನಾಶಮಾಡುವುದಕ್ಕೆ ಹಿಟ್ಲರನ ತನ್ನ ಬಾಂಬರುಗಳನ್ನು ಕಳುಹಿಸಿಕೊಡಬಹುದು

ಕ್ರೆಮಲಿನ್ ಎಂಬುದು ಒಂದೇ ಒಂದು ಭವನವಲ್ಲ ಹಲವು ಅರಮನೆಗಳನ್ನೂ ದಿವ್ಯ ಭವನಗಳನ್ನೂ ಉಳ್ಳ ಮಾಸ್ಕೋ ನಗರದ ಮಧ್ಯದಲ್ಲಿರುವ ಒಂದು ಚಿಕ್ಕ ನಗರ. ಇದಕ್ಕೆ 5 ದ್ವಾರಗಳಿವೆ, ಈ 5 ದ್ವಾರಗಳ ಮುಖಾಂತರವೇ ಇದರೊಳಗೆ ಪ್ರವೇಶ ಮಾಡಬೇಕು. ಆ ರೀತಿ ಪ್ರವೇಶ ಮಾಡಬೇಕಾದರೂ ಅದನ್ನು ರಕ್ಷಿಸುತ್ತಿರುವ ಕಮ್ಯಾಂಡೆಂಟ್‌ರವರ ಅನುಮತಿ ಪಡೆಯಬೇಕು. 40 ಎಕರೆಗಳ ವಿಸ್ತೀರ್ಣದಲ್ಲಿರುವ ಆ ಪ್ರದೇಶಕ್ಕೆ 'ಕ್ರೆಮಲಿನ್' ಎಂಬುದಾಗಿ ಹೆಸರನ್ನಿಡಲಾಗಿದೆ. ತ್ರಿಕೋಣದಾಕಾರದಲ್ಲಿ ಅದು ಇರುವುದು. ಈ ಎಕರೆಗಳ ಪ್ರದೇಶವು ಸುತ್ತಲು 8½ ಅಡಿಗಳ ಎತ್ತರವಿರುವ ಗೋಡೆ ಇವೆ. ಬಹಳ ಪ್ರಾಮುಖ್ಯವೆನಿಸಿದ 50 ಮನೆಗಳು ಈ ಪ್ರದೇಶದಲ್ಲಿವೆ. ಇಂದು ಆ ಪ್ರದೇಶವು ರಷ್ಯದ ನಾಯಕರ ವಾಸ ಕ್ಷೇತ್ರವಾಗಿದೆ. ಈ ಕ್ಷೇತ್ರವನಲ್ಲಿ ರಷ್ಯದ ನಾಯಕರೂ ಕಮೂನಿಸ್ಟ್ ಪ್ರಮುಖರ ಸಭೆ ಸೇರಿ ಮಾತು ಕತೆಗಳನ್ನು ನಡೆಸುವರು.

ಬಹಳ ಪುರಾತನ ಕಟ್ಟಡಗಳನ್ನೊಳಗೊಂಡ ಈ ಪ್ರದೇಶವು ಚಳವಳಿಯಿಂದ ಕೂಡಿರುವ ಕ್ಷೇತ್ರವಾಗಿದೆ. 1914ನೇ ವರ್ಷದಲ್ಲಿ ನಡೆದ ಘೋರ ಸಂಗ್ರಾಮಕ್ಕಿಂತ ಹಿಂದೆ ಈ ಭವನಗಳು ಬೇರೆ ಸ್ಥಿತಿಯಲ್ಲಿ ಉಪಯೋಗಿಸಲ್ಪಡುತ್ತಿದ್ದವು. ಈಗಲೂ ಅದೇ ಭವನಗಳು ಇದ್ದರೂ ಅವುಗಳ ಉಪಯೋಗವು ಬೇರೆ ಬಗೆಯಾಗಿರುವುದು. ಕ್ರೆಮಲಿನ್‌ನಲ್ಲಿರುವ ಒಂದು ಭವನದಲ್ಲಿ 3 ಕೊಠಡಿಗಳನ್ನು ತೆಗೆದುಕೊಂಡು ಸ್ಟಾಲಿನ್‌ರವರು ನಾವಸಮಾಡುತ್ತಿದ್ದಾರೆ. ಅವರಿಗೆ ಮಾಸ್ಕೋನಗರದಿಂದ ಒಂದು ಘಂಟೆ ಪ್ರಯಾಣದ ದೂರದಲ್ಲಿರುವ ಹಳ್ಳಿಗಾಡು ಕ್ಷೇತ್ರದಲ್ಲಿ ಸಹ ಒಂದು ಮನೆ ಇರುವುದು.

ಕ್ರೆಮಲಿನ್ ಸುತ್ತುವರಿಯಲ್ಪಟ್ಟಿರುವ ಗೋಡೆಯು ಹಲವು ಯುದ್ಧಗಳನ್ನು ನೋಡಿದೆ. ಮಾಸ್ಕೋ ಪಟ್ಟಣಕ್ಕೆ ಬಂದು ರಣಭೀರಿ ಬಾರಿಸಿದ ಅನೇಕ ಶತ್ರುಗಳನ್ನು ನೋಡಿದೆ ಅವರ ಉಪಟಳವನ್ನು ತಡೆದುಕೊಂಡು ಇನ್ನೂ ಜೀವಿಸಿದೆ

1917ರಲ್ಲಿ ರಷ್ಯದಲ್ಲಿ ಕ್ರಾಂತಿಯಾಯಿತಷ್ಟೆ. ಆಗ ಕ್ರೆಮಲಿನ್‌ನಲ್ಲಿದ್ದ ಶಸ್ತ್ರಾಗಾರವೇ ಬಹಳ ಬಲಯುತವಾದ ಸ್ಥಾನವೆನಿಸಿತ್ತು. ಕಮ್ಯೂನಿಸ್ಟ್ ಯೋಧರು ದೀರ್ಘಕಾಲ ಯುದ್ಧನಡೆಸಿ, ಇದನ್ನು ವಶಪಡಿಸಿಕೊಳ್ಳಬೇಕಾಯಿತು. ಆಗ ಈ ಭವನಗಳಿಗೆ ಆದ ನಷ್ಟವನ್ನು ಪರಿಪಡಿಸಲು ದೀರ್ಘಕಾಲ ಬೇಕಾಯಿತು. ನಷ್ಟವಾದ ಭಾಗಗಳನ್ನೆಲ್ಲಾ ಪರಿಪಡಿಸಲಾಗಿದೆಯಲ್ಲದೆ ಹೊಸ ಹೊಸ ಭವನಗಳನ್ನು ಕೂಡ ಆ ಕ್ಷೇತ್ರದಲ್ಲಿ ನಿರ್ಮಿಸಲಾಗಿದೆ. ಅಲ್ಲದೆ ಅಲ್ಲಿದ್ದ ಚರ್ಚುಗಳನ್ನು ಸಹ ಕಾಪಾಡಿಕೊಂಡು ಬರಲಾಗಿದೆ.

ರೆಡ್ ಸ್ಕ್ವೇಯರ್

ಕ್ರೆಮಲಿನ್ನಿನ ಒಂದು ದ್ವಾರದಿಂದ ಮಾಸ್ಕೋನಗರದ ಸುಪ್ರಸಿದ್ಧ "ರೆಡ್‌ಸ್ಕ್ವೇಯರ್" ಎಂಬುವಕ್ಕೆ ಹೋಗಬಹುದು. ಇಲ್ಲಿ ನಡೆಯುವ ಸೈನಿಕರ ಪೆರೇಡ್‌ಗಳನ್ನು ನೋಡುತ್ತ ನಿಂತಿರುವ ಸ್ಟಾಲಿನ್‌ರವರ ಭವ್ಯ ಚಿತ್ರಗಳನ್ನು ವಿಶ್ವದ ನಾನಾ ಮೂಲೆಗಳಲ್ಲಿ ಪ್ರಕಟಿಸಿರುವುದರಿಂದ ಈ ಚೌಕವು ಜಗತ್ಪ್ರಸಿದ್ಧವಾಗಿದೆ. ಈ ಕೆಂಪು ಚೌಕವು, ಬಹಳ ಹಿಂದಿನ ಕಾಲದಿಂದಲೂ ರಷ್ಯದ ರಾಜಕಾರಣ ಪಟುಗಳ ಚಟುವಟಿಕೆಯ ಕೇಂದ್ರವಾಗಿದೆ. ಇಲ್ಲಿ ನಡೆದಿರುವ ಭಯಾನಕಗಳು, ಹೊಡೆದಾಟಗಳು, ಕ್ರಾಂತಿಕಾರಕ ಚಳುವಳಿಗಳು, ರಕ್ತಪಾತ, ಕೊಲೆ, ಕ್ರೂರ ಕೃತ್ಯಗಳು ಇವುಗಳಿಗೆ ತುದಿಮೊದಲೇ ಇಲ್ಲ 1905 ಮತ್ತು 1917ರಲ್ಲಿ ನಡೆದ ಕ್ರಾಂತಿಯ ಕಾಲದಲ್ಲಿ ಸಾವಿರಾರು ಮಂದಿಗಳು ಇಲ್ಲಿ ರಕ್ತವನ್ನು ಚೆಲ್ಲಿ ಪ್ರಾಣಬೇಡಬೇಕಾಯಿತು. ಆದುದರಿಂದ ಅದು ರಷ್ಯ ಪ್ರಜೆಗಳಿಗೆ ಒಂದು ಪವಿತ್ರ ಸ್ಥಳವೆನಿಸಿದೆ. ಇಂದು ಅಲ್ಲಿ ಲೆನಿನ್‌ರವರ ದೇಹವನ್ನು ಇಟ್ಟು ಕಾಪಾಡಿಕೊಂಡು ಬರುತ್ತಿರಲಾಗಿದೆ. ಪ್ರತಿದಿನವೂ ಸುಮಾರು 12,000 ಮಂದಿ ರಷ್ಯ ಪ್ರಜೆಗಳು ಅಲ್ಲಿಗೆ ಬಂದು ಲೆನಿನ್‌ರವರ ದೇಹದ ದರ್ಶನ ಮಾಡಿಕೊಂಡು ಹೋಗುವರು. ಸಾವಿರಾರು ಮಂದಿ ಸ್ತ್ರೀ ಪುರುಷರು 45 ಸೆಕಂಡುಗಳು ಕಾಲ ಲೆನಿನ್‌ರವರ ದರ್ಶನಲಾಭ ಪಡೆಯುವುದಕ್ಕೆ ಗಂಟೆಗಳ ಕಾಲ ಮೈ ಬೆಸಲುಗಳಲ್ಲಿ ನಿಂತಿರುವ ಆ ದೃಶ್ಯವನ್ನು ಪ್ರತಿನಿತ್ಯವೂ ಮಾಸ್ಕೋನಗರದಲ್ಲಿ ನೋಡಬಹುದು.

ಪೂರ್ವೇತಿಹಾಸ

ಕ್ರೆಮಲಿನ್ ಅನಕಾರವಾದುದು 13ನೇ ಶತಮಾನದಲ್ಲಿ ಆಗ ಒಂದು ಕೋಟೆಯಂತೆ ಅದು ಕಟ್ಟಲ್ಪಟ್ಟಿತು. ಅಲ್ಲಿಂದ ಈ ರೀತಿ ಆಗ ಭವನಗಳನ್ನು ಕಟ್ಟಲಾಗಿತ್ತು. ಮೊದಲು ಮರದಿಂದ ಕೋಟೆಯನ್ನು ಕಟ್ಟಲಾಗಿತ್ತು. ಕ್ರಮೇಣ ಕಲ್ಲಿನಿಂದ ಆಕೋಟೆಯನ್ನು ಕಟ್ಟಲಾಯಿತು. 17ನೇ ಶತಮಾನದಲ್ಲಿ ಕ್ರೆಮಲಿನ್ ಸುಂದರ ಅರಮನೆಗಳಿಂದ ಕೂಡಿದ ವಾಸಸ್ಥಳವಾಗಿ ನಿರ್ಮಿಸಲ್ಪಟ್ಟಿತು. ಅದರ ಸೌಂದರ್ಯವನ್ನು ಹೆಚ್ಚಿಸಲಾಯಿತು. ಜಗದ್ವಿಖ್ಯಾತ ಪೀಟರ್ ದೊರೆಗಳು ಮಾಸ್ಕೋ ನಗರದಿಂದ ರಾಜಧಾನಿಯನ್ನು ಸೆಂಟ್‌ಪೀಟರ್ಸ್‌ಬರ್ಗಿಗೆ (ಈಗ ಅದು ಲೆನಿನ್ ಗ್ರಾಡ್ ಎಂಬ ಹೆಸರನ್ನು ಳ್ಳದ್ದಾಗಿದೆ.) ವರ್ಗಾಯಿಸಿದಾಗ, ಕ್ರೆಮಲಿನ್ ಪ್ರಾಮುಖ್ಯತೆಯಲ್ಲಿ ಹಿಂದಕ್ಕೆ ಬಿತ್ತು. 2 ಶತಮಾನಗಳ ಕಾಲ ಅದು ಹಿಂದಕ್ಕೆ ಬಿದ್ದಿತ್ತು. ಆದರೆ 19ನೆ ಶತಮಾನದಲ್ಲಿ ಅದು ಪುನಃ ಖ್ಯಾತಿಗೆ ಬಂದಿತು

ಅಪಾಯದಿಂದ ಪಾರಾಗಿದೆ

ಮಾಸ್ಕೋ ನಗರಕ್ಕೆ ಅನೇಕ ಸಾರಿ ಮಹಾಅನಾಹುತ-ಪರಂಪರೆಗಳು ಸಂಭವಿಸಿವೆಯಷ್ಟೆ.ಆದರೆ ಕ್ರೆಮಲಿನ್ ಮಾತ್ರ ಅಪಾಯಕ್ಕೆ ಒಳಗಾಗದೆ ಪಾರಾಗಿದೆ. 16ನೆ ಶತಮಾನದಲ್ಲಿ ಟಾಟರ ನರುಗಳು ಮಾಸ್ಕೋ ನಗರವನ್ನು ಆಕ್ರಮಿಸಿ ಕೊಂಡಾಗ,

34ನೇ ಸಂಚಿಕೆಯಿಂದ ಬಂದದ್ದು

ತೆರಿಗೆ

ಮೈಸೂರು ವಿಶ್ವವಿದ್ಯಾನಿಲಯದವರು
ಪ್ರಕಟಿಸಿರುವ ಪುಸ್ತಕವೊಂದರ ಆಧಾರ.
ಲೇ: ಬಿ. ಆರ್. ಸುಬ್ಬರಾವ್, M. A.

(೩) ತೆರಿಗೆಗಳ ವಿಂಗಡಣೆ:

ತೆರಿಗೆ ಎಂದೊಡನೆಯೇ ತೆರುವವರು ತಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ಪ್ರಜೆಗಳ ಹಿತಕ್ಕಾಗಿ ತೆಗೆದಿಡಬೇಕೆಂಬ ಸೂಚನೆ ತಲೆದೋರುವುದು ಒಂದು ದೇಶದ ಪ್ರಜೆಗಳು ಕೃಷಿ, ಕೈಗಾರಿಕೆ, ವ್ಯಾಪಾರ, ಕಸಬು ಮುಂತಾದುವುಗಳಿಂದ ಆದಾಯವನ್ನು ಪಡೆಯುವರು. ಕೆಲವರ ಆದಾಯದ ಪ್ರಮಾಣವು ಹೆಚ್ಚಿನದಾಗಿರುತ್ತದೆ. ಇನ್ನು ಕೆಲವರದು ಸಾಧಾರಣವಾಗಿರುತ್ತದೆ. ಹೆಚ್ಚು ಜನರದು ತೀರ ಕಡಮೆಯಾಗಿರುತ್ತದೆ. ಈ ರೀತಿ ವೃತ್ತಿಗಳಲ್ಲಿ ಮತ್ತು ಆದಾಯದ ಪರಿಮಾಣದಲ್ಲಿ ಇರುವ ವೈತ್ಯಾಸಗಳಿಗೆ ತಕ್ಕಂತೆ ಬೇರೆ ಬೇರೆ ತೆರಿಗೆಗಳಿರಬೇಕು. ಎಲ್ಲರಿಗೂ ಒಂದೇ ವಿಧದ ತೆರಿಗೆಯನ್ನು ಹಾಕುವುದರಲ್ಲಿ ಅರ್ಥವಿಲ್ಲ. ಹತ್ತು ರೂಪಾಯಿ ಸಂಬಳ ಬರುವವನಿಗೂ ಧನಿಕನಿಗೂ ವರಮಾನದ ತೆರಿಗೆಯನ್ನು ಹಾಕಿ ಹಣವನ್ನು ಕೂಡಿಸಬೇಕಾದರೆ ಸರ್ಕಾರಕ್ಕೆ ವಸೂಲಿ ತೊಂದರೆ ಬಹಳ ಹೆಚ್ಚಾಗುತ್ತದೆ. ತೆರಿಗೆಯ ಹೊರೆಯೂ ಕಣ್ಣಿಗೆ ಕಂಡು ಜನರಲ್ಲಿ ಅತೃಪ್ತಿಯ ಎಂಬಾಗುತ್ತವೆ ಆದ್ದರಿಂದ ತೆರಿಗೆಯಲ್ಲಿ ಬೇರೆ ಬೇರೆ ರೀತಿಗಳು ಮತ್ತು ಪ್ರಮಾಣಗಳು ಇರಬೇಕು. ಇವುಗಳನ್ನೆಲ್ಲ ಆಲೋಚಿಸಿ ತೆರಿಗೆಯ ವಿಂಗಡಣೆಯನ್ನು ಸಂಪಿತರು ಮಾಡಿರುತ್ತಾರೆ.

ವಿಂಗಡಣೆಯ ಬಗೆಗಳು ಅನೇಕವಾಗಿವೆ. ಒಂದೊಂದು ಭಿನ್ನತೆಯಲ್ಲೂ ಗುಣದೋಷಗಳಿದ್ದೇ ಇವೆ. ಹಿಸರು ಬೇರೆ ಬೇರೆ ತೆರನ ಕಂದಾಯವನ್ನು ಕಂಪೆನಿ, ಕಾರ್ಖಾನೆಗಳ ಮೇಲೆ ವಿಧಿಸುವ ತೆರಿಗೆಯಿಂದ ಪ್ರತ್ಯೇಕಿಸುವುದು ಒಂದು ಬಗೆಯ ವಿಂಗಡಣೆ. ಪ್ರತಿಯೊಬ್ಬ ಪ್ರಜೆಯೂ ಕಡ್ಡಾಯವಾಗಿ ಕೊಡಲೇಬೇಕೆಂದು ವಿಧಿಸಿರುವ ತೆರಿಗೆಗಳು ಈಚೆಗೆ ಅಪೂರ್ವ ಜನರು ತೆರುವ ತೆರಿಗೆ ಎಂಬ ಪ್ರತ್ಯೇಕವಾದ ವಿಂಗಡಣೆ ಅನವಶ್ಯಕ. ಮತ್ತೊಂದು ವಿಂಗಡಣೆಯು ಹೀಗಿರುತ್ತದೆ.

೧. **ಆದಾಯದ ತೆರಿಗೆ.** ವರಮಾನದ ತೆರಿಗೆ, ಮೇಲ್ತೆರಿಗೆ ಮೊದಲಾದ ತೆರಿಗೆಗಳು ಈ ಗುಂಪಿಗೆ ಸೇರಿರುತ್ತವೆ.

೨. **ಆಸ್ತಿ ಹಾಸ್ತಿಗಳ ತೆರಿಗೆ.** ಭೂಕಂದಾಯ, ಮನೆಕಂದಾಯ, ಹಕ್ಕು ವಾರಿಯ ಆಸ್ತಿಗಳನ್ನು ಪಡೆದವರು ಕೊಡಬೇಕಾದ ಸುಂಕ ಅಥವಾ ತೆರಿಗೆಗಳು ಈ ಗುಂಪಿಗೆ ಸೇರಿವೆ.

೩. **ವ್ಯವಹಾರದ ತೆರಿಗೆ.** ವ್ಯಾಪಾರದ ತೆರಿಗೆ, ಸುಂಕಗಳು, ಅಧಿಕಲಾಭದ ತೆರಿಗೆ ಇವು ಈ ಗುಂಪಿಗೆ ಸೇರತಕ್ಕವು.

ಬೇರೆ ಬೇರೆ ಅರ್ಥಶಾಸ್ತ್ರಜ್ಞರು ಬೇರೆ ಬೇರೆ ವಿಂಗಡಣೆ ಕ್ರಮಗಳನ್ನು ಸೂಚಿಸಿರುತ್ತಾರೆ. ಮೇಲೆ ಹೇಳಿದ ರೀತಿ ವಿಂಗಡಣೆ ಮಾಡಿರುವುದರಲ್ಲಿ ಯಾವ ತತ್ವವನ್ನು ಗಮನದಲ್ಲಿಟ್ಟುಮಾಡಿದೆ ಎಂಬುದು ತಿಳಿಯುವುದಿಲ್ಲ. ಇದೂ ಅಲ್ಲದೆ ಈಗಿನ ಸರ್ಕಾರಗಳು ವಿಧಿಸುವ ಹಲವು ತೆರಿಗೆಗಳನ್ನು ಈ ರೀತಿ ವಿಂಗಡಿಸಲೂ ಸಾಧ್ಯವಾಗುವುದಿಲ್ಲ.

ತೆರಿಗೆಯ ಭಾರ ಯಾರ ಮೇಲೆ ಬೀಳುತ್ತದೆ ಎಂಬುದನ್ನು ದೃಷ್ಟಿಯಲ್ಲಿಟ್ಟು ಅದನ್ನು ಎರಡು ವಿಧವಾಗಿ ವಿಂಗಡಿಸಬಹುದು

[೧] ಪರೋಕ್ಷವಾದ ತೆರಿಗೆ.

[೨] ಪ್ರತ್ಯಕ್ಷವಾದ ತೆರಿಗೆ.

ಈ ವಿಂಗಡಣೆ ಹೆಚ್ಚು ರೂಢಿಯಲ್ಲಿದೆ ಸಾಮಾನ್ಯವಾಗಿ ಎಲ್ಲರೂ ಇದನ್ನು ಒಪ್ಪುತ್ತಾರೆ

೧. ಪರೋಕ್ಷವಾದ ತೆರಿಗೆ:-

ಕೆಲವು ವರ್ಷಗಳ ಹಿಂದೆ ಮೂರುಕಾಸಿಗೆ ಕೊಳ್ಳುತ್ತಿದ್ದ ಬೆಂಕಿಕಡ್ಡಿ ಪೊಟ್ಟಣಕ್ಕೆ ಈಗ ಒಂದು ಮುಷ್ಟಿ, ಐದುಕಾಸು, ಆರುಕಾಸಾಗಿದೆ. ಹೀಗೆ ಹೆಚ್ಚಾದ ಒಂದು, ಎರಡು ಮೂರುಕಾಸುಗಳನ್ನು ಬೆಂಕಿಕಡ್ಡಿ ಕೊಳ್ಳುವನೇ ಕೊಡಬೇಕಾಗಿದೆ. ಆದರೆ ಅವನ್ನು ತೆರಿಗೆ ಎಂದು ಅವನು ಕೊಡುವುದಿಲ್ಲ. ಪೊಟ್ಟಣದ ಬೆಲೆಎಂದು ಅವನು ಕೊಡುತ್ತಾನೆ. ಸರ್ಕಾರವವರು 1934 ರಲ್ಲಿ ಈ ತೆರಿಗೆ ಹಾಕಿದ್ದರಿಂದ ಬಂಕಿಕಡ್ಡಿಯ ಬೆಲೆ ಹೀಗೆ ಹೆಚ್ಚಾಯಿತು. ತಯಾರಿಸುವವನು ಈ ತೆರಿಗೆಯನ್ನು ಮೊದಲು ಕೊಟ್ಟು, ಬೆಂಕಿಕಡ್ಡಿ ಕೊಳ್ಳುವವರಿಂದ ಸ್ವಲ್ಪ ಸ್ವಲ್ಪವಾಗಿ ವಾಪಸು ಪಡೆಯುತ್ತಾನೆ. ಕೊಳ್ಳುವವರಿಂದಲೇ ಒಂದೊಂದು ಕಾಸಿನಂತೆ ಈ ತೆರಿಗೆಯನ್ನು ನೇರವಾಗಿ ವಸೂಲು ಮಾಡುವುದು ಸರ್ಕಾರಕ್ಕೆ ಕಷ್ಟ: ಹೀಗೆ ಮಾಡುವುದರಿಂದ ವಸೂಲಿಗೆ ಹೆಚ್ಚಿನ ಖರ್ಚಾಗುವುದು.

ತೆರಿಗೆಗಳನ್ನು ಹೀಗೆ ಪರೋಕ್ಷವಾಗಿ ವಸೂಲು ಮಾಡುವಾಗ ಅವುಗಳನ್ನು ಕೊಡುವವರು ತಾವು ಕೊಟ್ಟ ಹಣವನ್ನು ಇತರರಿಂದ ಸ್ವಲ್ಪಸ್ವಲ್ಪವಾಗಿ ವಸೂಲುಮಾಡಿ ತೆರಿಗೆ ಭಾರವನ್ನು ಹಂಚಿ ಬಹಳ ಪಟ್ಟಿಗೆ ಹೊರೆಯನ್ನು ತಗ್ಗಿಸಲು ಕಾರಣರಾಗುತ್ತಾರೆ. ಸುಂಕದ ತೆರಿಗೆಗಳು, ವ್ಯಾಪಾರದ ಮೇಲೆ ಹಾಕುವತೆರಿಗೆಗಳು ಈ ಗುಂಪಿಗೆ ಸೇರುತ್ತವೆ. ಸಕ್ಕರೆ, ಪೆಟ್ರೋಲ್ ಉಪ್ಪು, ಹೊಗೆಸೊಪ್ಪು—ಇವುಗಳ ಮೇಲೆ ಸುಂಕಹಾಕಿದರೆ ಈ ಪದಾರ್ಥಗಳನ್ನು ತಯಾರುಮಾಡುವವರಿಂದಾಗಲಿ ಮಾರುವವರಿಂದಾಗಲಿ ಮೊದಲು ಸುಂಕವನ್ನು ಸರ್ಕಾರವು ವಸೂಲು ಮಾಡುತ್ತದೆ. ಆನಂತರ ಅವುಗಳನ್ನು ಉಪಯೋಗಿಸುವವರು ಸ್ವಲ್ಪಸ್ವಲ್ಪವಾಗಿ ಈ ಹಣವನ್ನು ತೆರುವರು ಬಡವರು ಸರ್ಕಾರಕ್ಕೆ ತೆರಿಗೆ ಸಲಿಸಲು ಈ ವಿಧವ ತೆರಿಗೆಗಳಿಂದ ಅನುಕೂಲ ಹೆಚ್ಚು. ಹೀಗೆ ಭಾರವನ್ನು ಒಬ್ಬರಿಂದೊಬ್ಬರಿಗೆ ವರ್ಗಮಾಡಲು ಸೌಕರ್ಯವಿರುವ ತೆರಿಗೆಗಳನ್ನು ಪರೋಕ್ಷ ತೆರಿಗೆಗಳೆಂದು ಕರೆಯಬಹುದು.

೨. ಪ್ರತ್ಯಕ್ಷವಾದ ತೆರಿಗೆ: ತೆರಿಗೆ ಕೊಡುವವನು ಮೇಲೆ ಹೇಳಿದಂತೆ ಇತರರಿಗೆ ತನ್ನ ಹೊರೆಯನ್ನು ವರ್ಗಮಾಡಲು ಸಾಧ್ಯವಾಗದಿದ್ದರೆ ಅದು ಪ್ರತ್ಯಕ್ಷವಾದ ತೆರಿಗೆ ಎನಿಸುವುದು. ಆದಾಯದ ತೆರಿಗೆ ಆಸ್ತಿಹಾಸ್ತಿಗಳ ತೆರಿಗೆ, ಜಪ್ತಿಮಾನು ಕಂದಾಯ ಮೊದಲಾದ ತೆರಿಗೆಗಳು ಬಹುಮಟ್ಟಿಗೆ ಈ ಗುಂಪಿಗೆ ಸೇರುತ್ತವೆ.

ಕೆಲವು ಸಲ ಪ್ರತ್ಯಕ್ಷವಾದ ತೆರಿಗೆಗಳನ್ನು ಇತರರಿಗೆ ವರ್ಗಮಾಡಲು ಸಾಧ್ಯವಾಗುವುದು. ಒಂದು ಊರಿನಲ್ಲಿ ಬಹಳ ಚಾಣಾಕ್ಷನಾದ ಒಬ್ಬ ವೈದ್ಯನಿದ್ದು ಅವನ ಆದಾಯದ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಿದರೆ ತಾನು ಕೊಡಬೇಕಾದ ಹಣವನ್ನು ತನ್ನ ರೋಗಿಗಳಿಂದ ಪಡೆಯಲು ಅವನು ಪ್ರಯತ್ನಪಡುವನು. ಇತರ ವೈದ್ಯರು ಸ್ಪರ್ಧೆಗೆ ಇಲ್ಲದಿದ್ದರೆ ಹೀಗೆಮಾಡುವುದು ಸುಲಭ. ಇದರಿಂದ ಪ್ರತ್ಯಕ್ಷವಾದ ತೆರಿಗೆಗಳೂ ಒಂದೊಂದು ನೀತಿ ಪರೋಕ್ಷವಾದ ತೆರಿಗೆಗಳಾಗಿ ಪರಿಣಮಿಸಬಹುದು ಎಂದು ತಿಳಿಯುವುದು. ಪರೋಕ್ಷವಾದ ತೆರಿಗೆಗಳು ಪ್ರತ್ಯಕ್ಷವಾದ ತೆರಿಗೆಗಿಂತಲೂ ಅಗ್ಗವ

9ನೇ ಪುಟವನ್ನು ನೋಡಿರಿ

ರಾಷ್ಟ್ರ ಭಾಷೆಯನ್ನು ಕಲಿಯಿರಿ.

ಹಿಂದಿ ಹಿಂದುಸ್ತಾನಿ.

★ ಪರೀಕ್ಷೆಗಳಿಗೆ ಕೂಡಲು.....

★ ವ್ಯವಹಾರದ ಭಾಷೆಯನ್ನು ಕಲಿಯಲು.....

★ ಮಾತಾಡುವುದನ್ನು ಕಲಿಯಲು.....

★ ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ.

ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಗಳು, ಕಥೆ, ಕಾದಂಬರಿ ವಗೈರೆ ದೊರೆಯುವಲ್ಲದೆ ನಿಮಗೆ ಎಲ್ಲಾವಿಧವಾದ ಮಾಹಿತಿಯೂ ಉಚಿತವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,

ಶ್ರೀಕೃಷ್ಣ ಮಾಚಾರಿ ಕಾಂಪೌಂಡು, **ಬಳ್ಳಾರಿ.**

ರಾಜಕೀಯ ಕೈದಿಗಳಿಗೆ ಬಿಡುಗಡೆ ಇಲ್ಲ.

ದೆಹಲಿಯ ಅಸೆಂಬ್ಲಿಯಲ್ಲಿ 29ನೇ ತಾರೀ ಸದಸ್ಯರಾದ ಲಾಲಚಂದ ನವಲ್ರಾಯರ ಪ್ರಶ್ನೆಗೆ ಉತ್ತರವೀಯುತ್ತಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಗುವುದಿಲ್ಲೆಂದು ಸರ್ಕಾರದ ಸದಸ್ಯರಾದ ಮಾಕ್ಸ್‌ವೆಲರವರು ತಿಳಿಸಿದರು.

—ಮುಂಬೈ ಪ್ರಾಂತದ ಹಿಂದಿನ ಮಂತ್ರಿಗಳಾದ ಶ್ರೀ ಬೇರ ಮತ್ತು ಮುರಾರ್ಜಿ ದೇಸಾಯಿಯವರು ಈ ವಾರ ಬಿಡುಗಡೆಯಾದರು. ಶ್ರೀಗಳಾದ ರಾಜಗೋಪಾಲಾಚಾರಿ, ಪಂಡಿತ ಗೋವಿಂದ ವಲ್ಲಭಪಂತ, ರಾಜೇಂದ್ರ ಪ್ರಸಾದ, ಸರ್ದಾರ ವಲ್ಲಭಭಾಯಿ ಪಟೇಲರು ಮಹಾತ್ಮ ಗಾಂಧಿಯವರೊಡನೆ ರಾಜಕೀಯ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಲ ಸಂಭಾಷಿಸಿದರು ರಾಜಾಜಿಯವರು 29ನೆಯ ತಾರೀ ಸ್ವಾತಂತ್ರ್ಯಕಾಲ ಜೊಂಬಾಯಿ ಸೇರಿದರು. ಅಲ್ಲಿ ಎರಡು ದಿನಗಳೆದ್ದು ದೆಹಲಿಗೆ ಹೋಗಲಿರುವರು.

ಪಂಡಿತ ಜವಹರಲಾಲರ ಬಿಡುಗಡೆಯ ಆಲೋಚನೆ

ಅಮೆರಿಕಾದಲ್ಲಿ ಸಾರ್ವಜನಿಕಾಭಿಪ್ರಾಯ

ಹಿಂದುಸ್ತಾನದ ಪ್ರಶ್ನೆಯು ಅಮೆರಿಕಾ ಜನತೆಯ ಮುಂದೆ ಬಂದಾಗಲೆಲ್ಲಾ ಜವಹರಲಾಲರ ಶಿಕ್ಷೆಯೂ, ಸೆರೆಮನೆವಾಸವೂ ಜನರನ್ನು ಅಸಮಾಧಾನಗೊಳಿಸುತ್ತಲಿದೆ ಅಲ್ಲಿ ಅಗಾಗ್ಗೆ ಈ ಸಂಬಂಧದ ಬಿಕ್ಕಟ್ಟಿನ ಪ್ರಶ್ನೆಗಳು ಬ್ರಿಟಿಷ್ ಪ್ರಚಾರಕರಿಗೆ ಹಾಕಲ್ಪಡುತ್ತಲಿವೆ. ಅಲ್ಲದೆ ವೈಸ್ರಾಯರ ವಿಸ್ತೃತ ಕಾರ್ಯಕಾರಿ ಮಂಡಲದಲ್ಲಿ ಬರಿಸ ಭಾರತೀಯ ಸದಸ್ಯರು ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುವ ವಿಷಯಕ್ಕೆ ವೈಸ್ರಾಯರನ್ನು ಒತ್ತಾಯ ಪಡಿಸುತ್ತಲೇ ಇರುವರು ರಾಜಕೀಯ ಖೈದಿಗಳನ್ನೆಲ್ಲಾ ಬಡದಿದ್ದರೂ, ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಅಬುಲ ಕಲಾಂ ಆಜಾದ ಮತ್ತು ಪ, ಜವಹರಲಾಲನೆಹರೂ ಇವರನ್ನು ಬಂಧಮುಕ್ತಮಾಡಲು ಭಾರತ ಮಂತ್ರಿಗಳೊಡನೆ ಪತ್ರವ್ಯವಹಾರವು ನಡೆದಿರುವದಂತೆ.

ಶ್ರೀ ಸತ್ಯಾಗ್ರಹಿಯನ್ನು ಪೋಲೀಸ ಸಬ್‌ಇನ್ಸ್‌ಪೆಕ್ಟರು ಹೊಡೆದರೆಂಬ ಆರೋಪ.

ತಕ್ಕ ಚರ್ಯೆ ತೆಗೆದುಕೊಳ್ಳಲು ಗಾಂಧೀಜಿಯು ಸಲಹೆ.

ರಾಮನಾಡ ಜಿಲ್ಲೆಯ ಶಿವಕಾಶಿ ಸಬ ಇನ್ಸ್‌ಪೆಕ್ಟರು ಒಬ್ಬ ಸ್ತ್ರೀ ಸತ್ಯಾಗ್ರಹಿಯನ್ನು ಹೊಡೆದ ಆರೋಪವು ಜಾಯಿಂಟ ಮ್ಯಾಜಿಸ್ಟ್ರೇಟರಿಂದ ವಿಚಾರಿಸಲ್ಪಟ್ಟು ಮೇಲಧಿಕಾರಿಗಳಿಗೆ ವರದಿ ಕಳುಹಿಸಲಾಗಿದೆ. ರಾಮನಾಡು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ವಿಚಾರಣಾ ಫಲದನಕಲನ್ನು ಕೇಳಿದರೆ ಕೊಡಲಾಗಲಿಲ್ಲ. ಗಾಂಧೀಜಿಯವರಿಗೆ ತಿಳುಹಿಸಲಾಗಿ ಅವರು ಸಬ-ಇನ್ಸ್‌ಪೆಕ್ಟರರ ಮೇಲೆ ತಕ್ಕ ಚರ್ಯೆಯನ್ನು ತೆಗೆದುಕೊಳ್ಳಬೇಕೆಂದು ಸಲಹೆ ಇತ್ತಿರುವರು.

ಹೈದರಾಬಾದಿನಲ್ಲಿ ನಡೆಯಬೇಕಾದ ಕನ್ನಡ ಸಾಹಿತ್ಯ ಪರಿಷತ್ತು

ಬರುವ ಡಿಶಂಬರು ತಿಂಗಳಲ್ಲಿ ಹೈದರಾಬಾದಿನಲ್ಲಿ ನಡೆಯಬೇಕಾದ ಕನ್ನಡ ಸಾಹಿತ್ಯಪರಿಷತ್ತಿಗೆ ಮೈಸೂರಿನ ಮಾಜಿದಿವಾನರಾದ ಸರ್ ಮಿರ್ಜಾರವರು ಅಧ್ಯಕ್ಷರಾಗಿರಬೇಕೆಂಬ ವಾದವು ಸಾಹಿತ್ಯ ಕ್ಷೇತ್ರಗಳಲ್ಲಿ ಪ್ರಬಲವಾಗುತ್ತಲಿದೆ. ಅವರು ಮೈಸೂರಿನಲ್ಲಿ ಅನೇಕ ವರ್ಷ ದಿವಾನರಾಗಿದ್ದು ಕನ್ನಡಕ್ಕೆ ಪ್ರೋತ್ಸಾಹ ಕೊಟ್ಟಿರುವರೆಂದು ಮುಸಲ್ಮಾನರೊಳಗಿಗಳ ಸೀಮೆಯಾದ ಹೈದರಾಬಾದಿನಲ್ಲಿ ಮುಸಲ್ಮಾನ ಮಹಾಶಯರೊಬ್ಬರು ಅಧ್ಯಕ್ಷರಾದರೆ ಕನ್ನಡದ ಕಡೆ ಮುಸಲ್ಮಾನರ ದೃಷ್ಟಿಯು ಹೊರಳಿ ಸಹಾಯ ಸಹಾನುಭೂತಿಗಳು ಹೆಚ್ಚುವದೆಂದು ವಾದಸರಣಿ.

ಆದರೆ ಸಾಹಿತ್ಯ ಕ್ಷೇತ್ರಕ್ಕೆ ಸಾಹಿತಿಗಳಿಗೆ ಮಾನ್ಯತೆಯನ್ನು ಕೊಡಬೇಕು ಕನ್ನಡ ಭಾಷೆಯ ನಿಜವಾದ ಪ್ರೇಮಿಗಳಿಗೆ ಅಲ್ಲಿ ಸ್ಥಾನ ದೊರಬೇಕು. ಕನ್ನಡ ನಾಡಿನ ಸ್ತ್ರೀವರ್ಗಕ್ಕೆ ಇಲ್ಲಿಯವರಿವಿಗೂ ಪ್ರತಿನಿಧಿತ್ವವು ಲಭ್ಯವಾಗದಿರುವುದು ನಮ್ಮ ದುರ್ದೈವ. ಮಹಿಳೆಯರಲ್ಲಿ ಶ್ರೇಷ್ಠ ಸಾಹಿತಿಗಳಿರುವರು. ಅವರು ಹಿಂದುಳಿದವರೆಂದು ಅವರನ್ನು ಇನ್ನು ಮೇಲೆಯೂ ಹಿಂದೆ ಹಾಕುವುದು ಪುರುಷರಿಗೆ ಯೋಗ್ಯವಲ್ಲ. ಕಲ್ಯಾಣಮ್ಮನವರನ್ನೇ ಅಧಿಕಾರವರ್ಗದವರು ಆರಿಸಬೇಕಾಗಿ ವಿನಂತಿ.

ಜಪಾನ ಚೀನಾಯುದ್ಧ

ವಿಷಪ್ರಯೋಗ

ಜಪಾನರು ಚೀನರಸೈನ್ಯಗಳ ಮೇಲೆ ಇಚಾಂಗನಲ್ಲಿ ವಿಷವಾಯುವಿನಿಂದ ಕೊಡಿದೆ ಜೆಲುಗಳನ್ನು ಹಾರಿಸಿದರೆಂದೂ, 3 ಸಾವಿರ ಚೀನೀಯ ಸೈನೀಕರಲ್ಲಿ 700 ಮಂದಿಸತ್ತರೆಂದೂ ಮಿಲಿಟರಿ ಅಧಿಕಾರಿಗಳೊಬ್ಬರು ತಿಳಿಸುತ್ತಾರೆ. ಜಪಾನೀಯರು ಎಲ್ಲಾಬಗೆಯ ವಿಷವಾಯುಗಳನ್ನೂ, ವಿಷಯುಕ್ತಬಾಂಬುಗಳನ್ನೂ ಉಪಯೋಗಿಸುತ್ತಲಿರುವರೆಂದು ತಿಳಿದುಬಂದಿದೆ.

60

ಆ ನಗರದ ಪ್ರಜೆಗಳ ಪೈಕಿ ಶೇಕಡ 85 ರಷ್ಟು ಮಂದಿ, ನಾನಾ ವ್ಯಾಧಿಗಳಿಗೂತೊಂದರೆಗಳಿಗೂ ಗುರಿಯಾಗಿ ಪ್ರಾಣಬಿಟ್ಟರು ಆದರೆ ಕ್ರೆಮಲಿನ್ ನಾಶವಾಗದೆ ಹಾಗೆಯೇಉಳಿಯಿತು. 18 ನೆ ಶತಮಾನದಲ್ಲಿ ನೂರುಸಾರಿ ಮಾಸ್ಕೋ ನಗರಕ್ಕೆ ಭಯಂಕರ ಬೆಂಕಿಬಿತ್ತು. ಮಾಸ್ಕೋ ನಗರಕ್ಕೆ ಆ ವುಗಳಿಂದ ಅಪಾಯತಟ್ಟಿತು ಆದರೆ ಕ್ರೆಮಲಿನ್ನಿಗೆ ಅಪಾಯವೇನೂ ಸಂಭವಿಸಲಿಲ್ಲ

1812 ರಲ್ಲಿ ಮಾಸ್ಕೋ ನಗರವು ನೆಪೋಲಿಯನ್ನಿನ ಹಸ್ತಗತವಾದಾಗ, ಬೆಂಕಿಬಿದ್ದು ಮಹಾ ಅನರ್ಥ ಸಂಭವಿಸಿತು ಆದರ ಪರಿಣಾಮವಾಗಿ ನೆಪೋಲಿಯನ್ನನು ಮಾಸ್ಕೋ ನಗರ ಬಿಡಬೇಕಾಯಿತು ಆಗ ಕ್ರೆಮಲಿನ್ ನಾಶಮಾಡಬೇಕೆಂಬ ಉದ್ದಿಶ್ಯದಿಂದ ನಡೆಸಿದ ಪ್ರಯತ್ನವು ಫಲಕಾರಿಯಾಗಲಿಲ್ಲ. 1920 ರಲ್ಲಿ ರಷ್ಯದ ಕ್ರಾಂತಿಕಾರರು ಜಯಶಾಲಿಗಳಾದಾಗ, ರಾಜಧಾನಿಯನ್ನು ಲೆನಿನ್‌ಗ್ರಾಡ್‌ನಿಂದ ಪುನಃ ಮಾಸ್ಕೋ ನಗರಕ್ಕೆ ವರ್ಗಾಯಿಸಲಾಯಿತು

೧೬೦ ಟನ್ ತೂಕವಿರುವ ಗಂಟೆ

ಕ್ರೆಮಲಿನ್ ನಗರದಲ್ಲಿರುವ ಒಶೇಷಗಳಲ್ಲಿ ಬಹಳ ಮುಖ್ಯವಾದುದೆಂದರೆ 180 ಟನ್ ತೂಕವಿರುವ ಗಂಟೆ ಅವನ್ನು ಬಾರಿಸುವುದೇ ಇಲ್ಲ. ಅದನ್ನು ಸಿದ್ಧಗೊಳಿಸುತ್ತಿರುವಾಗಲೇ ಅದು ಬಿರುಕುಬಿಟ್ಟಿತು 11 ಟನ್ ತೂಕವಷ್ಟು ಒಂದು ಚೂರು ಅದರಿಂದ ಕೆಳಕ್ಕೆ ಬಿದ್ದಿತು ಆ ಗಂಟೆಯ ಸುತ್ತಳತೆ 60 ಅಡಿಗಳು 2 ಅಡಿಯಷ್ಟಬದ ಸ್ಪವಿದೆ

(ವಿಶ್ವಕರ್ಣಾಟಕ)

1ನೇ ಪುಟದಿಂದ ಒಂದನ್ನು

ವಿಜ್ಞಾನಿಯ ಸೇವೆ.

ಇದ್ದ ವಿಷಯವನ್ನು ಇದ್ದ ಹಾಗೆ ತಿಳಿಯಲು ಪ್ರಯತ್ನಿಸುವವನೇ ವಿಜ್ಞಾನಿ. ಪ್ರೇಮವೇ ಅವನ ಗುರಿ. ವಿಜ್ಞಾನಿಯ ವಿಚಾರಸೀಮೆಗೆ ವಿಷಯದ ಮಿತಿಯಿಲ್ಲ. ಅಣುಪರಮಾಣುವಿನಿಂದ ಹಿಡಿದು ಜೀವನ ರೂಪವಾದ ಆತ್ಮದವರೆಗೂ ವಿಜ್ಞಾನಿಯ ಕಾರ್ಯಕ್ಷೇತ್ರವು ವಿಸ್ತರಿಸಬಲ್ಲದು. ವಿಷಯ ವಿಷಯಗಳೊಳಗಣ ಸಂಬಂಧಜ್ಞಾನವೇ ವಿಜ್ಞಾನ ಅನ್ವೇಷಣೆಯೇ ವಿಜ್ಞಾನಿಯ ಹಿಡಿಯುವ ಮಾರ್ಗ. ಸರ್ವದ ಗುಟ್ಟನ್ನೆಷ್ಟು ಬಿಚ್ಚಿ ತೋರಿಸುವುದೇ ಅವನ ಕೆಲಸ. ಪ್ರಕೃತಿಯ ನಾನಾ ಅಂಗದ ವಿಚಾರದಲ್ಲಿ ಮಾನವನ ಜ್ಞಾನವು ಹೆಚ್ಚಿದಷ್ಟು ಜೀವನ್ನು ತನ್ನ ಅಧೀನದಲ್ಲಿರಿಸಿಕೊಂಡು

ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘದವರ ಆಶ್ರಯದಲ್ಲಿ ನಡೆಯುತ್ತಿರುವ

ಜಿಲ್ಲಾ ಹರಿಜನ ವಿದ್ಯಾರ್ಥಿ ಗೃಹ.

(ಇದು ಕೋಟೆ ಹೆಡ್ ಪೋಸ್ಟ್ ಆಫೀಸ್ ಬಳಿ ಸುಂದರವಾದ ಬಂಗಲೆಯಲ್ಲಿದ್ದು ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸಲಾಗಿದೆ ಈಗ 14 ಹುಡುಗರಿರುವರು ಒಬ್ಬ ಅಡಿಗೆಯವರು, ಒಬ್ಬ ಮ್ಯಾನೇಜರರು ಇರುವರು)

ಬೇಕಾದ ಅದ್ಭುತಗಳನ್ನು ಸಾಧಿಸಬಲ್ಲ ಶಕ್ತಿ ಉಂಟಾಗುವುದು ಕ್ಷಣ ಕ್ಷಣಕ್ಕೂ ಹೆಚ್ಚಿ ಹೆಚ್ಚಿಗೂ ಮನುಷ್ಯನಿಗೆ ಕಷ್ಟವನ್ನು ತಂದೊಡ್ಡುವ ಈ ಪ್ರಕೃತಿಯನ್ನು ಧೈರ್ಯದಿಂದಲೂ ಬಲದಿಂದಲೂ ಎದುರಿಸಿ ತನ್ನ ಪ್ರಭುತ್ವವನ್ನು ಅದರ ಮೇಲೆ ಸ್ಥಾಪಿಸಲು ಕ್ಷಣತೊಟ್ಟವನೇ ವಿಜ್ಞಾನಿ ಅವನು ಬುದ್ಧಿ ಪ್ರಮಾಣವಾದಿ. ರುಜುವಾತಿಸಿದ ವಿಷಯಗಳನ್ನು ನಂಬುವವನೇ ಅಷ್ಟೆ. ಅದಕ್ಕೆ ಸ್ಥಿರವೇ ಎಸ್ಪೆರಿಮೆಂಟಾರಿ ಅಂಧಃ ಪ್ರದೇಶಗಳಲ್ಲಿ ಕಣ್ಣು ಹೊಡೆದ ಗುರುತುಗಳವರ ಅಗ್ರಹಕ್ಕೆ ತುತ್ತಾಗಿ ನಿರಾಶ ಕೃತ್ಯಗಳಿಗೊಳಗಾಗುವುದು ಉಂಟು ಕ್ರೋಧನೆಯು ನಡೆದಂತೆಲ್ಲ ಅವನಿಗೆ ನಿಸರ್ಗವು ನಿಯಮಬದ್ಧವಾದುದೆಂದೂ ಆ ನಿಯಮವನ್ನು ತಿಳಿಯಲು ಸಾಧ್ಯವೆಂದೂ ಆರೀತಿ ಸಂಪಾದಿಸಿದ ಜ್ಞಾನದಿಂದ ಇಹದಲ್ಲೇ ಒಂದು ಸ್ವರ್ಗವನ್ನು ಸೃಷ್ಟಿಸಲು ಬರುವುದೆಂದೂ ಈ ದಾರಿಯಲ್ಲೇ ಮುಂದುವರಿದು ಸೃಷ್ಟಿಯಲ್ಲಿ ಮಾನವನಿಗೆ ಮಾಸಲಾಗಿಟ್ಟ ಪರಿಪೂರ್ಣ ದೆಶೆಯನ್ನು ಪೇರಬೇಕಲ್ಲದೆ ಬೇರೆ ದಾರಿಯೇ ಇಲ್ಲವೆಂದು ಅವನು ಸಾರುವನು. ವಿಜ್ಞಾನದ ಅಂಗನಳೆನಿಸಿದ ವೈದ್ಯ ಶಾಸ್ತ್ರ ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ ಇವುಗಳ ಪ್ರಚಾರದಿಂದ ಜೀವರಾಶಿಗಳಿಗಾದ ಉಪಕಾರವನ್ನು ಬೇರೆ ಎಣಿಸುವುದೇ ಬೇಡ ಬಡತನ, ನಿರುದ್ಯೋಗ, ರೋಗ ರುಜಿನಗಳ ತವರು ಮನೆಯಾದ ಭಾರತದ ಏಳಿಗೆಯು ವಿಜ್ಞಾನಿ ಇಂದಲೇ ಆಗಬೇಕು ಅವನಿಗೆ ಬೇಕಾದುದು ರಾಷ್ಟ್ರದ ಬೆಂಬಲ ಬ್ರಿಟಿಷ ಪ್ರಜಾತಂತ್ರದ ಸರ್ ಸಿ ವಿ ರಾಮನ್‌ರವರು 1932ರಲ್ಲಿ ಮುಂಬೈ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭೋತ್ಸವ ಕಾಲದಲ್ಲಿ ಹೇಳಿರುವದು ಗಮನ ಕೊಡತಕ್ಕಂತಹುದಾಗಿದೆ. "ವೈಜ್ಞಾನಿಕ ಜ್ಞಾನವನ್ನು ಧೈರ್ಯದಿಂದ ಉಪಯೋಗ ಮಾಡುವುದರ ಮೇಲೆ ಹಿಂದುಸ್ಥಾನದ ಭವಿಷ್ಯವು ಅವಲಂಬಿಸಿರುತ್ತದೆ ನಿತ್ಯ ಜೀವನ ಸಮಸ್ಯೆಗಳಿಗೆ ಶಾಸ್ತ್ರೀಯ ವಿಧಾನಗಳನ್ನು ಉಪಯೋಗಿಸುವ ಪ್ರವಾಣವಲ್ಲಿ ಯಾವ ಮನುಷ್ಯನಾದರೂ ಅಭಿವೃದ್ಧಿ ಹೊಂದುತ್ತಾನೆ ಪೂರ್ವಾಚಾರ ಸಂಪ್ರದಾಯ ಶಿಥಿಲವಾಗಿರುವುದರಿಂದ ಧರ್ಮಾಂಧರು ಒಗಳುತ್ತಿದ್ದರೂ ಸಹ ಹಿಂದುಸ್ತಾನವು ಎದುರಿಸಲಾಗದಂತಹ ತೇಜೋಬಲದಿಂದ ಮುಂದೆ ಸಾಗುವುದು' ಎಂದು ಅವರು ಹೇಳಿದ್ದಾರೆ.

ಜರ್ಮನಿ-ರಷ್ಯಾ— ಗಡಿ ಪ್ರದೇಶದ ರಾಸ್ಟೆನೋ ಎಂಬ ಪ್ರದೇಶದ ಬಳಿ ಜರ್ಮನಿಯು ರಷ್ಯಾದ ಗಡಿ ರಕ್ಷಕರಿಗೆ ಫಿರ್ಯಾದಾಯತಂತೆ

ರಷ್ಯಾ— ಸಹಾಯವನ್ನೊದಗಿಸಬೇಕೆಂದು ಲಂಡನ್ನಿನಲ್ಲಿ 10ಸಾವಿರ ಕೂಲಿಕಾರರ ಸಭೆಯಾಯಿತು.

4ನೇ ಪುಟದಿಂದ ಬಂದದ್ದು

ಶ್ವಾಸವಿದ್ದು, ವಿಧಾಯಕ ಕಾರ್ಯಕ್ರಮದಲ್ಲಿ ವಿಶ್ವಾಸವಿಲ್ಲದ ಕಾಂಗ್ರೆಸ್ ಜನರಿಂದ ನನಗೆ ತೊಂದರೆಯೊದಗಿದೆ. ಇದು ರಾಷ್ಟ್ರೀಯ ಚಳುವಳಿಯ ಮುಖ್ಯಾಂಗವೆಂದೂ. ಅದು ಇಲ್ಲದೆ ನಮ್ಮ ಏನೂ ಆಟವು ಸಾಗದೆಂದೂ-ಸಾವಿರದೊಂದುಸಲ ನಾನು ಪುನಃ ಪುನಃ ಒತ್ತಿ ಹೇಳುತ್ತೇನೆ.

ಎಲ್ಲರೂ ಜೈಲಿಗೆ ಹೋಗುವುದು ಸಾಧ್ಯವಿಲ್ಲ - ಎಲ್ಲರೂ ವಿಧಾಯಕ ಕಾರ್ಯದಲ್ಲಿ ಭಾಗವಹಿಸಬಹುದು – ಅಧುನಿಕ ಅಸ್ತ್ರ ಶಸ್ತ್ರಗಳ ಯುದ್ಧದಲ್ಲೂ - ಪಟ್ಟಣದ ಜನರಿಂದ ಸೈನ್ಯಗಳಿಗೆ ಒಳ್ಳೆಯ ಬೆಂಬಲ ದೊರಕಿದೆ. ಬ್ರಿಟಿಷ ಬಳಗಳಿಗೆ ನಾಗರಿಕರ ಸಹಾಯವಿಲ್ಲದಿದ್ದರೆ ಏನಾಗುತ್ತೆಂಬುದನ್ನು ಆಲೋಚಿಸಿರಿ ಈ ದೃಷ್ಟಿಯಿಂದ ನೂಲುವವರಲ್ಲಿ ಎಲ್ಲರೂ ಈ ವರ್ಷ ಭಾಗವಹಿಸಿದ್ದಕ್ಕೆ ನನಗೆ ಆನಂದವಾಗಿದೆ.

ಕಾಂಗ್ರೆಸ್ ಜನರೆಲ್ಲಾ ಐಕ್ಯತೆ ಅಸ್ಪೃಶ್ಯತಾನಿವಾರಣೆ ಸಗ್ಗೆರೆ ಕಾರ್ಯದಲ್ಲಿ ಪೂರ್ಣವಿಶ್ವಾಸವಿಟ್ಟಿದ್ದರೆ ಇಂಥಾ ವಿಷಮ ಸ್ಥಿತಿಯೊದಗುತ್ತಿರಲಿಲ್ಲ. ನಮ್ಮ ಉದ್ಧಾರವನ್ನು ನಾವೇಮಾಡಿಕೊಳ್ಳಬೇಕಾಗಿದೆ ನಾನು ಸೇನಾಧಿಪತಿಯಿರುವಕಾರಣ ನನ್ನ ಜನರ ವಿಷಯಕ್ಕೆ ನಾನು ಗೊಣಗುಟ್ಟುವಾರೆಂದೆನ್ನುವರು ನನಗೆ ಈ ದೋಷದ ಅರಿವು ಮೊದಲಿಂದಲೂ ಇದೆ. ನನ್ನ ಕರ್ತವ್ಯಗಳೆಲ್ಲಾ ಸರಿಯಾಗಿ ಪಾಲಿಸಲ್ಪಡದಿದ್ದರೆ ನಾನು ಆಯೋಗ್ಯನೆಂದು ಕೊರಹಾಕಲ್ಪಡಬೇಕು ಅಥವಾ ನಾನೇ ಹೊರಬೀಳಬೇಕು. ನಾನು ಹೊರಬೀಳಬೇಕೆಂದರೆ ನನಗೆ ಸಾಧ್ಯವಾಗಲೇ ಇಲ್ಲ - ಕಾಂಗ್ರೆಸ್‌ನವರಿಗೂ, ನನಗೂ ಹರಿಯಲಾರದಂಥ ಸಂಬಂಧ ರಜ್ಜು ವಿದೆ.

ಅವರು ನಾನು ವಿಧಿಸಿದ ನಿಯಮಗಳಿಗಾಗಿ ಅವರು ಗುದ್ದಾಡಬಹುದು ಆದರೆ ಅವರು ನನ್ನನ್ನು ಬಿಟ್ಟುಹೋಗುವುದಿಲ್ಲ ನಾನು ಹೊರಬೀಳಲೂ ಅವಕಾಶ ಕೊಡುವುದಿಲ್ಲ. ನಾನು ಎಷ್ಟೇ ಜಗಳಕನಸಲವನೇಸ ಕನಿಸಲಿ, ಬೇಕಾದಕಾಲವೆಲ್ಲ ನನ್ನಿಂದ ಕೆಲಸವಾಗುವುದೆಂದು ಅವರು ತಿಳಿದಿದ್ದಾರೆ ಈ ಕಾರಣ ನನ್ನ ನಿಯಮಪಾಲನೆಗೆ ಅವರು ಹೆಣಗುತ್ತಾರೆ. ಇಂಥಹವರಲ್ಲಿ ವಿಶ್ವಾಸವಿಟ್ಟು ಒಂದಲ್ಲೊಂದುದಿನ ಅವರು ನನ್ನ ನಿಯಮಗಳನ್ನು ಪೂರ್ಣವಾಗಿ ಪಾಲಿಸಿ ಭೂಮಿಯಮೇಲೆ ಎಂದೂಸ್ಥಾಪಿಸಲ್ಪಡವ ಪೂರ್ಣ ಸ್ವಾತಂತ್ರ್ಯವಾತಾವರಣದಲ್ಲಿ ಇರಲು ಆಗುವುದೆಂದು ನಾನು ಮುಂದೆಹೆಜ್ಜೆ ಇಡುತ್ತಿರುವೆನು. ಇನ್ನು ಶಿಸ್ತಿನ ವಿಷಯಕ್ಕೆ ಒಂದುಮಾತು. ಈ ಬಗ್ಗೆನಾನು ಹೇಳುವ ವಿಷಯಕ್ಕೆ ಸತ್ಯಾಗ್ರಹಿಕೈದಿಗಳೂ ಇತರರಾಜಕೀಯ ಕೈದಿಗಳೂ ಗಮನಕೊಡಬೇಕೆಂದು ಆಶಿಸುತ್ತೇನೆ. ಕಾಂಗ್ರೆಸ್ ಜನರೆಲ್ಲಾ ಆಶಿಸ್ತಿನಿಂದಿರುವರೆಂದಾಗಲಿ, ಸತ್ಯಾಗ್ರಹಿಗಳೆಲ್ಲಾ ಆಯೋಗ್ಯರೆಂದಾಗಲಿ ಹೇಳುವುದು ತಪ್ಪು. ಆಶಿಸ್ತಿನ ದೊಡ್ಡ ಉದಾಹರಣೆಗಳು ನನ್ನ ಗಮನಕ್ಕೆ ತರಲ್ಪಟ್ಟಿವೆ ಅಹಿಂಸೆಯು ಸೋಗಿನಿಂದ ಕೆಲ ಹಿಂಸಾಪ್ರವೃತ್ತಿಯ ಜನರು ಸಂಸ್ಥೆಯೊಳಗೆ ಬಂದಿರುವರು. ಆದರೆ ಒಳ್ಳೆಯ ಶಿಸ್ತಿನ ಉದಾಹರಣೆಗಳೂ ನನಗೆ ಗೊತ್ತಿವೆ ಕಾಂಗ್ರೆಸ್ಸಿನಲ್ಲೂ, ಕೈದಿಗಳಲ್ಲೂ ವಿಶ್ವಾಸಾರ್ಹರಾದ ಜನರಿರುವರೆಂಬುದು ಗೊತ್ತಿದೆ. ಅಂಥಹವರಹೆಸರಿನಲ್ಲಿ ಅವರಿಗಾಗಿ ನಾನು ಈ ಚಳವಳಿಯನ್ನು ನಡೆಸಿರುವೆನು. ಅಂಥಹವರಿಂದಲೇ ನನಗೆ ಜಯವು ದೊರೆಯಲಿದೆ. ವಿಶ್ವಾಸಾರ್ಹರಿಂದ ಬಲಹೀನರನ್ನು ಅಲ್ಲಗಳೆದಂತಲ್ಲ - ನಲ್ಲಿಗೆ ಹಾಕಲ್ಪಡಲು ಸಂತೋಷವಾಗಿಹೋಗುವ ಜನರು ಎಷ್ಟು ಪ್ರಮಾಣಕ್ಕೆ ಪಾತ್ರರೋ – ತನ್ನ ಕೆಲಸವನ್ನು ಸರಿಯಾಗಿ ಮಾಡುವ 7 ವರ್ಷದ ಹುಡುಗನ್ನು ಅಷ್ಟೇ ಪ್ರಶಂಸಾಯೋಗ್ಯನು.

ಇವೆಲ್ಲಾ ಆರಿಕೆಯ ಫಲ. ಈ ಪರೀಕ್ಷೆಗೆ ಯಾರು ತಡೆಯಲಾರರೋ – ಇಂಥಹವರು ಗೌರವದಿಂದ ಹೊರನಿಲ್ಲಬೇಕು – ಸ್ವಾರ್ಥಸಾಧಕರೂ, ಡಂಭಾಚಾರಿಗಳೂ - ಪರೀಕ್ಷೆಯ ಬಿಸಿಗೆ ತಡೆಯಲಾರದೆ ಹೊರಗೆ ಹೋಗುವರು. ಇಂಥವರಿಗೊತ್ತಾದಾಗ ಹೊರಗೆ ಹಾಕಲ್ಪಡುವರು.

ಕಾಂಗ್ರೆಸು ಮತ್ತು ಜನಕ್ಕೆ ಹೊಂದಿ ಕೊಂಡಿರುವ ಜನಸಂಬಂಧವು ಸಂಸ್ಥೆಯನ್ನು ಕೊಲ್ಲಲಾರದು. ಹೊರಗೆ ಕಾಣಿಸಿರುವ ವ್ಯವಹಾರಗಳಿಲ್ಲದಿರುವಕಾರಣ ಕಾಂಗ್ರೆಸ್‌ಗೆ ಜೀವವಿಲ್ಲದಂತೆ ಕಾಣುತ್ತಿರಬಹುದು. ಶಾಸನಸಭೆಗಳಕೆಲಸ, ಶಾಸನ ಭಂಗಚಳುವಳಿಯು ನಿಯಮಿತ ಏರ್ಪಾಟಿನಂತೆ ನಡೆಯುತ್ತಿದೆ. ನಾವು ನಿಧಿಸಿದಂತೆಯೇ ಶಾಸನಸಭೆಗಳ ಕಾರ್ಯವು ಮೂಲೆಗೆ ಬಿದ್ದಿದೆ. ಸತ್ಯಾಗ್ರಹದ ಸಂಖೆಯು ಹತ್ತತ್ತಕ್ಕೆ ಳೆಯಲಿ ಎರಡಕ್ಕೆಳೆಯಲಿ ಏನೂ ಭಯವಿಲ್ಲ ನಮ್ಮ ಸ್ವಂತ ಸಭೆ ಇವ್ವಾಗ ಶಾಸನಸಭೆಗಳ ಕೆಲಸ ನೋಡೋಣ ಇದು ಕೆಲವರ ಹೋರಾಟವೆಂಬುದನ್ನೂ, ನಮಗೆ ಭಾಷಣ ಸ್ವಾತಂತ್ರ್ಯವು ದೊರೆತಾಗ ನಾವು ಚಳವಳಿಯನ್ನು ನಿಲ್ಲಿಸುವೆವೆಂದೂ ಎಲ್ಲರೂ ತಿಳಿಯಲಿ.

ಡಿಯನ್: ಡಿ. ಶಂಕರರವರ ಬಂಧನ

ಭದ್ರಾವತಿ ಲೇಬರಯೂನಿಯನ್ನಿನ ಅಧ್ಯಕ್ಷರಾದ ಶ್ರೀ ಯನ್. ಡಿ. ಶಂಕರ ಇವರನ್ನು ಭಾರತರಕ್ಷಣಶಾಸನದಡ್ಡಿಯ ಬಂಧಿಸಲಾಗಿದೆ. ಸಂಘಟಿತ ಕಾರ್ಯಪಲ್ಲಿ ಇವರು ಮಗ್ನರಾಗಿದ್ದರು. ಜನರಲ್ ಮ್ಯಾನೇಜರ ದೊಡನೆ ಕೂಲಿಕಾರರ ಕುಂದುಕೊರತೆಗಳ ವಿಷಯವಾಗಿ ಸಂಭಾಷಣೆಯ ಅವಕಾಶವನ್ನು ಬೇಡಿದರೆ ಸಂಘವುರಿಜಸ್ಟರಾಗಿಲ್ಲವೆಂಬ ಕಾರಣದಿಂದ ನಿರಾಕರಿಸಲ್ಪಟ್ಟತು. ಶ್ರೀ ಕೆ. ಟಿ. ಭಾಷ್ಯಂರವರು ಒಂದು ಹೇಳಿಕೆಯನ್ನು ಕೊಟ್ಟು ಇದರಿಂದ ಪರಿಸ್ಥಿತಿಯು ಕೆಡುವುದೆಂದುತಿಳಿಸಿದ್ದಾರೆ

ಮೆಟ್ರ

28 10-41ನೆಯತಾ ಸಾಯಂಕಾಲ ಬಳ್ಳಾರಿಜಿಲ್ಲಾ ವಿದ್ಯಾರ್ಥಿ ಕಾರಿಗಳಾದ ಶ್ರೀ ಕನ್ನಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದಿತು. ಶ್ರೀ ದೊಡ್ಡನಗೌಡರು ರಚಿಸಿದ ಸ್ವಾಗತ ಗೀತೆಯನ್ನು ಶ್ರೀ ಅಮರಯ್ಯನವರು ಹೇಳಿದನಂತರ ಪ್ರದಾನೋಪಾಧ್ಯಾಯರಾದ ಶ್ರೀ ಶೀತಾರಾಮಭಟ್ಟರು ಶಾಲಾವರದಿಯನ್ನೂ ಶ್ರೀ ಪ್ಯಾಜೇಕಾರ್ಯರು ವಿದ್ಯಾರ್ಥಿನಿಲಯದ ವರದಿಯನ್ನೂ, ಓದಿದರು ಶ್ರೀ ಮಹದೇವಯ್ಯನವರು ದಿವಂಗತ ಕುರುಬರ ಗುಂಡಪ್ಪನವರ ಜೀವನಚರಿತ್ರೆಯನ್ನು ತಿಳಿಸಿ ಅವರ ಔದಾರ್ಯವನ್ನು ಕೊಂಡಾಡಿ ಅವರ ಭಾವಚಿತ್ರದ ಅನಾವರಣಮಾಡಲು ಅಧ್ಯಕ್ಷರನ್ನು ಕೇಳಿದರು. ಅಧ್ಯಕ್ಷರು ಗುಂಡಪ್ಪನವರಗುಣಗಾನಮಾಡಿ ಉಪಾಧ್ಯಾಯರು ಕರ್ತವ್ಯದಕ್ಷರಾಗಿರಬೇಕೆಂದುಸೂಚಿಸಿ ಭಾವಚಿತ್ರವನ್ನು ಬಹಿರಂಗಪಡಿಸಿದರು ಶ್ರೀ ಕರಣಂಭೀಮರಾಯರೂ ಶಿವಣ್ಣನವರೂ ಭಾಷಣಮಾಡಿದರು. ನಂದ ನಾರ್ಪಣೆಯಿಂದ ಸಭೆಯುಮುಗಿಯಿತು. ಸಭೆಗೆ ರೇಂಜುಡೆ ಇದು ನೆರೆಹೊರೆಯವ್ಯಾಮಸ್ಥರು ಆಗಮಿಸಿದ್ದರು. ಟೀಪಾರ್ಟಿಏರ್ಪಡಿಸಲಾಗಿತ್ತು.

6ನೇ ಪುಟದಿಂದ ಬಂದದ್ದು

ಪುದು ಅದರೂ ತೆರಿಗೆಗಳನ್ನು ಹಾಕಿದ ಕಾಲದಲ್ಲಿ ಸರ್ಕಾರದ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ತೆರಿಗೆಗಳನ್ನು ಪರೋಕ್ಷ, ಪ್ರತ್ಯಕ್ಷ ಎಂದು ಸಾಮಾನ್ಯವಾಗಿ ವಿಂಗಡಿಸಲು ಸಾಧ್ಯ.

—ನೆಲ್ಲೂರಿನಲ್ಲಿ ಹಿಂದೂ ಮುಸಲ್ಮಾನರ ವೈಷಮ್ಯದಿಂದ ಪರಿಸ್ಥಿತಿಯು ತಡಕೆಟ್ಟದೆ. ನೂರಾರು ಜನರು ಕತ್ತಿಯ ಇರತದಿಂದ ಘಾಯ ಸೊಂಡಿರುವರು. ಇಲ್ಲಿಯವರೆಗೆ ಇಬ್ಬರು ಸತ್ತಿರುವರು. ಹಿಂದೂ ಮುಸಲ್ಮಾನರ ಅನೇಕ ಮನೆಗಳಿಗೆ ಬೆಂಕ್ಕಿ ಹೆಚ್ಚಾಗಿದೆ. ಸರಕಾರದವರು ಪರಿಸ್ಥಿತಿಯನ್ನು ಹತೋಟಿ ಯಲ್ಲಿಟ್ಟಿರುವರು.

3ನೇ ಪುಟದಿಂದ ಬಂದದ್ದು

ಅಲ್ಪ ಸಮಯದೊಳಗಾಗಿ ಇಂಥಾ ಅಭಿವೃದ್ಧಿಯು ತೋರಿದ್ದು ಉತ್ಸಾಹ ದಾಯಕವಾಗಿದೆ. ವಿದ್ಯಾಭ್ಯಾಸಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬಹುದೆಂಬ ಅಪೇಕ್ಷೆಯು ಇದ್ದರೂ ಯುದ್ಧ ಕಾರಣದಿಂದ ಖರ್ಚು ಕಡಮೆ ಮಾಡಬೇಕಾಗಿದೆ.

ಗ್ರಾಂಟು ಹಣ ಹೆಚ್ಚಿಸಿದ್ದೇವೆ:—

ಗ್ರಾಂಟು ಹಣವನ್ನು ಹೆಚ್ಚಿಸುವುದೆ 'ಪ್ರೋರಾಟಕಟ್' (Prorata cuts) ತೆಗೆಯುವುದು ಗ್ರಾಂಟು ಶಾಲೆಗಳ ಮ್ಯಾನೇಜರರು ಕೇಳಿದ ಪ್ರಾರ್ಥನೆಗಳಲ್ಲಿ ಮುಖ್ಯವಾಗಿವೆ. ಪ್ರೋರಾಟಕಟ್ ಏನೋ ಮಾಯವಾದಂತಿದೆ. ಖರ್ಚಿನಲ್ಲಿ ಕಡಮೆ ಮಾಡಬೇಕಾದ ಪರಿಸ್ಥಿತಿ ಯೊದಗಿದ್ದರೂ, 1936-37 ನೇ ಇಸವಿಗಿಂತ 1941ರ ವರೆಗೆ ಈ ಐದು ವರ್ಷಗಳಲ್ಲಿ 28 ಲಕ್ಷ ರೂ ಗ್ರಾಂಟನ್ನು ಹೆಚ್ಚಿಗೆ ಮಾಡಿದ್ದೇವೆ. ಅಂದರೆ 1937 ರಲ್ಲಿ ಏಡೆಡ್ ಗ್ರಾಂಟು ಶಾಲೆಗಳಿಗೆ 51,82,000 ರೂ. ಗ್ರಾಂಟು ಕೊಡಲಾಗಿತ್ತು. 1941 ರಲ್ಲಿ ಅದು 79,89,000 ರೂ. ಕೊಡಲಾಗಿದೆ ಪೂರ್ವ ಪದ್ಧತಿಯ ಪ್ರಕಾರಕ್ಕೆ ಶೇಕಡ 50 ಭಾಗ ಮಾತ್ರ ಸರಕಾರವು ಕೊಡುತ್ತಿತ್ತು. ಉಳಿದರ್ಧವನ್ನು ಮ್ಯಾನೇಜರರ ಸಾಲ ಸಂಬಳದಿಂದ ಒದಗಿಸಿಕೊಳ್ಳಬೇಕಾಗಿತ್ತು. ಪ್ರಾಥಮಿಕ ಶಾಲೆಗಳ ವಿಷಯದಲ್ಲಿ ಹೇಳಬೇಕೆಂದರೆ ಈ ಗ್ರಾಂಟು ಪದ್ಧತಿಯು ಕಟ್ಟು ಹೋಗಿದೆ. ಸರಕಾರವು ಪ್ರಾಥಮಿಕ ಪಾಠಶಾಲೆಗಳ ಶೇಕಡ 90 ಭಾಗದ ಖರ್ಚನ್ನೆಲ್ಲಾ ಸಾರ್ವಜನಿಕ ಹಣದಿಂದಲೇ (Public Revenues) ಭರಿಸಬೇಕಾಗಿದೆ. 1936 ರಿಂದ ಹೈಯ್ಯರ್ ಎಲಿಮೆಂಟರಿ ಗ್ರೇಡ್ ಮತ್ತು ಸೆಕೆಂಡರಿ ಗ್ರೇಡ್ ಶಿಕ್ಷಣ ಹೊಂದಿದವರಿಗೆ ಗ್ರಾಂಟು ಹೆಚ್ಚಿಸಲಾಗಿದೆ. **ಏಡೆಡ್ ಸ್ಕೂಲ್ ಟೀಚರುಗಳ ಸಂಬಳವನ್ನು ಇನ್ನೂ ಕಡಮೆಯೆಂಬುದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಮೇಲ್ಕಾಣಿಸಿದಂತೆ ಗ್ರೇಡ್‌ವಾರಿ ಹೆಚ್ಚಿಸಿರುವುದು, ೩ ತಿಂಗಳಿಗೊಂದು ಸಲ ಗ್ರಾಂಟು ಕೊಡುವ ಪದ್ಧತಿ. ಸರ್ವಿಸ್ ರಿಜಿಸ್ಟರ್ ತೆಗೆಸುವುದು ಇವೇ ಕಾರಣಗಳಿಂದ ಈ 4 ವರ್ಷಗಳಲ್ಲಿ ಅವರ ಪರಿಸ್ಥಿತಿಯು ಸುಧಾರಿಸಿದೆಯೆನ್ನಬಹುದು.**

ಬಾಲಿಕೆಯರ ಸಂಖ್ಯಾನಿಯಮ:-

ಬಾಲಿಕೆಯರ ಶಾಲೆಗಳಿಲ್ಲದ ಕಡೆ ಶೇಕಡ 25 ಶಾಲಾಯೋಗ್ಯ ವಯಸ್ಸಿನ ಬಾಲಿಕೆಯರು ಗಂಡು ಹುಡುಗರ ಶಾಲೆಗಳಲ್ಲಿರಬೇಕೆಂಬ ಹೊಸ ನಿಯಮದಿಂದ ಅಲ್ಲಲ್ಲಿ ಗಡ್ಡಲನೆದ್ದಿರಬಹುದೆಂಬುದು ನನಗೆ ಗೊತ್ತು. ಆರ್ಥಿಕ ಕಷ್ಟವೆಂಬ ನ್ಯಾಯ ಕಾರಣವನ್ನು ಮುಂದಿಡುತ್ತಾರೆ. ಆದರೆ ಇದು ಹುಡುಗರಿಗೂ ಅನ್ವಯವಾಗುತ್ತದೆ. ಸಾರ್ವಜನಿಕ ಸಂಸ್ಥೆ, ದಯಾಧರ್ಮ ಭಾವನೆಗಳಿಂದ ಕೂಡಿದ ದಾತರು, ಸ್ತ್ರೀ ವಿದ್ಯೆಯಲ್ಲಿ ಆಸಕ್ತರು ಇಂಥಹವರಿಂದ ಬಟ್ಟೆ ಪುಸ್ತಕ ಸ್ಲೇಟು ಮಧ್ಯಾನ್ನದ ಊಟಕ್ಕೆ ಏರ್ಪಡಿಸುವುದಾದಲ್ಲಿ ಹಾಜರಿಯು ಸರಿ ಹೋಗುತ್ತೆ. ಆರ್ಥಿಕ ಕಷ್ಟದಲ್ಲಿ ಸಹಾಯ ಮಾಡಿದಂತಾಗುತ್ತದೆ ಗ್ರಾಮರ ವಿದ್ಯಾಪ್ರೇಮಿ ಸಲಹೆಗಾರರು ಶಾಲೆಗಳಲ್ಲಿ ಬಾಲಕಿಯರ ಸಂಖ್ಯೆಯನ್ನು ಇನ್ನೂ ಹೆಚ್ಚಿಸಲು ಸಹಕಾರದವರು ನಿರ್ಣಯಿಸಿರುವರೆಂದು ತಮ್ಮ ಭಾಷಣಗಳಲ್ಲಿ ಸೂಚಿಸುತ್ತಾರೆ. ಬಾಲಕಿಯರ ಶಾಲೆಗಳಿಲ್ಲದಿರುವ ಕಡೆ ಬಾಲಿಕೆಯರ ರೆಸ್ಪೋನ್ಸ್ ಗಂಡು ಹುಡುಗರ ಶಾಲೆಗಳಿಗೆ ಕಳಿಸಿದ ಜುಲೈದಿಂದ ಸಾವಿರಗಟ್ಟಲೆ ಸೇರಿರುವರು.

ಪ್ರಚಾರದ ಅವಶ್ಯಕತೆ.

ಪ್ರಚಾರದಿಂದ ಇನ್ನೆಷ್ಟೋ ಕಾರ್ಯವಾಗಿದೆ ಪ್ರಚಾರದೊಂದಿಗೆ ಹಣ ಸಹಾಯವಾಗಿ ಬಡ ಹುಡುಗಿಯರಿಗೆ ಊಟ ಮತ್ತು ಶಾಲೋಪಕರಣಗಳ ಉಚಿತವಾಗಿ ದೊರೆಯುವುದಾದರೆ ಬಡಕೃತ್ಯಗಳಿಗೂ ವಿದ್ಯಾಭ್ಯಾಸ ತತ್ವಕ್ಕೂ ಒಳ್ಳೆ ಸಹಾಯವಾಗುತ್ತದೆ. ಎರಡು ವರ್ಷಗಳ ಕೆಳಗೆ ನಾನು ಹೀಗೆ ಏನಂತಿ ಮಾಡಿದ್ದೆ ಇದರಿಂದ ಆಗಬೇಕಾದ ಸಹಾಯವಾಗಲಿಲ್ಲವೆಂದು ವಿಷಾದಿಸುತ್ತೇನೆ ಹಳ್ಳಿಗಳಲ್ಲಿ ಹೋಗಿ ಕೆಲಸಮಾಡಿ ಆರ್ಥಿಕ ಸಹಾಯ ಒದಗುವಂತೆ ಯತ್ನಿಸುವ ಸ್ತ್ರೀಕಾರ್ಯಕರ್ತರೂ ಕಡಮೆ. ನಮ್ಮ ರಾಜಸಭೆಗಳು ಜಿಲ್ಲಾ ಬೋರ್ಡು ಮುನಿಸಿಪಾಲಿಟಿ ಮತ್ತು ಇತರೇ ಜನೀಕ ಸಂಸ್ಥೆಗಳಲ್ಲಿರುವ ಸ್ತ್ರೀ ಸದಸ್ಯರು ಮುಂದೆಬಂದು ತಮ್ಮವರ್ಗಕ್ಕೆ ಸೇರಿದ ಪ್ರತಿಯೊಬ್ಬ ಬಾಲಿಕೆಯು ಎಷ್ಟೇ ಹಿಂದುಳಿದಿರಲಿ ಯಾವ ಜಾತಿಗೆ ಸೇರಿರಲಿ ಎಷ್ಟೇ ಬಡವರಿರಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕನಿಷ್ಟಾವಶ್ಯಕತೆಯನ್ನಾಗಿ ಮಾಡಬೇಕೆಂದು ನಾನು ಅತ್ಯಂತ ದೈನ್ಯದಿಂದ ಬೇಡುತ್ತೇನೆ.

ಪ್ರಾಥಮಿಕ ಶಾಲೆಗಳು

ನಿಯಮುಗಳ ಪಾಲನೆಯು ಅಸಾಧ್ಯ

'ನವಭಾರತ' ಸಂಪಾದಕರಿಗೆ

ಹರ್ಲಹಳ್ಳಿ ತಾಲ್ಲೂಕು ಬೋರ್ಡು ಪ್ರೈಮರಿ ಉಪಾಧ್ಯಾಯರುಗಳು ಹರ್ಲಿನ ಹಳ್ಳಿಯಲ್ಲಿ ಶ್ರೀಯುತ ಜಿ. ಬಸಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಡೈರೆಕ್ಟರವರ ಹುಕುಂ ಪ್ರಕಾರ 4 ನಿಯಮುಗಳಿಗೆ ಸರಿಯಾಗಿ ಶಾಲೆ ನಡೆಸಲು ಸಾಧ್ಯವಿಲ್ಲವೆಂಬ ವಿಷಯವನ್ನು ಶ್ರೀ ಡೈರೆಕ್ಟರ ವರಿಗೂ, D. E. O. ರವರಿಗೂ. ಜಿಲ್ಲಾಬೋರ್ಡು ಅಧ್ಯಕ್ಷರಿಗೂ ತಿಳಿಸುತ್ತಾ ಈ ರೂಲು ಜಾರಿಗೆ ತರಬಾರದಾಗಿ ಕೇಳಿಕೊಳ್ಳೋಣಾಯ್ತು

ಅವರ ಉತ್ತರ್ಚಿನಲ್ಲಿ 2ನೇ ನಿಯಮದಲ್ಲಿ ತೋರಿಸಿರುವ ಪ್ರಕಾರ ನಡೆಯಬೇಕೆಂದರೆ ಒಂದನೇ ತರಗತಿಗೆ ಹೆಚ್ಚು ಬಾಲಕರನ್ನು ಸೇರಿಸಬಹುದು. ಆದರೆ 3ನೇ ನಿಯಮ ಪ್ರಕಾರ ಈ ಹೆಚ್ಚಿಸಿದ ಸಂಖ್ಯೆಗೆ ಸಾಮಾನ್ಯ ¼ ಅಂಶ ಬಾಲಕರು 3ನೇ ತರಗತಿಯಲ್ಲಿ ಇರುವಂತೆ ಮಾಡುವುದು ಹೇಗೆ? 5ನೇ ತರಗತಿಯ ಯೋಗ್ಯತೆಯುಳ್ಳ ಬಾಲಕರನ್ನು ಗ್ರಾಮಗಳಲ್ಲಿ ಎಲ್ಲಿಂದ ತರಬೇಕು ಅಂದ ಮೇಲೆ 3ನೇ ನಿಯಮ ಪರಿಹೋರ್ತರೆ 2ನೇ ನಿಯಮ ಸರಿಹೋಗುವುದಿಲ್ಲ. 3ನೇ ನಿಯಮ ಸರಿ ಹೋದರೆ 2ನೇ ನಿಯಮ ಪ್ರಕಾರ ವರಾಸರಿ 30 ಒರಲು ಸಾಧ್ಯವಿಲ್ಲ

ಎಲಿಮೆಂಟರಿ ಶಾಲೆಗಳಲ್ಲಿ ಪ್ರತಿಯೊಬ್ಬ ಬಾಲಕನ ವಿಷಯದಲ್ಲಿ ಪೂರ್ಣ ಪ್ರಯತ್ನವಹಿಸಬೇಕಾಗುತ್ತದೆ ಅಂದರೆ ಪ್ರತಿ ಸ್ಕೂಲುಗಳಲ್ಲಿರುವಂತೆ ಲೆಕ್ಕದ ಹೊಡೆದು ಹೋಗುವುದಕ್ಕೆ ಬರುವುದಿಲ್ಲ ಪ್ರತಿಯೊಬ್ಬ ಬಾಲಕನು ನಾವು ಹೇಳಿದ ವಿಷಯವನ್ನು ಗ್ರಹಿಸಿರುವನೋ ಇಲ್ಲವೋ ಎಂಬುದಕ್ಕೆ ಆಗಾಗ್ಗೆ ಪ್ರತಿಯೊಬ್ಬನನ್ನು ವಿಚಾರಿಸಬೇಕು. ಕಷ್ಟಗಳು ಇಷ್ಟೆಲ್ಲಾ ಇದ್ದರೂ ಫೆಬ್ರವರಿ 20 ಬರುವಾಗ ಕೂಡ ಒಂದೊಂದು ಶಾಲೆಯಲ್ಲಿ 2-3 ಹುಡುಗರು 2 ವರ್ಷ ಪ್ರೊಮೋಟು ಒಂದೇ ತರಗತಿಯಲ್ಲಿರುವ ಪ್ರಸಂಗ ಬರುತ್ತಿತ್ತು. ಅಂದ ಮೇಲೆ ಒಬ್ಬೊಬ್ಬ ಉಪಾಧ್ಯಾಯನಿಗೆ 30 ವರಾಸರಿ ವಿದ್ಯಾರ್ಥಿಗಳಿರುವ ನಿಯಮವಾದರೆ ಮಕ್ಕಳಿಗೆ ವಿದ್ಯೆ ಕಲಿಸುವುದು ಎಷ್ಟು ಕಷ್ಟವೆಂಬುದು ಡೈರೆಕ್ಟರು ಪ್ರಭುಗಳ ಆಲೋಚಿಸಿ ಮೊದಲಿನಂತೆ ಒಬ್ಬೊಬ್ಬ ಉಪಾಧ್ಯಾಯನಿಗೆ ವರಾಸರಿ 20 ಒಂದರೆ ಸಾಕೆಂಬುವ ರೂಲನ್ನು ಜಾರಿಗೆ ತರಬೇಕಾಗಿ ವಿಜ್ಞಾಪಿಸುತ್ತೇನೆ

ತಮ್ಮ,

ಗು. ರಾ. ಹರಪನಹಳ್ಳಿ.

....ತಾಯಲೆಂಡ ಗಡಿಯಲ್ಲಿ ಜಪಾನರ ಇಂಡೋ-ಚೀನಾದ ಭಾಗದಿಂದ ಗುಂಡುಗಳನ್ನು ಹಾರಿಸುತ್ತಲೇ ಇದ್ದಾರೆ. ಇವೆಲ್ಲಾ ಬೆದರಿಕೆಯ ಆಟವೆಂದು ಹೇಳಲಾಗಿದೆ.

ರಾಯಲಸೀಮ ಬ್ಯಾಂಕು ಲಿಮಿಟೆಡ್.

[ಇಂಡಿಯಾ ಸರ್ಕಾರದ ಕಂಪನಿ ಶಾಸನಗಳನ್ನನುಸರಿಸಿ ಸ್ಥಾಪಿಸಲ್ಪಟ್ಟಿದೆ]

ಮುಖ್ಯ ಕಾರ್ಯಾಲಯ: ಬಳ್ಳಾರಿ.

ಪ್ರಥಮ ವರ್ಷದ ಪ್ರಗತಿ

ಡಿಪಾಜಿಟ್ಟುಗಳು.	31—10—1940	30—9—1941
ಫಿಕ್ಸೆಡ್	ರೂ. Nil	61,930
ಕರೆಂಟ್	,, 3,173	35,122
ಸೇವಿಂಗ್ಸ್	,, 1,231	16,621
ಇತರ	,, 40	678
ಸಾಲಗಳು.		
ಭಂಗಾರ	,, 520	21,673
ಮಾಲು	,, Nil	28,441
ಇತರ	,, Nil	6,264
ಇತರ ಆಸ್ತಿ		
ಸರ್ಕಾರದ ಬಾಂಡುಗಳು	,, 13,300	22,538
ಬ್ಯಾಂಕುಗಳಲ್ಲಿರುವ ಹಣ	,, 32,502	49,910
ಕೈಯಲ್ಲಿ ನಗದು	,, 5770	25,477
ಒಟ್ಟು ವ್ಯವಹಾರ ಪೊತ್ತ	ರೂ. 1.14,774	1,93,653

ಶಾಖೆಗಳು: [1] ತಿಮ್ಮನಚರ್ಲ [ಗುಂತಕಲ್] [2] ಕೊಟ್ಟೂರು. [3] ಉರವಕೊಂಡ

ಬಿ. ನಿ. ಶೇಷಗಿರಿರಾವ್, ಬಿ. ಕಾಂ ; ಹೆಚ್. ಸೀತಾರಾಮರೆಡ್ಡಿ, ಬಿ. ಎ., ಬಿ. ಎಲ್., [ಎಂ ಎಲ್ ಎ.]
ಕಾರ್ಯದರ್ಶಿ. ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ರಷ್ಯಾ ಜರ್ಮನಿ ಯುದ್ಧ

ಸ್ಮಾಲನೋವ, ಟಾಗನರಾಗ ಕಾರ್ಖಾನಗರಗಳು ಜರ್ಮನರ ವಶವಾದವೂ

ನಿನ್ನೆಯ ಒಂದುವಾರ ಪೂರ್ವರಂಗದಲ್ಲಿ ಘನ ಘೋರಯುದ್ಧವಾಯಿತು ಜರ್ಮನರು ಜನಸಾಮಗ್ರಿಗಳ ನಷ್ಟವನ್ನು ಲಕ್ಷಿಸದೆ ಮಾಸ್ಕೋದ ಕಡೆ ನುಗ್ಗುತ್ತಿರುವರು ದಕ್ಷಿಣದಲ್ಲಿ ಜರ್ಮನರು ಬಹುದೂರ ನುಗ್ಗಿರುವರು.' ಅಜೋವನಮುದ್ರನ್ನು ಟಾಗನ್‌ರಾಗ ನಾಜಿಗಳವಶವಾಗಿದೆ. ಮೊಜೈಸ್ಕ ಬಳಿ ಒಂದು ಕಡೆ ನಾಜಿಗಳು ರಷ್ಯಾದ ವ್ಯೂಹವನ್ನು ಭೇದಿಸಿರುವರು 12 ದಿನಗಳ ಯುದ್ಧದಲ್ಲಿ 3 ಲಕ್ಷ ಜರ್ಮನರು ಸತ್ತಿರಬೇಕೆಂದು ಪ್ರಕಟನೆಯೊಂದು ಹೊರಟಿದೆ. ರಷ್ಯಾದ ಸರ್ವಾಧಿಕಾರಿಗಳಾದ ಸ್ಟಾಲಿನ್‌ರು ರಕ್ಷಣ ಸಮಿತಿಯೊಂದಿಗೆ ಮಾಸ್ಕೋದಲ್ಲೇ ಇದ್ದಾರೆಂದು ವಾರ್ತೆ. ದಕ್ಷಿಣದಲ್ಲಿ ಡಾನೆಟಜ ಮತ್ತು ಉಕ್ರೇನ ಪ್ರದೇಶದ ಪೂರ್ಣ ಅಕ್ರಮಣಕ್ಕಾಗಿ ಜರ್ಮನರು ಹೊಸದಾಗಿ ಸೈನಿಕ ಪಡೆಗಳನ್ನು ತರುತ್ತಲೇ ಇರುವರು ಡಾನೆಟ್ಟಬೇಸಿನ್ನಿನಲ್ಲಿ ಮುಖ್ಯ ನಗರವಾದ ಸ್ಟಾಲಿನೋವ ತಮ್ಮ ಅಲ್ಲಿ ಅತಿಮುಖ್ಯ ಭಾಗವಾದ ರೊಸ್ಟಾಟವ ನಗರವು ಬಹಳ ತೀವ್ರಾಯ ಸ್ಥಿತಿಯಲ್ಲಿವೆ. ಮಾಸ್ಕೋ ಮಂಡಿ ನುಗ್ಗಲು ಸಾಹಸ ಪಡುತ್ತಿರುವರು

ಅಮೆರಿಕಾವು ರೂಸವೆಲ್ಟರು ಮೇಲಿಂದ ಮೇಲೆ ರಷ್ಯಾಕ್ಕೆ ಸಹಾಯ ಮಾಡುವ ವಾಗ್ದಾನಗಳನ್ನು ಕೊಡುತ್ತಲೇ ಇದ್ದಾರೆ. ಆವರೆ ಅಲ್ಲಿ ಏಳು ಉಕ್ಕಿನ ಕಾರ್ಖಾನೆಗಳ 53 ಸಾವಿರ ಮಂದಿ ಕೂಲಿಕಾರರು ಕೆಲಸಕ್ಕೆ ಹೋಗದೆ ಮುಷ್ಕರ ನಡೆಸಿದ್ದಾರೆ.

ಫ್ರಾನ್ಸಿನಲ್ಲಿ ಒಬ್ಬ ಜರ್ಮನ ಅಧಿಕಾರಿಯ ಕೊಲೆಗಾಗಿ ನೂರು ಫ್ರೆಂಚರನ್ನು ಕೊಲ್ಲುವ ಕಾರ್ಯಕ್ರಮಕ್ಕೆ ಸ್ವಲ್ಪ ತಡೆಯನ್ನುಂಟುಮಾಡಿದುದಕ್ಕೆ ಕಾರಣರಾರೆಂದರೆ ಜರ್ಮನ ಸೈನ್ಯಾಧಿಕಾರಿಯು ಕೇಳಿದ್ದಾನೆ. ಜರ್ಮನ ಅಧಿಕಾರಿಗಳನ್ನು ಕೊಲ್ಲಬೇಡಿರೆಂದು **ಮಾರ್ಷಲ್ ಪಟೇನರು** ಫ್ರೆಂಚ್ ಜನತೆಯನ್ನು ಬೇಡಿದ್ದಾರೆ.

ಹಿಂದು ಸ್ಥಾನ

—ನಿಜಾರಣೆಯಿಲ್ಲದೆ ಬಂಧಿತರಾಗಿದ್ದವರ ಪೈಕಿ ಮುಖಂಡರಾದ ಶ್ರೀ ವಟ್ಟಾಭಿ ಸೀತಾರಾಮಯ್ಯ ಶ್ರೀ ಕಾಮರಾಜನಾಗೇಶ್ವರ್ ಕಾಳೇಶ್ವರರಾವ್ ರಂಗಯ್ಯನಾಯಿಡು ಮಾಧವನಮನನ್, ದಿನಕರಸ್ವಾಮಿ ಇವರು ನವಂಬರ್ 1 ನೆಯ ತಾರೀಖಿಗೆಯಾಗಲು ಸರ್ಕಾರವು ಆಜ್ಞೆಯು ಹೊರಟಿತು.

— ಈಗ ನಡೆಯುತ್ತಿರುವ ವೈಯ್ಯಕ್ತಿಕ ಸತ್ಯಾಗ್ರಹದ ವ್ಯಾಪ್ತಿಯನ್ನು ಕಡಮೆ ಮಾಡಿ ಕೆಲ ಸತ್ಯಾಗ್ರಹಿಗಳನ್ನೇ ಇಟ್ಟುಕೊಂಡು ಹೆಚ್ಚಿನ ನಿರ್ಬಂಧ ಹಾಕಲು ಅನುಹಾತ್ಮಗಾಂಧಿಯವರು ಆಲೋಚಿಸಿದ್ದಾರೆಂದು ತಿಳಿದು ಬಂದಿದೆ.

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟೆ.

ಇವರ A.S. ಬ್ರಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಸೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **A. S.** ಸೀಲನ್ನು ಗಮನಿಸಿ. ಕೊಳ್ಳಿರಿ. ಮೋಸಹೋಗಬೇಡಿರಿ.

ದೊರೆಯುವ ಸ್ಥಳ:- 1.) ಎಂ. ಪುಟ್ಟೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ. ಮತ್ತು 2) ಖಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳುನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ವೇಸ್ಟ್ ಎಂಡ ವಾಚು ಗಳೂ ಹೊಡ್ತ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ ಗ್ಯಾರಂಟಿ ದಾರದ ಕ್ರೋಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary.

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ ಪೈತ್ಯ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೪-೦

ಸ್ಟಾಕಿಸ್ಟ್- ತೋರಣಗಲ್ಲು ಮರಿಪ್ಪ, ಬಳ್ಳಾರಿ.

ಕನ್ನಡ ಭಗವದ್ಗೀತೆ.

ಶ್ರೀ ಕೃಷ್ಣ ಪರಮಾತ್ಮನ ದಿವ್ಯವಾಣಿಯಿಂದ ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಬೋಧಿಸಲ್ಪಟ್ಟ ಭಗವದ್ಗೀತೆಯ ಗಂಭೀರಾರ್ಥವನ್ನು ಸರಳವಾದ ಕುಸುಮ ಷಟ್ಪದಿಯ ಪದ್ಯ ಶೈಲಿಯಲ್ಲಿ ಕರ್ನಾಟಕದ ಸುಪ್ರಸಿದ್ಧ ಕವಿಗಳಲ್ಲೊಬ್ಬರಾದ ಶ್ರೀ ಎಂ. ಎಸ್. ಸುಬ್ಬಣ್ಣನವರು ಗ್ರಂಥ ರಚನೆ ಮಾಡಿರುವರು. ಇದಕ್ಕೆ ಅನೇಕ ಪಂಡಿತರ ಪ್ರಶಂಸೆಯು ದೊರೆತಿದೆ. ಕನ್ನಡಿಗರೆಲ್ಲರೂ ಇದನ್ನು ಕೈ ಕನ್ನಡಿಯಾಗಿ ಮಾಡಿಕೊಳ್ಳಲು ಸುಸಂಧಿ. ಸ್ವಲ್ಪ ಪ್ರತಿಗಳಿವೆ. ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್.

ಬೆಲೆ 0-12-0 ಪೋಸ್ಟು ಖರ್ಚು ಪ್ರತ್ಯೇಕ.

ಕಾಲವ ಸುಬ್ಬಣ್ಣ, ಮುಚ್ಚಂಟು, ಬಳ್ಳಾರಿ.

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local 2—0—0
Moffusil 3—0—0

6 Months

Local 1—4—0
Moffusil 2—0—0

ಚಂದಾ ವಿವರ

ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0

೬ ತಿಂಗಳಿಗೆ

ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. 3937.

Sri _____

_____

_____

Printed at Vittal Press, Car Street Edited & Published by T. B Keshava Rao, Bellary.

Reg. M. No. 3937. ವಂದೇ ಮಾತರಂ

ನವಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೬ ಬಳ್ಳಾರಿ ನವಂಬರ್ ೯ನೇ ಭಾನುವಾರ ೧೯೪೧. ಟಿ. ಬಿ. ಕೇಶವರಾವ್.

ಎಂಪೈರ್ ಆಫ್ ಇಂಡಿಯಾ

ಸ್ಥಾಪನೆ- ೧೯೪೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000 ರೂ.ಗಳಿಗೆ ಮಿಾರಿದೆ

ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ವಿಜಂಟರಿಂದ ವಿವರಗಳನ್ನು ತಿಳಿದು ಬೇಕಾದ ನಿಮೆ ಮಾಡಿರಿ.

ಕೇಂದ್ರ ಕಚೇರಿ:
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚು ಕಚೇರಿ:
ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ,
ಬೆಂಗಳೂರು ಸಿಟಿ.

ಭಾರತೀಯ ಸ್ವಾತಂತ್ರ್ಯ ದಿನವನ್ನಾಚರಿಸಿರಿ.

[12-11-41]

ಮಹಾತ್ಮಾ ಗಾಂಧೀಯವರ ನೇತೃತ್ವದಲ್ಲಿ ಭಾರತ ಸ್ವತಂತ್ರ್ಯವ ಹೋರಾಟವು ಪ್ರಾರಂಭವಾಗಿ ಈಗ ಒಂದುವರುಷವಾಯಿತು. ಮಹಾತ್ಮಗಾಂಧಿಯವರು ತಾ|| 28ನೇ ಅಕ್ಟೋಬರದ ದಿವಸ ಹೊರಡಿಸಿದ ಪತ್ರಿಕೆಯಲ್ಲಿ ಈ ಹೋರಾಟದ ಮರ್ಮವನ್ನು ತಿಳಿಸಿದರು. ಮಹಾತ್ಮರ ಹೇಳಿಕೆಯನ್ನು ಎಲ್ಲರಿಗೂ ತಿಳಿಸುವ ಉದ್ದೇಶದಿಂದ ತಾ|| 12-11-41ನೇ ಬುಧವಾರ ದಿವಸವನ್ನು ಭಾರತ ಸ್ವಾತಂತ್ರ್ಯ ದಿನವೆಂದು ಎಲ್ಲ ಕಾಂಗ್ರೆಸ್ ಸಂಸ್ಥೆಗಳೂ, ಕಾಂಗ್ರೆಸಿಗರೂ ಆಚರಿಸಬೇಕು. ಆದಿನ ಸಭೆಗಳನ್ನು ಏರ್ಪಡಿಸಿ ಮಹಾತ್ಮರ ಹೇಳಿಕೆಯನ್ನು ತಿಳಿಸಿ ಹೇಳಿ ಸತ್ಯದ ಅಹಿಂಸೋಲನದ ನಿಜವಾದ ಮರ್ಮವನ್ನು ತಿಳಿಸಿ ಹೇಳಬೇಕಾಗಿ ಬಿನ್ನವಿಸುತ್ತೇನೆ.

ಪತ್ತಾಶ್ರೇಯ ಕರಮಸಕರ
ಅಧ್ಯಕ್ಷ
ಕ. ಪ್ರ. ಕಾ. ಸ. ಧಾರವಾಡ.

'ಕಾಂಗ್ರೆಸನ್ನು ಸುಲಭವಾಗಿ ಮೂಲೆಗೆ ಕೂರಿಸಬಹುದು'

ಭರತಖಂಡದ ವಿಜಾರ ಕುರಿತು ಶ್ರೀ ಎಂ. ಎ. ಜಿನ್ನಾರವರು ಬ್ರಿಟಿಷ್ ವಾರ್ತಾ ಮೆಂಟಿನ ಸದಸ್ಯರೊಬ್ಬರಿಗೆ ಬರೆದಿರುವ ಪತ್ರವೊಂದರಲ್ಲಿ ಬಹಳ ಆಸಕ್ತಿ ಹುಟ್ಟುಸುವಂತಹ ಅಂಶಗಳಿವೆ. "ಸಮಾನ ಸ್ವಹಿತಗಳಾಗಲಿ, ಬಾಂಧವ್ಯಗಳಾಗಲೀ ಇಲ್ಲದೇ ಇರತಕ್ಕಂತಹ ಎರಡು ಧರ್ಮಗಳುಳ್ಳ ದೇಶದಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳು ಬೆಳೆಯಲಾರವೆಂಬುದನ್ನು ವಿವರಿಸಿ, ಬ್ರಿಟಿಷರೂ, ನರೇಂದ್ರರೂ ಮತ್ತು ತಮ್ಮ ಪಕ್ಷದವರೂ [ತಮ್ಮ ಬೇಡಿಕೆಯನ್ನು ಪೂರೈಸಿದ್ದಾದರೆ] ಒಂದಾದರೆ ಕಾಂಗ್ರೆಸನ್ನು ಸುಲಭವಾಗಿ ಮೂಲೆಗೆ ಕೂರಿಸಬಹುದೆಂದು ತಿಳಿಸಿದ್ದಾರೆ.

ತಮ್ಮ ಕೋಮಿನ ಶೇಕಡ 80 ಜನರ ಪರವಾಗಿ ತಾವು ಮಾತನಾಡುತ್ತಿರುವುದಾಗಿ ಶ್ರೀ ಜಿನ್ನಾರವರು ವಾದಿಸುತ್ತ ಬ್ರಿಟಿಷ್ ಸಂಸಾರದಿಂದ ಭಾರತವನ್ನು ಬೇರ್ಪಡಿಸಬೇಕೆಂದು ನಾನು ವಾದಿಸುವುದಿಲ್ಲ. ಆದರೆ ಭಾರತಕ್ಕೆ ಆಡಳಿತ ಸ್ವಾತಂತ್ರ್ಯ ಕೊಡುವುದನ್ನು ರಕ್ಷಣೆ ವಿದೇಶಾಂಗವಿಚಾರ, ಸ್ಥಯಾಣಸೌಕರ್ಯ ಇವುಗಳಿಗೆ ತಕ್ಕುವರ್ತಾಟು ಮಾಡಬೇಕು. ಕಾಂಗ್ರೆಸಿನ ಉಗ್ರಪ್ರಚಾರಕ್ಕೆ ಬ್ರಿಟನ್ನು ಖಂಡಿತ ಮರುಳಾಗಬಾರದು ಎಂದು ತಿಳಿಸಿದ್ದಾರೆ.

ಬ್ರಿಟಿಷ್ ಸರಕಾರದವರು ಭಾರತದ ಪರಿಸ್ಥಿತಿಯನ್ನು ಸರಿಯಾಗಿ ಗ್ರಹಿಸಬೇಕು ಇರುವುದರ ಜವಾಬ್ದಾರಿಯನ್ನು ಶ್ರೀ ಜಿನ್ನಾರವರು ವೈಸರಾಯರ ತಲೆಯಮೇಲೆ ಹಾಕಿ ಮುಂದಿನ ಏಪ್ರಿಲ್‌ನಲ್ಲಿ ಲಿನ್‌ಲಿತ್‌ಗೌರವ ರೈಸ್ರಾಯ್ ಗಿರಿಯನ್ನು ಕೊನೆಗಾಣಿಸಬೇಕು ಮತ್ತೆ ಜೀವನದಾನ ಕೊಡಲಾಗುದು." ಎಂದು ತಿಳಿಸಿದ್ದಾರೆ.

66

ಕಾಕೇಶಸ್ಸ್

ಪೂರ್ವ ರಾಷ್ಟ್ರಗಳ ಹೆಬ್ಬಾಗಿಲು ಯುದ್ಧದ ಪಳ್ಳುರಿ ಇತ್ತ ಚಾಚಿದರೆ....?

ಯುಕ್ರೇನಿಯಾಜೆ ಕಪ್ಪು ಸಮುದ್ರವನ್ನು ದಾಟಿ ನಾಜಿಗಳಿಗೆ ಪಾದಾಕ್ರಾಂತವಾದ ಬಾಲ್ಕನಿನ ಕಡಲ ದಂಡೆಯಿಂದ ಸುಮಾರು 600 ಮೈಲುಗಳಷ್ಟು ದೂರ ಬಹುದಿನದಿಂದ ಹಿಟ್ಲರನು ಬಯಸುತ್ತಿದ್ದ ಸಂಪತ್ಭರಿತ ಭೂಪ್ರದೇಶವಿದೆ. ಅಲ್ಲಿ ಅವನ ಹಸಿವೆಯನ್ನು ಹಿಂಗಿಸುವ ಎಣ್ಣೆ, ಆಹಾರ ಸಾಮಗ್ರಿಗಳನ್ನು ಒದಗಿಸುವದಿಷ್ಟೆ ಅಲ್ಲ. ಆ ಪ್ರದೇಶವನ್ನು ಅವನು ಆಕ್ರಮಿಸಿದರೆ ಟರ್ಕಿ, ಇರಾಣ ಅಲ್ಲಿಂದ ಹಿಂದುಸ್ತಾನ ಮತ್ತು ಇರಾಣ ಅಖಾತಗಳಮೇಲೆ ದಾಡೆತ್ತಿ ಬರುವಂತೆ ಯುದ್ಧ ದೃಷ್ಟಿಯಿಂದ ಬಹು ಮಹತ್ವವಾದ ಆಯಕಟ್ಟಿನ ಪ್ರದೇಶ ಶತ್ರುಗಳ ಕೈಯಲ್ಲಿ ಹೋದಂತಾಗುವುದಲ್ಲದೆ ಗಂಡಾಂತರವಲಯದ ಈ ದೇಶಗಳ ಸುತ್ತಲು ಮುತ್ತಿಕೊಂಡಂತಾಗುವದು ಇದೇ ಆ ಕಾಕೇಶಸ್ ಭೂಪ್ರದೇಶ.

ಕಾಕೇಶಸ್ಸು ಎಲ್ಲಿ ಫಲವತ್ತಾದ ಪ್ರದೇಶವು. ಅದರ ಮಹತ್ವ ದಿನದಿನಕ್ಕೆ ಹೆಚ್ಚುತ್ತಿದೆ. ಒಂಬುಕಾಲಕ್ಕೆ ಅಮ ತಂಬ ಒಕ್ಕಲತನದ ದೇಶವಾಗಿತ್ತು; ಇತ್ತೀಚೆಗೆ ಆಧುನಿಕ ಗಾಳಿ ಚನ್ನಾಗಿ ಬಡಿದು ಅನೇಕ ಉದ್ಯೋಗ ಧಂದೆಗಳು ಬೆಳೆದಿವೆ. ಇವರಿಂದ ಅದರ ನಿರ್ಯಾತವೂ ಹೆಚ್ಚಿದೆ. ಔದ್ಯೋಗೀಕರಣಹೊಂದುವ ಮೊದಲು ಎಣ್ಣೆನಿರ್ಯಾತದ ಕೆಳಗೆ ಗೋಧಿಯು ನಂಬರು ಬರುತ್ತಿತ್ತು. ಈಗ ಈ ಭೂತೈಲವು ಗೋಧಿಯ ಸ್ಥಳವನ್ನು ಆಕ್ರಮಿಸಿದೆ

ಕಳೆದ ಯುದ್ಧದಲ್ಲಿ ಈ ಪ್ರಾಂತಕ್ಕೆ ಹಾನಿ ಬಹಳ ತಟ್ಟಿತ್ತು. ಸಾಗುವಳಿಯಾಗದೆ ಭೂಮಿ ಬಲು ಬೇಗನೆ ಕೆಟ್ಟು ಫಲೋತ್ಪತ್ತಿಗೆ ನಿರುಪಯೋಗಿಯಾಗುವದು. ಆದರೆ ಸೋವಿಲಿನ ಫಲವತ್ತತೆಯನ್ನು ತರಬೇಕಾದರೆ ಬಹಳ ಶ್ರಮ ಪಡಬೇಕಾಯಿತು. ಇಲ್ಲಿಯ ದನ ಕುದುರೆಗಳು ಬಹಳ ಪ್ರಸಿದ್ಧವಾಗಿದ್ದವು ಹೊರಗೆ ಬಹು ದೊಡ್ಡ ಪ್ರಮಾಣದಲ್ಲಿ ನಿರ್ಯಾತವಾಗುತ್ತಿದ್ದವು. ಆದರೆ ಕಳೆದ ಯುದ್ಧದಲ್ಲಿ ಈ ಉದ್ಯೋಗ ಸಂಪೂರ್ಣ ಹಾಳಾಯಿತು. ಹಂದಿ ಸಾಕಿ ಬೆಳೆಸುವದು ಮಾತ್ರ ಇನ್ನೂ ಜೀವಂತವಿದ್ದು ಈಗ ಮತ್ತೆ ಮೊದಲಿನಂತೆ ಪರದೇಶಗಳಿಗೆ ಹಂದಿಗಳನ್ನು ಕಳಿಸುತ್ತಿದೆ.

ಆ ಗಂಡಾಂತರ ಕಾಲ ಒಂದು ದೃಷ್ಟಿಯಿಂದ ಒಳ್ಳೆಯದನ್ನೆ ಮಾಡಿತು. ಒಕ್ಕಲತನದ ಸಂಪತ್ತು ಅಪಾರವಾಗಿದ್ದುದರಿಂದ ಉಳಿದ ಭೂ ಮತ್ತು ವನಸಂಪತ್ತುಗಳು ಕಣ್ಮರೆಗೆ ಬಿದ್ದವು. ಅವುಗಳ ಕಡೆಗೆ ಸಾಮಾನ್ಯವಾಗಿ ಲಕ್ಷ್ಯವೇ ಹೋಗಿದ್ದಿಲ್ಲ. ಆದರೆ ಭೂಮಿ ಪಡೆಬಿಟ್ಟು ಹೊಟ್ಟೆಯ ಸಲುವಾಗಿ ಹೋರಾಡುವ ಪ್ರಶ್ನೆ ಪೆನ್ನಿಸಂತೆ ಎದುರುನಿಂತಾಗ ವೈಭವ ಸಂಪನ್ನರಾದ ನೆಲವ ಬಸಿರನ್ನು ಬಗೆದು ಅನೇಕ ರತ್ನಭಾಂಡಾರಗಳನ್ನು ಶೋಧಿಸುತೆಗೆಯಲು ಅವಕಾಶ ದೊರೆಯಿತು. ಈ ಭೂ ಮತ್ತು ವನಸಂಪತ್ತಗಳ ಉಜ್ವಲ ಪ್ರಕಾಶವು ಅನೇಕ ಆಶಬುರುಕ ರಾಷ್ಟ್ರಗಳ ಹದ್ದಿನ ನೋಟವನ್ನು ಸೆಳೆಯಿತು.

ಈ ಪ್ರಾಂತದ ದಕ್ಷಿಣಭಾಗವೆಲ್ಲ ಫಲವತ್ತಾದತಪ್ಪಲು ಭೂಮಿಯಿದೆ. ಎಡಬಲಕ್ಕೆ ಕಪ್ಪುಸಮುದ್ರ ಮತ್ತು ಕ್ಯಾಸ್ಪಿಯ ಸಮುದ್ರ, ದಕ್ಷಿಣಕ್ಕೆ ಕಾಕೇಶಸ್ಸ ಪರ್ವತಗಳುಳ್ಳ ಈ ಭೂಪ್ರದೇಶವು ಅನೇಕ ಕಣ್ಣಿಸ ನೋಬೆಯಾಗಿ ಅನೇಕ ಸ್ವಿತ್ರಂತ ರಗಳನು ಹೊಂದಿದೆ.

ಹಳೆ ಕಾಲವಲ್ಲಿ ಈ ತಪ್ಪಲು ಭೂಮಿ ಅನೇಕ ದೇಶಗಳ ವ್ಯಾಪಾರಿಗಳು ಕೂಡುವ ಸ್ಥಳವಾಗಿದ್ದಿತು. ಭೂಮಧ್ಯ ಸಮುದ್ರದಿಂದ ತುರ್ಕಸ್ತಾನದಿಂದ ಪರ್ಶಿಯದಿಂದ ವಲಸೆಗಾರರು ಬಂದು ನೆಲಸಿದರು. ಉತ್ತರದಿಂದ ರಶಿಯನ್ನರು ಬಂದರು, ಪೂರ್ವದಿಂದ ತಾರ್ತಾರರು ಮಂಗೋಲಿಯನ್ನರು ಬಂದರು. ಎಲ್ಲರೂ ವ್ಯಾಪಾರದಿಂದ ಲಾಭಪಡೆಯಲು ಬಂದವರು.

ಅಪಾರ ಖನಿಜ ಸಂಪತ್ತು.

ಈ ಪ್ರದೇಶದ ಖನಿಜ ಸಂಪತ್ತು ಬಹಳ ಬೆಲೆಯುಳ್ಳದು. ಗ್ಯಾಜ್ಞಿ ಮತ್ತು ಮಾರ್ಕೋಪತಮನದಲ್ಲಿ ಭೂತೈಲದ ದೊಡ್ಡ ಪ್ರವಾಹಗಳವೆ ಅಲ್ಲಿ ಸರದಲ್ಲಿ ಬೆಳ್ಳಿ, ಸೀಸು, ತವರಗಳು ಹೇರಳವಾಗಿ ಸಿಗುತ್ತವೆ. ಉಳಿದ ಭಾಗದಲ್ಲಿ ಕಬ್ಬಿಣ ಕಲ್ಲಿದ್ದಲಿ ಹೊಗೆಬಿಡದ ಕಲ್ಲಿದ್ದಲಿ ದೊರಕುತ್ತವೆ. ಗ್ಯಾಜ್ಞಿಯಲ್ಲಿ ಎಣ್ಣೆಯ ಕಣಿಗಳು ತುಂಬ ವಿಪುಲವಾಗಿವೆ ಇದೆ ನಾಜಿಗಳಿಗೆ ಬೇಕಾದ ವಸ್ತು.

ರಶಿಯದಲ್ಲಿ ಹುಟ್ಟುವ ಎಣ್ಣೆಯ 1/10 ಎಣ್ಣೆ ಬರಿ ಗ್ಯಾಜ್ಞಿಯೊಂದರಲ್ಲಿಯೇ ಹೊರಡುತ್ತಿದೆಯಂತೆ. ಬಾಕುದ ಕೆಳಗೆ ಇವರದೆ ನಂಬರು ಒಟ್ಟು 3 ಕೋಟಿ ಟನ್ನು ಕಚ್ಚಾ ಎಣ್ಣೆಯಲ್ಲಿ 2½ ಕೋಟಿ ಬಾಕುದಲ್ಲಿಯೇ ಹೊರಡುತ್ತದೆ.

ಈ ಪ್ರದೇಶದ ಹವಾಗುಣ ಅನೇಕ ತರದ ಬೆಳೆಗಳಿಗೆ ಅನುಕೂಲವಾಗಿದೆ. ಪಶ್ಚಿಮಕ್ಕೆ ಮತ್ತು ನೈಋತ್ಯಕ್ಕಿರುವ ಎತ್ತರವಾದ ಪರ್ವತಗಳ ಸಾಲುಗಳಿಂದ ಮಳೆಯೂ ಬಹಳ ಬೀಳುತ್ತದೆ. ಇಲ್ಲಯ ಉಷ್ಣತೆ ಎಲ್ಲೆದೆಗಿಂತ ಹಿತವೂ ಇದೆ ನೀರಿನ ವಿಪುಲತೆ ಬಹಳದೆ. ಬೆಳೆಯ ಕಾಲವೂ ದೀರ್ಘವಾಗಿದೆ. ಭೂಮಿ ಫಲವತ್ತಾದದ್ದು. ಇಲ್ಲಿಯ ಮುಖ್ಯ ಉದ್ಯೋಗಗಳೆಂದರೆ ಒಕ್ಕಲತನ ಮತ್ತು ತೋಟಿ ಸಟ್ಟು ನಾಡುವನು.

ಉತ್ತರಕ್ಕೂ ಪೂರ್ವಕ್ಕೂ ಹವಾಮಾನದ ಏರಿಳಿತ ಬಹಳ. ನೀರಿನ ಅಭಾವವೂ ಮೇಲಿಂದ ಮೇಲೆ ಉಂಟಾಗುತ್ತದೆ. ಪೂರ್ವಭಾಗದಲ್ಲಿ ಭೂಮಿ ಮೆತ್ತಗಿದ್ದು ಪುಸುರಿಯುದೆ. ಅದರಿ ಕೆಲವು ಕಡೆಗೆ ಜೆಳೆಗೆ ತಿರ ನಿರುಪಯೋಗಿಯಾವ ಸುಣ್ಣ ಬುರ್ಲಿ ಹಳ್ಳಗಳಿಂದ ಕೂಡಿದ ಭೂಮಿಯಿದೆ

ಉತ್ತರ ಭಾಗದಲ್ಲಿ ಬೇಸಿಗೆಗೋಧಿ ಮೆಂತೆ ಮುಂತಾದ ಆಹಾರದ ಕಾಳುಗಳು ಉತ್ತಮವಾಗಿ ಬೆಳೆಯುತ್ತವೆ ಬೇಸಿಗೆಗೋಧಿಯಂತೂ ಶಕ್ತಿಯುತವೂ ಸತ್ವಯುತವೂ ಆದ ಹಿಟ್ಟು ಹೊರಡುತ್ತದ್ದು. ಈ ತರದ ಗೋಧಿಗೆ ಹೊರಗಿನ ಬೇಡಿಕೆಯೂ ಬಹಳದೆ. ನೈಋತ್ಯ ದಿಕ್ಕಿನ ಹೆಚ್ಚಭೂಮಿಗಳಲ್ಲಿ ಚಳೆ, ಗೋದಿ, ಬಾರ್ಲಿ, ಗೋವಿನಜೋಳ, ಒಟ್ಟು, ಎಣ್ಣೆ ಕಾಳುಗಳು ಬೆಳೆಯುತ್ತವೆ. ಕೂಬಾನ ಪ್ರದೇಶದಲ್ಲಿ ಸೂರ್ಯಕಾಂತದ ಹೂಗಳನ್ನು ಹೇರಳವಾಗಿ ಬೆಳೆಸುತ್ತಾರೆ. ಅದರಿ ಬೀಜಗಳು, ಆಹಾರ, ಎಣ್ಣೆ, ಉರವಲು ಮುಂತಾಗಿ ಉಪಯೋಗಿಸಲಾಗುವದರಿಂದ ಅದರ ಮಹತ್ವ ಬಹಳ. ಆದ್ದರಿಂದ ಅದರ ಬೆಳೆಗೆ ವಿಶೇಷ ಲಕ್ಷ್ಯ ಕೊಡಲಾಗುತ್ತದೆ.

ಇವೆಲ್ಲವು ಆಹಾರ ಸಾಮಗ್ರಿಗಳನ್ನೊದಗಿಸುವದರಿಂದ ಯುದ್ಧ ಕಾಲದಲ್ಲಿ ಈ ಪ್ರದೇಶಗಳಿಗೆ ಮಹತ್ವ ಹೆಚ್ಚುವದು. ಆಹಾರದಷ್ಟೆ ಮುಖ್ಯವಾಗಿ ಈಗಿನ ಯುದ್ಧದಲ್ಲಿ ಎಣ್ಣೆ ಬೇಕು

7ನೇ ಪುಟವನ್ನು ನೋಡಿರಿ.

ಕಳೆದ ಸಂಚಿಕೆಯಿಂದ ಬಂದದ್ದು

(೪) ನಿಯಮಗಳು: ತೆರಿಗೆಗಳ ನ್ನು ವಿಧಿಸಲು ಹಿಂದಿನಿಂದಲೂ ಕೆಲವು ನಿಯಮಗಳನ್ನು ಅನುಸರಿಸಿದಂತೆ ಕಂಡು ಬಂದಿದೆ. ಅರ್ಥಶಾಸ್ತ್ರಜ್ಞರು ಮುಖ್ಯವಾದ ಕೆಲವು ನಿಯಮಗಳನ್ನು ತಮ್ಮ ಗ್ರಂಥಗಳಲ್ಲಿ ಹೇಳಿರುವರಲ್ಲದೆ ತೆರಿಗೆ ಪದ್ಧತಿಯನ್ನು ಸಮಷ್ಟಿದೃಷ್ಟಿಯಿಂದ ನೋಡಬೇಕೆಂಬ ವಿಷಯವನ್ನು ಸ್ಪಷ್ಟವಾಗಿ ತಿಳಿಸಿರುತ್ತಾರೆ. ತೆರಿಗೆಗಳ ನ್ಯಾಯಾನ್ಯಾಯಗಳನ್ನಾಗಲಿ ಗುಣಾವಗುಣಗಳನ್ನಾಗಲಿ ತಿಳಿಯಲು ಕೇವಲ ತೆರಿಗೆ ಕೊಡುವವರ ದೃಷ್ಟಿಯಿಂದಲೇ ನೋಡಿದರೆ ಸಾಲದು. ಸರ್ಕಾರದ ದೃಷ್ಟಿಯಿಂದಲೂ ಸಮಾಜದ ದೃಷ್ಟಿಯಿಂದಲೂ ತೆರಿಗೆಗಳನ್ನು ವಿಮರ್ಶಿಸಬೇಕೆಂಬ ವಿಷಯವನ್ನು ಮರೆಯಬಾರದು ತೆರಿಗೆ ಕೊಡದೆಯೇ ಸರ್ಕಾರದಿಂದ ದೊರೆಯಬಹುದಾದ ಎಲ್ಲ ಸೌಕರ್ಯಗಳು ದೊರೆತರಂತೂ ಪ್ರಜೆಗಳಿಗೆ ಹೆಚ್ಚಿನ ಸಂತೃಪ್ತಿನೋಷ್ಟುಂಟಾಗುತ್ತದೆ. ಆದರೆ ಇದು ಸಾಧ್ಯವೇ ಎಂಬುದನ್ನು ಮಾತ್ರ ಪರ್ಯಾಲೋಚಿಸಬೇಕು. ಹೀಗಿರುವುದರಿಂದ ತೆರಿಗೆಗಳನ್ನು ವಿಧಿಸುವ ವೇಳೆಯಲ್ಲಾಗಲಿ, ಇರುವ ತೆರಿಗೆಗಳನ್ನು ಪುನಃ ನಿರ್ಣಯಿಸುವ ಕಾಲದಲ್ಲಾಗಲಿ ಮೇಲೆ ಹೇಳಿರುವ ಮೂರು ದೃಷ್ಟಿಗಳಿಂದಲೂ ಪ್ರತ್ಯೇಕವಾಗಿ ನೋಡಬೇಕಲ್ಲದೆ ಅದಕ್ಕನುಬದ್ಧವಾಗಿ ದೃಷ್ಟಿಸಮನ್ವಯಮಾಡಿ ಪರ್ಯಾಲೋಚಿಸುವ ಪ್ರಯತ್ನವನ್ನೂ ಮಾಡಬೇಕು. ಸರ್ಕಾರದವರ ಉದ್ದೇಶವನ್ನು ಪ್ರಜೆಗಳೂ ಪ್ರಜೆಗಳ ಹಿತವನ್ನು ಸರ್ಕಾರದವರೂ ತಿಳಿದು ಸಹಕರಿಸಬೇಕು

ತೆರಿಗೆಗಳ ಗುಣಾವಗುಣಗಳನ್ನು ಸ್ಥೂಲವಾಗಿ ತಿಳಿಯಲು ನಾಲ್ಕು ಸುಸ್ಪಷ್ಟವಾದ ನಿಯಮಗಳುಂಟು ಇವುಗಳನ್ನು ತೆರಿಗೆಯ ಶಾಸ್ತ್ರದ ಸೂತ್ರಗಳೆಂದು ಕರೆಯಬಹುದು.

1. ತೆರಿಗೆಗಳು ಸಮನ್ವಾಗಿರಬೇಕು
2. ತೆರಿಗೆಗಳಲ್ಲಿ ಅನುಕೂಲತೆ ಇರಬೇಕು
3. ತೆರಿಗೆಗಳು ನಿಶ್ಚಿತವಾಗಿರಬೇಕು,
4 ತೆರಿಗೆಗಳು ಆದಾಯಕರವಾಗಿರಬೇಕು

ಈ ನಿಯಮಗಳನ್ನು ಸ್ಥೂಲವಾಗಿ ವಿವರಿಸುವುದು ಮೇಲು.

[೧] ಸಮಾನತೆ

ಪ್ರಜೆಗಳೆಲ್ಲರಿಂದ ಸಮಾನವಾಗಿ ತೆರಿಗೆಯನ್ನು ವಸೂಲು ಮಾಡುವುದೆಂದರೇನು? ಸರ್ಕಾರಕ್ಕೆ ಬೇಕಾದ ಒಟ್ಟು ಹಣವನ್ನು ಧನಿಕರಿಗೂ ಒಂದೇ ಸಮನಾಗಿ ಹಂಚಿ ತೆರಿಗೆಗಳನ್ನು ವಿಧಿಸುವುದರಿಂದ ಸಮಾನತೆಯ ನಿಯಮವನ್ನು ಅನುಸರಿಸಿದಂತಾಗುವುದಿಲ್ಲ. ಒಂದು ಲಕ್ಷ ಪ್ರಜೆಗಳಿರುವ ದೇಶದಲ್ಲಿ ಐದು ಲಕ್ಷ ರೂಪಾಯಿಗಳನ್ನು ತೆರಿಗೆಯ ಮೂಲಕ ಕೂಡಿಸಬೇಕೆಂದು ಸರ್ಕಾರವು ನಿಶ್ಚಯಿಸಬಹುದು. ಪ್ರತಿಯೊಬ್ಬ ಪ್ರಜೆಯಿಂದಲೂ ಸರಾಸರಿ ಐದು ರೂಪಾಯಿನಂತೆ ತೆರಿಗೆ ವಸೂಲುಮಾಡುವುದರಿಂದ ಸಮಾನವಾದ ತೆರಿಗೆ ಹಾಕಿದಂತಾಗುವುದಿಲ್ಲ. ಹೀಗೆ ಹಾಕಿದ ತೆರಿಗೆಯು ಕೂಲಿಕವು ಬಡವರಿಗೆ ಭಾರವಾಗಿರುವುದು; ಧನಿಕರಿಗೆ ಹಗುರವಾಗಿರುವುದು ಹಾಗಾದರೆ ಸಮನಾದ ತೆರಿಗೆ ಎಂದರೇನು?

ಮೈಸೂರು ನಿಶ್ಶಾಸ್ತ್ರವಿದ್ಯಾನಿಲಯದವರು
ಪ್ರಕಟಿಸುವ ಪುಸ್ತಕಮಾಲೆಯ ಆದಾರ

ಲೇ: ಜಿ. ಆರ್. ಸುಬ್ಬರಾವ್, M. A.

ತೆರಿಗೆಯನ್ನು ಕೊಡುವುದರಿಂದ ಪ್ರಜೆಗಳಿಗೆ ಒಂದು ವಿಧವಾದ ನಷ್ಟದ ಭಾವನೆ ತಲೆದೋರುತ್ತದೆ. ತಾನು ಸಂಪಾದಿಸುವ ಅಥವಾ ಅನುಭವಿಸುವ ಆದಾಯದ ಸ್ವಲ್ಪಭಾಗವು ಕಡಮೆಯಾಗುವುದರಿಂದ ತ್ಯೋದರೆಯೂ ಕ್ಲೇಶವೂ ಆಗುವುದು ಸಹಜ. ಹೀಗಾಗುವ ತೊಂದರೆ ಆ ಜನರ ಸಂಪತ್ತು, ಸಂಪಾದನೆ, ವೆಚ್ಚ ಮೊದಲಾದುವುಗಳಿಗೆ ಅನುಗುಣವಾಗಿರುತ್ತದೆ. ವರ್ಷಕ್ಕೆ 100 ರೂಪಾಯಿ ಸಂಪಾದಿಸುವವನು 10 ರೂಪಾಯಿಷಷ್ಟು ತೆರಿಗೆ ಸಲ್ಲಿಸಿದರೆ ಅವನಿಗುಂಟಾಗುವ ಕ್ಲೇಶ ನಷ್ಟಗಳೂ ವರ್ಷಕ್ಕೆ 1,000 ರೂಪಾಯಿ ಸಂಪಾದಿಸುವವನು ಆಷ್ಟೇ ತೆರಿಗೆಯನ್ನು ಕೊಟ್ಟರೆ ಅವನಿಗೆ ಉಂಟಾಗುವ ಕ್ಲೇಶ ನಷ್ಟಗಳೂ ಎಂದಿಗೂ ಸಮಾನವಾಗಿರುವುದಿಲ್ಲ ಆದಾಯ ಹೆಚ್ಚಿದ ಹಾಗೆಲ್ಲಾ ತೆರಿಗೆ ಕೊಡುವ ಶಕ್ತಿ ವೆಚ್ಚುವುದು ಸ್ವಾಭಾವಿಕ. ಇದೇ ರೀತಿ ಹೆಚ್ಚುವು ಕಡಮೆಯಾಗಿ ವರ್ಷಕ್ಕೆ 1,000 ರೂಪಾಯಿ ವರಮಾನವಿರುವ ಏಕಾಂಗಿಗೆ ಹಾಗುವ ತೆರಿಗೆಯೂ ಆಷ್ಟೇ ವರಮಾನವಿದ್ದು ಹೆಚ್ಚು ವೆಚ್ಚಮಾಡಬೇಕಾದ ದೊಡ್ಡ ಸಂಸಾರಿಗೆ ಹಾಕುವ ತೆರಿಗೆಯೂ ಒಂದೇ ಆದರೆ ಅದು ಸಮಾನವೆ ತೆರಿಗೆ ಎಂದು ಹೇಳಲಾಗುವುದಿಲ್ಲ. ತಾನು ಕಷ್ಟಪಟ್ಟು ಸಂಪಾದಿಸುವ ಆದಾಯದ ಸ್ವಲ್ಪ ಭಾಗವನ್ನು ತೆರಿಗೆಯ ರೂಪದಲ್ಲಿ ಕೊಡುವುದರಿಂದ ಉಂಟಾಗುವ ಕ್ಲೇಶವೂ ಇತರರು ಸಂಪಾದಿಸಿದ ಆಸ್ತಿಯಿಂದ ತನಗೆ ಬರುವ ಆದಾಯದಲ್ಲಿ ಕೊಡುವ ತೆರಿಗೆಯಿಂದ ಉಂಟಾಗುವ ಕ್ಲೇಶವೂ ಸಮಾನವಾಗಿರುವುದಿಲ್ಲ. ಆದ್ದರಿಂದ ಶ್ರಮವೂ ನಷ್ಟಭಾವನೆಯೂ ಪ್ರಜಾಸಮುದಾಯದಲ್ಲಿ ಸಮಾನವಾಗಿದೆ ಎಂದು ತೋರುವ ರೀತಿಯಲ್ಲಿ ತೆರಿಗೆಗಳನ್ನು ಗೊತ್ತುಮಾಡಿದರೆ, ಸಮಾನತೆಯ ನಿಯಮವನ್ನು ಅನುಸರಿಸಿದಂತಾಗುತ್ತದೆ. ವರಮಾನ ಹೆಚ್ಚಿದ ಹಾಗೆಲ್ಲಾ ಹೆಚ್ಚಿನ ದರದ ವರಮಾನ ತೆರಿಗೆಗಳನ್ನು ವಿಧಿಸುವ ಸರ್ಕಾರವು ಸಮಾನತೆಯ ನಿಯಮವನ್ನು ಸ್ವಲ್ಪಮಟ್ಟಿಗೆ ಸಾಧಿಸುತ್ತದೆ.

ಒಂದು ವಿಷಯವನ್ನು ನಾವು ಗಮನದಲ್ಲಿಡಬೇಕು. ತೆರಿಗೆ ತೆರುವುದರಿಂದ ಉಂಟಾಗುವ ಭಾವನೆಯನ್ನು ಹಣಕ್ಕಾಸಿನ ಅಳತೆ ಕಡ್ಡಿಯಿಂದಲೇ ನಿಕರವಾಗಿ ತಿಳಿಯಲು ಸಾಧ್ಯವಿಲ್ಲ; ತೆರಿಗೆಕೊಡುವ ಶಕ್ತಿಯನ್ನು ಸ್ಥೂಲವಾಗಿ ಪತ್ತೆಮಾಡಲು ಮಾತ್ರ ಸಾಧ್ಯವಾಗುವುದು. ಪ್ರಜೆಗಳಲ್ಲಿರುವ ಈ ಶಕ್ತಿಗೆ ಅನುಗುಣವಾಗಿ ತೆರಿಗೆಯನ್ನು ವಿಧಿಸಿ ತೆರಿಗೆಯ ಹೊರೆ ಸಮಾನವಾಗಿರುವಂತೆ ಮಾಡಬಹುದು. ತೆರಿಗೆಕೊಡುವ ಶಕ್ತಿಯನ್ನು ಕಂಡುಹಿಡಿಯಲು ಹಲವು ಉಪಾಯಗಳನ್ನು ಸೂಚಿಸುವುದುಂಟು. ಮೇಲೆ ತಿಳಿಸಿರುವಂತೆ ತೆರಿಗೆ ತೆರಬೇಕಾದವರ ಆದಾಯವು ಅವರ ಶಕ್ತಿಯನ್ನು ತಿಳಿಸುವುದೆಂದು ನಂಬಿಕೆ. ಆದಾಯದಲ್ಲಿ ಕೆಲವು ಭಾಗವನ್ನು ವೆಚ್ಚಮಾಡಿದನಂತರ ನಿಲ್ಲುವ ನಿವ್ವಳ ಆದಾಯವನ್ನು ಗಮನದಲ್ಲಿಟ್ಟು, ಆಸ್ತಿಪಾಸ್ತಿಗಳನ್ನೂ ಜೀವನೋಪಾಯದ ರೀತಿಗಳನ್ನೂ ಗಣನೆಗೆ ತಂದುಕೊಂಡು ತೆರಿಗೆಗಳನ್ನು ವಿಧಿಸುವುದರಿಂದ, ತೆರಿಗೆ ಸಿಸ್ತಿನಲ್ಲಿ ಒಂದು ವಿಧದ ಸಮಾನತೆಯನ್ನು ಕಲ್ಪಿಸುವುದು ಸಾಧ್ಯ.

[ಮುಂದುವರಿಯುವುದು]

ಜರ್ಮನ್ನರಿಗೆ ರಷ್ಯಾ ರಣರಂಗದಲ್ಲಿ ಅಪಾರನಷ್ಟ ವಾಗುತ್ತಿದ್ದರೂ, ಹೊಸ ಹೊಸದಾಗಿ ಸೇನೆಗಳನ್ನೂ ಸಾಮಗ್ರಿಗಳನ್ನೂ ತರುತ್ತಲಿದ್ದಾರೆ ಎಂಧಾ ಪರಿಸ್ಥಿತಿಯಲ್ಲೂ ಹಿಂದಕ್ಕೆ ಹೆಜ್ಜೆ ಇಡಬಾರದೆಂದು ಸರ್ವಾಧಿಕಾರಿಗಳಾದ ಸ್ಟಾಲಿನ್ ರವರು ಕೆಂಪು ಸೈನ್ಯಗಳಿಗೆ ಆಜ್ಞೆ ಇತ್ತಿರುವರು.

ಪ್ರಾಥಮಿಕೋಪಾಧ್ಯಾಯರಿಗೆ

ಮಕ್ಕಳಿಗೆ ಪಾಠಗಳನ್ನು ಆಟದ ರೂಪದಲ್ಲಿ ಕಲಿಸಿರಿ; ಬೇಕಾದ ಸಲಕರಣೆಗಳನ್ನು ನೀವೇ ತಯಾರಿಸಿಕೊಳ್ಳಿರಿ.

ಲೇ— ಶ್ರೀ ವಿ. ಆರ್. ಅಣ್ಣಾಸ್ವಾಮಿರಾವ್,
ಮಕ್ಕಳ ಚಿತ್ರ ಮತ್ತು ಕೈಕೆಲಸದ ಶಾಲೆಯ ವ್ಯವಸ್ಥಾಪಕರು, ಮುಂಬೈ.

ಸುಂದರವಾದ ರಂಗಿನ ಚೆಂಡು, ಗೋಲಿಗುಂಡು, ಮರದ ಪೆಟ್ಟಿಗೆ ಮುಂತಾದ ಅನೇಕ ಸಲಕರಣೆಗಳಿಂದ ಚಿಕ್ಕಮಕ್ಕಳ ಮನಸ್ಸನ್ನು ಸೆಳೆದು, ಅತ್ಯುತ್ತಮವಾದ ಶಿಕ್ಷಣಕ್ರಮವನ್ನು ಒದಗಿಸಿಕೊಟ್ಟವರೆಂದರೆ ನಮ್ಮ ಡಾ ಆತ್ರೆಮೆರಿಯಾ ಮಾಂಟಿಸೊರಿಯವರು. ಶಿಕ್ಷಣ ಪ್ರಪಂಚದಲ್ಲಿ ಈಕೆಗೆ ಇರುವ ಅನುಭವ, ದೊರೆತಿರುವ ಗೌರವ, ಮಾನ-ಸನ್ಮಾನಗಳು ಮತ್ತಾರಿಗೂ ಸಂದಿಲ್ಲ. ಮಕ್ಕಳ ಶಿಕ್ಷಣದ ಸಲುವಾಗಿ ಮಾಂಟಿಸರಿಯನರು ಕಂಡುಹಿಡಿದ ಅನೇಕ ಸಲಕರಣೆಗಳನ್ನು ಪಾಶ್ಚಿಮಾತ್ಯ ದೇಶಗಳಲ್ಲಿಯ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲೂ ಪೇರಳವಾಗಿ ಉಪಯೋಗಿಸುತ್ತಾ ಇದ್ದಾರೆ ಈ ಸಲಕರಣೆಗಳ ಒಟ್ಟು ಬೆಲೆ ಎಂದರೆ 350 ರೂಪಾಯಿಗಳು ಮಾತ್ರ.

ಮಕ್ಕಳಿಗೆ ಹಿತಕರವಾದ ಈ ಶಿಕ್ಷಣ ಪದ್ಧತಿಯು, ನಮ್ಮ ನಾಡಿನಲ್ಲಿ ಯಾಕೆ ಇನ್ನೂ ಸ್ವಾಬಲ್ಯವನ್ನು ಪಡೆಯಲಿಲ್ಲ ವೆಂದರೆ,—ಇದಕ್ಕೆ ತಗಲುವ ಸಂಪ್ರದಾಯವಾದ ನೆಚ್ಚ ಬಡತನದಿಂದ ನೆರಳುತ್ತಿರುವ ಅನೇಕ ಭಾರತೀಯರಿಗೆ 350 ರೂಪಾಯಿಗಳೆಂದರೆ ಒಂದು ದೊಡ್ಡ ನಿಧಿಯೇ ಸರಿ! ವ್ಯರ್ಥವಾಗಿ ಕಳೆಯುವ ವಿರಾಮಕಾಲವನ್ನು ಭಾರತೀಯರು ಕೈಕೆಲಸಗಳ ಕಡೆಪ್ರವರ್ತಿಸಿದುದೇ ಆದಲ್ಲಿ, ಮಕ್ಕಳ ಶಿಕ್ಷಣಕ್ಕೆ ಬೇಕಾದ ಅನೇಕ ಸಲಕರಣೆಗಳನ್ನೂ ಸುಲಭವಾಗಿ ಮಾರಾಟವಾಗುವ ಅನೇಕ ವಸ್ತುಗಳನ್ನೂ ತಯಾರಿಸಬಹುದು.

ಸಂಕಲನ [ಕೂಡಿಸುವದು]

ಮರದ ಹಲಗೆಯ ಮೇಲೆ ಬಣ್ಣದಿಂದ ಗುರುತಿಸಿರುವ 8 ಎಂಬ ಅಂಕೆಯನ್ನು ಅದರ ಮೇಲೆ ಗೋಲಿಗಳನ್ನು ಇಡಲು ಮಾಡಿರುವ ಎರಡು ಸಣ್ಣ ಕಾಲುವೆಗಳನ್ನೂ ನೋಡಿ. ಆರರ ಸಂಖ್ಯೆಯನ್ನು ತೋರಿಸುವ ಕಾಲುವೆಯಲ್ಲಿ ಮೂರು ಗೋಲಿಗಳನ್ನು, ಎರಡರ ಸಂಖ್ಯೆಯ ಕಾಲುವೆಯಲ್ಲಿ ಐದು ಗೋಲಿಗಳನ್ನು ಮಾತ್ರ ಇಡಲು ಸಾಧ್ಯವಾಗುತ್ತದೆ. ಈ ಎರಡು ಸಾಲಿನ ಗೋಲಿಗಳ ಒಟ್ಟು ಸಂಖ್ಯೆ ೮

ಉದಾಹರಣೆ: ಸಣ್ಣ ಕಾಲುವೆಯಲ್ಲಿ ಮೂರು ಗೋಲಿಗಳನ್ನು ಇಟ್ಟು, ಈಗೋಲಿಗಳಿಗೆ ಎಷ್ಟು ಗೋಲಿಗಳನ್ನು ಸೇರಿಸಿದಲ್ಲಿ ಎಂಟು ಗೋಲಿಗಳಾಗುವವು? ಮಗುವು ಮೇಲಿನ ಕಾಲುವೆಯಲ್ಲಿ ಗೋಲಿಗಳನ್ನು ಎಣಿಸುತ್ತಾ ಇಡುವುದು. ಈ ಕಾಲುವೆಯಲ್ಲಿ ಹಿಡಿಸುವುದು ಐದೇಗೋಲಿಗಳಾದುದರಿಂದ, ಮೂರಕ್ಕೆ ಇದನ್ನು ಸೇರಿಸಿದರೆ ಎಂಟು ಆಗುವುದೆಂದು ಮಗುವಿಗೆ ಮನದಟ್ಟಾಗುವುದು ಈ ಕಾಲುವೆಯು ಐದು ಗೋಲಿಗಳನ್ನು ಹಿಡಿಸುವಷ್ಟೇಮಾಡಿರುವ ಕಾರಣ, ಮಗುವು ಹೆಚ್ಚು ಲಕ್ಷವಾ ಕಡಿಮೆ ಗೋಲಿಗಳನ್ನು ಹಾಕಿ ತಪ್ಪು ಲೆಕ್ಕವನ್ನು ಕಲಿಯಲು ಸಾಧ್ಯವೇ ಇಲ್ಲ ಇದೇ ರೀತಿ ಮಿಕ್ಕ ಅಂಕೆಗಳನ್ನು, ಅದಕ್ಕೆ ತಕ್ಕ ಗೋಲಿಗಳು ಕೂಡಿಸುವಷ್ಟು ಕಾಲುವೆಗಳನ್ನು ತಯಾರಿಸಬೇಕು.

ವ್ಯವಕಲನ (ಕಳೆಯುವದು)

ಬಿಸ್ಟತ್ತಿನ [Subtraction]ಇದನ್ನು ತಯಾರಿಸಬೇಕಾದಲ್ಲಿ ಮೊದಲು ಉದ್ದವಾದ ಮರದ ಪೆಟ್ಟಿಗೆಯೊಂದನ್ನು ಸಂಪಾದಿಸಿ, ಇದರ ಮುಚ್ಚಳವನ್ನು ತೆಗೆಯಲು ಬಾರದ ಹಾಗೆ ಮೊಳೆಗಳಿಂದ ಭದ್ರಪಡಿಸಬೇಕು. ನಂತರ ಪೆಟ್ಟಿಗೆಯ ಉಲಪಕ್ಕದ ಹಲಗೆಯನ್ನು 1/4 ಭಾಗದಷ್ಟು ಕೆಳಗೆ ಬಿಟ್ಟು, ಮಿಕ್ಕ ಭಾಗವನ್ನು ತೆಗೆದು ಹಾಕಿಬಿಡಿ ನಂತರ ಮುಚ್ಚಳದ ಅಳತೆಯ ಮತ್ತೊಂದು ಹಲಗೆಯನ್ನು ತಂದು, ಈ ಹಲಗೆಯನ್ನ ಮುಚ್ಚಳದ ಒಳಗೆ ಬಲಪಕ್ಕದಿಂದ ಒಳಕ್ಕೆ ಹಾಕಿ ತೆಗೆಯಲು ಆಗುವಂತೆ ತಗಲಿಸಬೇಕು ಪೆಟ್ಟಿಗೆಯ ಮುಚ್ಚಳದ ಮೇಲೆ, ಪಿಂಗಾಪಾಂಗ್ ಚೆಂಡು ಅಥವಾ ಮತ್ತಾವ ಇದೇ ಆಕಾರದ ಚೆಂಡುಗಳಾದರೂ ಕೂರುವಂತಿರುವ ಐದು ತೂತುಗಳನ್ನು ಕೊರೆದು, ಈ ತೂತಿನ ಕೆಳಗೆ ಸರಿಯಾಗಿ, ಕೆಳಗಿನ ಮುಚ್ಚಳದ ಮೇಲೆ, ಒಲದಿಂದ ಎಡಕ್ಕೆ 1, 2, 3, 4 5, ಎಂಬ ಅಂಕೆಗಳನ್ನು ಗುರುತಿಸಿರಿ ಈ ರೀತಿ ಪೆಟ್ಟಿಗೆಯನ್ನು ತಯಾರಿಸಿದ ನಂತರ ಪೆಟ್ಟಿಗೆಗೂ ಚೆಂಡುಗಳಿಗೂ ಬಣ್ಣವನ್ನು ಹಚ್ಚಿ. ಇಂತಹ ಪೆಟ್ಟಿಗೆಯ ಸಹಾಯದಿಂದ ಮಕ್ಕಳಿಗೆ ವ್ಯವಕಲನವನ್ನು ಹೇಳಿಕೊಡುವುದು ಬಹಳ ಸುಲಭ.

ಉದಾಹರಣೆ: 5 ಚೆಂಡುಗಳಲ್ಲಿ 2 ಚೆಂಡುಗಳು ಹೋದಲ್ಲಿ ಮಿಕ್ಕ ಚೆಂಡುಗಳ ಸಂಖ್ಯೆ ಎಷ್ಟು? ಮಗುವಿಗೆ ಪೆಟ್ಟಿಗೆಯ ಮೇಲಿನ ಐದು ಚೆಂಡುಗಳನ್ನು ಎಣಿಸಿ ತೋರಿಸಿದ ನಂತರ, ಕಳೆದು ಹಾಕಬೇಕಾದ 2 ಅಂಕೆಗಳು ಕಾಣುವತನಕ ಪೆಟ್ಟಿಗೆಯ ಮುಚ್ಚಳವನ್ನು ಎಳೆಯುವಂತೆ ಹೇಳಿ. ಮುಚ್ಚಳದ ಮೇಲೆ ಎಷ್ಟು ಅಂಕೆಗಳು ಕಾಣುತ್ತವೆಯೋ ಅಷ್ಟು ಚೆಂಡುಗಳು ಪೆಟ್ಟಿಗೆಯಲ್ಲಿ ಬೀಳುವವಲ್ಲದೆ, ಲೆಕ್ಕದ ಸರಿಯಾದ ಉತ್ತರವಾದ ಮೂರು ಚೆಂಡುಗಳು ಮಾತ್ರ ಮಗುವಿನ ಕಣ್ಣಿಗೆ ಕಾಣಿಸುತ್ತವೆ ಇಂತಹ ಸಲಕರಣೆಗಳಲ್ಲಿ ತಪ್ಪು ಉತ್ತರ ಬರಲು ಸಾಧ್ಯವೇ ಇಲ್ಲ.

ಗುಣಾಕಾರ

ನಾಲ್ಕನೆಯ ಸಂಖ್ಯೆಯನ್ನು ತೋರಿಸಿ ಮರದ ತುಂಡನ್ನು ಎರಡನೆಯ ಮಗ್ಗಿ ಹೇಳಿಕೊಡುವಾಗ ಸೇರಿಸಬೇಕು. ಹೀಗೆಯೇ ಪ್ರತಿಯೊಂದು ಮಗ್ಗಿಗೂ ಬೇರೆ ಬೇರೆ ಮರದ ತುಂಡನ್ನು ತಯಾರಿಸಿ, ಹಲಗೆಯ ಎಡಭಾಗದಲ್ಲಿ ಸೇರಿಸಬೇಕು ಹಲಗೆಯ ಮಧ್ಯದಲ್ಲಿರುವ ಅಂಕೆಗಳು ಎಲ್ಲಾ ಮಗ್ಗಿಗಳಿಗೂ ಒಂದೇ ಆಧಾರವಾಗಿ, ಇವನ್ನು ಮಗುವು ಬದಲಾಯಿಸದ ಹಾಗೆ ಗಟ್ಟಿಯಾಗಿ ತಗಲಿಸಿ. ಹಲಗೆಯ ಬಲಭಾಗದ ಅಂಚು [ಐದನೆಯ ಸಂಖ್ಯೆಯನ್ನು ತೋರಿಸುವ ಸ್ಥಳದಲ್ಲಿ] ಅಂಕುಡೊಂಕಾಗಿ, ಗುಣಾಕಾರದ ಸರಿಯಾದ ಸಂಖ್ಯೆಯನ್ನು ತಿಳಿಸುವ ಮರದ ಚೂರಿನ ಎಡಭಾಗದ ಅಂಕುಡೊಂಕುಗಳನ್ನು ಅನುಸರಿಸಿರುವುದರಿಂದ, ಮಗ್ಗಿಯ ಸರಿಯಾದ ಉತ್ತರವನ್ನು ಮಾತ್ರ ಮಗುವು ಕೂಡಿಸಲು ಶಕ್ಯವಾಗುವದು ಅನ್ಯಥಾ ಆದಲ್ಲಿ, ಮರದ ತುಂಡು ಮಗ್ಗಿಯ ಮುಂದೆ ಸರಿಯಾಗಿ ಸೇರುವುದಿಲ್ಲ. ಗುಣಾಕಾರಗಳನ್ನು ತಪ್ಪಿಲ್ಲದೆ ಮಾಡಲು ಇದು ಒಳ್ಳೆಯ ಸಲಕರಣೆ.

ಕಪ್ಪು ಹಲಗೆ

ಚಿಕ್ಕಮಕ್ಕಳಿಗೆ ಪಾಠಗಳನ್ನು ಹೇಳಿಕೊಡುವಾಗ ಮಕ್ಕಳ ಮನಸ್ಸು ಹಿಡಿಯುವಂತೆ ಪಾಠಕ್ಕೆ ಸಂಬಂಧಪಟ್ಟ ಹಲವು ಅಂಶಗಳನ್ನು ಮತ್ತು ಚಿತ್ರಗಳನ್ನು ತಾವು ಬರೆದು, ಮಗುವಿನಕೈಲಿ ಬರೆಸಬೇಕಾಗುವುದು ಆದುದರಿಂದಲೇ ಪ್ರತಿ ಶಾಲೆಗಳಲ್ಲೂ ಕಪ್ಪುಹಲಗೆಗೆ ಸೀಮೆಸುಣ್ಣಗಳನ್ನು (ಬಿಡುಗಳನ್ನು) ಇಟ್ಟಿರುವುದು. ಇವು ಇಲ್ಲದ ಶಾಲೆಗಳೇ ಇಲ್ಲ. ಉತ್ತಮವಾದ ಕಪ್ಪುಹಲಗೆಯನ್ನು ತಯಾರಿಸಲು 10-15 ರೂ

ಪಾಯಿಗಳು ಬೇಕಾಗುವುದು. ಇಂತಹ ಉಷ್ಣಯುಕ್ತವಾದ ಕಪ್ಪು ಹಲಗೆಯನ್ನು ಕೇವಲ 12 ಆಣೆಗಳಿಂದ ಹೇಗೆ ನೀವೇ ನಿಮ್ಮ ಮನೆಯಲ್ಲಿ ತಯಾರಿಸಬಹುದು. ಇದರಿಂದ ಮರದ ತೆರೆಯ ಉಪಯೋಗವನ್ನು ಹೆಚ್ಚಿಸಿದಂತಲ್ಲದೆ. ಮಕ್ಕಳಿಗೆ ಅತ್ಯಲ್ಪ ವೆಚ್ಚದಲ್ಲಿಯೇ ಕಪ್ಪು ಹಲಗೆಯನ್ನು ತಯಾರಿಸಿದಂತೆ ಆಯಿತು. ಉಪಯೋಗವಿಲ್ಲದೆ ಇರುವ ಮರದ ತೆರೆಯ ಕೆಳಭಾಗಕ್ಕೆ ಕರಿಯ ಜಪಾನ್ ಬಣ್ಣವನ್ನು ಹಚ್ಚಿದಲ್ಲಿ ಅಂದವಾದ ಕಪ್ಪು ಹಲಗೆಯಾಗುವುದು. ಇದಕ್ಕೆ ಅವಶ್ಯಕವಾದ ಕಪ್ಪು ಬಣ್ಣದ ಡಬ್ಬಿ. ಬಣ್ಣವನ್ನು ಹಚ್ಚಲು 2 ಅಂಗುಲದ ಬ್ರಷ್ ಇವುಗಳ ಬೆಲೆ ಅರು ಆಣೆ ಮಾತ್ರ. ಬಣ್ಣವನ್ನು ಹಚ್ಚಿದನಂತರ ರಂಗಿನ ಮರದ 25 ಗೋಲಿಗಳನ್ನು ತಂತಿಗೆ ಪೋಣಿಸಿ, ಹಿತ್ತಾಳೆಯ ಕೊಕ್ಕೆಯಿಂದ ಕಪ್ಪು ಹಲಗೆಯ ಮೇಲ್ಭಾಗಕ್ಕೆ ತಗುಲಿಸಿ ಇದರ ಒಡಿಯಲ್ಲಿ ದಾರಕ್ಕೆ ಕಟ್ಟಿದ ಅರಿವೆ, ಹಲವು ಬಣ್ಣದ ಸೀಮೆಯ ಸುಣ್ಣಗಳನ್ನು ಇಟ್ಟಲ್ಲಿ, ಕೇವಲ 12 ಆಣೆಗಳಲ್ಲಿ ಶಿಕ್ಷಣಕ್ಕೆ ಅವಶ್ಯಕವಾದ ಸಲಕರಣೆಗಳನ್ನು ತಯಾರಿಸಿದಂತಾಯಿತು. ಮಗುವು ಬಣ್ಣದ ಗೋಲಿ, ಕಪ್ಪುಹಲಗೆಗಳ ಸಹಾಯದಿಂದ ಪಾಠಗಳನ್ನು ಸುಲಭವಾಗಿ ಕಲಿಯುವುದು. ಮರದ ತೆರೆ ಇಲ್ಲದಿದ್ದಲ್ಲಿ ಕಪಾಟಿನ ಹಿಂಭಾಗ ಅಥವಾ ಮನೆಯ ಬಾಗಿಲ ಹಿಂಭಾಗವನ್ನು ಕಪ್ಪು ಹಲಗೆಯನ್ನಾಗಿ ಮಾಡಬಹುದು.

ಅಂಕೆಗಳ ಪೆಟ್ಟಿಗೆ

ಔಷಧ, ಮಸಿ ಮುಂತಾದ ಸಾಮಾನುಗಳನ್ನು ಕೊಳ್ಳುವಾಗ ದೊರಕುವ ರಟ್ಟಿನ ಪೆಟ್ಟಿಗೆಗಳನ್ನು ಕಲೆಹಾಕಿ, ಅವುಗಳ ಮೇಲೆ ಬಣ್ಣದ ಕಾಗದಗಳನ್ನು ಅಂಟಿಸಿ. ಪಡಿಯಚ್ಚಿನ ಕೊರೆಯ ಚಿತ್ರದಲ್ಲಿ ತೋರಿಸಿರುವಂತೆ, ಬಿಳಿಯ ಕಾಗದದಲ್ಲಿ ಅಕ್ಷರ ಅಂಕೆಗಳನ್ನು ಕತ್ತರಿಸಿ, ಈ ರಟ್ಟಿನ ಪೆಟ್ಟಿಗೆಯ ಒಂದೊಂದು ಪಕ್ಕಕ್ಕೂ ಅಂಟಿಸಿದಲ್ಲಿ ಸುಂದರವಾದ ಅಂಕೆಗಳ ಪೆಟ್ಟಿಗೆಯಾಗುವದು. ಮಗು ಇಂಥ ಪೆಟ್ಟಿಗೆಗಳ ಸಹಾಯದಿಂದ ಮಾತುಗಳನ್ನು ಜೋಡಿಸುವುದು: ಅಂಕೆಗಳನ್ನು ಸೇರಿಸಿ ಲೆಕ್ಕವನ್ನು ಮಾಡಲು ಕಲಿಯುವುದು.

ಉದ್ಯೋಗಮಂದಿರಗಳ ಅವಶ್ಯಕತೆ

ಲೇಖನದಲ್ಲಿ ನಿವೇದಿಸಿದಂತೆ, ಶಿಕ್ಷಣಕ್ಕೆ ಬೇಕಾದ ಎಲ್ಲಾ ಸಲಕರಣೆಗಳನ್ನು ಉಪಯೋಗವಿಲ್ಲವೆಂದು ಬಿಸಾಡುವ ವಸ್ತುಗಳಿಂದ ಅತ್ಯಲ್ಪ ವೆಚ್ಚದಲ್ಲಿಯೇ ತಯಾರಿಸಬಹುದು; ಅಲ್ಲದೆ ಉಪಯುಕ್ತವಾದ ಈ ಸಾಮಾನುಗಳನ್ನು ಮಾರಿ ಅನೇಕ ಬಡ ಕುಟುಂಬಗಳ ಜೀವನವು ಸುಲಭವಾಗಿ ಜರುಗುವಂತೆ ಮಾಡಬಹುದು.

ಪರದೇಶದಿಂದ ಬರುವ ಅನೇಕ ಅಂದಚಂದವಾದ ಸಾಮಾನುಗಳನ್ನು ತಯಾರಿಸಿದವರು ಪಾಶ್ಚಿಮಾತ್ಯ ದೇಶಗಳಲ್ಲಿಯ ಬಡ ಕುಟುಂಬಗಳ ಅಬಲೆಯರು. ಆ ದೇಶಗಳಲ್ಲಿ ಪ್ರತಿಮನೆಯಲ್ಲೂ ಸುಲಭವಾಗಿ ಮಾರಾಟವಾಗುವಂತಹ ಅನೇಕ ವಸ್ತುಗಳನ್ನು ತಯಾರಿಸುತ್ತಾರೆ. ಇದಕ್ಕೆ 'ಹೋಮ್ ಇಂಡಸ್ಟ್ರೀಸ್ [ಮನೆಕೈಗಾರಿಕೆ]' ಅನ್ನುವರು. ನಮ್ಮ ಜೀವನವು ನಮ್ಮದಿಯಾಗಬೇಕಾದಲ್ಲಿ, ನಮ್ಮ ನಾಡಿನ ಕೀರ್ತಿ-ಸಂಪತ್ತು ವೃದ್ಧಿಯಾಗಬೇಕಾದಲ್ಲಿ ನಾವುಗಳು ಸ್ವಾವಲಂಬಿಗಳಾಗಿ ನಮಗೆ ಬೇಕಾದ ವಸ್ತುಗಳನ್ನು ನಾವೇ ನಮ್ಮ ಮನೆಯಲ್ಲೇ ತಯಾರಿಸಲು ಆರಂಭಮಾಡಬೇಕು. ನಮ್ಮ ಹಳ್ಳಿಗಳಲ್ಲಿಯ ಪ್ರತಿಯೊಂದು ಮನೆಯು ಒಂದು ಉದ್ಯೋಗ ಮಂದಿರವಾಗಬೇಕು.

ಬೋರ್ಡು ಎಲಿಮೆಂಟರಿ ಶಾಲೆಗಳು

[ಉಪಾಧ್ಯಾಯ ಮಿತ್ರ]

'ನವಭಾರತ'ದಲ್ಲಿ ಈ ಹಿಂದೆ ಪ್ರಕಟವಾದ ಲೇಖನಗಳಿಂದ ಲೋಪಕ್ಕೊಳಪಟ್ಟ ಶಾಲೆಗಳ ಸಂಖ್ಯೆ, ವಾಯವಾಗಭ್ಯಸ್ತವಾದ ಶಾಲೆಗಳು, ಉಪಾಧ್ಯಾಯರ ಕಷ್ಟಗಳು ಎಲ್ಲರಿಗೂ ತಿಳಿದಿರಬಹುದು. ಮದ್ರಾಸ್ ಪ್ರಾಂತ್ಯದಲ್ಲಿ ಆವ ಗಲಾಟೆಯು ಸಂಭವಿಸಿದಾಗಲೂ ಸರಕಾರದ ಅಧಿಕಾರಿಗಳು ಅಲ್ಪಸ್ವಲ್ಪ ಸೌಕರ್ಯಗಳನ್ನು ಕಲ್ಪಿಸಿರುವಂತೆ.

ನಾಲ್ಕು ಲೋಪಗಳಲ್ಲಿ ಮೂರನೆಯ ಲೋಪವನ್ನು ತೆಗೆದು ಹಾಕಿರುತ್ತಾರೆ. ಏತಕ್ಕೆಂದರೆ ಒಂದನೇ ತರಗತಿಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಸೇರಿದರೆ ನಾಲ್ಕರಲ್ಲೊಂದು ಆಂಶವು 4-ನೆ ತರಗತಿಗಳಲ್ಲಿ ತಕ್ಷಣವೇ ಬರುವುದು ಕಷ್ಟ. ಒಂದು ವರ್ಷದ ಅವಧಿಯಾದರೂ ಬೇಕು. ಇದು ಸಂತೋಷವಾದ ವಿಷಯ, ಬೋರ್ಡು ಹಿಂದೂ ಪಾಠಶಾಲೆಗಳಿಗೆ 30-11-41 ರವರಿಗೆ ಮುಸ್ಲಿಂ ಬಾಲಿಕಾ ಪಾಠಶಾಲೆಗಳಿಗೆ ಡಿಶಂಬರ್ ಅಖೈರುವರಿಗೆ ಉಳಿದ 3 ಲೋಪಗಳನ್ನು ಸರಿಪಡಿಸಿಕೊಳ್ಳಲು ಕಾಲಾವಧಿ ಕೊಟ್ಟಿರುತ್ತಾರೆ. ಇದು ಸಾಲದು ಒಂದು ವರ್ಷವಾದರೂ ಕೂಡ ಬೇಕೆಂದು ಬೇಡುತ್ತೇವೆ.

'ಸಾರ್ವಜನಿಕಾರೋಗ್ಯವನ್ನು ಪದ ಗೊಳಿಸುವ ಕಾರ್ಯವು ಉಪಾಧ್ಯಾಯರಿಂದಾಗುವುದು. ಈ ಸ್ವಸಂರಕ್ಷಣೆಯ ಕಾರ್ಯದಲ್ಲಿ ಅವರು ಜಾಗೃತರಾಗುವರೋ? ನೋಡಬೇಕು.

ಹರಪನಹಳ್ಳಿ ಪಂಚಾಯ್ತಿ ಬೋರ್ಡಿನಿಂದ ನಡೆಸಲ್ಪಡುವ ಕಾರ್ಯ.

ಹರಪನಹಳ್ಳಿಯ ಸ್ಪೆಶಲ್ ಆಫೀಸರು (ಪಂಚಾಯ್ತಿ ಬೋರ್ಡು): ಗ್ರಾಮಾಭಿವೃದ್ಧಿಗಾಗಿ ಕೆಲ ಕಾರ್ಯಕ್ರಮಗಳನ್ನು ಕೈಗೊಂಡಿರುವರು. ಪಂಚಾಯ್ತಿ ಬೋರ್ಡಿಗೂ ಜಿಲ್ಲಾ ಬೋರ್ಡಿಗೂ ಇರುವ ಸಂಬಂಧದಲ್ಲಿ ಲೋಕಲ್ ಫಂಡಿನ ಓವರ್‌ಸಿಯರ್‌ರ ಸಲಹೆ ಸಹಾಯಗಳು ಈಗ ದೊರೆಯುತ್ತಿಲ್ಲ. ಓವರ್‌ಸಿಯರಾದರೂ ಮೇಲ್ಪಟ್ಟ ಅಧಿಕಾರಿಗಳ ಉತ್ತರವಿಲ್ಲದೆ ಈ ಕಾರ್ಯಗಳಲ್ಲಿ ಪ್ರವೇಶಿಸಲು ಬಾರದು.

ಜಿಲ್ಲಾಬೋರ್ಡಿನಲ್ಲಿ ವಿಚಾರಿಸಲಾಗಿ "ಸ್ಪೆಶಲ್ ಆಫೀಸರರು ತಮ್ಮ ಮೇಲ್ವಿಚಾರಣೆಯಲ್ಲಿ ನಡೆಸುತ್ತಿರುವ ಕಾರ್ಯದಲ್ಲಿ ನಾವು ಪ್ರವೇಶಿಸಬಾರದು. ಎಸ್ಟಿಮೇಟ್ ಪ್ರಕಾರಕ್ಕೆ ಹಣವನ್ನು ಕಟ್ಟಿ ಎಂಜಿನಿಯರ್‌ರವರಿಗೆ ಒಪ್ಪಿಸುವ ಪಕ್ಷದಲ್ಲಿ ಆಗ ಎಂಜಿನಿಯರ್ ವೃತ್ತು ಓವರ್‌ಸಿಯರ್ ಮುಂತಾದ ಕಾರ್ಯಗಳು ನೆರವೇರಲಾಗುತ್ತವೆ. ಅಧಿಕಾರರೀತ್ಯ ಅಲ್ಲದೆ, ಪರಸ್ಪರ ಸ್ನೇಹದ ದೃಷ್ಟಿಯಿಂದ ಸ್ಪೆಶಲ್ ಆಫೀಸರರು ಓವರ್‌ಸಿಯರ್ ಸಲಹೆ ಸಹಕಾರಗಳನ್ನು ಯಾವಾಗಬೇಕಾದ್ದರೂ ಪಡೆಯಬಹುದು" ಎಂಬುದಾಗಿ ತಿಳಿಯಿತು.

ಪಂಚಾಯ್ತಿ ಬೋರ್ಡು ಸ್ಪೆಶಲ್ ಆಫೀಸರು ಸ್ವಲ್ಪ ಖರ್ಚಿನಿಂದ ಬಹಳ ಕಾರ್ಯ ಮಾಡಿಸುತ್ತಿರುವಕಾರಣ ಎಸ್ಟಿಮೇಟು ಎಂಜಿನಿಯರ ಗೋಜಿಗೆ ಹೋಗದೆ ತಾನೇ ಎಲ್ಲಾ ಕಾರ್ಯಗಳನ್ನು ನೆರವೇರಿಸುವುದು ಒಳ್ಳೆಯದು.

ಭಾರತ ಕಲ್ಯಾಣ

ಶಿ ವಾರ್ಡೊಳಗೆ ನಿಶ್ಚೆಯ ವಿಷಯ ಹೊರಬೀಳಲ್ಲಿದೆ.

ಲಂಡನ್ ನಗರದಲ್ಲಿ ಸಾರ್ವಜನಿಕ ಸಭೆಯನ್ನು ಮಾಡಿ ಹಿಂದೂಸ್ತಾನದ ವಿಷಯಕ್ಕೆ ಒಳ್ಳೆಯ ಮಾತುಗಳನ್ನಾಡಿದ್ದೆ ಸರ್ ಫ್ರಾನ್ಸಿಸ್ ಯಂಗ್ ಹಸ್ಬೆಂಡರವರು ಒಂದೆರಡು ವಾರಗಳೊಳಗಾಗಿ ಹಿಂದುಸ್ಥಾನದ ಭವಿಷ್ಯತ್ಪದ ಬಗ್ಗೆ ನಿಶ್ಚಯ ಸುದ್ದಿಯು ಹೊರಬೀಳಲಿದುವುದೆಂದು ಯುನೈಟೆಡ್ ಪ್ರೆಸ್ ವಾರ್ತಾ ಸಂಸ್ಥೆಗೆ ತಿಳಿಸಿದರು.

ರಾಯಲಸೀಮ ಬ್ಯಾಂಕು, ಲಿಮಿಟೆಡ್.

ಇಂಡಿಯಾ ಸರ್ಕಾರದ ಕಂಪನಿ ಶಾಸನಗಳನ್ವಯ ಸ್ಥಾಪಿಸಲ್ಪಟ್ಟದ್ದು

ಮುಖ್ಯ ಕಾರ್ಯಾಲಯ: ಬಳ್ಳಾರಿ.

ಪ್ರಥಮ ವರ್ಷದ ಪ್ರಗತಿ

ವಿವರಗಳು.	31—10—1940	30—9—1941
ಡಿಪಾಜಿಟ್ಟುಗಳು.		
ಫಿಕ್ಸೆಡ್	ರೂ. Nil	61,930
ಕರೆಂಟ್	,, 3,173	35,122
ಸೇವಿಂಗ್ಸ್	,, 1,231	16,621
ಇತರ	,, 40	678
ಸಾಲಗಳು.		
ಭಂಗಾರ	,, 520	21,673
ಮೂಲು	,, Nil	28,441
ಇತರ	,, Nil	6,264
ಇತರ ಆಸ್ತಿ		
ಸರ್ಕಾರದ ಬಾಂಡುಗಳು	,, 13,300	22,538
ಬ್ಯಾಂಕುಗಳಲ್ಲಿರುವ ಹಣ	,, 32,502	49,910
ಕೈಯಲ್ಲಿ ನಗದು	,, 5770	25,477
ಒಟ್ಟು ವ್ಯವಹಾರ ಪೊತ್ತ	ರೂ. 1,14,774	1,93,653

ಶಾಖೆಗಳು: [1] ತಿಮ್ಮನಚರ್ಲ. [ಗುಂತಕಲ್] [2] ಕೊಟ್ಟೂರು. [3] ಉರವಕೊಂಡ

ಬಿ. ವಿ. ಶೇಷಗಿರಿರಾವ್, ಬಿ. ಕಾಂ, ಕಾರ್ಯದರ್ಶಿ. | ಹೆಚ್. ಸೀತಾರಾಮರೆಡ್ಡಿ, ಬಿ. ಎ., ಬಿ. ಎಲ್., [ಎಂ ಎಲ್ ಎ] ಶಾಸನಸಭೆಯ ಬೋರ್ಡು ಅಧ್ಯಕ್ಷರು.

ಕೊಟ್ಟೂರು.

ಕರ್ನಾಟಕ ವಾಚನಾಲಯದ ವಾರ್ಷಿಕೋತ್ಸವವು 2-11-41 ಕ್ಕೆ ಶ್ರೀ ಡಾ. ನಾಗನಗೌಡರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು. ಈ ಉತ್ಸವಕ್ಕೆ ಶ್ರೀಗಳಾದ ಟಿ. ಸುಬ್ರಹ್ಮಣ್ಯಂ, ಬೆಲ್ಲದ ಚನ್ನಪ್ಪ ಮತ್ತು ಅನಂತಾಚಾರ್ಯರು ಆಯಮಾಡಿಸಿದ್ದರು. ವಾರ್ಷಿಕ ವರದಿ ಮತ್ತು ಲೆಕ್ಕಗಳ ಸಮರ್ಪಣೆ ಸ್ವೀಕಾರದ ನಂತರ ಶ್ರೀ ಆಲೂರು ಹನುಮಂತಾಚಾರ್ಯ, ಶೀತಾರಾಮಶಾಸ್ತ್ರಿ, ಬೆಲ್ಲದ ಚನ್ನಪ್ಪ, ಅನಂತಾಚಾರ್ಯ ಸುಬ್ರಹ್ಮಣ್ಯಂ ಇವರ ಭಾಷಣಗಳಾದುವು. ಕನ್ನಡ ಸಾಹಿತ್ಯ ಪರಿಷತ್ತು ಪರೀಕ್ಷೆಗಳಲ್ಲಿ ತೇರ್ಗಡೆಯಾದ ಪರಿಗೆ-ಶ್ರೀ ಅನಂತಾಚಾರ್ಯರ ಹಸ್ತದಿಂದ ಪ್ರಶಸ್ತಿಪತ್ರಗಳನ್ನು ಕೊಡಿಸಲಾಯಿತು ಎಂದನಾರ್ಪಣಾನಂತರ ಸಭೆಯು ಮುಗಿಯಿತು. ಬೋರ್ಡು ಹೈಸ್ಕೂಲು ಬಡಾವಣೆ ಕಟ್ಟಡದ ಶಂಕುಸ್ಥಾಪನೆಯು ಡಾ. ಗೌಡರಿಂದ ನೆರವೇರಿಸಲ್ಪಟ್ಟು ಊಟಾಹಾರದೊಡನೆ ಸಮಾರಂಭಗಳೆಲ್ಲಾ ಮುಗಿದವು.

ಯುದ್ಧ ವಾರ್ತೆಗಳು.

ರಷ್ಯಾ — ಜರ್ಮನ್ ರಣರಂಗ.

ವಾಸ್ಯೋಜೆಮೇಲೆ ನಾಜಿ ಸೈನ್ಯಗಳು ಇನ್ನೊಂದು ಉಗ್ರ ಮುತ್ತಿಗೆಯನ್ನು ಆರಂಭಿಸುವಂತಿವೆ. ಕಾಲಿನಿನ್ ಮತ್ತು ಟೂಲ್ ನಗರಗಳ ಬಳಿ ಪರಿಸ್ಥಿತಿಯು ಬಹಳ ಕ್ರೂರವಾಗಿದೆ. ಓರಲ ಮತ್ತು ಕಾರ್ಪಿವ ನಗರದ ಮಧ್ಯದಲ್ಲಿನ ಕರಸ್ಕ್ ಎಂಬ ನಗರವು ಶತ್ರುಗಳ ವಶವಾಗಿದೆ. ದಕ್ಷಿಣ ಭಾಗದಲ್ಲಿ ಜರ್ಮನ್ನರು ಡ್ನೆಪೆಟ್ರಜ ನದಿಯನ್ನು ದಾಟಿ ಹಲವು ಮೈಲಿಗಳ ದೂರ ಮುಂದುವರಿದಿದ್ದಾರೆ. ಫಲವತ್ತಾದ ಕ್ರೀಮಿಯಾ ಪ್ರದೇಶದ ರಾಜಧಾನಿಯಾದ ಸಿಂಫರಪಾಲ್ ವನ್ನು ಹಿಡಿದಿರುವುದಾಗಿ ಜರ್ಮನ್ ವಾರ್ತಾ ಸಂಸ್ಥೆಯಿಂದ ಸುದ್ದಿ ಬಂದಿತ್ತು. ಕ್ರೀಮಿಯಾದಲ್ಲಿ ರಷ್ಯನ್ನರಿಗೆ ಸೋಲಾಗಲು ಕಾರಣ ಸೈನ್ಯಗಳು ಛಿದ್ರವಾಗಿವೆಯೆಂತೆ ಜರ್ಮನರು ಕಪ್ಪು ಸಮುದ್ರದ ಮುಖ್ಯ ಒಂದೊಂದಾದ ಸೆಬಾಸ್ಟಪೋಲಿನ ಕಡೆ ಧಾವಿಸಿ ನಡೆದಿರುವರು. ರಷ್ಯನರು ಕರ್ಚು ಮತ್ತು ಸೆಬಾಸ್ಟಪೋಲಿನ ಕಡೆಯಿಂದ ಹಿಂದಕ್ಕೆ ಸರಿಯುತ್ತಿರುವರಂತೆ

ರಷ್ಯಾಕ್ಕೆ ಇರಾನಿನ ಮೂಲಕ ಸಹಾಯವನ್ನೊದಗಿಸಲು ಬ್ರಿಟಿಷರು ರೈಲ್ವೇ ರಿಪೇರಿ ಕಾರ್ಯಕ್ಕೆ 10 ಸಾವಿರ ಕೂಲಿಗಳನ್ನೆರ್ಪಡಿಸಿದ್ದಾರೆ

ರಷ್ಯಾ ಜರ್ಮನಿ ಬಿಸಿವಾರ್ತೆ:—

ಮಾಸ್ಕೋ ರಂಗದಲ್ಲಿ ಕೈಬಿದ 48 ಘಂಟೆಗಳಿಂದ ಭೀಕರ ಮುತ್ತಿಗೆಯು ಆರಂಭವಾಗಿದೆ ರಷ್ಯನರು ಜರ್ಮನರನ್ನು ವೀರಾವೇಶದಿಂದ ಪ್ರತಿಭಟಿಸುತ್ತಿರುವರು. ಟೂಲಾನಗರವು ಅಪಾಯಸ್ಥಿತಿಯಲ್ಲಿದೆಯೆಂದು ರಷ್ಯನರೇ ಒಪ್ಪಿಕೊಂಡಿದ್ದಾರೆ. ಲೆನಿನಗ್ರಾಡದಲ್ಲಿಯೂ ಜರ್ಮನ್ನರ ದಾಳಿಯಾಗುತ್ತಲಿದೆ ಸೆಬಾಸ್ಟಪೋಲ್ ಮತ್ತು ಕರ್ಚ್ ನಗರಗಳು (ಕಪ್ಪು ಸಮುದ್ರತೀರದಲ್ಲಿ) ಜರ್ಮನರ ವಶವಾಗಲಿವೆಯಂತೆ.

ರಾಷ್ಟ್ರ ಭಾಷೆಯನ್ನು ಕಲಿಯಿರಿ.

ಹಿಂದಿ ಹಿಂದುಸ್ತಾನಿ.

★ ಪರೀಕ್ಷೆಗಳಿಗೆ ಕೂಡಲು.....
★ ವ್ಯವಹಾರದ ಭಾಷೆಯನ್ನು ಕಲಿಯಲು.....
★ ಮಾತಾಡುವುದನ್ನು ಕಲಿಯಲು.....
★ ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ.

ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಥೆ, ಕಾದಂಬರಿ ನಗೈರೆ ದೊರೆಯುವುದಲ್ಲದೆ ನಿಮಗೆ ಎಲ್ಲಾವಿಧವಾದ ಮಾಹಿತಿಯೂ ಉಚಿತವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಕೃಷ್ಣಮಾಚಾರಿ ಕಾಂಪೌಂಡು, ಬಳ್ಳಾರಿ.

2ನೇ ಪುಟವನ್ನು ನೋಡಿರಿ

ಗ್ರಾಜ್ನಿಯ ಎಣ್ಣೆಯ ಬಹುಭಾಗ 300 ಮೈಲು ನೆಲದೊಳಗೆ ಹಾಕಿದ ಕೊಳವೆ ಮಾರ್ಗದಿಂದ ಹಾದು ಯುಕ್ರೇನಕ್ಕೆ ಹೋಗುತ್ತದೆ. ಅಲ್ಲಿಂದ ಎಲ್ಲೆಡೆ ಹಂಚಲಾಗುತ್ತದೆ. ನಮಗೆ ದೊರೆತ ಅಂಕಿಸಂಖ್ಯೆಗಳನ್ನು ನೋಡಿದರೆ ಗ್ರಾಜ್ನಿಯಲ್ಲಿ ದಿನಕ್ಕೆ ಲು 20000 ಟನ್ನು ಕಚ್ಚಾ ಎಣ್ಣೆ ಶುದ್ಧವಾಗಿ ಹೊರಬೀಳುತ್ತದೆ. ಆ ಪ್ರಾಂತದಲ್ಲಿ ಗ್ರಾಜ್ನಿಯ ಹುಟ್ಟುವಳಿಯೆ ಹೆಚ್ಚುವಳಿ. ಅದನ್ನು ನಿಗಿಸುವದು ಬೇರಾವದೂ ತಿಲ್ಲ.

ಒಂದುಕಾಲಕ್ಕೆ ಇದರ ನೆರೆಯಲ್ಲಿಯೇ ಇದಕ್ಕೂ ಬಹಳ ದೊಡ್ಡ ಪ್ರಮಾಣದಲ್ಲಿ ಎಣ್ಣೆ ಹೊರಡುತ್ತಿತ್ತು. ಆದರೆ ಆ ಕಣಿಗಳೆಲ್ಲ ಬಹುಬೇಗನೆ ಬರಿದಾದವು. ಆಗ ಒನ್ಮೆ ಬರಿದಾದಮೇಲೆ ನೆರೆಯ ಹುಟ್ಟುವಳಿ ಕಡಿಮೆಯಾಯಿತು ಅದಿನ್ನೂ ಪೂರ್ಣ ಸುಧಾರಿಸಿಲ್ಲ.

ಈ ಭಾಗದಲ್ಲಿ ವಿದ್ಯುತ್ತಿನ ಉಪಯೋಗಮಾಡಿದ್ದರಿಂದ ಕಾಕೇಶಸ್ಸವು ಬಹು ದೊಡ್ಡ ಔದ್ಯೋಗಿಕ ಪ್ರದೇಶವಾಗಿ ಪರಿಣಮಿಸಿದೆ. ಅದರಂತೆಯೇ ನೀರಾವರಿಗೂ ನಿರ್ಯಾತಕ್ಕೂ ಉದಯೋಗಿಸಲಾಗುವ ಕಾಲುವೆಗಳನ್ನು ಒಳ್ಳೆ ಆಧುನಿಕ ಪದ್ಧತಿಯ ಮೇರೆಗೆ ಸುಧಾರಿಸಲಾಗಿದೆ.

ಬಾಕು ಬಂದರದ ಮಹತ್ವ

ಕಾಕೇಶಸ್ಸದ ಮುಖ್ಯ ದೊಡ್ಡ ಬಂದರವೆಂದರೆ ಬಾಕು. ಈ ಬಂದರ ನಗರ ಹಳೇ ಹೊಸತುಗಳ ಸಂದರ ಸಮ್ಮಿಶ್ರಣವಾಗಿದೆ ಎಣ್ಣೆಯ ನಿರ್ಯಾತ ವ್ಯಾಪಾರದ ಭಾಗವೆಲ್ಲ ಒಳ್ಳೆ ಆಧುನಿಕ ಪದ್ಧತಿಯಂತೆ ರಚಿಸಲ್ಪಟ್ಟಿದೆ ಈ ಭಾಗದ ಅರ್ಧ ಬಾಕು ಆಗಿದೆ. ಉಳಿದರ್ಧ ನಗರವು ಮಧ್ಯಯುಗದ ಅವಶೇಷನಾಗಿದೆ ಇದೇ ಮಧ್ಯಯುಗದ ಅವಶೇಷದಲ್ಲಿಯೆ ರಷಿಯದ ಇಂದಿನ ಮುಕುಟಮಣಿಯಾದ ಸ್ಟಾಲಿನ್ನನು ತನ್ನ ಕ್ರಾಂತಿಮಯ ಜೀವನವನ್ನು ಪ್ರಾರಂಭಿಸಿದ್ದನು. ಓಡೆಸಾ ಸಬಿಸ್ಪ ಸ್ಟೋಲಗಳಲ್ಲಿರುವ ರಷಿಯನ್ ನೌಕಾಪಡೆ ಈ ಬಾಕುಬಂದರವನ್ನು ಶತ್ರು ದಾಳಿಗಳಿಂದ ಸಂರಕ್ಷಿಸುತ್ತದೆ. ಭೂಪ್ರದೇಶದ ವಾಹನ ಮಾರ್ಗಗಳು ಅಷ್ಟು ಚನ್ನಾಗಿಲ್ಲವಾದ್ದರಿಂದ, ಸೋವ್ಹಿಯೆಟ್ ರಾಜ್ಯದಿಂದ ಕಾಕೇಶಸ್ಸಕ್ಕೆ ಹೋಗಬೇಕಾದರೆ ಬಾಕುದಿಂದಲೆ ಹೋಗಬೇಕಾದ್ದರಿಂದ ಬಾಕೂದ ಮಹತ್ವವು ಹೆಚ್ಚಿದೆ.

ಜರ್ಮನರು ಫಲವತ್ತಾದ ಸುಸಂಪನ್ನ ಭೂಭಾಗವನ್ನು ಸಾದಾಕ್ರಾಂತ ಮಾಡಿದರೆ ಬಹಳ ಕಠಿಣವಾಗುವದು. ಲೂಟಿ ಅತ್ಯಾಚಾರಗಳು ಕೆಲ ದಿನ ಅವರಿಗೆ ಸುಖ ಕೊಡಬಹುದು ಆದರೆ ಆ ಪ್ರದೇಶದ ಮಹತ್ವದ ಲಾಭವನ್ನು ಪಡೆಯಬೇಕಾದರೆ ಭೂಮಿಯ ಸಾಗುವಳಿ ಸಾಗಲೇಬೇಕು. ಬೆಳೆಯನ್ನು ಬೆಳಕೊಳ್ಳಲೇಬೇಕು. ಅದರೆ ಅದೆಲ್ಲ ಬಿಟ್ಟು ದನಗಳನ್ನು ಕೊಂದು ಆಹಾರವನ್ನು ಮಾಡಿಕೊಂಡರೆ ದನ ಸಂಪತ್ತು ಹಾಳಾಗುವದಲ್ಲದೆ ದನ ಸಂಪತ್ತನ್ನೆ ಅವಲಂಬಿಸಿದ ಒಕ್ಕಲತನವೂ ನಾಶವಾಗುವದು. ಹೀಗಾಗಿ ಕಷ್ಟಪಟ್ಟರೆ ಬೇಡಿದ್ದನ್ನು ಕೊಡುವ ಭೂಮಿಯು ಬಂಜರ ಭೂಮಿಯಾಗುವದು.

ಈ ಕಾಕೇಶಸ್ಸ ರಷಿಯದ ಕೈಬಿಟ್ಟರೆ ರಷಿಯಕ್ಕೆ ಅಷ್ಟೇನು ಹಾನಿಯಿಲ್ಲ. ಯಾಕಂದರೆ ಕಾಕೇಶಸ್ಸ ಪರ್ವತಾವಳಿಗಳ ಹಿಂದೆ ಸುರಕ್ಷಿತವಾದ ವೋಲ್ಗಾ ಮತ್ತು ಉರಲ್ ಪ್ರದೇಶಗಳಲ್ಲಿಯ ಹೊಸ ಎಣ್ಣೆಯ ಕಣಿಗಳು ಬಹಳ ಪ್ರಗತಿ ಹೊಂದಿದವಿದ್ದು ಬಾಕುದ ತರುವಾಯ ಅವಕ್ಕೆ ಮಹತ್ವ ಬರುವಷ್ಟು ಫಲದ್ರೂಪಿಗಳಾಗಿವೆ. ಅವುಗಳ ಹುಟ್ಟುವಳಿ ಶಕ್ತಿ ಕಾಕೇಶಸ್ಸದ ಇಮ್ಮಡಿಯಿದೆ.

ಕಾಕೇಶಸ್ಸದಲ್ಲಿ ರಷಿಯ ಸೋತರೆ ತುರ್ಕಸ್ತಾನವನ್ನು ಮುಟ್ಟದೆ ಪೂರ್ವಕ್ಕೆ ಹೋಗಲು ಹಿಟ್ಲರನಿಗೆ ಅವಕಾಶ ದೊರೆಯುದು.

(ಕರ್ಮವೀರ.)

ಬಳ್ಳಾರಿನಗರ ವಾರ್ತೆಗಳು

ಜಿಲ್ಲಾ ಜಡ್ಜರವರಿಗೆ ಬೀಳ್ಕೊಡುಗೆ:— ನವೆಂಬರ್ ತಿಂಗಳಲ್ಲಿ ಜಡ್ಜರವರ ಕೋರ್ಟಿನಲ್ಲಿ ಕ್ರಿಮಿನಲ್ ಕೆಲಸವಿಲ್ಲದ ಕಾರಣ ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಯನ್. ಎಂ. ಶಾಸ್ತ್ರಿಯವರು ಜಡ್ಜರವರಿಗೆ ಬಿಳಿಯ ಕೈಚೀಲಗಳನ್ನರ್ಪಿಸಿ ಈ 20 ವರ್ಷಗಳಲ್ಲಿ ಜವಾಬ್ದಾರಿಗಳು ಕಡಮೆಯಾಗಿರುವನೆಂದು ತಿಳಿಸಿದರು. ಜಡ್ಜರವರು ಶಾಸ್ತ್ರಿಗಳಿಗೆ ಒಂದು ಪುಸ್ತಕವನ್ನು ಬಹುಮಾನರೂಪವಾಗಿ ಕೊಟ್ಟು ವಂದಿಸಿದರು. ಈಸಮಾವೇಶಕ್ಕೆ ಕಲೆಕ್ಟರ್ ಸೂಪರೆಂಟ್ ನಗೈರೆ ಅಧಿಕಾರಿಗಳು ಬಂದಿದ್ದರು.

ಯುದ್ಧ ಸಮಿತಿ ಸಭೆ:— ಕಲೆಕ್ಟರ್ ಪ್ರೇಸರ್ ಸಾಹೇಬರ ಅಧ್ಯಕ್ಷತೆಯಲ್ಲಿ ಯುದ್ಧಕ್ಕೆ ಸಹಾಯಮಾಡುವುದಿನ್ನು ಕುರಿತು ಶ್ರೀ ರಾಘವ ಇವರು ಭಾಷಣಮಾಡಿದರು ಹೆಚ್ಚು ಹಣಕೊಟ್ಟ ಮಹಾಶಯರಿಗೆ ಪ್ರಶಸ್ತಿ ಪತ್ರಗಳನ್ನು ಹಂಚಿದರು.

ಹಿಂದೀ ಪ್ರೇಮೀ ಮಂಡಲ:— 10-ನೆಯ ವಾರ್ಷಿಕೋತ್ಸವವಾಗಿ ಬಾಸಿಕ ಸಾಹೇಬರು ಅಧ್ಯಕ್ಷರಾಗಿ, ಶ್ರೀ ಟಿ. ಕೆ ಹನುಮಂತರಾಯರು ಕಾರ್ಯದರ್ಶಿಯಾಗಿ ಡಿ. ಯಲ್. ಶೆಟ್ಟಿಯವರು ಖಜಾಂಚಿಗಳಾದರು. 6 ಜನ ಸದಸ್ಯರು ಕಾರ್ಯಕಾರಿಣೀಸಮಿತಿಯಲ್ಲಿದ್ದಾರೆ. ಮುಸಲ್ಮಾನರು ಹಿಂದೀ ಸಂಸ್ಕೃತಿಗೆ ಮಾಡಿದ ಉಪಕಾರವೆಂಬ ವಿಷಯಕ್ಕೆ ಅಪ್ಪಯವರು ಶ್ರೀ ಪಿ.-ವಿ. ಚಾರಿಯವರ ಅಧ್ಯಕ್ಷತೆಯಲ್ಲಿ ಉಪನ್ಯಾಸ ವಿತ್ತರು.

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟ.

ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ಸಿರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸ್ವೆಜುಗಳಲ್ಲೂ ದೊರೆಯುತ್ತದೆ. **A. S.** ಬಿ ಒನ್ನು ಗಮನಿಸಿ. ಕೊಳ್ಳಿರಿ. ನೋಸಹೋಗಬೇಡಿರಿ

ದೊರೆಯುವ ಸ್ಥಳ:- 1.) ಎಂ. ಮುಕೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ. ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ ಗ್ಯಾರಂಟಿ ಯಾವ ಕೂಡ್ಲೂ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ಗಳನ್ನು ಕ್ಷಿವೆ ಬಂದು ಸಲ ಉಪಯೋಗಿಸಿದರೆ ನಮಗೆ ತೃಪ್ತಿಯಾಗುವುದು.

H. S. & Sons, Bellary.

ಸರಸ್ವತೀ ಲೇಹ್ಯ.

ಧಾತು ನಷ್ಟ - ಯೂ - ದೌರ್ಬಲ್ಯ, ಕುಸುಮ ವ್ಯಾಧಿ ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ವೈದ್ಯ ನಗ್ಗೆರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ರುದ್ಧಿ ಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಅಮೂಲ್ಯವಾದ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧ ದೊರೆಯನೆ ಅನ್ನುವಾಗ ಪತ್ರ:-

೧ ಸೇರಿಗೆ ೧-೪-೦. ೨ ಸೇರಿಗೆ ೨-೪-೦

ಸ್ವಾಮಿಸ್ವ್ - ಔಷಧಾಲಯ ಮೇರೆಪ್ಪ, ಬಳ್ಳಾರಿ.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳನ್ನು ಮಿತ್ಯಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ ಇನ್ನು ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ವೇಸ್ಟ್ ಎಂಡ ಮಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಕನ್ನಡ ಭಗವದ್ಗೀತೆ.

ಶ್ರೀ ಕೃಷ್ಣ ಪರಮಾತ್ಮನ ದಿವ್ಯವಾಣಿಯಿಂದ ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಬೋಧಿಸಲ್ಪಟ್ಟ ಭಗವದ್ಗೀತೆಯ ಗಂಭೀರಾರ್ಥವನ್ನು ಸರಳವಾದ ಕುಸುಮ ಪಟ್ಟಿಯಂಥ ಪದ್ಯ ಶೈಲಿಯಲ್ಲಿ ಕರ್ನಾಟಕದ ಪುಣ್ಯ ಪಿತ್ರ ಕವಿಗಳಲ್ಲಿ ಒಬ್ಬರಾದ ಶ್ರೀ ಎಂ. ಎಸ್. ಸುಬ್ಬಣ್ಣನವರು ಗ್ರಂಥ ರಚನೆ ಮಾಡಿರುವರು. ಇದಕ್ಕೆ ಅನೇಕ ಪಂಡಿತರ ಪ್ರಶಂಸೆಯು ದೊರೆತಿದೆ. ಕನ್ನಡಿಗರೆಲ್ಲರೂ ಇದನ್ನು ಕೈಕನ್ನಡಿಯಾಗಿ ಮಾಡಿಕೊಳ್ಳಲು ಸುಸಂಧಿ. ಸ್ವಲ್ಪ ಪ್ರತಿಗಳಿವೆ. ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್.

ಬೆಲೆ 0—12—0 ಪೋಸ್ಟು ಖಾರ್ಚು ಪ್ರತ್ಯೇಕ.

ಕಾಲವ ಸುಬ್ಬಣ್ಣ, ಮುಚ್ಚೆಂಟು, ಬಳ್ಳಾರಿ.

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	ಚಂದಾ ವಿವರ
Annual	ಬಳ್ಳಾರಿಯವರಿಗೆ 2-0-0
Local 2—0—0	ಹೊರಗಿನವರಿಗೆ 3-0-0
moffusil 3—0—0	**6 ತಿಂಗಳಿಗೆ**
6 Months	ಬಳ್ಳಾರಿಯವರಿಗೆ 1-4-0
Local 1—4—0	ಹೊರಗಿನವರಿಗೆ 2-0-0
Moffusil 2—0—0	

Nava Bharat, Bellary.

REG. No. 3937.

Sri _____

_____

Printed at Vittal Press, Car Street Edited & Published by T. B. Keshava Rao, Bellary.

Reg. M. No. 3937. ವಂದೇಮಾತರಂ

ನವಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ—
ಸಂಚಿಕೆ ೮ ಬಳ್ಳಾರಿ ನವಂಬರ್ ೨೩ನೇ ಭಾನುವಾರ ೧೯೦೯. ಟಿ. ವಿ. ವೆಂಕಟರಾವ್

ಸ್ಥಾಪನೆ. ಎಂಪೈರ್ ಆಫ್ ಇಂಡಿಯಾ ೧೮೯೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000 ರೂ. ಗಳಿಗೆಮೀರಿದೆ

ಈ ಕಂಪನಿಯನ್ನು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುವನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ ಇಲ್ಲವೇ ವಿಜಿಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ:
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

— ಬ್ರಾಂಚು ಕಚೇರಿ:
ಡಿಸ್ಪೆಕ್ಟ್ ಜೋಡ್ಸ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ,
ಬೆಂಗಳೂರು ಸಿಟಿ.

ಈ ಕೋಟೆ ಮಲ್ಲೇಶ್ವರಸ್ವಾಮಿ ದ್ವಿತೀಯ ಪಶುಪ್ರದರ್ಶನ ಬಳ್ಳಾರಿ

ಬಳ್ಳಾರಿ ಕೋಟೆ ಮಲ್ಲೇಶ್ವರಸ್ವಾಮಿ ದೇವಸ್ಥಾನದ ಬಯಲಿನಲ್ಲಿ ಬರುವ ವರ್ಷ ಫಿಬ್ರುವರಿ ತಿಂಗಳು ೩ನೆ ತಾರೀಖಿಂದ ೪ನೆ ತಾರೀಖಿನವರೆಗೆ ದನಗಳ ಪರಿಷೆಯು ನಡೆಯುವುದು. ಉತ್ತಮವಾಗಿ ಸಾಕಿದ ಕ್ರೈಸ್ತ ತಳಿಗಳಿಗೆ ಅಂದರೆ ಎತ್ತು, ಆಕಳು, ಎಮ್ಮೆ, ಕುದುರೆಗಳಿಗೆ ಬಾಂಬೆ ಪಶುಗಳು ತೊಡಲಾಗುವುದು. ಹಿಂಗಸ್ತಾನದಲ್ಲಿ ಈ ಪಶುಗಳ ಸಹಾಯವಿಲ್ಲದೆ ಸ್ವವಸಾಯವಿಲ್ಲ ಈ ವ್ಯಾಪಾರವಿಲ್ಲದೆ ಬೇಳೆಯಿಲ್ಲ ಬೇಳೆಯಿಂದ ಪೊಳೆಕಾಳಿಲ್ಲದೆ ನನ್ನು ಜೀವನವಿಲ್ಲ. ಇತೆಯು ಪಶುಗಳ ತಳಿಯನ್ನು ಅಭಿವೃದ್ಧಿಪಡಿಸುವ ಕಡೆಗೆ ನಲ್ಲಿ ಹೆಚ್ಚಿನ ಗಮನವನ್ನು ಕೊಡಬೇಕೆಂದು ಈ ಪ್ರದರ್ಶನದ ಆರಂಭವಾಗಿದೆ ಇದನ್ನು ಸರ್ವರೂ ಪ್ರೋತ್ಸಾಹಿಸಿ ಯಶಸ್ಸು ಮಾಡಲು ಕೋರಿಕೆ.

ಯೇ. ತಾಳಿಕೆರಪ್ಪ ಟ್ರೈಸ್ಟಿ.

ಯುರೋಪಿನ ರಣರಂಗದ ವಾರ್ತೆಗಳು

ರಷ್ಯಾ ರಾಜಧಾನಿಯಾದ ಮಾಸ್ಕೋ ಹತ್ತಿರ ಪ್ರಚಂಡ ಹೋರಾಟವಾಗುತ್ತಲಿದೆ ಜರ್ಮನರು ಲೆನಿಗ್ರಾಡಿಗೆ ಬರುತ್ತಲಿದ್ದ ಬಹುಮುಖ್ಯ ರೈಲ್ವೆಮಾರ್ಗವೊಂದನ್ನು ಕತ್ತರಿಸಿ ಹಾಕಿದ್ದಾರೆ. ರಷ್ಯಾ ಭಾಗದಲ್ಲಿ ಈಗಾಗಲೇ ಛಳಿಗಾಲಕ್ಕೆ ಆರಂಭವಾಗಿದೆ. ಎಡೆ ಬಿಡದೆ ಮಳೆ ಸುರಿಯುತ್ತಲಿದೆ. ರಸ್ತೆಗಳಲ್ಲಿ ಕೆಸರು ಅಸಾಧ್ಯವಾಗಿದೆ. ಕೆಲಭಾಗಗಳಲ್ಲಿ ಹಿಮವು ಬೀಳುತ್ತಲಿದೆ ಈ ಕಾರಣ ಜರ್ಮನರ ಮುನ್ನಡೆಯು ಬಹಳ ಸ್ಥಾವಕಾಶವಾಗಿದೆ.

ಅಮೆರಿಕಾಕ್ಕೆ ತೆರಳುತ್ತಿದ್ದ ಸಾಟು ಗೆಹ್ಯಾಂ ಎಂಬ 9 ಸಾವಿರ ಟನ್ನಿನ ಬ್ರಿಟಿಷರ ಹಡಗು ಶತ್ರುಗಳ ಟಾರ್ಪಿಡೋದಿಂದ ಮುಳುಗಿತು

ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷರ ಜಯ

ಕಳೆದ ಭಾನುವಾರ ಭೂಮಧ್ಯಸಮುದ್ರದಲ್ಲಿ ನಡೆದ ಕದನದಫಲವಾಗಿ 3 ಇಟಲಿ ಯುದ್ಧ ವಿನಾಶಕೆಗಳು ನಾಶವಾದವೆಂದು ಗೊತ್ತಾಗಿದೆ. ಇವೂ ಅಲ್ಲದೆ 4 ಶತ್ರು ಸರಪರಾಜು ಹಡಗುಗಳು ಅಥವಾ ಸೈನಿಕ ಹಡಗುಗಳುಮುಳುಗಿಸಲಾಯ್ತಂತೆ. ಆಗಷ್ಟ್ ತಿಂಗಳಿಂದೀಚೆಗೆ ಮೆಡಿಟರೇನಿಯನ್ ಸಮುದ್ರದಲ್ಲಿ 165 ಶತ್ರುಹಡಗುಗಳನ್ನು ಮುಳುಗಿಸಲಾಗಿವೆ ಅಥವಾ ನಷ್ಟಪಡಿಸಲಾಗಿದೆ.

★ ಹಳ್ಳಿಗಳ "ಆರ್ಥಿಕ ಪರಿಸ್ಥಿತಿ" ★

ಸುಧಾರಿಸುವ ಬಗೆ-ಸರಕಾರದ ಕರ್ತವ್ಯ

ಭಾರತದ ಇಂದಿನ ಪರಿಸ್ಥಿತಿಯಲ್ಲಿ ನಾವು ಹಳ್ಳಿಗಳ ಆರ್ಥಿಕ ಸಮಸ್ಯೆಗಳನ್ನು ಕುರಿತು ವಿಚಾರ ಮಾಡುವದೆಂದರೆ ಅಪ್ರಸ್ತುತ ಎನಿಸಬಹುದು. ಆದರೆ ಭಾರತದ ಯಾವುದೆ ಸಮಸ್ಯೆಯಾಗಲಿ, ಯುದ್ಧ, ಸೈನ್ಯ ಅಥವ ಉದ್ಯೋಗ, ಒಕ್ಕಲತನ ಮುಂತಾದ ಯಾವುದೆ ವಿಷಯವಿರಲಿ-ಅದರಲ್ಲಿ ಹಳ್ಳಿಗಳನ್ನು ಬಿಟ್ಟರೆ ಭಾರತಕ್ಕೆ ಸಮಸ್ಯೆಯೆಂಬುದು ಬೇರೆ ಇಲ್ಲವೆ ಇಲ್ಲ. ಅದರಲ್ಲಿ ಯಂತೂ ಸಹಕಾರ, ಉದ್ಯೋಗ, ಆರ್ಥಿಕ ಪುನರ್ರಚನೆ, ಹಳ್ಳಿಗಳ ಸಂಘಟನೆ ಮೊದಲಾದ ಅಪ್ತ ವಿಷಯಗಳ ವಿಚಾರವೆಂದರೆ ಅವರಲ್ಲಿ ಹಳ್ಳಿಗಳ ಪ್ರತ್ಯಕ್ಷವೇ ಮುಖ್ಯವಾದುದು, ಮೂಲವಾಗಿರಬೇಕಾದುದು.

ಹಳ್ಳಿಗಳ ಭೀಕರ ಚಿತ್ರ

ಇಂದು ಭಾರತದಲ್ಲಿ ಹಳ್ಳಿಯ ಸಮಸ್ಯೆಯು ಭೀಕರವಾದ ರೂಪವನ್ನು ತಾಳಿದೆ ಎನ್ನಬಹುದು. ಅಲ್ಲಿಯ ಜನರ ಸ್ಥಿತಿಗತಿಯು ಎಲ್ಲ ಜನರ ಮನಸ್ಸನ್ನು ಸೆಳೆದಿದ್ದರೂ ಅದಕ್ಕೆ ಸಿಕ್ಕಬೇಕಾದ ಮಹತ್ವವು ಇನ್ನೂ ದೊರೆತಿಲ್ಲ. ಎಲ್ಲೆಲ್ಲಿಯೂ ಹಳ್ಳಿಗಳನ್ನು ಪುನರುಜ್ಜೀವನಗೊಳಿಸಬೇಕು, ಹಳ್ಳಿಗರನ್ನು ಜೀವಂತಗೊಳಿಸಬೇಕು ಎಂಬ ಕೂಗು ಕೇಳಿಸುತ್ತಿದ್ದರೂ ಆ ಸಮಸ್ಯೆಯ ಆಳವಾದ ಅಭ್ಯಾಸವನ್ನಾಗಲಿ, ಅದರ ವಿಷಮ ಪರಿಸ್ಥಿತಿಯನ್ನಾಗಲಿ, ಬಹುತರವಾಗಿ ಯಾರೂ ಮಾಡಿದಂತಿ ಕಾಣುವದಿಲ್ಲ. ಹಳ್ಳಿಗಳ ಜೀವನವು ಚಿಂತನೀಯವಾಗಿದೆ: ಶೋಚನೀಯವಾಗಿದೆ.

ಹಿಂದುಸ್ತಾನವು ಹಳ್ಳಿಗಳಿಂದ ತುಂಬಿದೆ; ಅಥವಾ ಹಿಂದುಸ್ತಾನವೆಂದರೆ ಹಳ್ಳಿಗಳ ನಾಡು ಎಂದರೂ ಸಲ್ಲುವದು. ಭಾರತದ ಜನಸಂಖ್ಯೆಯಲ್ಲಿ ನೂರಕ್ಕೆ 89 ಜನ ಹಳ್ಳಿಗಳಲ್ಲಿರುತ್ತಾರೆ. ಭಾರತೀಯ ಕೆಲಸಗಾರರಲ್ಲಿ ನೂರಕ್ಕೆ 70 ರಷ್ಟು ಜನ ಒಕ್ಕಲತನದಲ್ಲಿ ತೊಡಗಿದ್ದಾರೆ ಇಂತಹ ಸ್ಥಿತಿಯಲ್ಲಿ ಭಾರತವು, ಭಾರತೀಯರಪಾಲಿಗೂ ಭಾರತೀಯರ ಜೀವನದ ಸಮಸ್ಯೆಗಳಿಂದ ಹಳ್ಳಿಯ ಸಮಸ್ಯೆಗಳೆ ಅಲ್ಲವೆ? ಈ ಹಳ್ಳಿಯ ಜೀವನವನ್ನು ನಾವು ಯಾವಮಾನದಂಡದಿಂದ ಅಳೆದು ನೋಡಿದರೂ ಅವರಲ್ಲಿ ಎಳ್ಳಷ್ಟೂ ಸಮಾಧಾನಕ್ಕೆ ಆಸ್ಪದವಿಲ್ಲ. ಸಂತೋಷಕ್ಕೆ ಎಡೆಯಿಲ್ಲ, ಸ್ವಾಭಿಮಾನಕ್ಕೆ ಸಲ್ಲುವದಿಲ್ಲ ಒಂದು ವರಮಾನದ ದೃಷ್ಟಿಯಿಂದನೋಡಿದರೆ, [ನಾನು 1931-32 ನೆಯ ಇಸವಿಯಲ್ಲಿ ಮಾಡಿದ ಲೆಕ್ಕದ ಮೇರೆಗೆ] ನಮ್ಮ ಹಳ್ಳಿಗಳ ಉತ್ಪನ್ನವು ವರುಷಕ್ಕೆ ವ್ಯಕ್ತಿಗೆ 120-130 ರೂಪಾಯಿಗಳು ಮಾತ್ರ ಬೀಳುತ್ತದೆ. ಇದು ಕೆಲಸ ಮಾಡಬಲ್ಲಂತಹ ಜನರಿಗೆ ಮಾತ್ರ. ಅದಕ್ಕೆ ಅವನನ್ನು ಅವಲಂಬಿಸಿದವರ ಸಂಖ್ಯೆಯ ಲೆಕ್ಕವನ್ನು ಹಿಡಿದರೆ ಒಬ್ಬೊಬ್ಬನಿಗೆ ತಿಂಗಳಿಗೆ ಮೂರುಮೂರೂವರೆ ರೂಪಾಯಿ ಮಾತ್ರ ಬೀಳುತ್ತದೆ. ಇಷ್ಟು ಅಲ್ಪ ಆದಾಯದಿಂದ ಜೀವಿಸುವದಾದರೂ ಸಾಧ್ಯವಿದೆಯೆ? ಎಂದು ಕೊಳ್ಳುವಂತಿದೆ ಜೀವಿಸಿದ್ದ ಮೇಲೆಮಿಕ್ಕ ವಿಷಯಗಳ ವಿಚಾರ, ಪ್ರಯತ್ನ ಮಾಡಬಹುದು. ಆದರೆ ಈ ಬಗೆಯಲೆಕ್ಕವು ಅತಿಶಯೋಕ್ತಿಯೆನಿಸಬಹುದು ಅಸಮಂಜಸವೆನಿಸಬಹುದು; ನಿರಾಶಾವಾದ ನೆನಿಸಬಹುದು ಕೇವಲ ಹೆಣವಗಳಕ್ಕೆ ಇಷ್ಟು ಎಂದು ಹೇಳಿದರೆ ತಿರಿತು! ಇಂದು ನಮ್ಮ ಹಳ್ಳಿಗರಿಗೆ ಮಿಕ್ಕ ಅನೇಕ ಬಗೆಯ ಅನುಕೂಲತೆಗಳಿವೆ. ಹಣವಲ್ಲದಿದ್ದರೂ ಅಲ್ಲಿಯ ಪ್ರಕೃತಿಯಿಂದ ಎಷ್ಟೋ ಸಲಕರಣೆ ಸೌಕರ್ಯಗಳು ದೊರಕುತ್ತವೆ ಅವುಗಳನ್ನು ನೋಡಬಾರದೆ ಎಂದುವಾದಿಸುವ ಹಿಂದು ಬದಿಯೂ ಉಂಟು. ಪಾಪ ಇದ್ದರೆ ಅಮಿಕ್ಕ ಸೌಕರ್ಯಗಳ ವಿಚಾರವನ್ನೆ ಕೈಕೊಳ್ಳೋಣ

ಹಳ್ಳಿಗರಿಗೆ ಸಾಕಷ್ಟು ಆಹಾರವು ದೊರೆಯುತ್ತದೆಯೆ? ಅದಂಲ್ಲಿ ಜೀವಾಣುಗಳು, ಪೌಷ್ಟಿಕಗಳು, ಹಾಗೂ ಶಕ್ತಿನ ಧರ್ಕಗಳ ಪಾಲು ಎಷ್ಟಿರುತ್ತದೆ? ತಾವು ಮಾಡುವ ಕೆಲಸಕ್ಕೆ ಬೇಕಾಗುವ ಶಕ್ತಿಯನ್ನು ಕಾಪಾಡಿಕೊಳ್ಳಲಿಕ್ಕೂ ಸಹನೆಯನ್ನು ಗಳಿಸಿಕೊಳ್ಳುವದಕ್ಕೂ ಬೇಕಾಗುವಂತಪ ಯಾವ ಪ್ರಾಣ್ಯ-ಪೇಯಾದಿಗಳು ಅವರ ದೈನಂದಿನಕ್ಕೆ ದೊರೆಯುತ್ತವೆ? ಪ್ರೊ. ರಾಧಾಕಮಲ ಮುಕರ್ಜಿಯವರ ಲೆಕ್ಕದ ಮೇರೆಗೆ ಒಬ್ಬ ವ್ಯಕ್ತಿಗೆ ಸಾಮಾನ್ಯವಾಗಿ ಬೇಕಾಗುವ ಆಹಾರಕ್ಕಿಂತ ನೂರಕ್ಕೆ 15-20 ರಷ್ಟು ಹಿಂದೀ ಹಳ್ಳಿಗರಿಗೆ ಕಡಿಮೆ ಆಹಾರವು ದೊರೆಯುತ್ತದೆ. ಇದು ಮಿಕ್ಕ ಆಹಾರದ ಮಾತು. ಬಡೋದೆಯ ಜನಗಣನೆಯ ಶ್ರೀ ಮುಕರ್ಜಿಯವರು ಎತ್ತಿ ತೋರಿಸಿದ ಒಂದು ಮಾತೆಂದರೆ ಹಳ್ಳಿಗರ ನಿವಾಸದ್ದು ಎಷ್ಟೋ ಕಡೆಗೆ ಹುಲ್ಲಿನ ಚಾಪೆಯ ಬದಿನ ಚಪ್ಪರದ ಗುಡಿಸಲುಗಳು ಸಹ ಇರುವದಿಲ್ಲ. ಹಳ್ಳಿಯ ಜೀವಿಗಳಿಗೆ ಕುನ್ನೂರಿನಲ್ಲಿ ನಡೆದ ಆಹಾರ ಸಂಶೋಧನ ಶಾಖೆಯವರು, ಹಳ್ಳಿಗರಲ್ಲಿ ಅರ್ಧಕ್ಕಿಂತ ಹೆಚ್ಚು ಜನರಿಗೆ ಕುಡಿಯಲಿಕ್ಕೆ ಹಾಲೇ ದೊರಕುವದಿಲ್ಲ ಎಂಬ ಮಾತನ್ನು ವಿಶದಪಡಿಸಿದ್ದಾರೆ ಜೀವನಕ್ಕೆ ಆವಶ್ಯಕವಾದ ಅಕಸ, ನೇಸ, ವಾಸ ಈ ಸೌಕರ್ಯಗಳ ಸ್ಥಿತಿಯು ಹೀಗಿದ್ದಮೇಲೆ, ಅಂತಹ ಜೀವನಕ್ಕೆ ಜೀವನ ಎನ್ನುವದೆ ಅಯುಕ್ತ ಎನಿಸದಿರದು.

ಸಮಸ್ಯೆ ಬಿಡಿಸುವ ಯೋಜನೆ

ಇದು ನಮ್ಮ ಸ್ಥಿತಿಗತಿಯ ಚಿತ್ರ. ಹೀಗಿದೆ ನಮ್ಮ ಸಮಸ್ಯೆ. ಇದನ್ನು ಯೋಚಿಸಿ. ಇದಕ್ಕೆ ಉಪಾಯಗಳನ್ನು ಯೋಚಿಸುವದು ಪ್ರತಿಯೊಬ್ಬ ಭಾರತೀಯನಕರ್ತವ್ಯ. ಹಳ್ಳಿಗಳಲ್ಲಿ ಈಗ ಕಾಣುವ ಅಜ್ಞಾನ ಆಲಸ್ಯ, ಬಡತನ, ಕೆಲಸಗೇಡಿತನಗಳು ಇಲ್ಲದಂತಿ ಗಿ, ಎಲ್ಲರಿಗೂ ಕನಿಷ್ಠ ಮಟ್ಟಿನ ಜೀವಿತವಾದರೂ ದೊರೆಯುವಂತೆ ಯತ್ನಿಸುವದು ನಮ್ಮೆಲ್ಲರ ಗುರಿ. ಆದರೆ ಉಪಾಯಸಾಧನಗಳನ್ನು ಹುಡುಕಹೋಗುವ ಮೊದಲು ನಮ್ಮ ಸಮಸ್ಯೆಯನ್ನೆ ಸರಿಯಾಗಿ ಹಿಂಜಿ, ಎಚ್ಚರದಿಂದ ತೂಗಿ, ಬಿಡಿಬಿಡಿಯಾಗಿ ತಿಳಿದುಕೊಳ್ಳುವದು ಯುಕ್ತವೆನಿಸುತ್ತದೆ.

ನಮ್ಮ ಆವಶ್ಯಕತೆಗೆ ಉದಾತ್ತವಾದುದಿರುತ್ತದೆ. ಅದರಲ್ಲಿ ಸಂದೇಹವೇ ಇಲ್ಲ. ಅವರ ಪ್ರಾಪ್ತಿಯ ಸಾರಿಯೂ ದೊಡ್ಡದಿರುತ್ತದೆ. ಅದೂ ನಿಜ ಆದರೆ ಮುಂಜಿ ನಾವು ಕೆಲವು ವಿಧಾಯಕ ಸಂಗತಿಗಳನ್ನಾದರೂ ಬಿಳಿದುಕೊಳ್ಳೋಣ; ಧ್ಯೇಯ ಸಾಧನದ ಪ್ರಯತ್ನದಲ್ಲಿ ಮೊದಲನೆಯ ಏಸಯ.ಎಂದರೆ ನಮಗೆ ಬೇಕಾದುದಾದರೂ ಏನು ಎಂಬುವದನ್ನು ತಿಳಿದುಕೊಂಬುವದೆ ಅಲ್ಲವೆ? ಹಿಂದುಸ್ತಾನದಲ್ಲಿ 9ll ಕೋಟಿ ಜನರು ಒಕ್ಕಲತನದಲ್ಲಿ ತೊಡಗಿದ್ದಾರೆ. ಇವರೆಲ್ಲರಿಗೂ ತಮ್ಮದೇ ಆದ ಹೊಲ ತೋಟ, ಗದ್ದೆಗಳಿರುವವೆಂದು ಮಾತ್ರ ಯಾರೂ ತಿಳಿಯಬಾರದು. ಇವರಲ್ಲಿ ಸುಮಾರು

[11ನೇ ಪುಟವನ್ನು ನೋಡಿರಿ]

ಬಳ್ಳಾರಿ ಜಿಲ್ಲೆಯಲ್ಲಿನ ಚಾಲುಕ್ಯರಾಜರ ಕಾಲದ ದೇವಸ್ಥಾನಗಳು.

(ಶ್ರೀ ರಂಗಣ್ಣವ್ವ ನಿಷ್ಠಾಣಿ)

12 ಶತಮಾನಗಳಿಂದೆ ಬೊಂಬಾಯಿ ಸ್ರಾಂತ್ಯದ ಬಾದಾಮಿಯಲ್ಲಿ ಆಳಿದ ಚಾಳುಕ್ಯ ಅರಸರ ಕುರುಹು ತಮ್ಮ ಸರಹದ್ದಿನಲ್ಲಿ ಕಟ್ಟಿದ ಶ್ರೇಷ್ಠ ದೇವಸ್ಥಾನಗಳ ಮೂಲಕ ಅಸ್ತಿತ್ವದಲ್ಲಿದೆ. ಮೈಸೂರು ಸಂಸ್ಥಾನದ ಹಳೇ ಬೀಡು. ದ್ವಾರ ಸಮುದ್ರದ ಶ್ರೇಷ್ಠ ಶಿಲ್ಪಕಲಾಕೌಶಲ್ಯದ ಹೊಯ್ಸಳರಿಗೆ ಬರುವಂತೆ ಬಳ್ಳಾರಿ ಜಿಲ್ಲೆಯ ಬಾಗಳಿ, ಮಾಗಳಿ, ಹಿರೇಹಡಗಲ್ಲಿ ಹಡಗಲಿ, ಕುರುವತ್ತಿ ಮತ್ತು ನೈಲಾರದ ದೇವಸ್ಥಾನಗಳು ಕಂಗೊಳಿಸುತ್ತಲಿವೆ. ಇಟ್ಟಿಗಿ ದೇವಸ್ಥಾನದ ವಿಷಯಕ್ಕೆ ಚರಿತ್ರಕಾರರಾದ ಫರ್ಗುಸ್ಸರವರು " **ಭಂಗಾರದ ಚಿತ್ರ ವಿಚಿತ್ರ ಕೆತ್ತನೆಕೆಲಸಕ್ಕಿಂತಲೂ ಈ ಕೌಶಲ್ಯವು ಶ್ರೇಷ್ಠವಾಗಿದೆ.**" ಎಂದಿದ್ದಾರೆ.

ಕ್ರಿ. ಶ. 609 ರಿಂದ 642ರ ವರೆಗೆ ರಾಜ್ಯಭಾರಗೈದ ಎರಡನೆಯ ಪುಲಕೇಶಿಯ ರಾಜ್ಯಭಾರವಿಸ್ತಾರವು ಕುರುಗೋಡಿನವರೆಗೂ ಇತ್ತೆಂಬುದು ಅಲ್ಲಿಯ ಶಿಲಾಶಾಸನಗಳಿಂದ ಸ್ಪಷ್ಟವಾಗಿದೆ. ದ್ರಾವಿಡದ ಈ ಸಪ್ತ ಶಿಲ್ಪ ದೇವಾಲಯಗಳನ್ನು ವಿಶ್ವಕರ್ಮ ಜಕಣಾಚಾರಿಯು ಒಂದೇ ರಾತ್ರಿಯಲ್ಲಿ ಕಟ್ಟಿದನೆಂಬ ಪ್ರತೀತಿಯುಂಟು ಅದು ನಿಜವೇ ಇರಲಿ ಶಿಲ್ಪಕಲೆಯು ಈವಾದರಿಯು ಅತ್ಯುತ್ತಮವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ.

ಈ ದೇವಸ್ಥಾನಗಳ ವೈಶಿಷ್ಟ್ಯವನ್ನೇ ಬೇರೆ ವಕ್ಷಣ ಹಿಂದುಸ್ತಾನದ ಪುಷ್ಕಿಯ ಗೋಪುರಗಳಂತೆ ಇವುಇಲ್ಲ ದ್ರಾವಿಡ ಸಂಸ್ಕೃತಿಯ ವಿಶ್ಲೇಷಣದಂತೆ ಈದೇವಸ್ಥಾನಗಳ ರಚನೆಯು ತೋರಿಬರುತ್ತಲಿದೆ ಜೈನರ ಪ್ರತಿಭೆಯೂ ಸೇರಿರಲಿಕ್ಕೆ ಬೇಕು. ಬಾಗಳಿ ಹಿರೆಹಡಗಲಿಯ ದೇವಸ್ಥಾನಗಳು ಈ ಜಾತಿಗೆ ಸೇರಿವೆ ತುಂಗಭದ್ರಾ ತೀರದಲ್ಲಿ ದೊರೆಯುವ ನವಣುಪುಗಲ್ಲುಗಳಿಂದ ದೇವಸ್ಥಾನಗಳನ್ನು ಕಟ್ಟಿರುವರು ನೀಲಗುದಮತ್ತು ಅಂಗೂರಿನ ಹತ್ತಿರವೂ ಇಂಥ ಹುಬ್ಬಕಲ್ಲುಗಳು ದೊರೆಯುತ್ತವೆಯೆಂದು ಹೇಳಲಾಗ್ತಾರೆ. ಈಕಲ್ಲುಗಳನ್ನು ತೆಗೆದಮೇಲೆ ಪಟ್ಟಿಯಾಗುತ್ತವೆ [ನಾಯುಗುಣದಿಂದ]

ಅಂಬಳಿ- ಕೊಟ್ಟೂರಿಗೆ 6 ಮೈಲಿದ್ದೂರದಲ್ಲಿದೆ. ಕಲ್ಲೇಶ್ವರನ ದೇವಸ್ಥಾನವು ಕಪ್ಪು ಕಲ್ಲಿನಲ್ಲಿ ಕಟ್ಟಲಾಗಿದೆ ಮುಖ್ಯ ಮಂಟಪದ ಕಂಭಗಳೆ ಕಲಸವು ದರ್ಶನೀಯ.

ಬಾಗಳಿ- ಹರಪನಹಳ್ಳಿಗೆ 4ಮೈಲಿ ಕೆರೆಗೆ ಸಮೀಪದಲ್ಲಿ ಕಲ್ಲೇಶ್ವರನ ದೇವಸ್ಥಾನವಿದೆ. ಉಗ್ರನರಸಿಂಹನ ವಿಗ್ರಹವು ಅತ್ಯುಗ್ರವಾಗಿದೆ. ಮಂಟಪದ ರಚನೆಯು ಚನ್ನಾಗಿದೆ. ಮಯೂರವಾಹನನ ಸುಬ್ರಹ್ಮಣ್ಯ ವಿಗ್ರಹವು ಅಂದವಾಗಿದೆ

ಹಡಗಲಿ- ಬಳ್ಳಾರಿ ಜಿಲ್ಲೆಯಲ್ಲಿ ಇದೊಂದು ತಾಲೂಕು ಕೇಂದ್ರ ಅರ್ಧಕಟ್ಟಿ ಮುಗಿಸಿದ ಎರಡು ದೇವಸ್ಥಾನಗಳು ಇಲ್ಲಿವೆ. ಯೋಗಿನಾರಾಯಣಸ್ವಾಮಿಗರ್ಭಿಕವಾದ ವಿಗ್ರಹಗಳಿವೆ.

ಹಲವಾಗಲು- ಹರಪನಹಳ್ಳಿ ತಾಲೂಕಿನಲ್ಲಿದೆ. ಅಷ್ಟೇನೂ ಪ್ರಮುಖವಾದದ್ದಲ್ಲ.

ಹಿರೆಹಡಗಲಿ] ಹಡಗಲಿಗೆ 9 ಮೈಲಿಗಳ ದೂರ ಕೆರೆಕಟ್ಟೆಹತ್ತಿರ ದೇವಸ್ಥಾನಗಳ ಗುಂಪು ಇದೆ. ಪ್ರಾರ್ವತಿ ಮತ್ತು ಶಿವನ ವಿಗ್ರಹಗಳ ಸೌಂದರ್ಯವು ಮೋಹಕವಾಗಿದೆ.

ಕುರುವತ್ತಿ- ಹರಪನಹಳ್ಳಿಗೆ 20 ಮೈಲಿದೂರ ಮಲ್ಲಿಕಾರ್ಜುನ ದೇವಸ್ಥಾನವು ಸುಂದರವಾಗಿದೆ. ದ್ವಾರದಲ್ಲಿನ ಸ್ತ್ರೀವಿಗ್ರಹದ ಫೋಟೋ ತೆಗೆದು ಲಂಡನ್ನಿನ ಇಂಡಿಯಾ ಗೃಹದಲ್ಲಿಟ್ಟಿದ್ದಾರೆ.

ಮಾಗಳಿ- ಹಡಗಲಿ ತಾಲೂಕಿನಲ್ಲಿದೆ ವೇಣುಗೋಪಾಲಸ್ವಾಮಿಯ ದೇವಸ್ಥಾನದ ಒಳಮಾಳಿಗೆಯ ಕೆತ್ತನೆಕೆಲಸ ಅಂದವಾಗಿದೆ.

ನೀಲಗುಂದ- ಹರಪನಹಳ್ಳಿಗೆ 6 ಮೈಲಿ ದೂರ ಅನಂತಶಯನ, ಲಕ್ಷ್ಮಿನಾರಾಯಣ ಮತ್ತು ಭೀಮೇಶ್ವರ ದೇವಸ್ಥಾನಗಳು ಯೋಗ್ಯವಾಗಿವೆ.

ದೊಡ್ಡ ತುಂಬಳ- ಅದವಾನಿ ತಾಲೂಕಿನಲ್ಲಿದೆ. ಇಲ್ಲಿಯ ದೇವಸ್ಥಾನಗಳು ಹಾಳಾಗಿವೆ. ಅದವಾನಿಯ ಮುಸಲ್ಮಾನ ಫೌಜಿಗಳು ಮುಸೀದಿಯನ್ನು ಎಬ್ಬಿಸಲು ಈ ಕಲ್ಲುಗಳನ್ನ ಸಮೀಪಿಸಿದರೆಂದು ಹೇಳಲಾಗಿದೆ.

ಹೋಗಿ- ಹಡಗಲಿ ತಾಲೂಕಿನ ಈ ಊರಿನಲ್ಲಿ ಸಣ್ಣ ದೇವಸ್ಥಾನವಿದೆ

ಹೊಳಲು- ಹರಪನಹಳ್ಳಿ ತಾಲೂಕಿನಲ್ಲಿದೆ. ಹೊಲದಲ್ಲಿ ಬಿದ್ದಿರುವ 27 ಅಡಿ ಉದ್ದದ ಅನಂತಶಯನ ವಿಗ್ರಹವು ಅಂದವಾಗಿದೆ.

7ನೆಯ ಶತಮಾನದಿಂದ ಚಾಳುಕ್ಯರ ಸ್ಥಾಪಣೆಯು ಆರಂಭವಾಯಿತು. ರಾಷ್ಟ್ರಕೂಟ ಧ್ರುವರಾಜನಿಂದ ಹೊಳಲಿನ ಎಂಬ ಬಂಧನಕ್ಕೊಳಗಾಗಿದೆ. ರಾಷ್ಟ್ರಕೂಟ ಧೊರೆಯಾದ 3ನೆಯ ಕೃಷ್ಣರಾಜನ ಮಂಡಲಾಧಿಪತಿಯಾಗಿ ಕ್ರಿ.ಶ. 940 ರಿಂದ 955ರ ವರೆಗೆ ಹರಪನಹಳ್ಳಿ ಹಡಗಲಿ ಭಾಗಗಳ ಮುಖ್ಯಪಟ್ಟಣವಾದ ಕೋಗಳಿಯಲ್ಲಿದ್ದನೆಂದು ಬಾಗಳಿ ದೇವಸ್ಥಾನದ ಶಾಸನದಿಂದ ಗೊತ್ತಾಗಿದೆ. ಮತ್ತೊಬ್ಬ ಮಂಡಲಾಧಿಪತಿಯಾದ ಕೊಟ್ಟಿಗನ [ಕ್ರಿ ಶ. 972 ರಿಂದ 973 ರವರೆಗೆ] ವಿಜಯವೂ ಶಾಸನಗಳಲ್ಲಿದೆ. ಬಳ್ಳಾರಿ ತಾಲೂಕಿನ ಕುಡುತಿನಿಯಲ್ಲಿ ಸದರಿ ಧಾತ್ರಿಕೂಟ ಚಾಲುಕ್ಯರಾಜರ ವಿಷಯವಾಗಿ ಶಾಸನಗಳಿವೆ

ಇದಾದನಂತರ 10-ನೆಯ ಶತಮಾನದಲ್ಲಿ ಬಳ್ಳಾರಿಜಿಲ್ಲೆಯ ಕೆಲಭಾಗವು ಕಂಚಿಯಲ್ಲಿ ಆಳಿದ ಪಲ್ಲವರಿಗೆ ಸೇರಿತ್ತೆಂಬುದು ಹರಪನಹಳ್ಳಿಗೆ 18 ಮೈಲಿ ದೂರದಲ್ಲಿರುವ ಉಚ್ಚಂಗಿ ದುರ್ಗದಲ್ಲಿನ ಶಾಸನಗಳಿಂದ ಗೊತ್ತಾಗಿದೆ. (ಉಚ್ಚಂಗಿ ಬೊಂಬಾಯಿ ಗೆಜಟೀರ ಪುಟ 318)

ಇಂಥಾ ಚರಿತ್ರಾರ್ಹ ವಿಷಯಗಳನ್ನು ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಪುಸ್ತಕಗಳನ್ನು ಬರೆಯುವವರು ಗಮನಿಸಿ ಅವುಗಳಲ್ಲಿ ಉಲ್ಲೇಖಮಾಡಲು ಕೋರಿಕೆ.

ಆರ್ಯರಾಯಲ್

ವಿಮಾನಗಳನ್ನು ಒಯ್ಯುತ್ತಿದ್ದ ಬ್ರಿಟಿಷರ ಆರ್ಯರಾಯಲ ಎಂಬ ಹಡಗು ಏತ್ತು ಕಾರ್ಯದಿಂದ ಮುಳುಗಿಸಲಾಯ್ತೆಂದು ದೃಢಪಟ್ಟಿದೆ. ಇದು 1937 ರಲ್ಲಿ 3 ಮಿಲಿಯ ಪೌಂಡು [4 ಕೋಟಿರೂಪಾಯಿ] ಖರ್ಚಿನಿಂದ ತಯಾರಿಸಲಾಗ್ತಿತ್ತೆ

ಕನ್ನಡ ಸಾಹಿತ್ಯಪರಿಷತ್ತು

ಬರುವಡಿಸೆಂಬರ್ ಕೊನೆಯ ವಾರದಲ್ಲಿ ಹೈದರಾಬಾದಿನಲ್ಲಿ ಕೂಡಲಿರುವ ಕನ್ನಡ ಸಾಹಿತ್ಯಪರಿಷತ್ತಿಗೆ ಶ್ರಿ ಎ. ಆರ್. ಕೃಷ್ಣಶಾಸ್ತ್ರಿಗಳು ಅಧ್ಯಕ್ಷರು

ಆಫ್ರಿಕಾದೇಶದ ಲಿಬ್ಯಾಟಲಿ ಸಂಬಂಧವನ್ನು ಕಡಿದು ಹಾಕಲು ಬ್ರಿಟಿಷರು ಯತ್ನಿಸಿದ್ದಾರೆ. ಲಿಬ್ಯಾದಲ್ಲಿ 10 ಲಕ್ಷ ಶತ್ರುಸೇನೆಗಳಿವೆ.

ಪೂರ್ವ ಭಾಗದಲ್ಲಿ ಬರ್ಮಾದ ಆಡಳಿತಕ್ಕಾಗಿ ರಷ್ಯಾಕ್ಕಿನ ರಕ್ಷಣೆಗಾಗಿ ಪಲವಾದ ಏರ್ಪಾಟುಗಳಾಗುತ್ತಲಿವೆ.

ರಾಜಸತ್ತೆಯ ಇತಿಹಾಸ

ಲೇ:— ಬಿ. ಮಾಧವಾಚಾರ್, ಕುಂದಾಪುರ.

ಇಂದು ಪ್ಯಾಸಿಜಂ, ನಾಸಿನಂ ಇಂಪಿರಿಯಲಿಸಂ ಇನೇ ಮೊದಲಾದ ಶಬ್ದಗಳು ಬಹಳ ಹೆಚ್ಚಾಗಿ ತಿಳಿಮಬರುತ್ತಿವೆ, ಆದರೆ ಇವುಗಳ ಅರ್ಥದ ಯಥಾರ್ಥ ವಿನರಣೆಯನ್ನು ಕೊಡಬಲ್ಲವರು ಬಹಳ ಕವ್ಮಿ. ಆದರೂ ಇನೆಲ್ಲ ವಿಶಿಷ್ಟರಾಜಕೀಯ ನವ್ಯತೆಯನ್ನು ಸೂಚಿಸುವ ಶಬ್ದಗಳೆಂದು ಓದುಬಲ್ಲವರಿಗೆಲ್ಲ ಸೊತ್ತು. ರಾಜಕೀಯ ಸಿದ್ಧಾಂತಗಳಿಗೆಲ್ಲ ನಿವಾರಿಸಲು ಪೂರ್ವಭಾವಿಯಾಗಿ ಸಂಕಾರ, ರಾಜಸತ್ತೆ ಮತ್ತು ಸಮಾಜ ಇವುಗಳ ಸ್ವರೂಪಜ್ಞಾನವು ತುಂಬಾಅಗತ್ಯ ಆದುದರಿಂದಲೇ ಈಲೇಖನದಲ್ಲಿ ಆಮೂಲಭೂತವಾದ ಸಮಸ್ಯೆಗಳಿಗೆ ಉತ್ತರವನ್ನು ಕೊಡಲು ಪ್ರಯತ್ನಿಸಲಾಗಿದೆ.

ಅತಿ ಪ್ರಾಚೀನಕಾಲದ ವನಚರನಾಗಿದ್ದ ಮಾನವನು ದುಷ್ಪ್ರಾಣಿಗಳಿಂದ ತನ್ನನ್ನು ರಕ್ಷಿಸಿಕೊಂಡು ಗಡ್ಡೆಗೆಣಸು ಹಣ್ಣು ಹಂಪಲು ಇವುಗಳಿಂದ ತನ್ನ ಉದರ ಪೋಷಣೆಯನ್ನು ಮಾಡಿಕೊಂಡು ಕೃತಕೃತ್ಯನಾಗುತ್ತಿದ್ದನು. ಮಾನವ ಪ್ರಾಣಿಯ ಸಂಖ್ಯೆಯು ದಿನೇ ದಿನೇ ಅಭಿವೃದ್ಧಿಯಾಗುತ್ತಲಿದ್ದುದರಿಂದ ಕಾಡುವಾಸಕ್ಕೆ ಅಯೋಗ್ಯವಾಗಿ ಪರಿಣಮಿಸಿ ಬೇರೊಂದು ಉಪಾಯವನ್ನು ಹುಡುಕಬೇಕಾಗಿ ಬಂತು ತನ್ನ ಬುದ್ಧಿಬಲದಿಂದ ಕೃಷಿ ಪಶುಪಾಲನೆ ಮೊದಲಾದ ಹೊಸ ಉದ್ಯೋಗಗಳನ್ನು ಕಂಡುಹಿಡಿದು ಹಳ್ಳಿ ಜೀವನವನ್ನು ಆರಂಭಿಸಿದನು ಆಕಾಲದಲ್ಲಿ ಈಗಿನಂತೆ ವಾಹನ ಸೌಕರ್ಯಗಳಾಗಲೀ ವಾರ್ತಾಸಾಧನಗಳಾಗಲೀ ಇಲ್ಲದೆ ಒಂದು ಗುಂಪಿನ ಇನ್ನೊಂದು ಗುಂಪಿನವರ ಧಾಳಿಯ ಭಯವಿದ್ದೇ ಇತ್ತು. ಆದ್ದರಿಂದ ಕೃಷಿಯಿಂದ ಗಳಿಸಿದ ದವಸಧಾನ್ಯಗಳ ರಕ್ಷಣೆಗಾಗಿ ಒಂದು ಸಂಸ್ಥೆಯ ಅಗತ್ಯವಿತ್ತು. ಇಂತಹ ಪರಿಸ್ಥಿತಿಯಲ್ಲಿ ಬಲಿಷ್ಠನೂ ಜನರ ಪ್ರೀತಿಗೆ ಪಾತ್ರನೂ ಆದ ಹುರಿಯಾಳೊಬ್ಬನನ್ನು ಕಾವಲುಗಾರನನ್ನಾಗಿ ನೇಮಿಸಿ ಜನರು ಅತನಿಗೆ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಟ್ಟು ತಾವು ತಮ್ಮ ದಿನಚರಿಯ ಕಾರ್ಯದಲ್ಲಿ ಪ್ರವೃತ್ತರಾದರು. ದಿನಗಳುರುಳಿದಂತೆ ಆ ಮುಖಂಡನು ಹೆಚ್ಚುಹೆಚ್ಚಿನ ಸ್ವಾತಂತ್ರ್ಯವನ್ನು ಗಳಿಸತೊಡಗಿದ್ದೇ ಅಲ್ಲದೆ ಆಪದವಿಯು ಸಂತಾನಪಾರಂಪರ್ಯವೆನಿಸಿಕೊಂಡಿತು. ಈರೀತಿ ಗುಂಪಿನ ಅಥವಾ ಸಮಾಜದ ಶಾಂತಿರಕ್ಷಣೆಗೆಂದು ಉದ್ಭವಿಸಿದ ರಾಜಸತ್ತೆಯು ಓರ್ವನಿರಂಕುಶ ಪ್ರಭುವಿನ ಹಸ್ತಗತವಾಯಿತು. ಇತ್ತ ಸಮಾಜದಲ್ಲಿ ಕೆಲವು ಮಂದಿ ತಮ್ಮ ಬಾಹುಬಲದಿಂದಲೂ ಮತ್ತು ಇನ್ನಿತರ ಮೋಸಕೃತ್ಯಗಳಿಂದಲೂ ಸಾಧ್ಯವಾದಷ್ಟು ಭೂಮಿಯಮೇಲೆ ತಮ್ಮ ಒಡೆತನವನ್ನು ಸ್ಥಾಪಿಸಿದರು. ಇವರೇ ಕೂತು ತಿನ್ನುವ ಜಮೀನ್ದಾರರು. ಭೂಮಿಯಮೇಲೆ ಬಡ ತನವಿಲ್ಲದ ಇನ್ನೊಂದು ವರ್ಗವು ಹಗಲಿರುಳೂ ಕೃಷಿ ಸಾಗುವಳಿ ಮುಂತಾದ ಉದ್ಯಮಗಳಿಂದ ಆಹಾರ ಸಾಮಗ್ರಿಗಳನ್ನು ಸಿದ್ಧಮಾಡುವುದರಲ್ಲಿತ್ತು. ರೈತರ ಶ್ರಮದಿಂದ ಉತ್ಪತ್ತಿಯಾದ ಉತ್ಪತ್ತಿಯನ್ನು ಜಮೀನ್ದಾರರು ದೇಣಿಯ ರೂಪದಲ್ಲಿ ಅವರಲ್ಲಿ ಆಪಹರಿಸಲಾರಂಭಿಸಿದರು. ಇಲ್ಲೇ ಒಂದು ವರ್ಗದವರು ಇನ್ನೊಂದು ವರ್ಗದವರನ್ನು ಸುಲಿಗೆಮಾಡುವ ಪದ್ಧತಿಯು ಉದಯವಾದುದು. ಈ ಸುಲಿಗೆಯು ಯಥಾಕ್ರಮವಾಗಿ ನಿರಾತಂಕವಾಗಿ ಬಹುಕಾಲ ನಡೆದು ಬರಬೇಕಾದರೆ ಒಂದು ಬಲವತ್ತರವಾದ ಹಿಂಸಾತ್ಮಕ ಆಯುಧವು ಅವಶ್ಯಕವಾಗಿ ಪರಿಣಮಿಸಿತು. ಆಗ ಜಮೀನ್ದಾರರು ರಾಜರುಗಳ ಸೈನ್ಯಕ್ರಿಯನ್ನು ಸಂಪಾದಿಸಿ ರಾಜಸತ್ತೆಗೆ ಸಹಕಾರವೆಂಬ ಹೆಸರಿನಿಂದ ರಾಜನ ಖಜಾನೆಯನ್ನು ತುಂಬಿಸಿ ತಮ್ಮ ಹಿತಸಾಧನೆಗೆ ಬೇಕಾದಷ್ಟು ಕಾನೂನುಗಳನ್ನು ರಚಿಸಿ ಅದನ್ನು ಆಕ್ರಮಿಸಿದವರಿಗೆ ಶಿಕ್ಷೆಗೆ ಗುರಿಪಡಿಸುವ ವ್ಯವಸ್ಥೆಯನ್ನು ಮಾಡಿದರು. ಈರೀತಿನ ಸಮಾಜದಲ್ಲಿ ವಿರುದ್ಧ ಹಿತಗಳುಳ್ಳ ಎರಡು ವರ್ಗಗಳು ಉದಯವಾಯಿತು.

ಮಾನವನು ತನ್ನ ಉದರಪೋಷಣೆಗೆಂದು ತನ್ನ ಬುದ್ಧಿ ಮತ್ತು ದೇಹಶ್ರಮದಿಂದ ಪ್ರಕೃತಿಯ ಪೂಜೆಗೈದು ಗಳಿಸಿದ ದೇಹಧನ ಈರೀತಿ ಸಿದ್ಧಪಡಿಸಿದ ಧನವನ್ನು ಶ್ರಮಜೀವಿಗಳ ಕೈಯಿಂದ ಆಪಹರಿಸಿಕೊಂಡಿಟ್ಟಿನನೇ ಧನಿಕ. ಇದು ಆಗಿನ ಸ್ಥಿತಿ. ಎಷ್ಟೆಷ್ಟು ಹೆಚ್ಚಿನ ಪ್ರಮಾಣದಲ್ಲಿ ಸುಲಿಗೆಯು ನಡೆಯುವುದೋ ಅಷ್ಟೇ ಪ್ರಮಾಣದಲ್ಲಿ ಧನಸಂಚಯವಾಗುವುದು.

ಆಹಾರ ಸಾಮಗ್ರಿ ಮತ್ತು ಇತರೆ ವಸ್ತುಗಳ ವಿತರಣಕ್ಕಾಗಿ ಮಧ್ಯ ತರಗತಿಯೊಂದು ವಾಣಿಜ್ಯವೆಂಬ ಹೆಸರಿನಿಂದ ಉದ್ಭವಿಸಿತು. ಮೇಧಾವಿಗಳೂ ಬಡವರೂ ಆದ ಸಂಘಟಕರು ಮುಂದೆ ಬಂದು ಸಮಾಜದಲ್ಲಿ ಇಂಥಹವರು ಇಂಥಹದೇ ವೃತ್ತಿಯನ್ನು ಮಾಡತಕ್ಕದ್ದೆಂದೂ ಪ್ರತಿಯೊಬ್ಬ ನರನ ಆಚಾರ, ವಿಚಾರ ವ್ಯವಹಾರ ಇವುಗಳೆಲ್ಲ ಹೀಗೇ ಇರಬೇಕೆಂದೂ ಆಜ್ಞಾಪಿಸಿ ಧರ್ಮಶಾಸ್ತ್ರಗ್ರಂಥಗಳ ಮೂಲಕ ಶಾಸನ ರೂಪದಲ್ಲಿ ಬರೆದಿಟ್ಟರು. ಇಲ್ಲಿಕೂಡ ಸುಲಿಗೆಗೆ ಶಾಸ್ತ್ರದ ಒಪ್ಪಿಗೆಯು ದೊರೆಕುಸಿದರಿಂದ ಬಡಪಲದಾರನೇ ಮೇಲಾಯಿತು. ಕಷ್ಟದೆಶೆಯಲ್ಲಿದ್ದ ರೈತರು (ಶೂದ್ರರು) ಎಚ್ಚೆತ್ತು ಹಾನಿ ನೂಡಬಹುದೆಂದು ಭಾವಿಸಿದಯೆ, ಕರುಣ ಮೊದಲಾದ ಸದ್ಭಾವನೆಗಳನ್ನು ಜಭವೃದ್ಧಿ ಪಡಿಸಲು ಪ್ರಯತ್ನವು ನಡೆಯಿತು. ಇಷ್ಟರಲ್ಲೇ ಕ್ರಯಕ್ರಯಗಳ ಪೌಲಭ್ಯಕ್ಕೆಂದು ನಾಣ್ಯಗಳ ಚಲಾವಣೆಗೆ ಬಂದುವು. ತಮ್ಮ ತಮ್ಮ ವಶದಲ್ಲಿದ್ದವಸ ಧಾನ್ಯಗಳನ್ನು ಇನ್ನಿತರ ಸಾಮಾನುಗಳನ್ನು ವಿಕ್ರಯಿಸಿ ನಾಣ್ಯಗಳನ್ನು ಶೇಖರಿಸಿಡಲಾಯಿತು. ಈರೀತಿ ನಾಯಿಸಿದ ನಾಣ್ಯವೇ ಮುಂದಿನ ಸಂತತ್ಯನುಗಕ್ಕೆ ಬೆಕಾದ ಬಂಡವಲನೆನಿಸಿತ. ಈ ನಾಣ್ಯದ ಶೇಖರಣೆಯಿಂದಲೇ ಬಡವ ಶ್ರೀಮಂತನೆಂಬ ಭಾವನೆಯು ಬೆಳೆದು ಮನುಷ್ಯ ಮನುಷ್ಯರೊಳಗೆ ಜಗಜ್ಜಾಂತರ ವೈಷಮ್ಯವು ಕಂಡು ಬಂತು. ಕೆಲವು ಮತಾಚಾರ್ಯರು ಪ್ರಕೃತಿ ಮನುಷ್ಯ ಇವುಗಳೊಳಗಣ ಸಂಬಂಧ ಮೊದಲಾದ ಗಹನವಾದ ವಿಚಾರಗಳನ್ನೆಲ್ಲ ತರ್ಕದಿಂದ ತುಲನಮಾಡಿ ಸೃಷ್ಟಿ ಕರ್ತನೊಬ್ಬನಿರಬೇಕೆಂದೂ ಆತನ ಇಚ್ಛೆಯಂತೆ ಜಗತ್ತು ನಿರ್ಮಿಸಿತು. ತಾವುಗಳಿಸಿದ ಸಂಪತ್ತು ಮತ್ತು ಧನೋತ್ಪಾದನ ಸಾಮಗ್ರಿಗಳ ಮೇಲೆ ತಾವು ನಡೆಸುತ್ತಿದ್ದ ಪ್ರಭುತ್ವ ಇವುಗಳಲ್ಲಿ ಭಗವದಿಚ್ಛೆಯೇ ಪ್ರಾಬಲ್ಯವಿದ್ದೇ ಇದೆ ವಾದಿಸಲಾರಂಭಿಸಿದರು. ರಾಜನು ದೈವಾಂಶ ಸಂಭೂತನೆಂದೂ ಮತಾಚಾರ್ಯರು ಹಾಡಿದರು. ಹೀಗಾಗಿ ಅರಮನೆಗುರು ಮನೆಗಳೂ ಕೈ ಕೈ ಹಿಡಿದು ನಡೆಯಲಾರಂಭಿಸಿದುವು. ರೈತರ ಶ್ರಮದ ಮೇಲೆಯೇ ಜೀವಿಸಶಕ್ತ ಈ ಉತ್ತಮ ವರ್ಣದವರು ಜನತೆಯ ಜಚ್ಛಾಸಾಸ್ವಾತಂತ್ರ್ಯವನ್ನು ಅಪಹರಿಸಿ ಜನತೆಯನ್ನು ಕಲ್ಪನೆಯ ಶಬ್ದ ಜಾಲದಲ್ಲಿ ಬಣಹಿ

9ನೇ ಪುಟವನ್ನು ನೋಡಿರಿ

ಕಲಾಭಿಮಾನ ಶೂನ್ಯ ಕನ್ನಡನಾಡು.

(ಶ್ರೀ ಟಿ. ಟಿ ಶರ್ಮ ಸಂಪಾದಕ ವಿಶ್ವಕರ್ನಾಟಕ)

ಶಿ೦ ವರ್ಷಗಳ ಕಾಲ ಅವಿಚ್ಛಿನ್ನವಾಗಿ ಕನ್ನಡ ರಂಗ ಭೂಮಿಯ ಸೇವೆ ಮಾಡಿ ಅತ್ಯಪೂರ್ವ ಕಾರ್ಯ ನಿರ್ವಾಹಕನೈ ಪುಣ್ಯತೆ ತೋರಿಸಿ, ನಾಟಕ ಸಂಘ ನಡೆಸಿ, ನೂರಾರು ಮಂದಿ ಕಲಾನಿದರಿಗೆ ರಾಜಾಶ್ರಯವಿತ್ತ ವಿನೋದ ರತ್ನ ಕರರಂತಹವರು, ನಾಟಕರತ್ನಗಳು, ಇಂಥ ಜನರ ಮುಂದೆ ಬಂದು ನಿಂತು ತಮ್ಮ ಹೃದಯ ವೇದನೆಯನ್ನು ಕರಳು ಕತ್ತರಿಸು ವಂತೆ ವರ್ಣಿಸಬೇಕೆ!

"ಜನರಲ್ಲಿ ಐಕಮತ್ಯವಿಲ್ಲ ಒಬ್ಬನು ಒಂದು ಕೆಲಸನ್ನಾಡಿದರೆ ಬೆನ್ನು ತಟ್ಟುವವರಿಲ್ಲ ಅಸೂಯಾಪರರಾಗಿ "ಹಾಳಾಗಲಿ" ಎಂದು ಶಪಿಸುವವರೇ ಹೊರತು 'ಪ್ರವರ್ಧಮಾನವಾಗು' ಎಂದು ಹರಸುವವರಿಲ್ಲ. ಶ್ರೀಮಂತರು ನನ್ನ ಸಾಹಸೋದ್ಯಮಗಳಿಗೆ ಉದಾರ ಹೃದಯದಿಂದ ಸಹಾಯಮಾಡುವುದಿಲ್ಲ. ಆದರೂ ದೇವರ ಕೃಪೆಯಿಂದ ಬಲಗೊಂಡು, ಹಿರಿಯರ ಆಶೀರ್ವಾದದಿಂದ ಧೈರ್ಯಗೊಂಡು ನಾಟಕ ಕಲೆಯಲ್ಲಿ ನನಗಿರುವ ಅಚಂಚಲವಾದ ಭಕ್ತಿಯಿಂದಲ್ಲ ತೊಂದರೆಗಳನ್ನು ಎದುರಿಸಿ ಮುಂದೆ ಹೋಗುತ್ತಿದ್ದೇನೆ. ಗುಬ್ಬಿ ವೀರಣ್ಣನವರ ಕೃಪೆ ನನ್ನ ಮೇಲಿದೆ, ನನ್ನೊಡೆಯರ ಅನುಗ್ರಹ ನನ್ನ ಮೇಲಿದೆ ಹಲವರು ನನ್ನ ಸಹಾಯಕರಾಗಿದ್ದಾರೆ ಆದುದರಿಂದ ಮುಂದೆ ಹೋಗುತ್ತಿದ್ದೇನೆ.

ಎಂಬುದಾಗಿ 17ನೆ ತಾ ಶ್ರೀ ವೀರಣ್ಣನವರು ಶಿವಾನಂದ ನಾಟಕರಂಗ ವೇದಿಕೆಯಲ್ಲಿ ನಿಂತು ಹೇಳುತ್ತಿದ್ದಾಗ, ಎಕಕಾಲದಲ್ಲಿ ನಿಷ್ಠಾವನೂ ಹರ್ಷವೂ ಉಂಟಾಗುತ್ತಿತ್ತು. ನನ್ನ ನಾಡಿನ ಜನರ ಔದಾಸೀನ್ಯತೆ, ಅನೈಕ್ಯತೆ, ಸ್ವಾಭಿಮಾನ ಶೂನ್ಯತೆ ಕಂಡು ವಿಷಾದ; ನಮ್ಮ ನಾಟಕರತ್ನ ವೀರಣ್ಣನವರ ದೈವಭಕ್ತಿ, ಶ್ರದ್ಧೆ, ಮನೋಸಾಧ್ಯ, ಪೌರುಷ, ಸಾಹಸ, ದೇಶಭಕ್ತಿ ಭಾಷಾಭಿಮಾನ ಕಂಡು ಸಂತೋಷ! ಲಲಿತಕಲೆಗಳ ತವರ್ನಾನೆಯಾದ ಕನ್ನಡನಾಡಿನಲ್ಲಿ ಕಲಾಭಿಮಾನವು ಶೂನ್ಯವಾಗುತ್ತಿರುವುದು ನನಗೆ ಶ್ರೇಯಸ್ಕರವಿಲ್ಲ. 'ಸತ್ಯಮೇ ಸೌಂದರ್ಯ, ಸೌಂದರ್ಯವೇ ಸತ್ಯ' ವೆಂದಂತಹ ಸೌಂದರ್ಯೋಪಾಸಕರ ಮುಖ್ಯವಾದ ನಾವಿಂದು ಈರೀತಿ ಕುರೂಪಜೀವನವನ್ನು ನೂಕುತ್ತಿರುವುದೆನ್ನು ಕಂಡು ನಿರಾಶೆಯುಂಟಾಗುತ್ತದೆ.

ಕಾರ್ಮೋಡಗಳು ಕವಿದಿದ್ದರೂ, ನವಮೇಘಗಳು ಮಹಾ ವರ್ಷ ಸುರಿಸುತಿದ್ದರೂ, ಜೀವಲೋಕವೆಲ್ಲ ಕೊಚ್ಚಿಹೋಗುವಂತಿದ್ದರೂ, ಆಗಾಗ ಆಕಾಶದಲ್ಲಿ ಹೊಳೆಯುವ ಮಿಂಚಿನ ಬಳ್ಳಿಗಳು ನಮ್ಮ ಹೃದಯಕ್ಕೆ ನೆಮ್ಮದಿಯನ್ನುಂಟುಮಾಡುತ್ತವೆ. ವರದಾಚಾರ್ಯ, ಮಂಡ್ಯಂ, ರಂಗಾಚಾರ್ಯ, ಕೈವಾರ ಕೃಷ್ಣರಾವ್, ಕೃಷ್ಣಮೂರ್ತಿ, ವೀರಣ್ಣನಂತಹ ನಟರು ನಮ್ಮ ನಾಡಿನಲ್ಲಿ ಹುಟ್ಟಿದ್ದಾರೆ. ಶೇಷಣ್ಣ, ಸುಬ್ಬಣ್ಣ, ಕೃಷ್ಣಪ್ಪ, ವೆಂಕಟಪ್ಪನಂತಹ ಮಹಾ ಕಲಾವಿದರು ನಮ್ಮ ನಾಡಿನಲ್ಲಿ ಅವತಾರ ಮಾಡಿದ್ದಾರೆ. ಪರಂಪರಾಗತವಾದ ಕಲಾ ಸಂಪ್ರದಾಯವನ್ನು ಕಾಪಾಡಿಕೊಂಡು ಬರುತ್ತಿದ್ದಾರೆ. ನವೀನ ಕಾಲದ ಸುಲಕ್ಷಣಗಳನ್ನು ಪರಿಗ್ರಹಿಸಿ ನವನವೋನ್ಮೇಷತೆಯಿಂದ ಕಲೆಯನ್ನು ಬೆಳಗಿಸುತ್ತಿದ್ದಾರೆ ಕಿರಿಯರ ಗಣವೊಂದನ್ನು ಬೆಳೆಸುತ್ತಿದ್ದಾರೆ. ಕಲಾವಿದರಿಗೆಲ್ಲ ನಮ್ಮೊಡೆಯರು ರಾಜಾಶ್ರಯವನ್ನಿತ್ತು, ಬಿರುದು ಬಾವಲಿಗಳನ್ನಿತ್ತು ಸಂಬಳ, ಸಂಭಾವನೆಗಳನ್ನಿತ್ತು ಪೋಷಿಸುತ್ತಿದ್ದಾರೆ. ಮಹಾಜನರೂ ಉದಾರ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ.

ಆದರೆ ಮಹಾಜನರು ನೀಡುತ್ತಿರುವ ಪ್ರೋತ್ಸಾಹ ಸಾಲದು ಶುದ್ಧ ಕಲೆಯಲ್ಲಿ ನಾಗರಿಕರಿಗೆ, ಸಂಸ್ಕೃತರಿಗೆ ಹೆಚ್ಚು ನಂಬಿಕೆ ಅಭಿಮಾನ ಹುಟ್ಟುಬೇಕು. ನಮ್ಮ ಕಲೆ ಹಾಳಾಗಿ, ನಮ್ಮ ವೀಣೆ ಪಿಟೀಲುಗಳು ಮೂಲೆಗೆ ಬಿದ್ದು, ನಮ್ಮ ರಂಗಭೂಮಿ ಸ್ಮಶಾನವಾಗಿ ನಾವು ಒಂದು ಜನಾಂಗವನ್ನೆರೆದು ಉಳಿದೆವೇನು, ನಿರ್ನಾಮವಾದೆವೇನು? ಹಕ್ಕಿಬಿಡಿನ ಕಲಾಲಯ ನಿರ್ಮೂಲವಾಗುತ್ತಿರಲು ಹತ್ತಿರುವರ್ಷಗಳಿಂದ ಕಣ್ಮುಚ್ಚಿ ಕೂತಿರುವ ನಮ್ಮ ಜನರ ಕಲಾಭಿರುಚಿ, ಅಭಿಮಾನವನ್ನೇನೆಂದು ಹೇಳೋಣ! ಕನ್ನಡನಾಡಿನಲ್ಲೆಲ್ಲ ಇದೇ ಜಡೆಯ ಔದಾಸೀನ್ಯ, ನಿಕೃಷ್ಟತಾ ಭಾವವೇ ತಾಂಡವವಾಡುತ್ತಿದೆ. ಯಾವ ನಾಡು ಅಜಂತಾ, ಎಲ್ಲೋರ, ಬಾದಾಮಿ ಮೂಡಬಿದಿರೆ, ಶ್ರವಣಬೆಳ್ಗೊಳಗಳ ಕಲಾ ವೈಭವಕ್ಕೆ ಸ್ಫೂರ್ತಿ ಕೇಂದ್ರವೆನಿಸಿತೋ ಆನಾಡು ಇಂದು ಕಲಾಭಿಮಾನ ಶೂನ್ಯತೆಯಿಂದ ಕೂಡಿದೆಯೆಲ್ಲಾ ಎಂದು ವ್ಯಸನವಾಗುತ್ತದೆ.

ಜನರ ಜೀವನ ಜನರ ಅಭಿಮಾನ, ಅಭಿರುಚಿ, ಸಾಹಸ, ಶೀಲದಮೇಲೆ ಎಲ್ಲ ನಿಂತಿದೆ. ನವೀನಾತ್ಮ ನಿರ್ಮಾಣ ಕರ್ತವ್ಯಕಾಲದಲ್ಲಿ ಕನ್ನಡನಾಡು ತನ್ನ ಕಲಾವೈಶಿಷ್ಟ್ಯವನ್ನು ಇಮ್ಮಡಿಯಾಗಿ, ನೂರ್ಮಡಿಯಾಗಿ ಬೆಳಿಸಿಕೊಂಡು ಭಾರತ ಭಾಗ್ಯವನ್ನು ನಿರ್ಮಿಸಬೇಕೆಂದು ನಾವು ಬಯಸುತ್ತೇನೆ. ಹೊಯಿಸಳ ಚಾಲುಕ್ಯ ಮಾರ್ಗದ ಕಲಾಮುದ್ರಾಂಕಿತವಲ್ಲದ ಭಾರತ ಕಲೆಯು ಅಸಮಗ್ರ, ಅಸಂಪೂರ್ಣ. ಭಾರತೀಯಕಂಠದಲ್ಲಿ ಕರ್ನಾಟಕ ಶ್ರೀಕಂಠಗಾಯನದುಲಿಯುಕೇಳಬರಬೇಕು. ಅಂದು ನಮಗೆ ನೆಮ್ಮದಿ.

ಬಳ್ಳಾರಿ ನಗರ

ಕೋಟೆ ಮತ್ತು ಕೆಸರುಡಿಸುವವರ ಬೇಡಿಕೆ :— ಈ ಸಭೆಯು ಶ್ರೀ ಸತ್ರಸಾಲ ಚಿನ್ನವೀರಭದ್ರಪ್ಪಶೆಟ್ಟರಧ್ಯಕ್ಷತೆಯಲ್ಲಿ ಕೂಡಿ ಯುದ್ಧದಿಂದ ಧಾರಣವಾಸಿಗಳು ತುಟ್ಟಿಯಾಗಿರುವ ಕಾರಣ ಹೆಚ್ಚಿನ ಭತ್ಯವು ಕೊಡಲ್ಪಡಬೇಕೆಂಬ ತೀರ್ಮಾನವಾಯಿತು ಕೇಶವರಾಯರು ಅವರ ಕಷ್ಟಗಳನ್ನು ವಿವೇಚಿಸಿದನಂತರ ಶ್ರೀ ಗಳಾದ ವಿ. ಯಂ. ಗಿರಿ ಮತ್ತು ಬಿ. ವಿ. ಶೇಷಗಿರಿರಾಯರು ಅವರ ಬೇಡಿಕೆಯನ್ನು ಸಮರ್ಥಿಸಿ ಭಾಷಣಮಾಡಿದರು.

ಜಿಲ್ಲಾ ಹರಿಜನ ಸೇವಕಸಂಘ ಬಳ್ಳಾರಿ 1491—42 ನೆಯ ವರ್ಷಕ್ಕೆ : ಈ ಕೆಳಗಿನ ಅಧಿಕಾರಿವರ್ಗದವರು ಆರಿಸಲ್ಪಟ್ಟಿದ್ದಾರೆ. ಅಧ್ಯಕ್ಷ ಶ್ರಿ ಟಿ. ರಾಘವನ್, ಕಾರ್ಯದರ್ಶಿ ಶ್ರಿ ಟಿ ಬಿ. ಕೇಶವರಾವ್ ಉಪಾಧ್ಯಕ್ಷ ಮತ್ತು ಖಜಾನ್ಚಿ ಶ್ರಿ ರೊದ್ದಂ ವೆಂಕಟಸುಬ್ಬಯ್ಯ ಕಾರ್ಯಕಾರಿಣೀಸಮಿತಿಯ ಇತರ ಸದಸ್ಯರು ಡಿ. ಯಲ್. ಗಂಗಾವರಶೆಟ್ಟಿ ಡಿ. ವೇಣುಗೋಪಾಲಾಚಾರಿ ಟಿ. ನಿ. ಕೃಷ್ಣರಾವು ಯಸ್. ಕೆ. ಹನುಮಂತರಾವು ಪುರುಷೋತ್ತಮರೆಡ್ಡಿ ಲಿಂಗಾರೆಡ್ಡಿ. ಹರಿಜನರ ದುರುಗಪ್ಪ

ಡಾ. ನಾಗನಗೌಡರು ಜಿಲ್ಲಾಬೋರ್ಡು ಅಧ್ಯಕ್ಷರಾದರು.

20-11-41ನೆಯ ತಾ. ಸ್ವಾತಂತ್ರಕಾಲದ ಜಿಲ್ಲಾಬೋರ್ಡು ಸಭೆಯಲ್ಲಿ ಶ್ರೀ ನಾಗನಗೌಡರ ಸದಸ್ಯತ್ವವು ಮುಂಜೂರಾಗಿ ಮಧ್ಯಾನ್ಹ ನಡೆದ ಸಭೆಯಲ್ಲಿ ಸರ್ವಾನುಮತದಿಂದ ಅವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು

ಬಳ್ಳಾರಿ ಜಿಲ್ಲೆಯಲ್ಲಿ ಆರ್ಥಿಕ ದುಸ್ಥಿತಿ.

ಕ್ಷಾಮ ಸೂಚನೆಗಳು.

ತಿರಿಗುಪ್ಪೆತಾಲೂಕು ಹಚ್ಚೊಳ್ಳಿ ಫಿರ್ಕಾದಲ್ಲಿ ಕ್ಷಾಮಸೂಚನೆಗಳು

ಜನರು ಊರು ಬಿಡುತ್ತಿದ್ದಾರೆ; ಶುದ್ಧಾಂಗವಾಗಿ ಮೇವೇ ದೊರೆಯುವುದಿಲ್ಲ

ಬೆಳೆಯ ನಾಶ:— ಕಾಲಕಾಲಕ್ಕೆ ಮಳೆ ಇಲ್ಲದೆ ಮುಂಗಾರಿ ಫಲವು ಸಂಪೂರ್ಣವಾಗಿ ಕೈಗೆ ಹತ್ತದಂತಾಯಿತು. ಹಿಂಗಾರಿ ಬೆಳೆಯಾದರೂ ಅಷ್ಟೇ. ಮಳೆಯ ಅಭಾವದಿಂದ ಹತ್ತಿಯ ಬೆಳೆಯು ನಿಸ್ಸಾರವಾಗಿ, ಅಪೂರ್ಣವಾಗಿದೆ. ಬಿಳಿ ಜೋಳವಾದರೂ ಸಾರವಂತವಿಲ್ಲ. ಮಳೆಯು ಬರುವ ಲಕ್ಷಣವೇ ಶೂನ್ಯವಾಗಿರುವ ಕಾರಣ ಈಗಾಗಲೇ ಇಲ್ಲಿ ಹಿಂಗಾರಿ ಬೆಳೆಯ ನಾಶವಾಗಿದೆ. ಜನರ ಸಾಮಾನ್ಯ ಆಹಾರವಾದ ಜೋಳ ನವಣೆಯ ಬೆಳೆಗಳೇ ಈರೀತಿ ನಾಶವಾದ ಕಾರಣದಿಂದ ಜನರಿಗೆ ನಿತ್ಯಾಹಾರವು ಅಭಾವವಾಗಿ ಊರು ಬಿಡುತ್ತಿರುವರು.

ಪೀಡಿತವಾದ ಹಳ್ಳಿಗಳು ಮತ್ತು ಜನರ ಓಟು:- ಈ ಕೆಳಗೆ ಕಾಡಿಸಿದ 14 ಹಳ್ಳಿಗಳು ಪೂರ್ಣಕ್ಷಾಮ ಪೀಡಿತವಾಗಿವೆ.

(1) ಹೊನ್ನಳಿ
(3) ಚಿನ್ನ ಬಳ್ಳಾರಿ
[3] ಹಚ್ಚೊಳ್ಳಿ
(4) ಗುಬ್ಬಿಹಾಳು
(5) ಕೊತ್ತಲಚಿಂತ
[6] ಬೈರಗಾನದಿನ್ನೆ
[7] ಹಾಳುಮುರವಣಿ
[8] ಪೊತ್ತುಮುರವಣಿ
[9] ಒಸರಳ್ಳಿ
(10) ಕಲ್ಲುಕುಂಟಿಗನಹಾಳು
(11) ಅಕ್ಕತಂಗೇರಹಾಳು
(12) ಬೀರಹಳ್ಳಿ
[13] ಮಾಟೂರು
[14] ಚಿಲ್ಲಕೂಡ್ಲೂರು

ಪೊತ್ತುಮುರವಣಿ ಚಿಲ್ಲಕೂಡ್ಲೂರು, ಮಾಟೂರು ಈ ಮೂರು ಹಳ್ಳಿಗಳ ಹೊರತಾಗಿ ಉಳಿದ ಹನ್ನೊಂದು ಹಳ್ಳಿಗಳಿಂದ ಬಡಜನರೆಲ್ಲಾ ಜೀವನಾರ್ಥವಾಗಿ ಸೊಂಡೂರು ಬೊಂಬಾಯಿ ಪ್ರಾಂತ್ಯ ಹೋಗುತ್ತಿರುವರು. **ಅಕ್ಕತಂಗೇರಹಾಳಿನ ಸುಮಾರು 80 ಮನೆಗಳಲ್ಲಿ ಒಬ್ಬರೈತನ ಮನೆಯಹೊರತಾಗಿ ಊರೇ ಖಾಲಿಯಾಗಿದೆ**

ಮೇವಿನ ಭೀಕರ ಅಭಾವ:- ದಾಸ್ತಿಣ್ಯಕ್ಕಾಗಲಿ ನೆರೆಹೊರೆಯ ಬಂಧುಸ್ನೇಹಕ್ಕಾಗಲಿ ಎಷ್ಟೆಹಣವನ್ನು ಕೊಡಲಿ, ಮೇವೆಂಬುದು ದೊರೆಯಂತಿಲ್ಲ. 11 ಹಳ್ಳಿಗಳಲ್ಲಿ ದನಗಳನ್ನು ಸಾಕಲಾರದೆ ಗುಡ್ಡಕ್ಕೆ ಅಟ್ಟಿ ಬಿಟ್ಟಿರುವರು. ಗುಡ್ಡದ ಹುಲ್ಲು ಮೇವಿಗೆ ಅಯೋಗ್ಯವಾಗಿ ದನಗಳು ಉಪವಾಸದಿಂದ ಸಾಯುವ ಸ್ಥಿತಿಗೆ ಬಂದಿವೆ. ದನಗಳನ್ನು ಸಾಕಲಾರದ ಬಡವರು ಕೇಳಿದ ಬೆಲೆಗೆ ಮಾರುತ್ತಿರುವರು ಕಟುಕರಿಗೆ ಸುಗ್ಗಿಕಾಲ ಬಂದಂತಾಗಿದೆ.

ಸರಕಾರದವರಿಗೆ ಕೆಲ ಸೂಚನೆಗಳು

ಸರಕಾರದವರು ಮೇವಿನ ಬೆಂಡಿಕೆಯನ್ನು ಪೂರೈಸಲು ಮೇವಿನ ಡಿಪೋಗಳನ್ನು ತೆಗೆದರೆ ಏನೂ ಉಪಯೋಗವಿಲ್ಲ ಏತಕ್ಕೆಂದರೆ ಗುಡ್ಡದ ಮುಳ್ಳನ್ನು ದನಗಳು ಮೇಯುವಂತಿಲ್ಲ. ಈ ಕಾರಣ ರೈತರಿಗೆ ಮೇವನ್ನು ಕೊಳ್ಳಲು ಸಾಲವನ್ನು [Fodder Loans] ಹೆಣದಿಂದ ಒದಗಿಸಬೇಕು. ಸರಕಾರಿ ಅಧಿಕಾರಿಗಳ ಕೈಯಿಕುವಿಲ್ಲದೆ ವಿಶೇಷ ಪತ್ರವ್ಯವಹಾರದ ಜಂಜಾಟವಿಲ್ಲದೆ ಈ ಮೇವಿನ ಸಾಲವನ್ನು ಶೀಘ್ರವಾಗಿ ಒದಗಿಸಬೇಕು ಹಚ್ಚೊಳ್ಳಿಯಲ್ಲಿ ದಶಲಂಧಂಕೆರೆಯ ರಿಪೇರಿಗಾಗಿ ಕಂದಾಜಾಪಟ್ಟಿಯು 1940 ನೆಯ ಫಿಬ್ರವರಿಯಲ್ಲೇ ಜಿಲ್ಲಾ ಬೋರ್ಡಿನಿಂದ ಮಂಜೂರಾಯಿತು ಆದರೆ ಅದನ್ನು ಇನ್ನೂ ತೆಗೆದುಕೊಂಡಿಲ್ಲ. ಬೋರ್ಡಿನವರು ತಡಮಾಡದೆ ಈ ಕಾರ್ಯ ಕ್ಕಾರಂಭಿಸಿದರೆ ಕೆಲಜನರಿಗೆ ಅನೇಕ ಜನರಿಗೆ ಸಹಾಯವನ್ನೊದಗಿಸಿದಂತಾಗುವುದು. ಕವುತಾಳ ಮತ್ತು ಹಚ್ಚೊಳ್ಳಿಯರ ಸ್ಕೆಯ ಪುನರ್ನಿರ್ಮಾಣವನ್ನು ಜಿಲ್ಲಾ ಬೋರ್ಡಿನವರು ಶೀಘ್ರವಾಗಿ ತೆಗೆದುಕೊಳ್ಳಬೇಕು. ಕೊತ್ತಲಚಿಂತ ಗ್ರಾಮಸ್ಥರ ಒಂದು ಭಾವಿಯ ಮುಂಜೂರು ಆಗಿದೆಯೆಂದು ಕೇಳುತ್ತೇನೆ ಅದರ ಕಾರ್ಯವನ್ನೂ ಕೈಗೊಳ್ಳಬೇಕು.

ಈ ಕಾರ್ಯವನ್ನೂ ಮತ್ತು ಇತರ ಕ್ಷಾಮನಿವಾರಣೋಪಾಯಗಳನ್ನೂ ಸರಕಾರದವರೂ ಜಿಲ್ಲಾ ಬೋರ್ಡಿನವರೂ ಕಲೆತು ಪ್ರಾರಂಭಿಸಬೇಕು. ಈ ಪ್ರದೇಶವು ಕ್ಷಾಮಯುಕ್ತವೆಂದು ನಿಶ್ಚಿತವಾಗಿ ಪ್ರಕಟವಾಗಿರುವುದರಿಂದ ಇಲ್ಲಿ ಕೆಲಸಗಳನ್ನು ಆರಂಭಿಸಲು ಯಾವ ಅಡ್ಡಿಯೂ ಇಲ್ಲ. ಆದರೆ ಈ ಕೆಲಸಗಳಿಗೆ ಅವಶ್ಯವಾದ ಹಣವನ್ನು ಸರಕಾರದವರು ಕೊಡಬೇಕು.

ಸಾಗಗಳಿಗೆ ಅರ್ಜಿ ಇಪ್ಪ

ಜಿ. ಬೋ. ಸದಸ್ಯ)
ಫಿರ್ಕಾ [ಬಳ್ಳಾರಿ]
ಮಳೆಯು ಎರಡು ತಿಂಗ
ಬಂದರೂ ರೈತರು
ಸಹನಶೀಲರಾಗಿ ಆಗ
ನೆಯ ಆಗಮ್ಮದಿಂದ
ಬಿತ್ತಲಾಯಿತು.
ಗಿದ್ದವು. ಆದರೆ ಆ
ವಾರಕ್ಕೇ ಮಳೆ ಬೀ
ಎರಡನೆಯ ವಾರ
ಗತ್ತಿದ್ದವು.ಮುಂ
ಹತ್ತಿಲ್ಲ. ಸಜ್ಜೆ,
ನೆ ಚೆಂಯಾಗಿರಬ
ಬೆಳೆಯು ಜನ್ನಾಗಿ
ಹವಾಮಾನದಿಂದ
ಯು ಅಭಾವದಿಂದ
ಂತೆಯೇ ನಮ್ಮ
ಕಪ್ಪ ಬಹಳ ಕೂಲಿ
ನಮ್ಮ ಫಿರ್ಕಾದಲ್ಲಿ
ರ್ಯ ಪ್ರಾರಂಭಿಸ
ಗಿದವು. 1939
ಫಿರ್ಕಾಕ್ಕೆಲ್ಲಾ ರೆ
ಅಂದಮೇಲೆ ರೈತ
ಹೇಳಬೆ ಕಾಗಿಲ್ಲ.
ಇಲ್ಲವೇ ಇಲ್ಲ.
ಡ ಇಲ್ಲ. ಸರ್ಕಾ
ಸಹಾಯ ಒದಗಿಸ
ಂರಿ] ನವನಗೌಡ)

ಎಳ್ಳಾರಿ

ಮುಂಗಾರಿಯ್ಯು
ವು ಕಡೆ 2 ಜಾಕೆ
ಮುಂಗಾರಿ ಸೈರು
8-10 ದಿನಗಳ
ಯುತ್ತವೆ. ಇಲ್ಲ
ಸರ್ಕಾರದವರು
ರಿರುವ ರೈತರಿಗೆ
ಳ್ಳಿದಲ್ಲೂ ದಗಿಸ
ಗವಲ್ಲೂ ಬಹ

ಎಲ್. ಎ.)

ಜೋರ್ಡು ಸ
ುದು ಕಪ್ಪನವ
ರೆ:—
ದೆ ಮುಂಗಾ
ತೀರಕನಿಸ್ಕನಿ
ಎಂದು ರೂಪಾ

ಜಿಲ್ಲಾ ಬೋರ್ಡು ನಿರ್ಣಯ

"ಆಕಾಲಕ್ಕೆ ಬಂದ ಮಳೆಯಿಂದ ಆಕಾಲಕ್ಕೆ ಬಿತ್ತಿ ನಿಂತ ಬೆಳೆಯು ಪುನಃ ಮಳೆಯಿಲ್ಲದೆ ಮತ್ತು 20 ನೆಯ ಆಕ್ಟೋಬರ ದಿಂದ ಬೀಸಿದ ಕೆಟ್ಟಗಾಳಿಗೆ ಜಿಲ್ಲೆಯ ಬಹು ಭಾಗದಲ್ಲಿ ಸೈರು ನಾಶವಾಗಿ ರೈತಾಪಿ ಜನರಿಗೆ ನಿರುದ್ಯೋಗದಿಂದ ಸಂಕಟ ಒದಗಿರುವ ಕಾರಣ ಬೆಳೆಯ ನಾಶ ಮತ್ತು ರೈತಾಪಿ ಜನರ ನಿರುದ್ಯೋಗವನ್ನು ವಿಚಾರಿಸಿ ಸರಕಾರದವರು ಕೂಡಲೇ ಸಹಾಯವನ್ನೊ ದಗಿಸಬೇಕೆಂದು ಈ ಸಭೆಯು ಬೇಡುತ್ತದೆ ಈ ನಿರ್ಣಯವನ್ನು ಕುರುಗೋಡಿನ ಶ್ರೀ ಮರಿಬಸವನ ಗೌಡರು ಸೂಚಿಸಿದರು.

"ಆಹಾರ, ಮೇವುಗಳಿಲ್ಲದೆ ಜನರೂ, ದನಗಳೂ ಹೊರಗೆ ಹೋಗುತ್ತಿರುವು ದನ್ನೂ ವಿಚಾರಿಸಿ ತಕ್ಕ ನಿವಾರಣೋಪಾಯಗಳನ್ನು ಕೈಗೊಳ್ಳಬೇಕು" ಎಂಬುದನ್ನು ಶ್ರೀತಾರಾಮರೆಡ್ಡಿ ಯವರು ಜೋಡಿಸಿದರು. ಈ ಜೋಡಣೆಯನ್ನು ಶ್ರೀ ಗೌಡರು ಒಪ್ಪಿದ ಮೇಲೆ ನಿರ್ಣಯವು ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟಿತು.

ಯಿಯಲ್ಲಿ 0-5-4 ಆಗಿರಬಹುದು ಹಿಂಗಾರಿ ಸೈರಂತೂ ಪೂರ್ಣನಾಶವಾದಂತೆಯೇ (ಜೋಳ ನವಣೆ ಇನ್ನು 8-10 ದಿನಗಳಲ್ಲಿ ಮಳೆಯಾಗದಿದ್ದರೆ ಹತ್ತಿಯ ಬೆಳೆಯೂ ನಾಶವಾಗುತ್ತದೆ. ಅನೇಕ ಬಡ ರೈತರಿಗೆ ಈ ಸಾಗಲೇ ಕಾಳಿನ ಮತ್ತು ಮೇವಿನ ಅಭಾವವುಂಟಾಗಿದೆ ಸರಕಾರವೂ ಜಿಲ್ಲಾ ಬೋರ್ಡು ಬಡವರ ಜೀವನಕ್ಕೆ ಕಾರ್ಯಗಳನ್ನು ಏರ್ಪಡಿಸಬೇಕು. ಬಿಲಕನ ಪಟ್ಟಿಯಿಂದ ದರಮಾಪುರಕ್ಕೆ ರಸ್ತೆ ಹಾಕಿಸುವ ಯೋಜನೆಯೂ ಅಂದಾಜು ಪಟ್ಟಿಯೂ ಜಿಲ್ಲಾ ಬೋರ್ಡಿನಲ್ಲಿ ಮುಂಜೂರಾಗಿ ಒಂದುವರೆ ವರ್ಷವಾಯಿತು. ಇದನ್ನು ಕೂಡಲೇ ಪ್ರಾರಂಭಿಸಿದರೆ ನಿರ್ಗತಿಕವಾದ ಈ ಭಾಗದವರಿಗೆ ಶೀಘ್ರ ಸಹಾಯ ಒದಗಿಸಿದಂತಾಗುತ್ತದೆ.

ಹಲವಾಗಲು--ಅರಸೀಕೆರೆ

ಹರಪನಹಳ್ಳಿ ತಾ. ಹಲವಾಗಲು ಮತ್ತು ಅರಸೀಕೆರೆ ಫಿರ್ಕಾಗಳಲ್ಲಿ ಮುಂಗಾರಿಯ ಸಾಧಾರಣ ಬೆಳೆಯಾಗಿ ಹಿಂಗಾರಿಯೂ ನಾಶವಾಗುತ್ತಾ ಬಂದು ರೈತರು ಬಹಳ ಕಷ್ಟಕ್ಕೊಳಗಾಗುತ್ತಿರುವರು ಸರಕಾರದವರು ರೈತರಿಗೆ ಲ್ಯಾಂಡ್ ರೆವಿನ್ಯೂರೆಮಿಷನ್ ಕೊಟ್ಟು ಸಹಾಯಕಾರ್ಯಗಳನ್ನು ಆರಂಭಿಸಬೇಕೆಂಮ ಶ್ರಿಗಳಾದ ಚಕ್ಕಿ ಜನ್ನಪ್ಪ ಮತ್ತು ಮರಳಿ ಸಿದ್ದಪ್ಪ [ಜಿ. ಬೋ. ಸದಸ್ಯರು] ನವರು ಕೋರುತ್ತಾರೆ

ಕೊಟ್ಟೂರು ಫಿರ್ಕಾ (ಕೂಡ್ಲಿಗಿತಾಲೂಕು)

ಮುಂಗಾರಿ ಬೆಳೆಯಾದ ನವಣೆ ಜೋಳ ಶೇಂಗ ಇವು ಅತ್ಯಲ್ಪವಾಗಿ ಕೈಗೆ ಹತ್ತಿದರೂ ಮಳೆಇಲ್ಲದೆ ಹಿಂಗಾರಿಬೆಳೆಯೆಲ್ಲಾ ನಾಶವಾಗಿ ಬಿತ್ತಿದ ಕೂಲಿ ಮೈಮೇಲೆ ಬಿದ್ದಿದೆ ಸಾಲನಂದಿಗಂದ ರೈತರ ಆಸ್ತಿಯ ಅರ್ಧನೀಯ. ದನಗಳಾದರೂ ಮೇನಿಲ್ಲದೆ

ಜೀವಕನವಾಗಿವೆ ಅಡವಿಯಲ್ಲಿ ದನಗಳನ್ನು ಮೇಯಿಸಲು ಅನೇಕ ಪ್ರತಿಬಂಧಕಗಳಿವೆ. ಅವನ್ನು ಕೂಡಲೇ ಹೋಗಲಾಡಿಸಿ ರೈತರಿಗೆಸಹಾಯಮಾಡಬೇಕು. ಬಡ ಜನರ ಜೀವನಾರ್ಥವಾಗಿ ಸರಕಾರದವರೂ ಜಿಲ್ಲಾ ಬೋರ್ಡಿನವರು ಕಾರ್ಯಗಳನ್ನು ಕೈಗೊಳ್ಳಬೇಕು

ಟಿ. ಯಸ್. ಗುರುಲಿಂಗಪ್ಪ
ಜಿ. ಬೋ, ಸದಸ್ಯ ಕೊಟ್ಟೂರು.

ಚಿಗಟೇರಿ ಫಿರ್ಕಾ [ಹರಪನಹಳ್ಳಿ]

ಜಿಲ್ಲಾ ಬೋರ್ಡ ಸದಸ್ಯರಾದ ಶ್ರೀ ರಾಮನಗೌಡರು ಈತ್ಸಕಾರ ತಿಳಿಸಿದ್ದಾರೆ.

ನಮ್ಮ ಫಿರ್ಕಾದಲ್ಲಿ ಆರ್ಥಿಕಪರಿಸ್ಥಿತಿಯು ಭೀಕರವಾಗಿದೆ. ಮುಂಗಾರಿ ಬೆಳೆಯು ಸರಸರಿ ಎರಡಾಣೆ ಆಗಿರಬಹುದು. ಹಿಂಗಾರು ಬೆಳೆಯಂತೂ ಮಳೆಇಲ್ಲದೆ ನಾಶವಾಗಿದೆ. ಗಜಾಪುರ ಚಿಗಟೇರಿ. ಬಿಣ್ಣಿಹಳ್ಳಿ ಮತ್ತಿಹಳ್ಳಿಗಳಿಂದ ನೂರಾರು ಬಡ ಜನರುಹೊಟ್ಟೆಪಾಡಿಗಾಗಿ ಊರು ಬಿಟ್ಟು ಹೋಗಿಯವರು ಬೆಳೆಇಲ್ಲದ ಪರಿಸ್ಥಿತಿಯಿಂದ ನಮ್ಮ ಫಿರ್ಕಾದಲ್ಲಿ ಪೀಡಿತವಾಗಿರುವ ಹಳ್ಳಿಗಳು ಯಾವುವೆಂದರೆ ಗಜಾಪುರ ಚಿಗಟೇರಿ ಬಿಣ್ಣಿಹಳ್ಳಿ ವೈಶ್ಯೇಶ್ವರ ನಿಲುವಂಬಿ ಅಲಬೂರು, ಕೋಗಳಿ, ಇಟ್ಟಿಗಿ, ಸಾಸ್ವೆಹಳ್ಳಿ ಅಲದಹಳ್ಳಿ ಮೇವಿನ ಅಭಾವವು ಅಸಾಧ್ಯವಾಗಿದೆ. ಈ ಕಾರಣ ದನಗಳು ಅಡವಿಯಲ್ಲಿ ಮೇಯಲಿಕ್ಕೆ ಸರಕಾರದವರು ಕೂಡಲೇ ಉತ್ತರದಾಯವಾಗಿಸಬೇಕು. ಅಲ್ಲದೆ ಬಡಜನರ ರಕ್ಷಣೆಗಾಗಿ ಕ್ಷಾಮನಿವಾರಣಾಕಾರ್ಯಗಳನ್ನು ಕೈಗೊಳ್ಳಬೇಕು.



ನವಂಬರ್ 23.11-41

ಬಳ್ಳಾರಿ ಜಿಲ್ಲೆಯಲ್ಲಿ ಆರ್ಥಿಕ ದುಸ್ಥಿತಿ ಕ್ಷಾಮ ಸೂಚನೆಗಳು

'ನವಭಾರತ'ದ ಈ ಪುಟಗಳಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿನ ಕರುಣಾಜನಕ ಪರಿಸ್ಥಿತಿಯು ಜವಾಬ್ದಾರೀವ್ಯಕ್ತಿಗಳ ಹೇಳಿಕೆಯೊಂದಿಗೆ ಪ್ರಕಟವಾಗಿದೆ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ನಮಗೆ ವರದಿಗಳು ಬಂದಿಲ್ಲ. ಈ ಕಾರಣ ಪ್ರಕಟವಾಗಿರುವ ಹೇಳಿಕೆಗಳು ಅಪೂರ್ಣವೆನ ಬೇಕು. ಒಟ್ಟಿನಲ್ಲಿ ಹೇಳಬೇಕೆಂದರೆ ಸಕಾಲಕ್ಕೆ ಬಾರದ ಮಳೆಯ ಅಭಾವದಿಂದ ಮುಂಗಾರಿ ಸೈರು ಜಿಲ್ಲೆಯ ಎಲ್ಲಾ ಭಾಗದಲ್ಲೂ ಕ್ಷೀಣವಾಗಿ ರೈತರ ಹೊಲ ಖರ್ಚುಗಳಿಗೂ ಕೆಲವೆಡೆಗಳಲ್ಲಿ ಸಾಲದೆ ಹೋಗಿದೆ. ಸಾಲದ ಒತ್ತಡ, ಕರಭಾರ, ನಿತ್ಯಜೀವನದ ಮತ್ತು ಸಾಂಸಾರಿಕ ಆವಶ್ಯಕತೆಗಳ ಕಾರಣ ರೈತನು ತತ್ತರಿಸಿ ಹೋಗಿರುವನು. ಹೀಗಿರುವಾಗ ಹಿಂಗಾರಿ ಬೆಳೆಯು ರಾಕ್ಷಸನಂತೆ ಪೂರ್ಣಗ್ರಾಸವನ್ನು ಬೇಡಲಿದೆ. ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಒಂದೇ ವಿಧವಾದ ಸಂಕಟ ಉದಾಹರಣೆಗಳ ದೂರು ಕೇಳಿಬರುತ್ತಲಿದೆ. ಯಾವ ಸಂಕಟವೇಬರಲಿ ಮಧ್ಯಮವರ್ಗದವರಿಗೂ ಕನಿಷ್ಟದವರಿಗೂ ಸಹಿಸಲಾರದ ಬಡಿತವು ಬೀಳುತ್ತದೆ. ಈ ಹತ್ತು ವರ್ಷಗಳಲ್ಲಿ ಈ ವರ್ಗದವರಸ್ಥಿತಿಯು ನಿತ್ಯ ಕ್ಷೀಣವಾಗುತ್ತಲಿದೆ. ಕೆಲ ತಾಲೂಕುಗಳಿಂದ ಜನರು ಜೀವನ ನಿರ್ವಹಣ್ಕಾಗಿ ಹೊರ ಬೀಳುತ್ತಿರುವರು ದನಗಳು ಕಟಿಕರ ಮನೆಯನ್ನು ಸೇರುತ್ತಲಿವೆ. ಊರು ಕೇರಿಗಳನ್ನೂ ಮನೆ ಮಠಗಳನ್ನೂ ಬಿಟ್ಟು, ಜನರು ಹೊರಗೆ ಹೋಗುವುದೆಂದರೆ ಬಹಳ ಭಯಂಕರ ವಿಷಯ ಇದು ನಾಗರೀಕ ಸರಕಾರಕ್ಕೆ ಯೋಗ್ಯವಾದುದಲ್ಲ.ಜಿಲ್ಲಾಬೋರ್ಡಿನವರೇನೊ ನಿರ್ಣಯ ಮಾಡಿರುತ್ತಾರೆ ಜಿಲ್ಲಾ ಬೋರ್ಡು ಅಧ್ಯಕ್ಷರವರು ಕಲೆಕ್ಟರವರ ಸಹಕಾರದಿಂದ ನಿವಾರಣೋಪಾಯಗಳನ್ನು (Relief Measures) ಕೈಗೊಳ್ಳಬೇಕು. ಕಲೆಕ್ಟರವರು ತಡವಿಲ್ಲದೆ ಪೀಡಿತ ಪ್ರದೇಶಗಳಲ್ಲಿ ಕ್ಷಾಮನಿವಾರಣೆಕಾರ್ಯಗಳ ಪ್ರಾರಂಭಕ್ಕೆ ಏರ್ಪಡಿಸಬೇಕು. ರೈತರಿಗೆ ಭೂಮಿಗುತ್ತಿಗೆಯನ್ನು ಮಾಫುಮಾಡಬೇಕು. ನಿರ್ಗತಿಕರಿಗೆ ಉಚಿತವಾಗಿ ಅನ್ನಾಹಾರಗಳನ್ನು ಕೊಡಬೇಕು

ಈ ವಿಷಯದಲ್ಲಿ ಅಧಿಕಾರಿಗಳೂ, ಅನಧಿಕಾರಿಗಳೂ ಶೀಘ್ರವಾಗಿ ಪೂರ್ಣಶ್ರದ್ಧೆವಹಿಸುವರೆಂದು ನಾವು ಆಶಿಸುತ್ತೇವೆ.

80

ರಾಯಲಸೀಮ ಬ್ಯಾಂಕು, ಲಿಮಿಟೆಡ್.

[ಇಂಡಿಯಾ ಸರ್ಕಾರದ ಕಂಪನಿ ಶಾಸನಗಳನ್ನನುಸರಿಸಿ ಸ್ಥಾಪಿಸಲ್ಪಟ್ಟಿದೆ.]

ಮುಖ್ಯ ಕಾರ್ಯಾಲಯ:- ಬಳ್ಳಾರಿ.

ಪ್ರಥಮ ವರ್ಷದ ಪ್ರಗತಿ

ವಿವರಗಳು.	31—10—1940	31—10—1941
ಫಿಕ್ಸೆಡ್	ರೂ. Nil	86,230
ಚಾಲ್ತಿ	,, 3,173	11,482
ಸೇವಿಂಗ್ಸ	,, 1,231	14,124
ಇತರ	,, 40	717
ಸಾಲಗಳು.		
ಭಂಗಾರ	,, 520	24,332
ಮಾಲು	,, Nil	25,356
ಇತರ	,, Nil	6,590
ಇತರ ಆಸ್ತಿ		
ಸರ್ಕಾರದ ಬಾಂಡುಗಳು	,, 13,300	22,538
ಬ್ಯಾಂಕುಗಳಲ್ಲಿರುವ ಹಣ	,, 32,502	31,807
ಕೈಯಲ್ಲಿ ನಗದು	,, 5770	26,141

ಒಟ್ಟು ವ್ಯವಹಾರದ ಮೊತ್ತ.

31—10—40	31—10—41
ರು. ,4,77400.	ರು. 2,01,648-0-0

ಶಾಖೆಗಳು: [1] ತಿಮ್ಮನಚರ್ಲ. [ಗುಂತಕಲ್] [2] ಕೊಟ್ಟೂರು. [3] ಉರವಕೊಂಡ

ಬಿ. ವಿ. ಶೇಷಗಿರಿರಾವ್, ಬಿ. ಕಾಂ
ಕಾರ್ಯದರ್ಶಿ.

ಹೆಚ್. ಸೀತಾರಾಮರೆಡ್ಡಿ, ಬಿ. ಎ., ಬಿ. ಎಲ್., [ಎಂ ಎಲ್ ಎ.]
ಪೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರ ವಿಷಯ

ಧಾರವಾಡ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ 16-11-41 ಚುನಾಯಿತ ಅಧ್ಯಕ್ಷರಾದ ಡಿ. ನಾಗನಗೌಡರು ಬಿಡುಗಡೆಯಾಗಿ ಬಂದಮೇಲೆ 'ತಾವು ಪ್ರಾಂತಿಕ ಕಾಂಗ್ರೆಸ ಕಮೀಟಿಯ ಕಾರಭಾರವನ್ನು ನಹಿಸುವದು ವಿಹಿತವು ಎಂದು ನಹಿಸುವಿಲೆಂಬುದನ್ನು ತಿಳಿಸಬೇಕು" ಎಂದು ಶ್ರಿ ಕರಮರ ಕರರು ಅವರಿಗೆ ತಿಳಿಸಿದ್ದರು ಆದರೆ ವೈಯಕ್ತಿಕ ತೊಂದರೆಗಳ ಮೂಲಕ ಸದ್ಯಕ್ಕೆ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಹೊಣೆಯನ್ನು ವಹಿಸುವದ್ಯಾಗುವದಿಲ್ಲವೆಂದು ಡಾ. ನಾಗನಗೌಡರು ತಿಳಿಸಿದ್ದಾರೆ ಸದ್ಯಕ್ಕೆ ಪ್ರಾಂತದ ಪ್ರಮುಖ ಕಾರ್ಯ ಕರ್ತರು ಬಿಡುಗಡೆ ಯಾಗಿ ಬಂದಿರುವದರಿಂದ ಕಾಂಗ್ರೆಸಕಮೀಟಿಯಹೊಣೆಯನ್ನು ಇನ್ನೊಬ್ಬರಿಗೆ ಒಪ್ಪಿಸಿ ಸತ್ಯಾಗ್ರಹ ಮಾಡಲು ಸಮ್ಮತಿಯನ್ನೀಯ ಬೇಕೆಂದು ಶ್ರಿ ಕರಮರಕರರು ಮಹಾತ್ಮರಿಗೆ ಪತ್ರ ಬರೆದಿರುವರು.

ರಾಜ ಬಂದಿ ದಿನಾಚರಣೆ
(30—11—41)

ಸದ್ಯಕ್ಕೆ ಹಿಂದುಸ್ತಾನದ ಸರೆಮನೆಗಳಲ್ಲಿ ರಾಜಕೀಯ ಚಟುವಟಿಕೆಗಳಿಗಾಗಿ ಸಾವಿರಾರು ಕಾರ್ಯಕರ್ತರು ಬಂಧಿಸಲ್ಪಟ್ಟಿದ್ದಾರೆ. ಕೆಲವರನ್ನು ವಿಚಾರಣೆ ಇಲ್ಲದೆ ಅನಿಯಮಿತ ಅವಧಿಯ ವರೆಗೆ ಇಟ್ಟಿರುವರು. ತೀರ ಸ್ವಲ್ಪಜನರಿಗೆ ಹೆಚ್ಚಿನ ತರಗತಿಯನ್ನು ಕೊಟ್ಟಿದ್ದರೂ ಬಹುಬೇಕ ಸೆರೆಯಾಳುಗಳಿಗೆ ಕನಿಷ್ಟ ತರಗತಿಯನ್ನೇ ಅಂದರೆ "ಸಿ" ಕ್ಲಾಸನ್ನು ಕೊಟ್ಟಿರುವರು. 'ಸಿ' ಕ್ಲಾಸಿನ ಆಹಾರವು ಆರೋಗ್ಯವನ್ನು ಕಾಯುವಷ್ಟು ಕಸುವುಳ್ಳದ್ದಾಗಿರುವದಿಲ್ಲವೆಂದು ಹೊನ್ನೆ ಹೊನ್ನೆ ಹಿಂದುಸ್ತಾನದ ಅನೇಕ ನಾಮಾಂಕಿತ ವೈದ್ಯರು ಸಾರಿರುವರು. ಆ ಆಹಾರವನ್ನು "ಅಮಾನುಷ" ವೆಂದು ಮಹಾತ್ಮರು ನಿಷೇಧಿಸಿರುವರು 'ಸಿ' ಕ್ಲಾಸಿನ ರಾಜಬಂದಿಗಳಿಗೆ ವೃತ್ತಪತ್ರ ಮುಂತಾದವುಗಳನ್ನು ಕೊಡುವದಿಲ್ಲ. ವೈದ್ಯಕೀಯ ಉಪಚಾರಗಳು ಸರಿಯಾಗಿ ಇಲ್ಲ ರಾಜಬಂದಿಗಳಿಗೆ ಯೋಗ್ಯರೀತಿಯಿಂದ ನಡಿಸಿಕೊಳ್ಳದೆ ಇರುವ ಸರಕಾರದ ಆ ಪದ್ಧತಿಯನ್ನು ನಿಷೇಧಿಸಲು ಕರ್ನಾಟಕ ದಲ್ಲಿಯ ಎಲ್ಲಕಡೆಗೂ ಸಭೆಗಳನ್ನು ಸ್ಥಳಿಕ ಕಾಂಗ್ರೆಸ ಕಮೀಟಿಗಳೂ ಕಾರ್ಯಕರ್ತರೂ ತಾ॥ 30-11-41 ನೇ ರವಿವಾರ ದಿವಸ ಏರ್ಪಡಿಸಬೇಕೆಂದು ಈ ಮೂಲಕ ವಿನಂತಿಸುತ್ತೇನೆ ದ. ಕರಮರಕರ
ಅಧ್ಯಕ್ಷ. ಕ. ಪ್ರಾ. ಕಾ.

S. V. Setty & Bros, Bangalore Road. Bellary.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಕೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ವೇಸ್ಟ್ ಎಂಡ ನಾಡುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

9ನೇ ಪುಟದಿಂದ ಬಂದದ್ದು

ಡಿಮ ಮೊರೆಯತೊಡಗಿದರು ಜನತೆಯ ಮನಸ್ಸನ್ನೆಲ್ಲಿ ಪರಿಶೋಷ, ಮೋಷ ಮೊದಲಾದ ಭಾವನಾ ಸ್ಪಂದದ ಕದಿ ಒಯ್ದೊಡನೆ ಸುಲಿಗೆಯೋ ಅದರ್ಶವಾಗಿ ಉಳ್ಳ ಈ ಸಮಾಜಪದ್ಧತಿಯು ಹಾಗೇ ನಡೆದು ಬರಲು ಅನುಕೂಲವಾಯಿತು. ದ್ವಿಜ ಸತ್ತ್ರಿಯು ಮತ ತತ್ವಗಳನ್ನು ಪೋಷಿಸಲು ತುಂಬ ಸಹಕಾರಿಯಾಯಿತು ಬಂಡವಲದಾರನು ಭಕ್ತನೆಂಬ ಬಿರುದನ್ನು ಪಡೆದನು. ಸ್ವಂತಕಾಯ ಕಷ್ಟದಿಂದಲೂ ಬುದ್ಧಿ ಶ್ರಮದಿಂದಲೂ ಸ್ವಕೃಷಿಯ ಅಂಗಣದಲ್ಲಿ ದುಡಿದ ಫಲ-ವಾರ ಮಾಡುವಮಂದಿಯನ್ನು ಪಾಪಜೀವಿಗಳೆ ಮ ಭಾವಿಸಲಾಯಿತು. ಈ ಧನ ಪಿಶಾಚಿಗಳೂ ಸ್ವಾರ್ಥಿಗಳೂ ಆದ ಈ ಬಂಡವಾಲದಾರರನ್ನು ವುಣ್ಯವಂತರೆಂದು ಕರೆಯಲಾಯಿತು. ಎಲ್ಲ ಸಾಹಿತ್ಯಗಳೂ ಅಚರಣೆಯಲ್ಲಿರುವ ಆರ್ಥಿಕ ರಚನೆಯನ್ನು ಸಮರ್ಥಿಸಿದುವು. ನಿಸರ್ಗದತ್ತವಾದ ವಿಮರ್ಶೆಯೆಂಬ ಅಗ್ನಿಪ್ರತಿಭೆಯ ಮೇಲೆ ಅಂಧ ಶ್ರದ್ಧೆ ಎಂಬ ನೀರೆರಚಿದ ಜನತೆಗೆ ರಾಜಕೀಯ ಎಳ್ಳಷ್ಟೂ ಇಲ್ಲದೆ ಕಟ್ಟು ಕಥೆಗಳನ್ನೆ ನಂಬಿ ಸೌಭ್ಯದಿಂದ ಜೀವನವನ್ನು ಸಾಗಿಸಿದುವು. ಎಲ್ಲಿ ನೋಡಿದರೂ ಅನುತ ಕಲಹಗಳೇ

ಮುಂದುವರಿಯ ವುದು

ರಾಜಕೀಯ ಬಂದಿಗಳನ್ನು ಬಿಡುವ ವಿಷಯ.

ದೆಹಲಿಯ ಕೇಂದ್ರ ಅಸೆಂಬ್ಲಿಸಭೆಯಲ್ಲಿ ಸದಸ್ಯರಾದ ಶ್ರೀ ಎನ್ ಜೋಶಿಯವರು ರಾಜಕೀಯ ಬಂದಿಗಳ ಬಿಡುಗಡೆಗಾಗಿ ನಿರ್ಣಯವೊಂದನ್ನು ತಂದು ದೇಶದ ಹಿತವ ಮತ್ತು ಯುದ್ಧವನ್ನು ಎಲ್ಲರ ಸಹಾನು ಭೂತಿಯಿಂದ ಸಾಗಿಸುವುದರ ದೃಷ್ಟಿಯಿಂದ ಎಲ್ಲಾತಾದ ರಾಜಕೀಯ ಬಂದಿಗಳನ್ನೂ ಬಂಧಮುಕ್ತರನ್ನಾಗಿ ಮಾಡಬೇಕೆಂದು ಸಮರ್ಥಿಸಿದರು. ಗೃಹಮಂತ್ರಿಗಳಾದ ಮಾಕ್ಸವೆಲ್ಲರು ಉತ್ತರ ಕೊಡುತ್ತಾ ಸರಕಾರದವರಾಗಲ್ಲಿ ಪ್ರಾಂತಪವರಾಗಲಿ ಏನು ಮಾಡಬೇಕೆಂಬುದನ್ನು ಈಗಲೇ ನಿಶ್ಚಯಿಸಲು ಬರುವುದಿಲ್ಲ ಇದನ್ನೆಲ್ಲಾ ಹುಷಾರಾಗಿ ಸಹಾನು ಭೂತಿಯಿಂದ ವಿಚಾರಿಸುತ್ತೇನೆಂದು ಹೇಳಿದರು. ಜೋಶಿಯವರು ತಮ್ಮ ನಿರ್ಣಯವನ್ನು ಹಿಂದಕ್ಕೆ ತೆಗೆದು ಕೊಂಡರು.

ಶ್ರೀ ಸುಭಾಸ ಬಾಬುಗಳು ಜರ್ಮನಿಯಲ್ಲಿರುವರೇ ?

ಸರ್ವಾಧಿಕಾರಿ ದೇಶದವರ ಆಕಾಶವಾಣಿಯ ವಾರ್ತೆಗಳು ಶ್ರೀ ಸುಭಾಸರು ಜರ್ಮನಿಯಲ್ಲಿರುವ ಅಂಶವನ್ನು ಧೃಡಪಡಿಸಿರುವಂತ ಗೊತ್ತಾಗಿದೆ ನವಂಬರ್ 1ನೆಯ ತಾ|| ಇಟಲಿಯಿಂದ ಆಕಾಶವಾಣಿಯಲ್ಲಿ ಬಂದ ಹಿಂಮಾಸ್ತಾನ ವಾರ್ತೆಯು ಈ ಪ್ರಕಾರ ತಿಳಿಸಿತು "ಸುಭಾಸಚಂದ್ರರು ಜರ್ಮನಿಯಲ್ಲಿರುವರೆಂದು ಜರ್ಮನ್ ರೇಡಿಯೋ ತಿಳಿಸುತ್ತವೆ. ಭಾರತೀಯರು ಸುಭಾಸಚಂದ್ರರ ಭಾಷಣವನ್ನು ಕೇಳಲು ಅತಿ ಉತ್ಸುಕರಿರುವರೆಂದು ಬರ್ಲಿನ್ ರೇಡಿಯೋ ಅಧಿಕಾರಿಗಳು ಅವರ ಭಾಷಣ ಕೈ ಪಡಿಸಿ ತಮ್ಮ ದೇಶಬಾಂಧವರೊಡನೆ ಮಾತಾಡಲು ಸಂಧಿಯನ್ನು ಕಲ್ಪಿಸುವರೆಂದು ತಿಳಿಸುತ್ತೇವೆ"

ಅದೇದಿನ ಜಪಾನಿನಿಂದ ಬಂದ ಹಿಂದೂಸ್ತಾನೀ ವಾರ್ತೆಯು ಹೀಗಿದೆ "ಜಪಾನದಲ್ಲಿರುವ ಸ್ವತಂತ್ರ ಭಾರತ ಸಂಘದ ಅಧ್ಯಕ್ಷರಾದ ರಾಷ್ ಬಿಹಾರಿ ಬೋಸರವರು ಸುಭಾಸರು ಜರ್ಮನಿಯನ್ನು ಸುರಕ್ಷಿತವಾಗಿ ಮುಟ್ಟಿದ್ದಕ್ಕೆ ಅಭಿನಂದನ ಪರ ತಂತೀವಾರ್ತೆಗಳನ್ನು ಕಳಿಸಿದಾರೆ. ಸುಭಾಸರು ಫೆಬ್ರವರೀ 1941 ರಲ್ಲಿ ಮಾಯವಾದರು. ಈಗ ಅವರು ಜರ್ಮನಿ ಮುಟ್ಟಿರುವರು. ಹಿಂದೂಸ್ಥಾನವನ್ನು ಬಂಧ ಮುಕ್ತಿಮಾಡಲು ಜರ್ಮನಿಯೊಡನೆ ಸಂಧಿ ಮಾಡಿಕೊಂಡು ಸೈನ್ಯಕಳುಹಿಸಲು ಏರ್ಪಡಿಸಿರುವರಂತೆ

ಹರಪನಹಳ್ಳಿ ಪಂಚಾಯ್ತಿ ಬೋರ್ಡು

1941ನೆಯ ಡಿಶಂಬರ್ 17ಕ್ಕೆ ಈ ಬೋರ್ಡಿನ ಪುನರ್ನಿರ್ಮಾಣ ವಾಗಿ ಬೇಕಾದ್ದಿತ್ತು. ಆದರೆ ಸ್ಪೆಷಲ್ ಆಫೀಸರ್ ರವರು ಉಳ್ಳಿದ್ದು ಇನ್ನೂ ಕೆಲಸ ನಡೆಸಬೇಕಾದ ಆವಶ್ಯಕತೆ ತೋರಿ ಬಂದಕಾರಣ ಲೋಕಲ್ ಬೋರ್ಡು ಇನ್ಸ್ಪೆಕ್ಟರ್ ರವರು ಡಿಶಂಬರ್ 17ರಿಂದ 1942ನೆ ಜೂನ್ 17ನರಿಗೆ ಈ ಅವದಿ ಯನ್ನು ಹೆಚ್ಚಿಸಿ ಸ್ಪೆಷಲ್ ಆಫೀಸರ್ ರವರು ಇರಲು ಆಜ್ಞೆಮಾಡಿರುತ್ತಾರೆ.

ಜಪಾನು—ಅಮೆರಿಕಾ

ಅಮೆರಿಕಾದ ನೀತಿಯು ಅನ್ಯಾಯಕಾರಿಯಾಗಿದೆ ಯೆಂದೂ ಆದರ ಗುಣಾತಿಶಯೇ ಇಂದಿನ ಕದನಕ್ಕೆ ಕಾರಣವಾಗಿದೆಯೆಂದೂ ಜಪಾನ ಶಾಸನಸಭೆ ಯಲ್ಲಿ ಹೇಳಲಾಯಿತು ಚೀನದಲ್ಲಿ ಯುದ್ಧವು ನಿಲ್ಲಬೇಕಾದರೆ ಅಮೆರಿಕಾದ ಕೈವಾಡವು ಕಡಿಮೆಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು.

ಅಮೆರಿಕಾದಲ್ಲಿ ಮುಷ್ಕರ

ಅಮೆರಿಕಾದಲ್ಲಿ ಗಣಿ ಕೂಲಿಗಾರರು ಸುಮಾರು 53 ಸಾವಿರ ಮಂದಿ ಮುಷ್ಕರ ಹೂಡಿ ತಮ್ಮ ಬೇಡಿಕೆಗಳನ್ನು ಸಲ್ಲಿಸಲು ಒತ್ತಡ ಮಾಡುತ್ತಿರುವರು. ಪ್ರೆಸಿಡೆಂಟ್ ರೂಸವೆಲ್ಟರಿಗೆ ದೊಡ್ಡ ಬೇಜು ಬಂದಿದೆ.

ಕಾಕಸಸ್ ಬಂದರುಗಳ ಮೇಲೆ ಮುತ್ತಿಗೆ

ಕರ್ಚುವನ್ನು ಸ್ವಾಧೀನ ಪಡಿಸಿಕೊಂಡು ಜರ್ಮನರು ಸೆಬಾಸ್ಪೋಲ ಮತ್ತು ಇತರ ಬಂದರುಗಳ ಮೇಲೆ ಉಗ್ರವಾಗಿ ಗುಂಡಿನ ಮಳೆ ಕರೆದರೆಂದು ಪ್ರಕಟವಾಗಿದೆ.

ಜಪಾನಿನ ಶಾಸನಸಭೆಯು 5 ದಿನಗಳಿಂದ ಕೂಡುತ್ತಲಿದೆ ಜಪಾನಿನ ಧವಿಷ್ಯಕ್ಕೆ ಸಂಬಂಧಿಸಿದ ಉಗ್ರತೀರ್ಮಾನಗಳನ್ನು ತೆಗೆದುಕೊಳ್ಳಬಹುದು

ಸಿದ್ಧವಾಯಿತು! ಇಂದೇ ಕೊಳ್ಳಿರಿ!!

ಸಚಿತ್ರ ಭೂವಿವರ

[ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿದೆ]

ಶ್ರೀಗಳಾದ **ಕೆ. ವಾಸುದೇವ ಕಿಣಿ**, ಬಿ. ಎ. ಎಲ್. ಟಿ., **ಎವಿಲ್ ಫರ್ನೀಡಾ**, ಬಿ. ಎ. ಎಲ್. ಟಿ. (Diploma Geography) ಮತ್ತು **ಪಾಂಡುರಂಗ ಪೈ** ಬಿ. ಎ ಎಲ್ ಟಿ. ಈ ಸುಪ್ರಸಿದ್ಧ ವಿದ್ವಾಂಸರಿಂದ ಬರೆಯಲ್ಪಟ್ಟು, ನಿವಿಧ ಚಿತ್ರ ಪರ, ಮಾದರಿ ಪ್ರಶ್ನೆಗಳಿಂದ ಎಲ್ಲಾ ತರಗತಿಯ ಪುಸ್ತಕಗಳು ಮಾರಾಟಕ್ಕೆ ಸಿದ್ಧವಾಗಿವೆ. ಇಂದೇ ಕೊಳ್ಳಿರಿ.

೪ ನೆಯ ತರಗತಿ ೦—೬—೦ ೬ ನೆಯ ತರಗತಿ ೦—೪—೦
೫ ,, ತರಗತಿ ೦—೭—೦ ೭ ,, ತರಗತಿ ೦—೧೦—೦
ಆನೆಯ ತರಗತಿ ೦—೧೦—೦

ಮೇಲಿನ ಪುಸ್ತಕಗಳನ್ನು ಒಂದು ಸಲ ಕೊಂಡರೆ ರೂ 2-9-0 ಮನಿಯಾರ್ಡರ್ ಮೂಲಕ ಕಳುಹಿಸಿದರೆ ಸಾಕು. ಟಪಾಲು ಖರ್ಚು ನಾವು ವಹಿಸಿ ಕಳುಹಿಸುತ್ತೇವೆ ವಿ. ಪಿ. ಇಂದ ರೂ 2 14-0.

ಸ್ಕೂಲ್ ಬುಕ್ ಕಂಪೆನಿ, ಪುಸ್ತಕ ವ್ಯಾಪಾರಿಗಳು,
ರಥಬೀದಿ, **ಮಂಗಳೂರು.**

ಬಳ್ಳಾರಿ ಜಿಲ್ಲೆಯ ಏಜಂಟರು:—
ಯಜಮಾನ್ ಅಂಡ್ ಬ್ರದರ್ಸ್ ಬ್ರಾಹ್ಮಣ ಬೀದಿ, ಬಳ್ಳಾರಿ.

ಕ್ರಿಮಿಯಾದಲ್ಲಿ ಕರ್ಫ್ಯೂ ವಶವಾಯಿತು

ಜರ್ಮನ ಹೇಳಿಕೆ ಪ್ರಕಾರ ರಷ್ಯಾದ ದಕ್ಷಿಣ ಭಾಗದಲ್ಲಿನ ಮುಖ್ಯ ಬಂದರಾದ "ಕರ್ಫ್" ಹಿಡಿದಿರುವರು. ಕ್ರೀಮಿಯಾ ಒಂದರಲ್ಲೇ ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿ ರಷ್ಯಾ ಪೈದಿಗಳನ್ನು ಹಿಡಿದಿರುವರಂತೆ. ಸೆಬಾಸ್ಟಪೋಲದ ಹತ್ತಿರ ಒಂದ ಕೋಟೆಯೂ ಇವರ ವಶವಾಗಿವೆಯಂತೆ

ಎಲ್ಲಾ ಕಡೆಗಳಲ್ಲೂ ಜರ್ಮನಿಯ ಮುನ್ನಡೆಯನ್ನು ತಡೆಯುತ್ತಿರುವರೆಂದು ಈ ಚಿನ ಸುದ್ದಿಗಳಿಂದ ವ್ಯಕ್ತವಾಗಿದೆ.

—ಭವಿಷ್ಯದ ದಕ್ಷಿಣ ಭಾಗದಲ್ಲಿ ಜೋನೆಟ ಬೇಸಿನದ ಹತ್ತಿರ ಭಯಂಕರ ಕಾಳಗವಾಗುತ್ತಲಿದೆ. ನಕ್ಷೆಯನ್ನು ಲೆಕ್ಕಿಸದೆ ಶತ್ರುಗಳು ಮೇಲೆ ಬೀಳುತ್ತಿರುವರು ಕರ್ಚ್ ಪ್ರದೇಶದ ಪೂರ್ವಕ್ಕೆ 20 ಮೈಲುಗಳ ದೂರ ಶತ್ರುಗಳನ್ನು ಸಿಗುವರೆಂದು ಜರ್ಮನ ಪ್ರಕಟನೆಯೊಂದು ತಿಳಿಸುತ್ತದೆ. ಎಲ್ಲಾ ಭಾಗಗಳಲ್ಲೂ ಭಯಂಕರ ಯುದ್ಧವು ನಡೆದಿದೆಯೆಂದು ಪ್ರಕಟನೆಗಳು ಹೊರಟಿವೆ ಕರ್ಚ್‌ಕಡೆಗೆ ನುಗ್ಗುತ್ತಿರುವ ರುಮೇನಿಯನ್ ಸೈನಿಕರು ಸೆವಿಯಂಟಿಲ್ ಎಂಬ ಊರನ್ನೂ, ಯಾಲ್ಟಾ ಎಂಬುದನ್ನೂ ಹಿಡಿದಿರುವರು.

—ಫಿನಲೆಂಡು ಆತ್ಮರಕ್ಷಣೆಗಾಗಿ ಯುದ್ಧಮಾಡುತ್ತಲಿದೆ. 40 ಲಕ್ಷ ಪ್ರಜಾಬಲವುಳ್ಳ ಜನಾಂಗವೊಂದರಮೇಲೆ ಅದಕ್ಕೆ 50 ರಷ್ಟು ಪ್ರಜಾಬಲವುಳ್ಳ ರಾಷ್ಟ್ರವು (ರಷ್ಯಾ) ಮೇಲೆ ಬೀಳುವಂತಿರಬಾರದೆಂದು ಈಗ ಫಿನ್‌ಲೆಂಡು ಆಕ್ರಮಿಸಿರುವ ಕ್ಷೇತ್ರಗಳಿಂದ ಅಮೆರಿಕಾಕ್ಕೆ ಅಪಾಯವಿಲ್ಲ. ಅದರ ಹಕ್ಕುಗಳಿಗೆ ಬಾಧೆ ಇಲ್ಲ ಎಂಬುದಾಗಿ ಫಿನ್‌ಲೆಂಡ್ ಅಮೆರಿಕಾಕ್ಕೆ ತಿಳಿಸಿದೆ.

—ಅಮೆರಿಕಾ ಸರಕಾರವು ಬ್ರಿಟನ್ನಿಗೆ ಸಹಾಯಮಾಡುವ ಉದ್ದೇಶದಿಂದ ತಟಸ್ಥ ಕಾಯ್ದೆಯಲ್ಲಿ ತಿದ್ದುಪಡಿ ಮಾಡಲು ಸೂಚನೆಗಳನ್ನು ತಂದಿದೆ

ಅಮೆರಿಕಾದಲ್ಲಿ ತಟಸ್ಥಕಾಯ್ದೆ ಜಾರಿಗೆ ಬಂದ ನಂತರ ಅಲ್ಲಿಯ ಹಡಗುಗಳು ಸಾಮಾನು ಸಮೇತವಾಗಿ ಇಂಗ್ಲೆಂಡಿಗೆ ಹೊರಡಲಿವೆ. ಸುಮಾರು ಒಂದುವಾರದ ಇಂಗ್ಲೆಂಡಿಗೆ ಬರಬಹುದು. ಅಮೆರಿಕಾದಲ್ಲಿ 11200 ವ್ಯಾಪಾರದ ಹಡಗುಗಳಿವೆ. ಸದ್ಯಕ್ಕೆ 300 ಹಡಗುಗಳನ್ನು ಸಿದ್ಧಗೊಳಿಸಲಾಗುತ್ತಿದೆ

Jawani-Ki-Rit.
A New Theatre's Picture.

ಬಳ್ಳಾರಿ

ರಾಯಲ್ ಸಿನಿಮಾದಲ್ಲಿ

ಡಿಸೆಂಬರ್ ಮೊದಲನೆಯ ವಾರದಿಂದ ತೋರಿಸಲ್ಪಡುವ

ಜವಾನೀ-ಕೀ-ರೀತ್

ಎಂಬ ವಾಕ್ಚಿತ್ರದಲ್ಲಿ ಒಂದು ದೃಶ್ಯ.

[2ನೇ ಪುಟದಿಂದ]

ಹಳ್ಳಿಗಳ ಆರ್ಥಿಕ ಪರಿಸ್ಥಿತಿ

ಈ ಕಾರಣಗಳಿಂದ ಶಾಲೆಯಲ್ಲಿ 'ಪ್ರೊಜೆಕ್ಟ್' ಕ್ರಮವನ್ನು ಉಪಯೋಗಿಸುವ ಸಾಧ್ಯತೆ ಸಾಧ್ಯತೆಯನ್ನು ಉಪಾಧ್ಯಾಯರು ಶೋಧಿಸಬೇಕು. ಪಾಠಪಟ್ಟಿಯೆ ಎಲ್ಲ ವಿಷಯಗಳನ್ನು ಸಂಪೂರ್ಣವಾಗಿ ಪ್ರೊಜೆಕ್ಟ್ ಕ್ರಮದಲ್ಲಿ ಕಲಿಸುವದು ಸಾಧ್ಯವಲ್ಲವಾದರೂ ಪ್ರೊಜೆಕ್ಟಿನ ತಕ್ಕ ಉಪಯೋಗವನ್ನು ಮಾಡುವುದು ಸಾಧ್ಯ ಮತ್ತು ಅಗತ್ಯ. ಶಾಲೆಯು ಪಟ್ಟಿಗಾಡಿನ ಶಾಲೆಯಾಗದಿದ್ದರೂ ಅಲ್ಲಿ ಅನುಕೂಲವಾದ ಪ್ರೊಜೆಕ್ಟುಗಳು ಕಡಿಮೆಯಾಗಿದ್ದರೂ ಆ ಶಾಲೆಗಳಲ್ಲಿ ಸಹ ಉಪಯೋಗಿಸಬಹುದಾದ ಅತಿ ಸುಲಭ ಪ್ರೊಜೆಕ್ಟುಗಳನ್ನು ಕಂಡುಹಿಡಿಯಬಹುದು.

ಪ್ರಾಯಸ್ಥರ ಜೀವನಕ್ಕೆ ತಯಾರಿ.

ಇದಕ್ಕೆ ಎರಡು ಮುಖಗಳಿವೆ; ಒಂದು ಜೀವನವೃತ್ತಿಯನ್ನು ಕಲಿಸುವುದು, ಇನ್ನೊಂದು ಪ್ರಾಯಸ್ಥರಿಗೆ ಉಪಯೋಗಕ್ಕೆ ಬೀಳುವ ಓದುಬರಹ ಮೊದಲಾದುವುಗಳ ಭಾಗಗಳನ್ನು ಕಲಿಸುವುದು. ಪ್ರತಿಯೊಬ್ಬ ವ್ಯಾಯಸ್ಥನಿಗೆ ಬೇಕಾಗುವ ಕೆಲವು ಅನಿವಾರ್ಯ ಚಟುವಟಿಕೆಗಳೂ ಜ್ಞಾನಭಾಗಗಳೂ ಇವೆ; ಅವನ್ನು ಎಳೆ ಪ್ರಾಯದಲ್ಲಿ ಶಾಲೆಯಲ್ಲೆ ಕಲಿಸಬೇಕು. ಆದರೆ ವ್ಯಾಯಸ್ಥನಿಗೆ ಅಗತ್ಯ ಬೀಳಬಹುದಾದ ಎಲ್ಲವನ್ನೂ ಕಲಿಸುವುದು ಅಸಾಧ್ಯ. ಮಕ್ಕಳು ಮುಂದೆ ಕೈಕೊಳ್ಳಬಹುದಾದ ವೃತ್ತಿಯು ಎಳೆ ಪ್ರಾಯದಲ್ಲೇ ನಿಶ್ಚಿತವಾಗುವುದಿಲ್ಲವಾದುದರಿಂದ ಅನರನ್ನು ಯಾವುದಾದೊಂದೇ ವೃತ್ತಿಗೆ ಯೋಗ್ಯರನ್ನಾಗಿ ಮಾಡುವದು ಸಾಧ್ಯವಲ್ಲ. ಪ್ರಾಯಸ್ಥನಿಗೆ ರುಜಿಸಬಹುದಾದ ಯಾವುದೇ ಒಂದು ಜ್ಞಾನಭಾಗದ ಪೂರ್ಣತೆಯನ್ನುಸಹ ಪ್ರಾಥಮಿಕ ತರಗತಿಗಳಲ್ಲಿ ಕೊಡುವುದು ಸಾಧ್ಯವಲ್ಲ. ಆದರೆ ಪ್ರತಿಯೊಬ್ಬನ ವಾಲಿಗೆ ಬೀಳುವ ಕೆಲವು ಕೆಲಸಗಳನ್ನು — ಕೈ ಕಣ್ಣುಗಳ ತರಬೇತಿ, ಚಿಲ್ಲರ ವ್ಯಾವ್ಯಾರ ಕಾಗದಪತ್ರಗಳ ಬರವಣಿಗೆ- ಪಾಠಪಟ್ಟಿಯಲ್ಲಿ ಸೇರಿಸುವುದು ಸಾಧ್ಯ ಮತ್ತು ಅಗತ್ಯ.

ಜ್ಞಾನಭಾಗಗಳ ನುಟ್ಟಿಗೆ ಹೇಳುವುದಾದರೆ, ಪ್ರಾಯಸ್ಥರು ನಿತ್ಯದಿನ ಎಂಬಂತೆ ಅತ್ಯಗತ್ಯವಾಗಿ ಉಪಯೋಗಿಸುವ ಅಂಶಗಳಲ್ಲಿ ಮಕ್ಕಳಾಗಿರುವಾಗಲೇ ಕಲಿಯಬೇಕಾಗುವ ಅಂಶಗಳ್ಯಾವುವು ಅರಿದು ವಿಚಾರಿಸಬೇಕು. ಹೀಗೆ ಮಾಡಿದರೆ ಅನುಪಯುಕ್ತವಾದ, ವಿಲಕ್ಷಣವಾದ ವಿಷಯ, ಅಥವಾ ಕೆಲವೇ ಮಂದಿಗೆ ಬೇಕಾಗುವ ವಿಷಯ, ಇವನ್ನು ಬಿಡಬೇಕಾಗುವುದು. ಲೆಕ್ಕದ ಉದಾಹರಣೆ ತರುವುದಾದರೆ 100 ರ ವರೆಗಿನ ಸಂಖ್ಯೆಗಳನ್ನು ಹೆಚ್ಚಾಗಿಯೂ 1000 ವರೆಗಿನ ಸಂಖೆಗಳನ್ನು ಸ್ವಲ್ಪ ಕಡಿಮೆಯಾಗಿಯೂ ಎಲ್ಲರೂ ಉಪಯೋಗಿಸುತ್ತಾರೆ. ಆದುದರಿಂದ ಮೂರು ಸ್ಥಾನಗಳ ವರೆಗಿನ ಸಂಖ್ಯೆಗಳನ್ನು ವೇಗದಿಂದಲೂ ತಪ್ಪಿಲ್ಲದೆಯೂ ಉಪಯೋಗಿಸುವುದನ್ನು ಮಕ್ಕಳು ಕಲಿಯಬೇಕು ಎಂದು ಹೇಳಬಹುದು. ಸಂಖ್ಯಾಸ್ಥಾನಗಳನ್ನು ಹೆಚ್ಚಿಸುತ್ತ ಹೋಗಬಹುದೆಂಬ ಜ್ಞಾನವನ್ನು ಅವರಿಗೆ ಕೊಡಬೇಕಾಗುವುದು, ಕೆಲವು ಸಲ ದೊಡ್ಡ ಸಂಖ್ಯೆಗಳನ್ನು ಉಪಯೋಗಿಸಲೂ ಬಹುದು. ಆದರೆ ಸುಲಭವಾಗಿ ತಪ್ಪಿಲ್ಲದೆ ಉಪಯೋಗಿಸುವರೆ ಕೊಡುವ ಪೈಶ್ಚರ್ಯಲ್ಲಿ ಸಣ್ಣ ಸಂಖ್ಯೆಗಳನ್ನೇ ಉಪಯೋಗಿಸಬೇಕು.

ಆದುದರಿಂದ ಪ್ರಾಥಮಿಕ ಶಾಲೆಗಳ ಶಿಕ್ಷಣದ ಮುಖ್ಯ ಕಾರ್ಯವು ಈ ಕೆಳಗಿನ ವಿಷಯಗಳನ್ನೊಳಗೊಂಡಿರಬೇಕು:—

(1) ಮಕ್ಕಳು ತಡೆಯಿಲ್ಲದೆ ಕಲಿಯಲಾಗುವ ವಿಷಯಗಳು.

(2) ಅವರಿಗೆ ಅಭಿರುಚಿ ಇರುವ ಮತ್ತು ಅನರ ನಿತ್ಯ ಜೀವನದಲ್ಲಿ ಉಪಯೋಗಕ್ಕೂ, ಅನುಭವಕ್ಕೂ ಬರುವ ವಿಷಯಗಳು.

(3) ಪ್ರಾಯಶಃ ಅವರೆಲ್ಲರೂ ಪ್ರಬುದ್ಧರಾದಾಗ ಅವರಿಗೆ ಅಗತ್ಯವೆನಿಸುವ ವಿಷಯಗಳು.

(ದ. ಕ. ಜಿಲ್ಲಾ ಟೀಚರ್ಸ ಗಿಲ್ಡರವರಿಂದ ಪ್ರಕಟಿಸಿದ ಪುಸ್ತಕದ ಆಧಾರ.)

ಅಸ್ಸಾಂಮಂತ್ರಿ ಮಂಡಲದ ರಾಜೀನಾಮೆ.

ಅಸ್ಸಾಂ ಮಂತ್ರಿಮಂಡಲವು 12ನೇ ತಾ. ರಾಜೀನಾಮೆ ಕೊಟ್ಟಿತು. ಗವರ್ನರವರು ಮಂತ್ರಿಮಂಡಲದ ರಚನೆಗೆ ಯಾರನ್ನು ಕರೆಯುವರೋ ಇನ್ನು ಗೊತ್ತಿಲ್ಲ.

ಜಪಾನು ದೇಶವು ಅಮೆರಿಕಾ ಮತ್ತು ಇಂಗ್ಲೆಂಡ್ ಮೇಲೆ ಯುದ್ಧವನ್ನು ಸಾರಿತು.

ಸಿಂಗಪುರದಮೇಲೆ ದಾಳಿ. ತಾಯಲೆಂಡ್ ಪ್ರವೇಶಿಸಿದರು.

—(೦)—

7ನೆಯ ತಾ|| ಭಾನುವಾರ ವ್ಯಾಪ್ತಕಾಲ ಜಪಾನುದೇಶವು ಅಮರಿಕಾ ಮತ್ತು ಬ್ರಿಟನ್‌ಗಳಮೇಲೆಯುದ್ಧವನ್ನುಸಾರಿತು ಘೋಷಣೆಯಾದ ಸ್ವಲ್ಪಹೊತ್ತಿನೊಳಗಾಗಿಯೇ ಜಪಾನಿನವರು ಪೂರ್ವದಲ್ಲಿಯೂ ದ್ವೀಪದಲ್ಲಿ ಸೈನ್ಯಗಳನ್ನಿಳಿಸಿದರು. ಹಾಂಗ್‌ಕಾಂಗ ಬೇಸ ಮಲಯ ದೇಶಗಳಮೇಲೆ ಬಾಂಬುಗಳನ್ನು ಸುರಿಸಲಾಯಿತು. ಹವಾಯಿದ್ವೀಪದ ಪರ್ಲ್‌ಹಾರ್ಬರ್ ಸಿಂಗಪುರ ಇವುಗಳಮೇಲೆ ಭಯಂಕರ ದಾಳಿಯು ನಡೆದಿದೆ. ಮೊದಲನೆಯ ಮುತ್ತಿಗೆಯಿಂದ ಸಿಂಗಪುರದಲ್ಲಿ 60 ಜನರು ಸತ್ತರು. 123 ಜನರಿಗೆ ಘಾಯಗಳಾಯ್ತು. ಫಿಲಿಪೈನ ದ್ವೀಪಗಳಲ್ಲಿಯೂ ಜಪಾನರು ಇಳಿಯುತ್ತಿರುವರು. ಪೆಸಿಫಿಕ್ ಸಾಗರದ ಪಶ್ಚಿಮ ಭಾಗದಲ್ಲಿ ಬ್ರಿಟಿಷ್ ಅಮೆರಿಕಾ ಹಡಗುಗಳೊಂದುಕಡೆ ಮತ್ತು ಜಪಾನು ಹಡಗುಗಳೊಂದುಕಡೆ ದೊಡ್ಡ ಯುದ್ಧದಲ್ಲಿ ತೊಡಗಿನಿವೆಯಂತೆ. ಹವಾಯಿದ್ವೀಪದ ಪರ್ಲ್‌ಹಾರ್ಬರ್ ಮತ್ತು ಹೊನುಲೂಲು ಪಟ್ಟಣಗಳಲ್ಲಿ ಬಾಂಬುಗಳ ದಾಳಿಯಿಂದ ಬಹಳ ನಷ್ಟವಾಗಿದೆ. ಆಕ್ಲಹಾಮ ಎಂಬ 29 ಸಾವಿರ ಟನ್ನಿನ ಅಮೆರಿಕಾದ ಹಡಗು ಮುಳುಗಿಸಲಾಯಿತು.

ಆಸ್ಟ್ರೇಲಿಯ, ಕ್ಯಾನಡ, ನೆದರ್ಲ್ಯಂಡ್ಸ, ಈಸ್ಟ ಇಂಡೀಸ್, ಕಾಸ್ಟರೀಕ ಮುಂತಾದ ಸರಕಾರಗಳು ಜಪಾನಿನಮೇಲೆ ಯುದ್ಧ ಸಾರಿ ಸೈನಿಕ ಚಟುವಟಿಕೆಗಳನ್ನಾರಂಭಿಸಿವೆ. ಅಮೆರಿಕಾದಲ್ಲಿದ್ದ ಜಪಾನರೆಲ್ಲಾ ಬಂಧಿಸಲ್ಪಟ್ಟಿರುವರು. ಹಿಂದೂಸ್ತಾನದಲ್ಲಿರುವ ಜಪಾನರೆಲ್ಲಾ ಬಂಧಿಸಲ್ಪಟ್ಟಿರುವರು.

ಸಯಾಮು (ತಾಯಲೆಂಡ) ಸರಕಾರವು ಜಪಾನಿನೊಡನೆ ಸಂಧಿಮಾಡಿಕೊಂಡಿತೆಂದೂ ಜಪಾನಿ ಸೈನ್ಯಗಳು ರಾಜಧಾನಿಯಾದ ಬಾಂಗಾಕ್‌ನಲ್ಲಿ ಪ್ರವೇಶಿಸಿದವೆಂದೂ ಒಂದು ಸುದ್ದಿಯು ಹೊರಬಿದ್ದಿದೆ. ಆದರೆ ಇನ್ನೂ ಧೃಢಪಟ್ಟಿಲ್ಲ. ಅಸ್ಸಾಂದಮೇಲೆ ಒಂದು ವಿಮಾನವು ಹೋಯಿತೆಂದು ತಿಳಿಯಲಾಯಿತು. ಈ ಕಾರಣ ಅಲ್ಲಿ ಎಚ್ಚರಿಕೆ ಚರ್ಯೆ ತೆಗೆದುಕೊಳ್ಳಲಾಗುತ್ತಿದೆ.

ತಾಯಲೆಂಡ ಜಪಾನುಗಳಲ್ಲಿ ಸಂಧಿ:—

ಸಯಾಮು ಅಥವಾ ತಾಯಲೆಂಡು ದೇಶವು ಜಪಾನಿನೊಡನೆ ಒಪ್ಪಂದಮಾಡಿಕೊಳ್ಳದೆ ಬೇರೆ ಯಾವಮಾರ್ಗವೂ ಇರಲಿಲ್ಲವೆಂದೂ ದೇಶದ ಹಿತದ ದೃಷ್ಟಿಯಿಂದ ಹೀಗೆ ಮಾಡಬೇಕಾಯ್ತೆಂದೂ ಸಯಾಮದ ಪ್ರಧಾನರು ಹೇಳಿದರು. ಬ್ರಿಟಿಷ ಸೈನ್ಯಗಳು ಸಯಾಮಿನಲ್ಲಿ ನುಗ್ಗಿದಕಾರಣ ತಾವು ಸಯಾಮದ ಸ್ವಾತಂತ್ರ್ಯಕಾಪಾಡಲು ಸಯಾಮದಲ್ಲಿ ಪ್ರವೇಶಿಸಬೇಕಾಯ್ತೆಂದೂ ಜಪಾನರು ಹೇಳುತ್ತಾರೆ. ಜಪಾನಿ ಸೈನ್ಯಗಳು ಉತ್ತರ ಸಯಾಮದಿಕೆಡೆ ಅಂದರೆ ಬರ್ಮಾದಸ್ತೆಯಕಡೆ ನುಗ್ಗುತ್ತಿರುವ ವಾರ್ತೆಯು ಧೃಢಪಟ್ಟಿಲ್ಲ.

ಜಪಾನರ ಭಯಂಕರಧಾಳಿ

ಫಿಲಿಪೈನ್, ಗ್ವಾಮ, ವೇಕ ಮುಂತಾದ ಪ್ಯಾಸಿಫಿಕ್ ಸಾಗರದ ಬ್ರಿಟಿಷ್ ಮತ್ತು ಅಮೆರಿಕಾ ದ್ವೀಪಗಳಮೇಲೆ ಭಯಂಕರ ವಿಮಾನ ದಾಳಿಯು ನಡೆದಿದೆ ಅನೇಕ ಪಟ್ಟಣಗಳು ಹತ್ತಿಕೊಂಡು ಉರಿಯುತ್ತಲಿವೆಯೆಂದು ಹೇಳಲಾಗಿದೆ. ವಿಮಾನ ಕೇಂದ್ರಸಿಲ್ಲಾಣ ಸೈನಿಕ ಕ್ಷೇತ್ರಗಳಮೇಲೆಲ್ಲಾ ದಾಳಿಯಾಗುತ್ತಲಿದೆ. ಅಮೆರಿಕಾ 'ಸೈನಸ್ಸೀವರ್', ಎಂಬ ಹಡಗು ಸಮುದ್ರತಳವನ್ನು ಕಂಡಿತು. ಹಡಗುಗಳ ಮೇಲೆಲ್ಲಾ ದಾಳಿಯಾಗುತ್ತಲಿದೆ.

ಬ್ರಿಟಿಷ್ ಹಡಗುಗಳು ಮುಳುಗಿದವು:—

ಸಿಂಗಪುರದ ಭಾಗದಲ್ಲಿ ರಕ್ಷಣೆಗಾಗಿ ಬಂದಿದ್ದ ಪ್ರಿನ್ಸ ಆಫ್‌ವೇಲ್ಸ (39 ಸಾವಿರಟನ್) ರಿಪಲ್ಸ (32 ಸಾವಿರಟನ್) ಜಪಾನಿ ವಿಮಾನಗಳು ಬಾಂಬುದಾಳಿ ಮಾಡಿದ ಕಾರಣ ಸಮುದ್ರತಳವನ್ನು ಸೇರಿದವೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ. ಜರ್ಮನರ ಬಿಸ್ಮಾರ್ಕ ಎಂಬ ಸುಪ್ರಸಿದ್ಧ ಹಡಗನ್ನು ಮುಳಿಗಿಸುವಲ್ಲಿ ಪ್ರಿನ್ಸ ಆಫ್‌ವೇಲ್ಸ ಹಡಗು ಭಾಗವನ್ನು ವಹಿಸಿದ್ದಿತು. ಇದು 1939 ರಲ್ಲಿ ಅನೇಕ ಕೋಟಿ ರೂ. ಗಳ ಖರ್ಚಿನಿಂದ ಕಟ್ಟಲ್ಪಟ್ಟು ಮುಗಿದಿತ್ತು. ಬ್ರಿಟಿಷ್ ನಾವಿಕಾದಳಕ್ಕೆ ಇದರಿಂದ ವಿಶೇಷ ನಷ್ಟವುಂಟಾಗಿದೆ.

ಅಮೆರಿಕಾ ವಿಮಾನಗಳು ದಾಳಿಗಾರಂಭಿಸಿದವು:—

ಅಮೆರಿಕಾ ವಿಮಾನಗಳು ಜಪಾನು ದೇಶದ ಟೋಕಿಯೋ ಮುಂತಾದ ನಗರಗಳ ಮೇಲೆ ಬಾಂಬುಗಳನ್ನು ಸುರಿಸಿರುತ್ತವೆ. ಚಾಂಘಾಯಿ ಹಾಂಕಾಗನ ಅಂತರಾಷ್ಟ್ರೀಯ ಪ್ರದೇಶವನ್ನು ತಾವು ಸಂಪೂರ್ಣವಾಗಿ ವಶಪಡಿಸಿಕೊಂಡಿರುವೆವೆಂದು ಜಪಾನು ಹೇಳುತ್ತಾ ಇದೆ.

ಬಳ್ಳಾರಿ.

ಹಿಂದೂಸ್ತಾನದ ಸ್ಕೌಟ್ ಸಂಘ.

ಜಿಲ್ಲಾ ಸ್ಕೌಟರುಗಳ ಸಭೆಯು ಮುಲ್ಲ ನಜ್ಜನ ವ್ಯಾಯಾಮ ಶಾಲೆಯ ಆವರಣದಲ್ಲಿ ಶ್ರೀ ನಾಗನಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಡಿ. ವೇಣುಗೋಪಾಲಾಚಾರ್ಯರು ಸ್ವಾಗತ ನಿರ್ಮಿಸಿದ ಮೇಲೆ ಡಾಕ್ಟರ್ ಗೌಡರು ಸ್ಕೌಟ ಚಳವಳಿಯ ಸುಹತ್ತನ್ನು ತಮ್ಮ ಭಾಷಣದಲ್ಲಿ ತಿಳಿಸಿದರು. ಶ್ರೀ ಬಿ. ಅನಂತಾಚಾರ್ಯರೂ ಸಹಾ ಮಾತನಾಡಿದರು. ಮತ್ತೆ ಕೆಲವು ಮುಖ್ಯ ಕಾರ್ಯಕ್ರಮಗಳನಂತರ ಸಭೆಯು ಮುಗಿಯಿತು.

ಯಮ್ಮಿಗನೂರು (ಆದವಾನಿ)

ಆರೋಗ್ಯ ಮತ್ತು ಶಿಶು ಸಪ್ತಾಹವು 8 ನೆಯ ತಾ. ನಿಂದ 13 ರರ ವರೆವಿಗೆ ಉತ್ಸಾಹಪೂರ್ವಕವಾಗಿ ನಡೆಯಿತು.

11ನೆಯ ತಾ. ಡಾ. ನಾಗನಗೌಡ ಮತ್ತು ಶ್ರೀಮತಿ ನಾಗನಗೌಡರು ಬಹುಮಾನಗಳನ್ನು ಪಂಚುವ ಕಾರ್ಯಕ್ರಮವು ನಿಶ್ಚಿತವಾಗಿತ್ತು.

THE NAVA BHARAT

ಶನಿವಾರ ತಾ॥ 13-12-41.

ಬಳ್ಳಾರಿ ಜಿಲ್ಲೆಯಲ್ಲಿ ಕ್ಷಾಮ ನಿವಾರಣೆಯ ಕಾರ್ಯ.

ಜಿಲ್ಲಾ ಬೋರ್ಡಿನವರು ಸದ್ಯಕ್ಕೆ 5೫ ಸಾವಿರ ರೂ. ಕಾರ್ಯ ಕೈಗೊಂಡಿರುವರು.

ನಾವು ಈ ಹಿಂದೆ ಸೂಚಿಸಿದಪ್ರಕಾರ ಆದವಾನಿ ತಾಲೂಕಿನಲ್ಲಿ ಉಗ್ರವಾಗಿಯೂ, ಸಿರುಗುಪ್ಪ ತಾಲೂಕಿನಲ್ಲಿ ಅದಕ್ಕೆ ಎರಡನೆಯದಾಗಿಯೂ ಕ್ಷಾಮದ ಬಾಧೆ ಇರುವುದೆಂದು ಸರಕಾರದ ಅಭಿಪ್ರಾಯವು ವ್ಯಕ್ತಪಟ್ಟಿದೆ. ಕೆಲದಿನಗಳ ಕೆಳಗೆ ರೆವಿನ್ಯೂ ಬೋರ್ಡು ಮೆಂಬರಾದ ಶ್ರೀಯುತ ಸಾಹೇಬರವರು ಬಂದಾಗ ಅವರೂ-ಮತ್ತು ಕಲೆಕ್ಟರವರೂ ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ತಿಳುಹಿಸಿ ರಸ್ತೆಯ ಕಾರ್ಯಗಳನ್ನು ಪ್ರಾರಂಭಿಸಬಹುದೆಂದು ಸೂಚಿಸಿದರು. ಜಿಲ್ಲಾ ಬೋರ್ಡಿನ ಆರ್ಥಿಕಸ್ಥಿತಿಯು ಬಹಳ ಅಶಕ್ತಿಕರವಿರುವದರಿಂದ ಸರಕಾರಹಣದ ಸಹಾಯವು ಆಗತ್ಯವೆಂದು ಜಿ. ಬೋ. ಅಧ್ಯಕ್ಷರು ಕೋರಿದರು. ಹಣದ ಸಹಾಯಕ್ಕೆ ಸರಕಾರದ ಸದಸ್ಯರಿಂದ ತಕ್ಕ ಭರವಸೆಯು ದೊರೆತಂತೆ ಕಾಣುತ್ತದೆ

ಈಗ ಕಲೆಕ್ಟರವರ ಒಪ್ಪಿಗೆಯಿಂದ ಆದವಾನಿ ತಾಲೂಕಿನ ಕ್ಷಾಮದರ್ಶಕ ಗಳಾದ ನಂದವರ, ನಾಗಲದಿನ್ನೆ ಮತ್ತು ಕಂಬಳದಿನ್ನೆ, ನೂಲಸಲ್ಲಿ ರಸ್ತೆಗಳ ರಿಪೇರಿಗಾಗಿ ಸುಮಾರು 28 ಸಾವಿರ ರೂ. ಗಳು ಕಲುಗೊಟ್ಟದಿಂದ ದೈವಂದಿನ್ನೆ ಮಾರ್ಗವಾಗಿ ಕರ್ನೂಲು ಸರಹದ್ದಿನವರೆಗೆ ಹೊಸ ರಸ್ತೆಯನ್ನು ಹಾಕಿಸಲು ಸುಮಾರು 22 ಸಾವಿರ ರೂ. ಗಳನ್ನು ಜಿಲ್ಲಾ ಬೋರ್ಡಿನವರು ಸರಕಾರದವರು ಕೊಡುವ ದ್ರವ್ಯಸಹಾಯದಿಂದ ನೆರವೇರಿಸಲಿದ್ದಾರೆ. ಈ ಕಾರ್ಯಗಳಿಗಾಗಿ ಜಿಲ್ಲಾ ಬೋರ್ಡಿನವರು 30 ಓವರ್ಸಿಯರ್ಸ್ ನಿಯಮಿಸಿ ನಿರ್ದೇಶಕರ 20 ರ ವಳಗಾಗಿ ಕಾರ್ಯಾರಂಭಮಾಡಲಿರುವರೆಂದು ಗೊತ್ತಾಗಿದೆ. ಇದು ಸಂತೋಷದ ವಿಷಯ.

ಆದವಾನಿ ತಾಲೂಕಿನವರು ಹೂಡಿದ ಚಳುವಳಿಯಿಂದ, ಅಲ್ಲಿದ್ದ ಕಷ್ಟಗಳನ್ನು ಸ್ವತಃ ಅಧಿಕಾರಿಗಳು ಪರಿಶೀಲಿಸಿದಕಾರಣ ಅಲ್ಲಿ ಕ್ಷಾಮನಿವಾರಣಾಕಾರ್ಯವು ಶೀಘ್ರವಾಗಿ ಪ್ರಾರಂಭವಾಗಲವಕಾಶವಾಯಿತು. ಜಿಲ್ಲೆಯ ಇನ್ನು ಕೆಲಭಾಗಗಳಲ್ಲಿ ಆರ್ಥಿಕಸಂಕಷ್ಟವು ಹೆಚ್ಚಿದ್ದರೂ ಜನರು ಗಲಾಟೆಯಿಲ್ಲದೆ ಸಹಿಸುತ್ತಿ, ಕೆಲವೆಡೆಗಳಲ್ಲಿ ಊರುಬಿಟ್ಟು ಹೋಗುತ್ತಿರುವರು. ಜಿಲ್ಲೆಯ ಪರಿಸ್ಥಿತಿಯನ್ನೆಲ್ಲಾ ಸರ್ವಸಮತ್ವದೃಷ್ಟಿಯಿಂದ ವಿಚಾರಿಸಿ ಯಾವ ಯಾವ ಭಾಗಗಳಲ್ಲಿ ಎಂಥಾ ನಿವಾರಣಾಕಾರ್ಯವು ಬೇಕೆಂಬುದನ್ನು ಕಲೆಕ್ಟರವರೂ ಬೋರ್ಡ ಅಧ್ಯಕ್ಷರೂ ನಿರ್ಣಯಿಸಿದ್ದರೆ ಒಳ್ಳೆಯದಿತ್ತು. ಅಗತ್ಯವಿತ್ತು. ಈಗಲಾದರೂ ಹಾಗೆಮಾಡಬೇಕೆಂದು ನಾವು ಸೂಚಿಸುತ್ತೇವೆ.

ಸಿರುಗುಪ್ಪೆ ತಾ. ಹಚ್ಚೊಳ್ಳಿ ಭಾಗದ ರೈತರು ಮಹಜರು ತಾರುಗಳಿಂದ ಸರಕಾರಕ್ಕೆ ತನ್ನು ನಿಜಪರಿಸ್ಥಿತಿಯನ್ನರುಹಿದಮೇಲೆ ರೆವಿನ್ಯೂ ಬೋರ್ಡಿನವರು ವಿಚಾರಿಸಿದನಂತರ ಕಲೆಕ್ಟರವರು ರಾವಿಹಾಳು, ಹಚ್ಚೊಳ್ಳಿ ರಸ್ತೆಯ ನಿರ್ಮಾಣದ ಸಲಹೆಯನ್ನು ಜಿಲ್ಲಾಬೋರ್ಡು ಅಧ್ಯಕ್ಷರಿಗೆ ಸೂಚಿಸಿದರೆಂದೂ ಅವರು ಹಚ್ಚೊಳ್ಳಿ ಕಪ್ಪುತಾಳದರಸ್ತೆಯ ರಿಪೇರಿ ಮಾಡುವುದಗತ್ಯವೆಂದೂ ಸೂಚಿಸಿರುವಂತೆ ಗೊತ್ತಾಗಿದೆ ದಶಬಾಧಂ ಕೆರೆಯ ರಿಪೇರಿಯು ಶೀಘ್ರದಲೇ ತಗೆದುಕೊಳ್ಳಲ್ಪಡುವುದೆಂದು ಭರವಸೆ ಕೊಡಲಾಗಿದೆ. ಈಕಾರ್ಯಗಳನ್ನೆಲ್ಲಾ ಸರಕಾರದವರು ತ್ವರಿತವಾಗಿ ಮಾಡಿಸಬೇಕು. ಇದಕ್ಕೆಲ್ಲಾ ಜನಾಭಿಪ್ರಾಯವೂ ಪುಷ್ಟಿಯಾದ ಬೇಡಿಕೆಯೂ ಆಗಾಗ್ಗೆ ಬೇಕು.

ಯುದ್ಧದ ಕ್ಷೇತ್ರವಿಸ್ತಾರ.

ಆಹಾರಧಾನ್ಯಗಳ ಧಾರಣೆ ನಿಯಂತ್ರಣವು ಬೇಕು.

ಜಪಾನುಸರಕಾರವು ಬ್ರಿಟನ್ ಮತ್ತು ಅಮೆರಿಕಾಗಳಮೇಲೆ ಯುದ್ಧ ಸಾರಿ ಪೆಸಿಫಿಕ್ ದ್ವೀಪಗಳಮೇಲೆ ಭಯಂಕರ ವಿಮಾನ ದಾಳಿಯನ್ನಾರಂಭಿಸಿದೆ. ಏರ್ಮಾದ ಮಗ್ಗುಲ ದೇಶವಾದ ಸಯಾಮುವ (ತಾಯಲೆಂಡ) ಜಪಾನಿಗೆ ಅಹುತಿಯಾಯಿತು ಭೂಮಂಡಲದ ಬಲವತ್ತಾದ ರಾಷ್ಟ್ರಗಳ ಮಹತ್ವಾಕಾಂಕ್ಷೆಯು ಶಿಖರವನ್ನು ಮುಟ್ಟಿದೆ. ಶಾಂತಿಯಿಂದಿದ್ದ ಅಮೆರಿಕಾ ಮತ್ತು ಇತರ ಸಣ್ಣಪುಟ್ಟ ರಾಷ್ಟ್ರಗಳೆಲ್ಲಾ ರಣಾಂಗಕ್ಕೆ ಬಂದು ನಿಂತು ರಣಕಹಳೆಯನ್ನು ಊದುತ್ತಲಿವೆ. ಯುದ್ಧದಿಂದ ಸಂಭವಿಸುವ ಪರಿವರ್ತನೆಯನ್ನು ಊಹಿಸುವುದೂ ಕಷ್ಟವಾಗಿದೆ. ಹಿಂದೂಸ್ಥಾನದಲ್ಲಿ ಆಹಾರಧಾನ್ಯಗಳ ಬೆಲೆಯು ಮಳೆಯಿಲ್ಲದ ಕಾರಣ ಹೆಚ್ಚುವುದು ನ್ಯಾಯವಾಗಿದ್ದರೂ ವರ್ತಕರ ಅಪರಿಮಿತ ಲಾಭದ ದುರಾಶೆಯಿಂದ ಬಡವರಿಗೆ ಅಗತ್ಯವಾದ ಧಾನ್ಯಗಳ ಬೆಲೆಯು ಮಿತಿಯಿಲ್ಲದೆ ಏರುತ್ತಲಿದೆ. ಕಾಗದ ಕಬ್ಬಿಣ ಔಷಧಗಳು 1 ಕ್ಕೆ 8 ರಷ್ಟು ಹೆಚ್ಚಿವೆ. ಅವು ಇಲ್ಲದಿದ್ದರೆ ಜನಜೀವನವು ಸಾಗುವುದು. ಆದರೆ ಅಕ್ಕಿ, ಬೇಳೆ, ಉಪ್ಪು, ಜೋಳ, ನವಣೆ, ಸಜ್ಜೆ ಇಲ್ಲದಿದ್ದರೆ ಜೀವನನಡೆಯುವುದು ಕಷ್ಟ. 10 ಸೇರು ಜೋಳ 12 ಸೇರು ನವಣೆ ಯಾದರೆ ಬಡವರು ಬದುಕುವದೆಂತು? ರೈತನಿಗೆ ಒಳ್ಳೆಯ ಧಾರಣೆಯು ಬಂದಿತಲ್ಲಾಎಂದು ಸಂತೋಷಿಸುವ ಕಾಲವಲ್ಲ ಇದು ಬಹಳಮೊದ್ದ ರೈತರಲ್ಲಿ ಜಮೀಂದಾರರಲ್ಲಿ ಸಾಹುಕಾರರಲ್ಲಿ ಧಾನ್ಯದ ಸಂಗ್ರಹವು ಇದೆ. ಧಾರಣೆ ಹೆಚ್ಚಲಕ್ಕೆ ಅವರೇ ಕಾರಣರು. ಯುದ್ಧವು ಸನ್ನಿಹಿತವಿದಂತೆ ಅವಾಯವು ಹೆಚ್ಚುದಂಕೆ ಧಾನ್ಯಗಳಬೆಲೆಯ ಏರಾಟವೂ ನಡೆದಿದೆ. ಸರಕಾರದವರು ಈ ಏರಿಕೆಯನ್ನು ನಿರ್ಬಂಧಿಸಿ ಧಾನ್ಯಗಳ ಬೆಲೆಯನ್ನು ನಿಗದಿಮಾಡಬೇಕು. ಕಲೆಕ್ಟರವರು ತಮಗೆ ಹೊರೆತಿರುವ ಅಧಿಕಾರವನ್ನು ಉಪಯೋಗಿಸುವರೆಂದು ನಂಬಲಾಗಿದೆ.

ಕೋಟಬಾರು ಜಪಾನರ ವಶವಾಯ್ತು.

ಉತ್ತರ ಮಲಯ ದ್ವೀಪದಲ್ಲಿರುವ ಕೋಟಬಾರು ಎಂಬನಗರದ ವಿಮಾನ ಕೇಂದ್ರವನ್ನು ತಾವು ವಶಪಡಿಸಿಕೊಂಡಿರುವುದಾಗಿ ಜಪಾನರು ಹೇಳುತ್ತಾರೆ.

ಮಕ್ಕಳಿಲ್ಲದವರಿಗೆ.

ಧರ್ಮಾರ್ಥ—ಔಷಧ

ಮುಟ್ಟಾದ ಕಾಲದಲ್ಲಿ ಇದನ್ನು ಸೇವಿಸುವುದರಿಂದ ಸ್ತ್ರೀಯರ ಗರ್ಭಸಂಬಂಧ ದೋಷಗಳು ನಿವಾರಣೆಯಾಗಿ ಗರ್ಭಧಾರಣೆಯಾಗುವದರಲ್ಲಿ ಸಂಶಯವಿಲ್ಲ. ಇದನ್ನು ಟಪಾಲು ದ್ವಾರ ಕಳುಹಿಸುವುದಿಲ್ಲ. ಬೇಕಿದ್ದವರು ಸಮಕ್ಷಮ ಬಂದು ತೆಗೆದುಕೊಂಡು ಹೋಗಬಹುದು.

ಜೆ. ಯಂ. ನೀಲಕಂಠಶಾಸ್ತ್ರಿ ಗುರುವಾದ ದೇವರಮಠ ಹರಪನಹಳ್ಳಿ.

98

ಅನಂತಪುರ ಜಿಲ್ಲಾ ತಾಡಪತ್ರಿಯಲ್ಲಿ ನಡೆಯುವ
ರಾಯಲಸೀಮಾ ಮಹಾಸಭೆ

ಕಾರ್ಯಕ್ರಮ

ಮೂರನೆಯ ರಾಯಲ ಸೀಮೆ ಮಹಾ ಸಭೆಯು ಅನಂತಪುರದ ಜಿಲ್ಲಾ ತಾಡಿ ಪತ್ರಿಯಲ್ಲಿ 1942 ನೆಯ ಜನವರಿ 13-14 ನೆಯ ತಾ. ಗಳಲ್ಲಿ ನಡೆಯಲಿದೆ.

ಮಹಾಸಭೆಯ ಅಧ್ಯಕ್ಷರು : —
ಶ್ರೀ ಬಿ. ವಿ. ಶೇಷರೆಡ್ಡಿ.

ಪ್ರಾರಂಭೋತ್ಸವ ನಡೆಸುವವರು:—
ಶ್ರೀ ಶೀತಾರಾಮರೆಡ್ಡಿ. ಎಂ. ಎಲ್. ಎ.

ವಕೀಲರ ಸಭೆ ಅಧ್ಯಕ್ಷರು : —
ಶ್ರೀ ವಿ. ಯಸ್. ನರಸಿಂಹಾಚಾರ್.

ಕವಿಗೋಷ್ಠಿ :—
ಶ್ರೀ ಜನಮಂಚಿ ಶೇಷಾದ್ರಿಶರ್ಮ.

ಸ್ವಾಗತಸಮಿತಿ ಅಧ್ಯಕ್ಷರು:—
ಶ್ರೀ ಮೂಲಾಲಕ್ಷ್ಮೀನಾರಾಯಣಸ್ವಾಮಿ

ರಾಯಲ ಸೀಮ ವಾಸಿಗಳಾದ ಆಂಧ್ರ, ಕರ್ನಾಟಕ ಕವಿಗಳಲ್ಲಿ ಶ್ರೇಷ್ಠರೆಂದು ಗಣಿಸಲ್ಪಡುವ ಮೂವರಿಗೆ ಬಹುಮಾನಗಳನ್ನು ಕೊಡಲಾಗುವುದು. ಬಳ್ಳಾರಿ, ಕರ್ನೂಲು, ಕಡಪ, ಚಿತ್ತೂರು ಅನಂತಪುರಜಿಲ್ಲೆಗಳ ಸರ್ವರೂ ಈ ಸಭೆಗೆ ಆಗಮಿಸಿ ಇದನ್ನು ಯಶಸ್ವಿಯಾಗಿ ಮಾಡಿ ಹಿಂದುಳಿದ ಈ ಜಿಲ್ಲೆಗಳ ಆರ್ಥಿಕ ಅಭಿವೃದ್ಧಿಗೆ ಸಹಕಾರ ಒದಗಿಸಲು ಕೋರಿಕೆ.

ಹೆಚ್. ಲಿಂಗಾರೆಡ್ಡಿ
ಕಾರ್ಯದರ್ಶಿ. ರಾಯಲಸೀಮ ಮಹಾಸಭೆ ಬಳ್ಳಾರಿ. 14-12-1941

ಆಲೂರು

ಹರಿಜನ ವಿದ್ಯಾರ್ಥಿನಿಲಯದ ಅಷ್ಟನು ವಾರ್ಷಿಕೋತ್ಸವವು ಜಿಲ್ಲಾ ಕಲೆಕ್ಟರ್ ಸ್ಪೇಸರ್ ಸಾಹೇಬರವರ ಅಧ್ಯಕ್ಷತೆಯಲ್ಲಿ 12ನೆಯ ತಾ. ಸಾಯಂಕಾಲ ನಡೆಯಿತು. ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಶ್ರೀಮತಿ ಫ್ರೇಜರ್‌ರವರು ಪುಸ್ತಕರೂಪವಾದ ಬಹುಮಾನಗಳನ್ನು ಕೊಟ್ಟರು.

ಹಾಸ್ಟೆಲ್ ಅಧ್ಯಕ್ಷರಾದ ಶ್ರೀ ಡಿ. ನೇಣುಗೋಪಾಲಾಚಾರಿಯವರು ವಾರ್ಷಿಕವರದಿಯನ್ನೋದಿ ಲೆಕ್ಕಗಳನ್ನು ಪರಿಸಿದರು. ಶ್ರೀ ಶೀತಾರಾಮರೆಡ್ಡಿಯವರು ಈ 8 ವರ್ಷಗಳ ಪ್ರಗತಿಯನ್ನು ವಿವರಿಸಿ ಹಾಸ್ಟೆಲ್‌ಗೆ ಸರಕಾರದಿಂದ ಹೆಚ್ಚಿನ ಗ್ರಾಂಟುಬೇಕೆಂದರು. ಸಾರ್ವಜನಿಕ ಸಹಾಯವು ಹೆಚ್ಚು ಹೆಚ್ಚಾಗಿ ಬರಬೇಕೆಂದೂ ಸರಕಾರದ ದ್ರವ್ಯ ಸಹಾಯದಮೇಲೆಯೇ ಅವಲಂಬಿಸಿರುವುದು ಒಳ್ಳೆಯದಲ್ಲವೆಂದೂ ಹಿಂದುಗಳು ತಮ್ಮ ದೃಷ್ಟಿಕೋಣವನ್ನು ಒದಲಾಯಿಸಿ ಹರಿಜನರನ್ನು ಹತ್ತರ ಕರೆದುಕೊಳ್ಳಬೇಕೆಂದೂ ತಾವು ಸಾಧ್ಯವಾದಷ್ಟು ಸಹಾಯಮಾಡುವರೆಂದೂ ಕಲೆಕ್ಟರ್‌ರವರು ತಮ್ಮ ಅಂತ್ಯ ಭಾಷಣದಲ್ಲಿ ತಿಳಿಸಿದರು. ಶ್ರೀ ಟೇಕೂರು ಕೃಷ್ಣಮೂರ್ತಿಯವರು ವಂದನಾರ್ಪಣೆ ಮಾಡಿದರು.

ಹಿಂದೂಸ್ತಾನ

ಬಂಗಾಳದಲ್ಲಿ ಗವರ್ನರರ ಇಚ್ಛೆಯ ಪ್ರಕಾರ ಫಜಲುಲ ಹಕ್‌ರವರು ಮಂತ್ರಿ ಮಂಡಲವನ್ನು ನಿರ್ಮಿಸಿದ್ದಾರೆ. ನಜ್ಮುದ್ದೀನ್ ಅದರಲ್ಲಿ ಡಾ. ಶಾಮಪ್ರಸಾದ ಮುಖರ್ಜಿ ಮತ್ತು ನವಾಬ್ ಷಕ್ಕತ್ ಇರುವರು. ಮಂತ್ರಿ ಮಂಡಲದಲ್ಲಿ 10 ಜನರಿರುವರೆಂದು ನಂಬಲಾಗಿದೆ.

ಅಖಿಲಭಾರತ ಮುಸ್ಲಿಂಲೀಗಿನ ಅಧ್ಯಕ್ಷರಾದ ಜಿನ್ನಾರವರು ಫಜಲುಲ್ ಹಕ್‌ರವರನ್ನು ಲೀಗಿನಿಂದ ಹೊರಗೆಹಾಕಿದ್ದಾರೆ. ಮಿಶ್ರಮಂಡಲವನ್ನು ರಚಿಸಿದುದು ಅಪರಾಧವಂತೆ.

ಶರಚಂದ್ರ ಬೋಸರಿಗೂ ಜಪಾನಿಗೂ ಸಂಬಂಧವಿದೆಯೆಂಬ ಕಾರಣದಿಂದ ಇಂಡಿಯಾಸರಕಾರದವರು ಅವರನ್ನು ಕಲ್ಕತ್ತೆಯಲ್ಲಿ ಬಂಧನದಲ್ಲಿರಿಸಿರುವರು. ಮದ್ರಾಸ್ ಪ್ರಾಂತ್ಯದಲ್ಲಿ ಇರುವ 500 ರಾಜಕೀಯ ಕೈದಿಗಳಲ್ಲಿ ಅರ್ಧದಷ್ಟು ಜನರನ್ನು ಮಾತ್ರ ಬಿಡುಗಡೆಮಾಡಲಿರುವರೆಂದು ಸೊತ್ತಾಗಿದೆ.

ಜಪಾನಿನ ದಾಳಿ

ಪೆಸಿಫಿಕ್ ಸಾಗರದ ಗಾಮೂ ದ್ವೀಪದ ರಾಜಧಾನಿಯನ್ನು ಜಪಾನಿನವರು ಆಕ್ರಮಿಸಿಕೊಂಡಿರುವರೆ.

ಮಲಯಾ ದ್ವೀಪಕ್ಕೆ ಹೊಸದಾಗಿ ಸೈನ್ಯಗಳೂ ಟ್ಯಾಂಕುಗಳೂ ತರಲ್ಪಡುತ್ತಿರುವವೆಂದು ಸುದ್ದಿ ಬಂದಿದೆ.

ಹಾಂಕಾಂಗ್ ನಗರದ ಬ್ರಿಟಿಷ್ ಕ್ಷೇತ್ರವನ್ನು ಆಕ್ರಮಿಸಲು ಜಪಾನರು ವಿಶ್ವಪ್ರಯತ್ನ ಮಾಡುತ್ತಿರುವರು.

ರಷ್ಯಾ ಜರ್ಮನಿ ಯುದ್ಧ.

ರಷ್ಯಾದಲ್ಲಿಅಗಾಧ ಹಿಮವು ಬೀಳುತ್ತಿರುವುದರಿಂದ ಜರ್ಮನರ ಎಲ್ಲಾ ಕಡೆಗಳಲ್ಲೂ ತಮ್ಮ ಸೈನ್ಯಗಳನ್ನು ಹಿಂದೆಗೆದುಕೊಳ್ಳುತ್ತಿರುವರೆಂದು ಹೇಳಲಾಗಿದೆ. ಜರ್ಮನ್ ರೇಡಿಯೋವು ರಷಿಯಾದಲ್ಲಿ ಛಳಿ ಹೆಚ್ಚಿದಕಾರಣ ಯುದ್ಧವು ತಟಸ್ಥ ತವಾಗಿರಬೇಕೆಂದು ಹೇಳಿದೆ. ರಷ್ಯದಲ್ಲಿ ಛಳಿಗಾಲವು ಪ್ರಾರಂಭವಾಗಿಲ್ಲವೆಂದೆ ರಷ್ಯನರು ಹೇಳುತ್ತಿರುವರು.

ಜಪಾನರ ಹಡಗು ಮುಳುಗಿತು.

29 ಸಾವಿರಟನ್ನಿನ 'ಹಾರುನ' ಎಂಬ ಜಪಾನರಹಡುಗು ಅಮೆರಿಕಾ ವಿಮಾನಗಳ ದಾಳಿಯಿಂದ ಉರಿದು ಹೋಯ್ತೆಂದು ಮನಿಲಾದಿಂದ ಬಂದ ರೇಡಿಯೋ ಸುದ್ದಿಯು ತಿಳಿಸುತ್ತದೆ.

10 ವರ್ಷದ ಯುದ್ಧಕ್ಕೆ ತಯಾರಿ.

ಜಪಾನಿನ ರಾಜಧಾನಿಯಾದ ಟೋಕಿಯೋದಲ್ಲಿ ಸರಕಾರಿ ಅಧಿಕಾರಿ ಯೊಬ್ಬನ ಹೇಳಿಕೆಯ ಪ್ರಕಾರ ಜಪಾನು ಪೆಸಿಫಿಕ್ ಮತ್ತು ಹಿಂದೂ ಸಾಗರದ ಒಡೆತನಕ್ಕಾಗಿ 10 ವರ್ಷವಾದರೂ ಯುದ್ಧ ಮಾಡುವದಂತೆ.

ನಾವಿಕಾಧಿಪತಿಯು ಸತ್ತನು.

ಜಪಾನರು ಪರ್ಲ್‌ಬಂದರನ್ನೇಲೆ ದಾಳಿ ಮಾಡುತ್ತಿದ್ದಕಾಲಕ್ಕೆ ರೀರ್‌ಅಡ್ಮಿರಲ್ ಇಸಾಕ ಕ್ಯಾಂಬೆಲಕಿಡ್ ಎಂಬವರು ಸತ್ತರು.

ಜರ್ಮನಿ- ಇಟಲಿ ಅಮೆರಿಕಾ ವಿರುದ್ಧ.

ಜರ್ಮನಿ - ಇಟಲೀಗಳು ಅಮೆರಿಕಾದ ಮೇಲೆ ಯುದ್ಧಸಾರಿದವು. ತಮ್ಮ ಚರ್ಯೆಯನ್ನು ಸಮರ್ಥಿಸಿ ಹಿಟ್ಲರ್ ಮುಸೋಲಿನಿಯವರು ಭಾಷಣಕೊಟ್ಟರು.

ಕೆನಡಾದೇಶದ ಪಶ್ಚಿಮದಲ್ಲಿರುವ ಅಲಾಸ್ಕ ಪ್ರಾಂತ್ಯದೀಚೆ ಇರುವ ಅಲ್ಯೂಷಿಯ ದ್ವೀಪದ ಬಳಿಗೆ ಜಪಾನ್ ಸೈನಿಕರು ಬಂದಿದ್ದಾರೆಂದೂ, ಬ್ರಿಟಿಷ್ ಕೊಲಂಬಿಯದಲ್ಲಿರುವ ವಿಕ್ಟೋರಿಯಕ್ಕೆ ಯಾವಕ್ಷಣದಲ್ಲಿ ಬೇಕಾದರೂ ಬರಬಹುದೆಂಬ ಭೀತಿಇದೆಯೆಂದೂ ವಿಕ್ಟೋರಿಯ ನಗರದ ನೌಕರಸಭಾಧ್ಯಕ್ಷರು ಹೇಳಿಕೆ ಇತ್ತಿದ್ದಾರೆ. ಪರಿಸ್ಥಿತಿ ಉಗ್ರವಾಗಿದೆಯೆಂದು ಅವರು ತಿಳಿಸಿದ್ದಾರೆ.

99

ಹರಪನಹಳ್ಳಿ ಪಂಚಾಯತಿ ಬೋರ್ಡು.

ಗಳಿಗೊಂದು ರಲ್ಲಿ ನಡೆದ ಕಾರ್ಯ.

ರದ್ದಾಗುವ ಕಾಲಕ್ಕೆ ಇದ್ದ ಪರಿಸ್ಥಿತಿ.

16-12-1940 ರಿಂದ 15-12-41 ರವರಿಗೆ ಹರಪನಹಳ್ಳಿ ಪಂಚಾಯ್ತಿ ಬೋರ್ಡು ಸರಕಾರದವರ ವಶದಲ್ಲಿರಬೇಕೆಂದು ನಿಶ್ಚಯಿಸಲಾಯಿತು. ಮನೆ ತೆರಿಗೆಗಳ ಬಾಕಿಯು ರೂ. 7669 ಗಳಷ್ಟಿದ್ದಿತು. ವೃತ್ತಿಪರ ತೆರಿಗೆಯ ಬಾಕಿಯು 870 ರೂ. ಗಳಷ್ಟಿದ್ದಿತು. ಅಂದರೆ ಕೆಲ ಸಂದರ್ಭಗಳಲ್ಲಿ 4 ವರ್ಷಗಳ ಹಿಂದಿನ ಬಾಕಿಗಳು ವಸೂಲಾಗದಿದ್ದವು. ಪಂಚಾಯ್ತಿ ಬೋರ್ಡಿನವರು 40 ಸೆಟ್ರೊಮ್ಯಾಕ್ಸ್ ದೀಪ 30 ಸಾಧಾರಣ ದೀಪಗಳನ್ನು ನಿತ್ಯ ಹಚ್ಚಲು ವರ್ಷದ ಮನೆ ತೆರಿಗೆಗಳ ಉತ್ಪನ್ನಕ್ಕೆ ಸಮನಾದಷ್ಟು ಮೊತ್ತವನ್ನು ರೂ. 3500-0-0 ಖರ್ಚುಮಾಡುತಿದ್ದರು. ಮನೆ ತೆರಿಗೆಗಳಾದರೂ ವಿವೇಚನೆಯಿಲ್ಲದೆ. ಆದಾಯ, ಯಾ, ವಿಸ್ತಾರದಗಣನೆಯಿಲ್ಲದೆ ವಿಧಿಸಲಾಗಿದ್ದವು. ರಸ್ತೆಗಳು ಅತಿಸಂಕುಚಿತವೂ ಕಶ್ಮಲಯುಕ್ತವೂ ಇದ್ದು ಸಂಚಾರಕ್ಕೆ ಕಷ್ಟದಾಯಕವಿದ್ದಿತು. ತೆರಿಗೆಯ ವಿಧಿ, ವಸೂಲಿಯ ಕ್ರಮ, ಖರ್ಚಿನ ವಿವೇಚನೆಯಲ್ಲಿ ಲೋಪದೋಷಗಳಿದ್ದು ಅಶಾಂತಿಗೂ ಕಾರಣವಿತ್ತೆಂಬುದನ್ನು ಮರೆಯತಕ್ಕದ್ದಲ್ಲ.

ಈ ಪಂಚಾಯ್ತಿ ಬೋರ್ಡಿಗೆ ನಿಯುಕ್ತರಾದ ಸ್ಪೆಶಲ್ ಆಫೀಸರ್ ಶ್ರೀ ಎ. ಕೃಷ್ಣಮೂರ್ತಿರಾಯರು ಹೃತ್ಪೂರ್ವಕವಾಗಿ ಸೇವಾದೃಷ್ಟಿಯಿಂದ ಕೆಲಸ ಮಾಡಿದುದರ ಫಲವಾಗಿ ಹರಪನಹಳ್ಳಿಗೆ ಕಳೆಯು ಬಂದಿದೆ. ಹಿಂದಿನ ವರ್ಷಗಳ ಬಾಕಿಯೆಲ್ಲಾ ಸುಮಾರು 9 ಸಾವಿರ ರೂ. ವಸೂಲಾದ್ದಲ್ಲದೆ 1941-42 ನೆಯ ವರ್ಷದ ಬಾಕಿಯಲ್ಲಿ ಶೇಕಡ 20 ಭಾಗ ವಸೂಲಾಗಿದೆ. ದೀಪಗಳಿಗಾಗಿ ಖರ್ಚಾಗುತ್ತಿದ್ದ ಅಪರಿಮಿತ ಹಣವು ಲೋಕಲ್ ಬೋರ್ಡ್ ಇನ್ಸ್‌ಪೆಕ್ಟರವರ ಅಪ್ಪಣೆಯಿಂದ 1500 ರೂ. ಗಳಿಗೆ ಇಳಿಸಲ್ಪಟ್ಟು ಮುಖ್ಯ ಪ್ರದೇಶಗಳಿಗೆಲ್ಲಾ ಪ್ರಕಾಶದ ವ್ಯವಸ್ಥೆಯಾಗಿ 12 ಪೆಟ್ರೊಮ್ಯಾಕ್ಸ್ ಮತ್ತು 75 ಸಾಧಾರಣ ದೀಪಗಳು ಬೆಳಗುವಂತಾದವು.

ರಸ್ತೆಗಳು ಅಗಲವಾದವು, ಅಕ್ರಮ ಸಲ್ಪಟ್ಟ ಸ್ಥಳಗಳೆಲ್ಲಾ ಮಾಯವಾದವು. ಇನ್ನೂ ಮಾಯವಾಗುತ್ತಲಿವೆ. ಸ್ಪೆಶಲ್ ಆಫೀಸರವರು ನಗರದ ಹಿತವನ್ನು ದೃಷ್ಟಿಯಲ್ಲಿಟ್ಟು ಕೆಲಸಮಾಡುವರೆಂಬ ಭಾವನೆಯಿಂದ ಅವರ ಬೇಡಿಕೆಗೆ ಜನತೆಯು ಪುರಸ್ಕಾರಕೊಟ್ಟು ಬಹುಕಾಲದಿಂದ ಅಕ್ರಮಿಸಲ್ಪಟ್ಟ ಸ್ಥಳಗಳನ್ನು ತಾವೇ ಸಂತೋಷದಿಂದ ಬಿಟ್ಟುಕೊಟ್ಟದ್ದು ಪ್ರಶಂಸನೀಯವಾಗಿದೆ. ಹಿಂದೆ ಪಂಚಾಯ್ತಿ ಬೋರ್ಡಿನವರು ಸ್ಥಳವನ್ನಾಕ್ರಮಿಸಿದರೆ ಹಣಸಲ್ಲಿಸಬೇಕಾಗಿತ್ತು. ಆದರೆ ಈವರ್ಷ ರಸ್ತೆಗಳನ್ನು ಅಗಲಮಾಡಲು ಅಂಥಾ ವರಿಸ್ಥಿತಿಯೇ ಏರ್ಪಡಲಿಲ್ಲ. ಮಟ್ಟಿಕೇರಿ (ಡೂಸ್ಕೇಟಿ)ಯಲ್ಲಿ ಆದರ ಸ್ಕೆಯ ನಿರ್ಮಾಣಕ್ಕೆ ಅಲ್ಲಿನ ಜನರು ಸಹಾಯ ಮಾಡಿದ್ದನ್ನು ಮರೆಯತಕ್ಕದ್ದಲ್ಲ. ರಸ್ತೆಗಳಿಗೆ ಗ್ರಾವಲ್ ಹಾಕಿಸಲಾಗಿದೆ. ಭಾವಿಗಳ ಬಳಿ ಕಟ್ಟಡವು ಏರ್ಪಟ್ಟು ಚರಂಡಿನ್ಯವಸ್ಥೆಯಾಗಲಿದೆ. 3 ಹಿಂದೂ ಭಾವಿಗಳೂ 1 ಹರಿಜನರಿಗಾಗಿ ಇರುವ ಭಾವಿಗಳು ಸೇದುವ ಭಾವಿಗಳಾಗಿ ಮಾರ್ಪಡಲು ಏರ್ಪಾಟುಗಳಾಗಿ ಅಂದಾಜು ಪಟ್ಟಿಯಲ್ಲಿ ಖರ್ಚು ಬೇರ್ಪಡಿಸಲಾಗಿದೆ. ಟ್ರಾವಲರ್ಸ್ ಬಂಗಲೆಯ ಹತ್ತಿರ ಫೋಟಿಸ್ಟಾಟು ಕಟ್ಟಿಸುವ, ಮತ್ತು ಜನವಿಹಾರಕ್ಕಾಗಿ ತೋಟ ರೀತಿಯೋ ಯೋಜನೆಗಳಿಗಾಗಿ ನ್ಯವಸ್ಥೆಯು ಶೀಘ್ರದಲ್ಲೇ ಆಗಲಿದೆ. ರೀತಿಯೋಕ್ಕಾಗಿ 290-0-0 ರೂ. ಸಲ್ಲಿಸಲಾಗಿದೆ. ಸ್ಪೆಶಲ್ ಆಫೀಸರವರ ಬೇಡಿಕೆಯನ್ನು ಮನ್ನಿಸಿ ಪಬ್ಲಿಕ್ ವಾರ್ಕಿನಲ್ಲಿ ಆಸನಗಳಿಗಾಗಿ 25 ಕಲ್ಲಿನ ಬೆಂಚುಗಳನ್ನು ಸಾರ್ವಜನಿಕರೇ ಕೊಡುವವರಿದ್ದಾರೆ. ವೀಕ್ಲಿ ಮಾರ್ಕೆಟ್‌ಗಾಗಿ ರೂ. 1850-0-0 ಮಟನ್ ಸ್ಟಾಲ್‌ಗಾಗಿ ರೂ. 1880-0-0 ಜಿಲ್ಲಾ ಬೋರ್ಡು ಖಜಾನೆಗೆ ಕಟ್ಟಲಾಗಿದೆ. ಸದರೀ ಕಟ್ಟಡಗಳಿಗಾಗಿ ಸಾರ್ವಜನಿಕರ ಟೆಂಡರ್ಸ್ ಬೇಡಲಾಗಿದೆ. ಮೋಟಾರ್ ಬಸ್‌ಸ್ಟ್ಯಾಂಡು ಕಟ್ಟುವ ವ್ಯವಸ್ಥೆಗಾಗಿ ರೂ. 1250-0-0 ನ ಅಂದಾಜಾಪಟ್ಟಿಯು ತಯಾರಾಗುತ್ತಲಿದೆ. ಮಾರ್ಕೆಟರಸ್ತೆ ಕೊಟ್ಟೂರು ರಸ್ತೆಗಳಬಳಿ ಕಾಯಿಪಲ್ಲೆ ಮಾರುವ ಎರಡು ಮಾರ್ಕೆಟ್ ಕಟ್ಟಡಗಳಿಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕಾರ್ಯವು ಸಾಗಿದೆ. ಅಂಟು ಜಾಡ್ಯಗಳಾದ ಪ್ಲೇಗು, ನುಲ್ಲೇನಿಯಾಗಳನ್ನು ಕಡಿಯುವ ಪ್ರತಿಬಂಧಕೋಪಾಯಗಳಿಗಾಗಿ ಯೋಜನೆ. ಆಧುನಿಕ ರೀತಿಯ ರಬ್ಬಿಷ್ ಡಿಪೋಸ್ ಟ್ರೆಂಚಿಂಗ್ ಗ್ರಾವುಂಡ್ ಟೈಪ್ ಡಿಜಾಯ್ನ್ ಪಾಯಿಖಾನೆ ವಗೈರೆ ಕಾರ್ಯಕ್ಕೆ ಗಮನಕೊಡುತ್ತಿರಲಾಗಿದೆ. ಡಿಮ್ಯೂನಿಕ್ ಕ್ಷೇತ್ರವನ್ನು ನಿರ್ದಿಷ್ಟಗೊಳಿಸಲಾಗಿದೆ. ಮನೆ ಕಂದಾಯವನ್ನು ಸರಿಯಾದ ರೀತಿಯಲ್ಲಿ ಸರ್ವೆ ಸಮುದೃಷ್ಟಿಯಿಂದ ವಿಧಿಸಲು ಏರ್ಪಾಟು ನಡೆದಿದೆ. ಹರಪನಹಳ್ಳಿ ನಗರದ ಸರ್ವೆ ಕಾರ್ಯಕ್ಕಾಗಿ ಪಂಚಾಯ್ತಿ ಬೋರ್ಡಿನವರು 1/3 ಭಾಗದ ಹಣವನ್ನು ಅಂದರೆ 1600-0-0 ರೂ. ಸಲ್ಲಿಸಲು ನಿಶ್ಚಯಿಸಿದ್ದಾರೆ.

ಅಧಿಕಾರಿಗಳು ಸಂಬಳಕ್ಕಾಗಿಯೇ ದುಡಿಯುವವರಾಗಿದ್ದರೆ ಸರಕಾರದ ಅಗಾಧ ಯಂತ್ರದ ಅನಾಮಧೇಯ ಭಾಗವೊಂದಾಗಿ ಜನರಿಗೆ ದೂರವಿರುತ್ತಿದ್ದರು. ಸರ್ಕಾರದವರು ದಯಪಾಲಿಸಿದ ಅಧಿಕಾರವ ಜೊತೆಗೆ – ಹೃದಯ ಕಾರ್ಯದಕ್ಷತೆ ಸೇವಾ ಬುದ್ಧಿಯೊಂದಿದ್ದರೆ ಗ್ರಾಮೋದ್ಧಾರಕಾರ್ಯವೆಷ್ಟೋ ಸಾಗಬಹುದೆಂಬುದು ಹರಪನಹಳ್ಳಿಯ ಉದಾಹರಣೆಯಿಂದ ಸ್ಪಷ್ಟವಾಗಿದೆ. ಈ ದೃಷ್ಟಿಯಿಂದ ನಮ್ಮ ವೂರಿಗೆ ಬಂದ ಸ್ಪೆಶಲ ಆಫೀಸರ್ ಶ್ರೀ ಎ. ಕೃಷ್ಣಮೂರ್ತಿರಾಯರನ್ನು (ಪಂಚಾಯ್ತಿ ಬೋರ್ಡು ತಾತ್ಕಾಲಿಕವಾಗಿ ರದ್ದಾಗಿ–ಜನರ ಪ್ರತಿನಿಧಿಗಳಿಂದ ತಪ್ಪಿಸಲ್ಪಟ್ಟು ವಿಷಾದ ಘಟನೆಯನ್ನು ಮರೆತು)ಅಭಿನಂದಿಸುತ್ತೇವೆ.

ಪ್ರತ್ಯಕ್ಷದರ್ಶಿ, ಹರಪನಹಳ್ಳಿ.

ಬಳ್ಳಾರಿ ಸತ್ಯಾಗ್ರಹಿಗಳ ಬಿಡುಗಡೆ.

ಕೊಟ್ಟೂರು ಭಾಗದ ಶ್ರೀ ರಾಮಶೆಟ್ಟಿ ಸಿರಿಗೇರಿ, ಸಿದ್ದಲಿಂಗಪ್ಪ ಸಣ್ಣವೀರಯ್ಯ ಅಡವಿಗೌಡ ಇವರು ಸತ್ಯಾಗ್ರಹವಾಚರಿಸಿ ಒಂದು ವರ್ಷದ ಶಿಕ್ಷೆಗೆ ಗುರಿಯಾಗಿದ್ದರು. ಸರಕಾರದ ಈಚಿನ ಅಜ್ಞೆಯಂತೆ ಇವರನ್ನು ಪೂನಾದ ಯರವಾಡ ಜೈಲಿನಿಂದಲೂ ಬಳ್ಳಾರಿ ಅಡ್ವೊಕೇಟರಾದ ಶ್ರೀ ವೀರಾಸ್ವಾಮಿಯವರನ್ನು ಬೆಳಗಾಂ ಹಿಂಡಲ್ಗಿ ಜೈಲಿನಿಂದಲೂ ಈ ವಾರ ಬಿಡುಗಡೆ ಮಾಡಲಾಗಿದೆ.

100

ಜೀವದಗುಟ್ಟು

(ಶ್ರೀ ಬಿ. ಮಾಧವಾಚಾರ್)

ಇಂದು ಯುದ್ಧಾನಕ್ತ ರಾಷ್ಟ್ರಗಳಲ್ಲಿ ಸಾವಿರಾರು ಜೀವರಾಶಿಗಳು ದಿನದಿನವೂ ನಾಶವಾಗುತ್ತಿರುವುದನ್ನು ಎಲ್ಲರೂ ಕೇಳಿದ್ದೇವೆ. ಇನುನರೆಗೂ ಜೀವದ ವಿಚಾರದಲ್ಲಿ ಯಾವುದೋ ದೈವಿಕ ಮಧ್ಯಸ್ತಿಕೆಯಿರಬೇಕೆಂದು ನಂಬಿಕೊಂಡಿದ್ದ ಭಾವನೆಯು ದೂರವಾಗುತ್ತಿದೆ. ಕೇವಲ ಅಂಧ ಶ್ರದ್ಧೆ ಮತ್ತು ಮೂಢನಂಬಿಕೆಗೆ ಶರಣು ಹೊಡೆದು ಪೂರ್ವಾಚಾರಗಳಿಸಿಕೊಂಡ ಕೆಲವು ಒಣ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುವುದರಲ್ಲೇ ತೀವ್ರ ಆಸಕ್ತಿಯನ್ನು ಹೊಂದಿರುವ ಭಕ್ತನೂ ಕೂಡ ತನ್ನ ಸುತ್ತಮುತ್ತಿನ ಜಗತ್ತಿನಲ್ಲಿ ನಡೆಯುತ್ತಿರುವ ಬದಲಾವಣೆಗಳನ್ನು ಕಂಡು ಬೆನಗಾಗಿ ಜೀವನದ ಗುಟ್ಟಿಯನ್ನು ಕುರಿತು ಹೊಸ ದೃಷ್ಟಿಯಿಂದ ವಿಚಾರಿಸಲು ತನಗಿರುವ ಕುತೂಹಲವನ್ನು ಒಪ್ಪಿಕೊಳ್ಳುವನು. ಸ್ವಾಭಿಮಾನವನ್ನು ಬದಿಗಿಟ್ಟು ಯಥಾರ್ಥವನ್ನು ಗೌರವಿಸುವುದಾದರೆ ಇದುವರೆಗಿನ ಭಾರತೀಯ ತತ್ವಶಾಸ್ತ್ರಜ್ಞರೂ ವೇದಾಂತಿಗಳೂ ಜೀವದ ಅಂತರ್ಯದ ವಿಚಾರವಾಗಿ ವರ್ಣಿತವಾದ ತರ್ಕವನ್ನು ಬೆಳೆಸಿದ್ದರೂ ಕೂಡ ಜೀವದ ಲಕ್ಷಣವನ್ನು ಶಾಸ್ತ್ರೀಯ ರೀತಿಯಲ್ಲಿ ಸಾಮಾನ್ಯವಾಗಿ ಸ್ಪಷ್ಟವಾಗಿ ವಿವರಿಸಿದವರೆಂದರೆ ಇಂದಿನ ವೈಜ್ಞಾನಿಕರೇ ಸರಿ. ಅಂದಬಳಿಕ ಜೀವದ ಲಕ್ಷಣವನ್ನು ಕೊಂಚ ತಿಳಿಯಬೇಕಲ್ಲವೇ ?

(೧) ಜೀವವಿರುವ ವಸ್ತುವು ತಾನಾಗಿ ಚಲಿಸುವುದು. ಗಗನದಲ್ಲಿ ಹಾರಾಡುವ ಹಕ್ಕಿ ನೆಲದಮೇಲೆ ಓಡಾಡುವ ಮನುಷ್ಯಾದಿ ಪ್ರಾಣಿಗಳು ನೀರಲ್ಲಿ ಪರದಾಡುವ ಮತ್ಸ್ಯಾದಿ ಜಂತುಗಳು ಇದಕ್ಕೆ ಉದಾಹರಣೆ, ಅಲ್ಲದೆ ಬಹುಕಾಲ ಚಲಿಸದೇ ಇದ್ದು ತಕ್ಕ ಸನ್ನಿವೇಶ ದೊರೆತೊಡನೆ ತನ್ನಲ್ಲಿ ಒಂದು ಶಕ್ತಿವಿಶೇಷದಿಂದ ಬೆಳೆದು ಚಲಿಸುವ ವಸ್ತುಗಳೂ ಉಂಟು. ಸಸ್ಯ ಬೀಜಗಳು ಈ ಗುಂಪಿಗೆ ಸೇರಿದವು. ಒಂದು ಅವರೇಕಾಳನ್ನು ನೀರಿನಲ್ಲಿ ನೆನೆಹಾಕಿ ಕೆಲಸನುಯದನಂತರ ಪರೀಕ್ಷಿಸಿದಲ್ಲಿ ಇದು ಸಿಂಧುವಾಗುವುದು. ಈಚಲವು ಸ್ವಯಂ ಚಲನನೇ ಇನಿಸು ಗಾಳಿಯ ಸಹಾಯದಿಂದ ಹಾರಾಡುವ ಕಾಗದದಂತಿಲ್ಲ.

(೨) ಜೀವಿಗಳು ತಮ್ಮ ಬೆಳವಣಿಗೆಗೂ ತನುಗೆ ಬೇಕಾದ ರಕ್ಷಣೆಗೂ ಆಹಾರವನ್ನು ಸ್ವೀಕರಿಸುವುವು. ಹೊರಗಿನ ಪದಾರ್ಥಗಳನ್ನು ತಮ್ಮೊಳಗೆ ತೆಗೆದುಕೊಂಡು ಅವುಗಳಲ್ಲಿ ರಾಸಾಯನಿಕ ವ್ಯತ್ಯಾಸವನ್ನುಮಾಡಿ ಅವನ್ನು ತಮ್ಮದೇ ಹದ ಪದಾರ್ಥವನ್ನಾಗಿ ಮಾಡಿಕೊಳ್ಳುವುದೇ ಅಲ್ಲದೆ ಅವುಗಳನ್ನು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುವವು.

(೩) ಜೀವಿಯು ತನ್ನಂಥಹ ಇತರ ಜೀವಿಗಳನ್ನು ಉತ್ಪತ್ತಿಮಾಡುವುದು.

ಈ ಗುಟ್ಟನ್ನು ನಾವು ಚನ್ನಾಗಿತಿಳಿದಿದ್ದೇ ಆದರೆ ಮುಂದೆ ಭಾರೀ ಭಾರೀ ಸಮಸ್ಯೆಗಳನ್ನು ಬಿಡಿಸಲು ಬಹಳ ಸಹಕಾರಿಯಾಗುವುದು. ಇದು ವಿಜ್ಞಾನಯುಗ. ಅಧೋಗತಿಯನ್ನು ಹೊಂದಿರತಕ್ಕದಲ್ಲ.

ನನ್ನ ರಾಷ್ಟ್ರದ ಆರ್ಥಿಕ, ಸ್ವೈತಿಕ ಹಾಗೂ ಸಾಮಾಜಿಕ ಸ್ಥಿತಿಗಳು ಅಭಿವೃದ್ಧಿ ಹೊಂದಬೇಕಾದರೆ ಜನಸಾಮಾನ್ಯದಲ್ಲಿ ವಿಜ್ಞಾನದ ವಿಚಾರಗಳನ್ನು ನಿರ್ಭೀತಿಯಿಂದ ಹರಡಿಯೇ ತೀರಬೇಕು. ವೈಜ್ಞಾನಿಕ ವಿಚಾರಗಳಲ್ಲಿ ಜನರಿಗೆ ಅಭಿರುಚಿಯು ಬೆಳೆದುಬರಲೆಂದೇ ಈ ಲೇಖನವು ಬರೆಯಲ್ಪಟ್ಟಿತೇ ವಿನಹ ಜೀವನವನ್ನು ಕೆಣಕುವುದಕ್ಕಲ್ಲವಷ್ಟೆ ?

ಶಿರುಗುಪ್ಪ ತಾಲೂಕು ಏತೆಡ್ ಶಾಲೋಪಾಧ್ಯಾಯರ ಸಂಘ.

ಈ ಸಂಘದ ಸಭೆಯು 30-11-41 ತೆಕ್ಕಲಕೋಟೆಯಲ್ಲಿ ಜರುಗಿತು. ವಿದ್ಯಾಶಾಖೆಯ ಡೈರೆಕ್ಟರವರು – ತಾಲೂಕು ಸಂಘದ ಮುಂಜೂರಾತಿ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಲಾಯಿತು. ಮದ್ರಾಸ ಶಿಕ್ಷಣ ಖಾತೆಯ ನಿಧಿ 142 ರ ಪ್ರಕಾರ (M. E. R. 142) ಶಿಕ್ಷಣಹೊಂದಿದ ಉಪಾಧ್ಯಾಯರು ಸಂಪೂರ್ಣ ಯೋಗ್ಯತೆ ಹೊಂದಲು 18 ತಿಂಗಳ ವಿಧಾಯಕ ಸರ್ವಿಸ್ ಬೇಕು. ಅದಕ್ಕೆ ಬದಲಾಗಿ 18 ತಿಂಗಳು ಎಲ್ಲಾದರೂ ಸರ್ವಿಸ್‌ಮಾಡಿದಲ್ಲಿ ಅವರ ಪ್ರಾಕ್ಟಿಕಲ್ ಟಿಸ್ಸು ಮಾಡಿ ಸರ್ಟಿಫಿಕೇಟ್ ಪೂರ್ಣಮಾಡಲು ಡೈರೆಕ್ಟರ್ ರವರನ್ನು ಕೇಳೋಣಾಯಿತು. ಟ್ರೈನಿಂಗ್ ಶಾಲೆಯಲ್ಲಿ ಹಾಲಿ ತರಬೇತು ಹೊಂದುತ್ತಿರುವ ವಿದ್ಯಾರ್ಥಿಗಳಿಗೆ — ಶಿಕ್ಷಣ ಅವಧಿಯು ಮುಗಿದನಂತರ — ಅಂತ್ಯ ಪರೀಕ್ಷೆಯ ಜೊತೆಗೆ – ಸ್ವೂರ್ತಿಯುಂಟಾದ ಸರ್ಟಿಫಿಕೇಟು ಯಾ – ವ್ಯಮಾಣ ಪತ್ರವನ್ನು ಕೊಡಬೇಕೆಂದು ಡೈರೆಕ್ಟರನ್ನು ಬೇಡುವದಾಯಿತು.

ನಿಟ್ಟೂರು ಹನುಮಂತರಾವು
ಕಾರ್ಯದರ್ಶಿ.

ತೆಕ್ಕಲಕೋಟೆ ನಿಟ್ಟೂರು ರಸ್ತೆಯಾಗಬೇಕು.

ಎರಡು ಪಂಚಾಯ್ತಿ ಬೋರ್ಡುಗಳೂ ಒಪ್ಪಿವೆ.

ನಿಟ್ಟೂರು ಪಂಚಾಯ್ತಿ ಬೋರ್ಡಿನ 26-11-41 ನೆಯ 4 ನೇ ತೀರ್ಮಾನ ಮತ್ತು ತೆಕ್ಕಲಕೋಟೆ ಪಂಚಾಯ್ತಿ ಬೋರ್ಡಿನ 29-11-41 ನೆ 4 ನೇ ತೀರ್ಮಾನದಪ್ರಕಾರ — ತೆಕ್ಕಲಕೋಟೆ ಮತ್ತು ನಿಟ್ಟೂರಿಗೆ 3 ಮೈಲಿ ದೂರ ರಸ್ತೆ ಹಾಕಿಸಬೇಕೆಂಬ ನಿರ್ಧಾರಕ್ಕೆ ಸದರಿ ಎರಡೂ ಪಂಚಾಯ್ತಿ ಬೋರ್ಡುಗಳ ಒಪ್ಪಿಗೆಯು ದೊರೆತಿದೆ. ಸುಮಾರು ಎರಡು ಮೈಲಿಗಳಷ್ಟು ರಸ್ತೆಗೆ ಹೊಂದಿಕೊಂಡಿರುವ ಭೂಮಾಲೀಕರು ರಸ್ತೆಗಾಗಿ – ಭೂಮಿಯನ್ನು ಉಚಿತವಾಗಿ ಕೊಡಲು ಒಪ್ಪಿರುತ್ತಾರೆ. ಅಲ್ಲದೆ ಬಾಕಿ ಒಂದುಮೈಲಿರಸ್ತೆಗೆ ಬೇಕಾದ ಭೂಮಿಯನ್ನು ಕೊಳ್ಳಲು ಎರಡು ಪಂಚಾಯ್ತಿ ಬೋರ್ಡುಗಳು ಸಿದ್ಧ ವಿರುತ್ತವೆ. ಎರಡು ಪಂಚಾಯ್ತಿ ಬೋರ್ಡುಗಳಿಂದಕೂಡಿದ ಪ್ರತಿನಿಧಿಗಳು ಶಿವಮಂದಿರದ ಮೂಲಕ — ಕಲೆಕ್ಟರವರ ಅಪ್ಪಣೆ ಪಡೆದು ಕ್ಯಾಮರವನ್ನೆಯನ್ನು ಸ್ಥಾರಂಭಿಸಿ — ಈ ಭಾಗದ ಜನರಿಗೊದಗಿದ ನೀಡೆಯನ್ನು ಈ ರಸ್ತೆಯನ್ನೂ ಮೂಲಕ ನಿವಾರಣೆ ಮಾಡಲು ಕೋರಿರುವರು.

ನಿಟ್ಟೂರಿನ ಪ್ರತಿನಿಧಿಗಳು :— ಶ್ರೀ ಸಣ್ಣನಗೌಡ, ಕಮ್ಮಾರ ಶಂಕರನ್ನ.

ತೆಕ್ಕಲಕೋಟೆಯ ಪ್ರತಿನಿಧಿಗಳು:— ಜನಾಬ್ ಅಬ್ದುಲ ರಜ್ಜಾಕಸಾಹೇಬ್, ನಡ್ಡಿ ವಿರುವಾಕ್ಷಪ್ಪ ಡಿ. ಮಹಂತಪ್ಪ.

216-0-0 ರೂ. ದಾನ:—

ನನಜೀವನ ನ್ಯಾಯಾಮಂಜಾಲೆಗಾಗಿ ಈ ವರ್ಷ ಅಧ್ಯಕ್ಷತೆಯನ್ನು ವಹಿಸಿದ ಹಿಂದೂಪುರದ ಸುಪ್ರಸಿದ್ಧ ಶ್ರೀಮಂತರಾದ ಶ್ರೀಮಂತಿ ಭೀಮಯ್ಯಶೆಟ್ಟಿಯವರು ರೂ. 216-0-0 ದಾನಕೊಟ್ಟರು. ಸದರಿ ಅಧ್ಯಕ್ಷರಿಗೆ ಶ್ರೀ ಯಸ್. ವಿ. ಶೆಟ್ಟಿಯವರು ತಮ್ಮ ಮನೆಯಲ್ಲಿ ಭೋಜನಸಮಾರಂಭವನ್ನೇರ್ಪಡಿಸಿ ಊರಿನ ಮುಖ್ಯಸ್ಥರನ್ನೆಲ್ಲಾ ಸ್ವಾಗತಿಸಿದರು.

ರಾಯಲಸೀಮ ಬ್ಯಾಂಕು ಲಿಮಿಟೆಡ್.

ಮುಖ್ಯ ಕಾರ್ಯಾಲಯ. ಬಳ್ಳಾರಿ.

ಪ್ರಥಮ ವರ್ಷದ ಪ್ರಗತಿ

ದಿವಾಜಿಟ್ಟುಗಳು.	31—10—1940	30—11—1941
ಫಿಕ್ಸೆಡ್	ರೂ. Nil	90,930
ಚಾಲ್ತಿ	,, 3,173	20,954
ಸೇವಿಂಗ್ಸ	,, 1,231	18,368
ಇತರ	,, 40	781
ಸಾಲಗಳು.		
ಭಂಗಾರ	,, 520	27,478
ಸಾಲು	,, Nil	16,838
ಇತರ	,, Nil	6,181
ಇತರ ಆಸ್ತಿ		
ಸರ್ಕಾರದ ಬಾಂಡುಗಳು	,, 13,300	32,476
ಬ್ಯಾಂಕುಗಳಲ್ಲಿರುವ ಹಣ	,, 32,502	23,904
ಕೈಯಲ್ಲಿ ಹಣ	,, 5770	45,338

ಒಟ್ಟು ವ್ಯವಹಾರದ ಸೊತ್ತ.

31—10—40	31—11—41
ರು 1,14,774-0-0	ರು. 2,16,664-0-0

ಶಾಖೆಗಳು [1] ತಿಮ್ಮನಚರ್ಲ [ಗುಂತಕಲ್] [2] ಕೊಟ್ಟೂರು [3] ಉರವಕೊಂಡ

ಬಿ ವಿ ಶೇಷಗಿರಿರಾವ್, ಬಿ ಕಾಂ / ಹೆಚ್. ಸೀತಾರಾಮರೆಡ್ಡಿ, ಬಿ. ಎ. ಬಿ ಎಲ್., [ಎಂ ಎಲ್ ಎ]
ಕಾರ್ಯದರ್ಶಿ. ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

೩೦೦೦ ಮಂದಿ ಸತ್ತರು; ಗಾಯಗೊಂಡರು

ಓಹು ಮೇಲೆ ಜಪಾನ್ ವಿಮಾನಗಳು ಮುತ್ತಿಗೆ ನಡೆಸಿದಾಗ ಫಲವಾಗಿ 3000 ಮಂದಿ ಸತ್ತರು ಮತ್ತು ಗಾಯಗೊಂಡರೆಂದು ತಿಳಿಸಲಾಗಿದೆ.

ಫಿಲಿಪೈನ್ ನಿವಾಸಿಗಳಿಗೆ ಬುದ್ಧಿವಾದ

ಫೈಕವಿಷನವಾದ ಶ್ರೀ ಹೈರಿಯವರು ಸೋಮವಾರದ ದಿನ ಜನರಿಗೆ ಬುದ್ಧಿವಾದ ಹೇಳುತ್ತ "ಅಧಿಕಾರಿಗಳು ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ ಜನರು ಕಳವಳಪಡಬೇಕಾಗಿಲ್ಲ ಧೈರ್ಯ ಶಾಂತತೆ ಮತ್ತು ದೃಢನಿಶ್ಚಯದಿಂದ ಫಿಲಿಪೈನ್ ನಿವಾಸಿಗಳೂ ಅಮೆರಿಕನರೂ ಜಪಾನರಿಗೆ ಬುದ್ಧಿ ಕಲಿಸುವರು" ಎಂದರು.

ಅಧ್ಯಕ್ಷರಾದ ಕ್ವೆಜಾನ್ ರವರು ಪ್ರಕಟಣೆ ಹೊರಡಿಸಿ, "ಜವಾಬ್ದಾರಿಯುತರಾದ ಅಧಿಕಾರಿಗಳು ಸೂಚನೆ ಕೊಡುವವರೆಗೆ ಜನರು ತಮ್ಮ ನಿತ್ಯಕೆಲಸಗಳನ್ನು ಬಿಡಲಾಗದು ಸಮಾಧಾನಚಿತ್ತದಿಂದ, ನಂಬಿಕೆಯಿಂದ ಇರಬೇಕಾದುದು ಬಹಳ ಮುಖ್ಯ" ಎಂದು ತಿಳಿಸಿದ್ದಾರೆ.

ಮನಿಲಾದಿಂದ 270 ಮೈಲಿ ದೂರದಲ್ಲಿರುವ ಬಾಗುಯೂ ಎಂಬಲ್ಲಿ ಪರ್ವತಪ್ರದೇಶದಲ್ಲಿರುವ ಅಮೆರಿಕ ವಿಮಾನದಳದ ಮೇಲೆ ಜಪಾನ್ ವಿಮಾನಗಳು ಮುತ್ತಿಗೆ ನಡೆಸಿದವು ಟಾರ್ಲಾಕ್ ಮೇಲೆ ಸಹ ಬಾಂಬು ಹಾಕಲಾಯಿತು ಆದರೆ ವಿವರಗಳು ಬಂದಿಲ್ಲ.

ಜಪಾನರು ಮುತ್ತಿಗೆ ನಡೆಸಿದಂತಹ ಪ್ರಖ್ಯಾತ ಕ್ಲಾರ್ಕ್ ಫೀಲ್ಡ್ ವಿಮಾನ ಮೂಲದಲ್ಲಿ [ಫಿಲಿಪೈನ್ಸ್] 200 ಮಂದಿ ಗಾಯಗೊಂಡರು ಆ ಮೂಲದೊಂದಿಗೆ ಈಗ ಸಂಬಂಧ ತಪ್ಪಿ ಹೋಗಿದೆ. ನಿನ್ನೆ ರಾತ್ರಿ, ದ್ವೀಪದ ಎಲ್ಲ ಭಾಗಗಳಲ್ಲೂ ದೀಪಗಳನ್ನೆಲ್ಲ ಆರಿಸಲಾಗಿತ್ತು.

ಅಮೆರಿಕ ಹಡಗು ಮುಳುಗಿತು

ಮನಿಲಾದಿಂದ 1600 ಮೈಲಿ ಆಚೆ ಅಮೆರಿಕದ ಸಾಮಾನು ಹಡಗೊಂದನ್ನು ಮುಳುಗಿಸಲಾಯಿತು.

ಥೈಲೆಂಡ್ ಮೂಕ ಜಪಾನ್ ಸೇನೆಯ ಚಲನ

ಜಪಾನಿನೊಡನೆ ಒಪ್ಪಂದವಾಯಿತು

ಜಪಾನ್-ನಿಗೂ ಥೈಲೆಂಡಿಗೂ ಒಪ್ಪಂದವಾಯಿತೆಂದೂ ಥೈಲೆಂಡ್ ಮೂಲಕ ಜಪಾನ್ ಸೇನೆಗಳು ಹೊಗಲು ಥೈಲೆಂಡ್ ಸರಕಾರವು ಒಪ್ಪಿದೆಯೆಂದೂ ಜಪಾನ್ ಪ್ರಕಟನ ಶಾಖಾಧಿಕಾರಿಗಳು ತಿಳಿಸಿದ್ದಾರೆ.

'ಜಪಾನ್ ಸೇನೆಗಳು ಈಗಾಗಲೇ ಥೈಲೆಂಡ್ ಪ್ರವೇಶ ಮಾಡುತ್ತಿವೆ

ಜಪಾನ್ ಯೋಧರನ್ನು ಥೈಲೆಂಡಿಗೆ ಬಿಡಲಾಗುವುದೆಂದು ಬ್ಯಾಂಕಾಕ್ ರೆಡಿಯೋವು ತಿಳಿಸಿದ್ದನ್ನು ಸಿಂಗಪುರದಲ್ಲಿ ಕೇಳಿ ಬಂತು.

ನಿಮ್ಮ ಎಳ್ಳಿಗೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ,
ಸಾಮಲಕೋಟ.

ಇವರ A.S. ಟ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ಸೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಷ್ಟೂ ಪಥದ ಪೈಜುಗಳಲ್ಲೂ ದೊರೆಯುತ್ತದೆ. **A. S.** ಕಲನ್ನು ಗಮನಿಸಿ. ಕೊಳ್ಳಿರಿ. ಮೋಸಹೋಗಬೇಡಿರಿ

ದೊರೆಯುವ ಸ್ಥಳ:- 1.) ಎಂ. ಹುಶೇಂಜಿರಾವ್,
ಎಂ. ವೆಂಕೋಜಿರಾವ್, ತೇರುಬೀದಿ, ಬಳ್ಳಾರಿ.
ಮತ್ತು 2) ವಿ ಯಂ. ಗಿರಿ ಅಂಡ್ ಸನ್ಸ್,
ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ತಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....
- ನಿಮಗೆ ಸಹಾಯವು ಬೇಕೋ?

ಶಾಗಾದರೆ ಕೂಡಲೇ ಕೆಳಗಿನವರಲ್ಲಿ ವಿಳಾಸವನ್ನು ತಿಳಿಯಿರಿ ನಿಮಗಿಷ್ಟವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು ಪರೀಕ್ಷೆಯ ಪುಸ್ತಕಗಳು, ಕವಿ ಕಾದಂಬರಿ ಸ್ವರ ದೊರೆಯುತ್ತವೆ ನಿಮಗೆ ಎಷ್ಟಾವಧಿವಾದ ಮಾಹಿತಿಯೂ, ಉಚಿತವಾಗಿ ದೊರಕುತ್ತದೆ.

ಟಿ ಬಿ ಕೇಶವರಾವ್,
ಕೃಷ್ಣಸ್ವಾಮಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.
With which is incorporated Congress Bulletin
THE LEADING NATIONAL WEEKLY.
. ನವ ಭಾರತ ಬಳ್ಳಾರಿ.
ಉಜ್ವಲ ಭಾವೈಕ್ಯ ವಾರಪತ್ರಿಕೆ.

The Rates of Subscription.	ಚಂದಾ ದರ ವರ್ಷಕ್ಕೆ
Annual	
Local 2—0—0	ಬಳ್ಳಾರಿಯವರಿಗೆ 2-0-0
Mofussil 3—0—0	ಹೊರಗಿನವರಿಗೆ 3-0-0
6 Months	**೬ ತಿಂಗಳಿಗೆ**
Local 1—4—0	ಬಳ್ಳಾರಿಯವರಿಗೆ 1-4-0
Mofussil 2—0—0	ಹೊರಗಿನವರಿಗೆ 2-0-0

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಿಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ ಬಡವರಿಗೂ, ಶ್ರೀಮಂತರಿಗೂ ಅನುಕೂಲವಿರುವ ಆಧುನಿಕ ಕಟ್ಟು (ಫ್ರೇಂ) ಸಮೃದ್ಧಿವೆ ಒಮ್ಮೆ ನಮ್ಮಲ್ಲಿ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons. Bellary

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ, ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ಪೈತ್ತ ನನ್ನೆರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೪೦

ಸ್ಟಾಕಿಸ್ಟ್ ಶೋರಣಗಲ್ಲು ಮರೆಪ್ಪ, ಬಳ್ಳಾರಿ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦-೮-೦	ಅಂಡೆ ಪೆಟ್ಟಿಗೆ
ಕನ್ನಡ ದಶಾವತಾರಗಳು	೦-೯-೦	ಪಕ್ಕಿಕ ನ್ಯಾಪಾರಿಗೆ
ವಿವಾಹಪದ್ಧತಿ	೦-೪-೦	ಹೊಸ ಪದ್ಧತಿ
ಸುಮನೋರಮೆ	೦-೧-೦	ಕೂಳ್ಳವರಿಗೆ ಧಾರಾ
		ನಾಡ ಕಮೀಷನ್

ಕನ್ನಡ ಭಗವದ್ಗೀತೆ

ಶ್ರೀ ಕೃಷ್ಣ ಪರಮಾತ್ಮನ ಉಪದೇಶದಿಂದ ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಬೋಧಿಸಲ್ಪಟ್ಟ ಭಗವದ್ಗೀತೆಯ ಗಂಭೀರ ತಾತ್ಪರ್ಯವನ್ನು ಸರಳವಾದ ಕಿಸುಮ ಪಟ್ಟದಿಯ ಪದ್ಯ ಶೈಲಿಯಲ್ಲಿ ಕರ್ನಾಟಕದ ಸುಪ್ರಸಿದ್ಧ ಕವಿಗಳಲ್ಲೊಬ್ಬರಾದ ಶ್ರೀ ಎಂ. ಎಸ್. ಸುಬ್ಬಣ್ಣನವರು ಗ್ರಂಥ ರಚನ ಮಾಡಿರುವರು. ಇದಕ್ಕೆ ಅನೇಕ ಪಂಡಿತರ ಪ್ರಶಂಸೆಯು ದೊರೆತಿದೆ ಕನ್ನಡಿಗರೆಲ್ಲಾ ಇದನ್ನು ಕೈಗನ್ನಡಿಯಾಗಿ ಕಾಪಾಡಿಕೊಳ್ಳಲು ಸಾಧ್ಯ. ಕ್ಷಿಪ್ರ ಪ್ರತಿಗಳಿವೆ. ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್.

ಕಾಲವ ಸುಬ್ಬಣ್ಣ, ವ.ಚೀ.ಂಟು, ಬಳ್ಳಾರಿ.

Nava Bharat, Bellary.

REG. No. 3337.

Sri _____

Printed at Rural Press, Car Street, Edited & Published by T. B Keshava Rao, Bellary

Reg. No. M 3937 ವಂದೇ ಮಾತರಂ

ನವಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ
ಸಂಚಿಕೆ ೧೨ ಬಳ್ಳಾರಿ ಡಿಸಂಬರ್ ೨೧ನೇ ಭಾನುವಾರ ೧೯೪೧. ಟಿ. ಪಿ. ಕೇಶವಮೂರ್ತಿ.

ಸ್ಥಾಪನೆ. ಎಂಪೈರ್ ಆಫ್ ಇಂಡಿಯಾ ೧೯೪೭.

ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000 ರೂ. ಗಳಿಗೆಮಿಾರಿದೆ.

ಈ ಕಂಪನಿಯನರು ಯಾವಯಾವ ತರಹೆಯ ಜೀವ ವಿಮೆಯನ್ನು ಪಡೆದಿದ್ದಾರೆ ಎಂಬುದನ್ನು ವಿಚಾರಿಸಿರಿ. ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಕಚೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

ಶ್ರೀ ಕೋಟಿ ಮಲ್ಲೇಶ್ವರಸ್ವಾಮಿ ದ್ವಿತೀಯ ಪಶುಪ್ರದರ್ಶನ ಬಳ್ಳಾರಿ.

ಬಳ್ಳಾರಿ ಕೋಟೆ ಮಲ್ಲೇಶ್ವರಸ್ವಾಮಿ ದೇವಸ್ಥಾನದ ಬಯಲಿನಲ್ಲಿ ಬರುವ ವರ್ಷ ಫಿಬ್ರವರಿ ತಿಂಗಳು ೨ನೇ ತಾರೀಖು ೪ನೆ ವರೆಗೆ ದನಗಳ ಪ್ರದರ್ಶನವು ನಡೆದು, ಉತ್ತಮವಾಗಿ ಪೋಷಿಸಿದ ಶ್ರೇಷ್ಠ ಪಶುಗಳಿಗೆ ಆಂದರೆ ಎತ್ತು, ಆಕಳ, ಎಮ್ಮೆ, ಕುದುರೆಗಳಿಗೆ ಸಾರಿತೋಷಕಗಳು ಕೊಡಲಾಗುತ್ತವೆ. ಹಿಂದೂಸ್ತಾನದಲ್ಲಿ ಈ ಪಶುಗಳ ಸಹಾಯವಿಲ್ಲದೆ ವ್ಯವಸಾಯವಿಲ್ಲ. ಈ ಜೀವಾಯವಿಲ್ಲದೆ ಜೀವಿಯಿಲ್ಲ ಬೆಳೆಯಿಂದ ಧೀರೆತಕಾರಿಯಲ್ಲದೆ ನಮ್ಮ ಜೀವನವಿಲ್ಲ. ಜನತೆಯ ಪಶುಗಳ ತಳಿಯನ್ನು ಪೈವೃದ್ಧಿ ಪಡಿಸುವ ಕಾರ್ಯದಲ್ಲಿ ಹೆಚ್ಚಿನ ಗಮನವನ್ನು ಕೊಡಲೆಂದು ಈ ಪ್ರದರ್ಶನವ ಆರಂಭವಾಗಿದೆ. ಇದನ್ನು ಸರ್ವರೂ ಸ್ಫೂರ್ತಿಯಿಂದ ಯಶಸ್ವಿ ಮಾಡಲು ಕೋರಿಕೆ.

ಕಾರ್ಯ. ಕಾರ್ಯದರ್ಶಿಗಳು ಟ್ರಸ್ಟಿ.

ರಂಗೂನಿನಮೇಲೆ ಯಾಯ್ಕೆಂಬ ಜಪಾನೀ ರೇಡಿಯೋ ವಾರ್ತೆಯು ಸುಳ್ಳೆಂದು ದೆಹಲೀವಾರ್ತೆಯೂ ರಂಗೂನ್ ರೇಡಿಯೋ ತಿಳಿಸಿದೆ.

ಮುತ್ತಿಗೆಯು ಸುಳ್ಳು

ಕಲ್ಕತ್ತೆಯಿಂದ ಜನರು ಬಿಡುತ್ತಿರುವರು

ಕಲ್ಕತ್ತಾ ನಾಗರೀಕರು ಬಾಂಬುಗಳ ದಾಳಿಯ ಭಯದಿಂದ ಒಳಪ್ರಾಂತಗಳನ್ನು ಸೇರುತ್ತಲಿದುವರೆಗೂ ಶೈಲ್ಡ್ ಟ್ರೇನುಗಳಲ್ಲಿ ಗಪ್ಪಲವು ಹೆಚ್ಚಿರುವುದೆಂದೂ ಜನರ ಸೌಕರ್ಯಕ್ಕಾಗಿ ಹೆಚ್ಚಿನಗಾಡಿಗಳನ್ನು ಹಾಕುತ್ತಿರುವುದಾಗಿಯೂ ಹೇಳಲಾಗಿದೆ.

ರಷ್ಯಾದಿಂದ ಜರ್ಮನರ ಓಟ

ಈಗ ಳಿಗಾಲದ ಉಪಯೋಗವನ್ನು ತೆಗೆದುಕೊಂಡು ಜರ್ಮನರು ಆಕ್ರಮಿಸಿದ್ದ ಅನೇಕ ಮುಖ್ಯ ನಗರಗಳನ್ನು ರಷ್ಯನರು ಪುನಃ ಆಕ್ರಮಿಸುತ್ತಿರುವರು. ಈ ಯುದ್ಧದಲ್ಲಿ ಲಕ್ಷಾಂತರ ಜರ್ಮನರು ನಾಶವಾಗಿರುವರೆಂದೂ ಬೆಲೆಯುಳ್ಳ ಯುದ್ಧ ಸಾಮಗ್ರಿಗಳು ರಷ್ಯನರವಶವಾಗಿರುವವೆಂದೂ ರಷ್ಯನ ವಾರ್ತಾ ಸಂಸ್ಥೆಯು ತಿಳಿಸುತ್ತಲಿದೆ

ಹರಿಜನರೂ ಮಾನವರೇ? ಗುಣವೇ ಪ್ರಾಧಾನ್ಯ

(ಶ್ರೀ ಚಾಕುಬಂಡೆ ಸುಬ್ಬಣ್ಣನವರಿಂದ ರಚಿತ.)

ಓಂ.

ಚಂ॥ ಗುಣಗಳೆ ಮುಖ್ಯವಲ್ತೆ? ಮನುಜಾಳಿಗೆ ಜನ್ಮಪ್ರಧಾನಮಲ್ಲಕೇಂ
ಗುಣಗಳ ಕರ್ಮದಿಂದಲಿನ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ನೆಂ।
ದನುದಿನವೇದ ಶಾಸ್ತ್ರ ಮಿತಿಹಾಸ ಪುರಾಣಗಳೆಲ್ಲ ಕೂಗಿದಂ।
ಘಣಘಣ ಭೇರಿಬಾರಿಸುವುದಾಲಿಸಿ ಮಾನವನಾಗಿ ಜೀವಿಸೈ ॥೧॥

ಚಂ॥ ಆಜುವುಗಳಲ್ಲ ಕೀಜುವುಗಳಲ್ಲಿ ಶಿಲಾದಿಗಳಲ್ಲಿ ಬ್ರಹ್ಮನ।
ಲ್ಲಿ ನಿಮಿಷರಲ್ಲಿ ಯಕ್ಷಗಣ ರಾಕ್ಷಸರಲ್ಲಿ ಮೃಗಂಗಳಲ್ಲಿ ನೋರ್ ।
ಶನಕಗಳಲ್ಲಿ ಗಾರ್ಧಭಗಳಲ್ಲಿ ಜನಾವಳಿಯಲ್ಲಿ ತುಂಬಿ ಬಿ।
ಧ್ಯನನೆನಿಸಿರ್ದ ನೀಂ ಹರಿಜನಂಗಳೊಳಿಲ್ಲಿನೆ ಶಂಭೋ? ಶಂಕರ; ॥೨॥

ಉ॥ ನಾಯಿಗಳೆಲ್ಲ ಸೂಕರಗಳೆಲ್ಲ ಗಜಾದಿ ಮೃಗಂಗಳೆಲ್ಲ ಮೇರ್ ।
ವಾಯಸನೆಲ್ಲ ಪಕ್ಷಿಕುಲಮೆಲ್ಲ ಜಲಾಶಯದಲ್ಲಿ ಪೊಕ್ಕುತಾಂ ।
ಬಾಯಿಯನಿಟ್ಟು ನೀರ್ಗುಡಿದು ಪೋಗೆ ಪವಿತ್ರಮವಕ್ಕು ಪುಣ್ಯಂಬೋ ।
ಸಾಯುವೆವೆಂದು ಮಾಡಿರು ನೀರ್ಗುಡಿಯಲ್ಕಪವಿತ್ರಮಾಪುದೇ ॥೩॥

ಚಂ॥ ಹರಿಜನರನ್ನು ನೋಡಿ ಕರುಣಾರಸ ದಿಟ್ಟಿಯಮೂಡಿಯಾಡುತಾ '
ಹರಿಜನರಿಂಗೆ ನಿತ್ಯಸುಖಪೂರ್ಣಪರಾತ್ಪರ ತತ್ವಮಾರ್ಗಮುಂ ,
ಪರಿಪರಿ ಬೋಧೆಗೆಯ್ದಿ ಬಸವೇಶನು. ಬುದ್ಧನು ಶಂಕರಾರ್ಯನು ।
ಖ್ಯರು ಪುರಳ್ದೈಮ ಮಾಡಿಗರ ಮಟ್ಟುಗಳೆಲ್ಲುನ ನೀಗಿಸೋಪರೆ? ॥೪॥

ಚಂ॥ ಹರಿಜನರಾತುಕೋಟಿಯಿಪರಲ್ಲನೆ? ನಮ್ಮವರಲ್ಲವೇಯಿನರ್
ಅರಿಯದೆ ನಾವು ನಮ್ಮನರನಂಜರೆಯುತ್ತಿರಲಸ್ಪರಾತ್ರಯಂ
ದೊರಕಿಸಿಕೊಂಡು ನಮ್ಮನರೆಬೇರೆ ಮತಾಂತರಹೊಂದಿಪೋಪರ್ಕೆ '
ದುರಿತಮಿಗಿಕ್ಕೆ ಮಿಗಾರಿಯಿಯುವೇ? ಪರಿಭಾವಿಸಲೀಜಗತ್ತಿನೊಳ್ ॥೫॥

ಬಾಗುವಾಡಿ

ಕ್ಷಾಮ ಪರಿಸ್ಥಿತಿ: —

ಶ್ರೀ ಯಸ್. ಚಿನ್ನಬಸಪ್ಪನವರು ಈ ಪ್ರಕಾರ ತಿಳಿಸುತ್ತಾರೆ. ಈ ಸಲ ಮಳೆಗಾಲವು ಸಾಧಾರಣವಾಗಿದ್ದು ದನಗಳಿಗೆ ಮಾತ್ರ 3-4 ತಿಂಗಳಾಗುವಷ್ಟು ಸೊಪ್ಪು ದೊರೆತಿದೆ. ಕಾಳು ಬಿ ಲ್ಲು ಲ ಆಗಿರುವುದಿಲ್ಲ. ಕೆಲ ಭೂಮಿಗಳಲ್ಲಿರುವ ಹತ್ತಿ ಬಿಳಿಜೋಳ ವಣಗುತ್ತಲಿವೆ. ರೈತರು ಬಹಳ ಕಷ್ಟದೆಶೆಯಲ್ಲಿರುತಾರೆ. ಅವರಿಂದ ದಿನಿನ್ನುಹಣ ಈಸಲ ಕೊಡಲಿಕ್ಕೇ ಮಾರ್ಗವಿಲ್ಲದಂತಿದೆ. ಸಿರುಗುಪ್ಪೆಯಿಂದ ಈಊರಿಗೆ ಸರಿಯಾದ ಮಾರ್ಗವೇ ಇಲ್ಲ ಜಿಲ್ಲಾ ಬೋರ್ಡಿನವರು ಕೆಲ ಕಾ ಲ ದ ಕೆ ಳ ಗೆ 6 ಸಾವಿರ ರೂ. ಎಸ್ಟಿಮೇಟ್ ಮಾಡಿಸಿ ದರಾಗಲಿ ಕಾರ್ಯಭಾಗವನ್ನು ಮುಗಿಸಲೂ ಇಲ್ಲ. ಪ್ರಾರಂಭ ಮಾಡಲೂ ಇಲ್ಲ ಬಡಜನರಿಗೆ ಕೂಲಿ ಕೆಲಸಕೂಡ ದೊರೆಯುವಂತಿಲ್ಲ. ಈ ಕಾರಣ ರೈತರಿಗೂ ಬಡಜನರಿಗೂ ಕೂಲಿ ಕೆಲಸ ದೊ ರ ಕ ಸಿ ಕ್ಕಾನುಬಾಧೆಯಿಂದ ಅ ನ ರ ನ್ನು ರಕ್ಷಿಸಲು ಜಿಲ್ಲಾ ಕಲೆಕ್ಟರ್ ಮತ್ತು ದಿವಿನ್ಯೂ ಬೋರ್ಡು ಕಾರ್ಯದರ್ಶಿಗಳಿಗೆ ಸುಹೃದರುಗಳನ್ನು ಗ್ರಾಮಸ್ಥರು ಕಳುಹಿಸಿರುವರು.

ಬಳ್ಳಾರಿ.

ಪೌರಸಭೆ-ಆಯ ವ್ಯಯ ಪಟ್ಟಿಯಲ್ಲಿ ಕಡಿಮೆ :—

ಕಳೆದವಾರ ಕೂಡಿದ ಪುರಸಭೆಯಲ್ಲಿ 1942—43 ರ ಆಯ ವ್ಯಯ ಪಟ್ಟಿಯಲ್ಲಿ ಸುಮಾರು 40 ಸಾ ವಿ ರ ರೂ. ಮೇಲೆ ಕಡಮೆ ಬೀಳುವುದೆಂದು ಅಧ್ಯಕ್ಷರು ಹೇಳಿದರು. ಇದರಮೇಲೆ ॥ ಶ್ರೀ ॥ ಗುಡುದೂರು ತಿಮ್ಮಪ್ಪನವರು ಇದು ಮುಖ್ಯವಾದ ವಿಷಯವೆಂದೂ, ಸಭೆಯನ್ನು ಮುಂದುವರಿಸಬೇಕೆಂದೂ ಕೇಳಿದರು. ಸಭೆಯ ಬಹು ಸಂ ಖ್ಯಾ ಕರು ಒಪ್ಪದಕಾರಣ 5 ಜನ ಸದಸ್ಯರು ಹೊರಗೆ ಹೋದರು. ಶ್ರೀ ತಿಮ್ಮಪ್ಪ-ಹುಬ್ಬಳ್ಳಿ ವೆಂಕಪ್ಪ-ಅರಳಿ ಮುದ್ದಪ್ಪ ವಗೈರೆ ಸದಸ್ಯರು ವಿರೋಧ ಪತ್ರವನ್ನು ಕಳುಹಿಸಿ (Minute of Dissent) ಸರಕಾರದವರು ಆಯ ವ್ಯಯ ಪಟ್ಟಿಯನ್ನು ಒಪ್ಪ ಬಾರದವಾಗಿ ಕೋರಿದ್ದಾರೆ.

L-I-M ವೈದ್ಯರ ನೌಕರಿ :—

ಜಿಲ್ಲಾ ಬೋರ್ಡಿನಲ್ಲಿರುವ ಕೆಲ L. I. M. ವೈದ್ಯರ ನವಕರಿಯು ಖಾಯಂ ಮಾಡಲ್ಪಡಬೇಕೆಂದೂ ಅದಕ್ಕೆ ತಮ್ಮ ಅ ಕ್ಷೇ ಪ ಣೆ ಇಲ್ಲವೆಂದೂ ಜಿಲ್ಲಾ ಬೋರ್ಡಿನವರು ಕಳೆದ ಮಾರ್ಚ್ ತಿಂಗಳು

S. V. Setty & Bros., Bangalore Road, Bellary.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.



ವಿರುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇನ್ಸೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ನರೀಕ್ಷಿಸಿರಿ.

ತೀರ್ಮಾನಿಸಿ ಸರಕಾರಕ್ಕೆ ತಮ್ಮ ಸಿಫಾರ್ಸುಕಳುಹಿಸಿದ್ದರು. ಅವರಿಂದ ಇದುವರಿವಿಗೂ ಉತ್ತರ ಬಂದಿಲ್ಲವಾದ ಕಾರಣ ಅನರನ್ನೈಚ್ಛೆರಿಸಲು ಅ ಧ್ಯ ಕ್ಷ ರಿ ಗೆ ಕೋರಲಾಗಿದೆ.

ಕುಡುದರಹಾಳು—ಶೀದರಗಡ್ಡ

ಸಿರುಗುಪ್ಪೆಯ ತಾಲೂಕು, ಕುದುದರಹಾಳು, ಶೀದರಗಡ್ಡ ರೈತರು ಈ ಕೆಳಗೆ ಕಾಣಿಸಿದ ಮಹಜರು ಕಳುಹಿಸಿರುತ್ತಾರೆ:—

ನಮ್ಮ ಗ್ರಾಮುಗಳಲ್ಲಿ ಮುಂಗಾರಿಬೆಳೆಯು ತೀರ ಕನಿಷ್ಟವಾಗಿರುತ್ತದೆ. ಈಗ ಆಗಿರುವ ಬೆಳೆಯು ಒಂದು ತಿಂಗಳ ಜೀವನಕ್ಕೂ ಸಾಲದಾಗಿದೆ. ಹಿಂಗಾರಿ ಬೆಳೆಯಲ್ಲಿ ಬಿಳಿಜೋಳವೇನೂ ಇಲ್ಲ ಹತ್ತಿಯು ಏನೂ ಸ್ವಾರಸ್ಯವಿಲ್ಲ. ಜೀವನಕ್ಕೂ ದನಕರುಗಳ ಮೇವಿಗೂ ಬಹಳ ಅಭಾವ ಬೊದಗಿದೆ. ಮೇವಿನ ತಕಾವಿ ಮತ್ತು ಜನರ ಜೀವನಕ್ಕೆ ರೋಡ್ ಕೆಲಸಗಳೆ ಏರ್ಪಾಟಾಗಬೇಕು. ಈವರ್ಷ ಸರ್ಕಾರದ ಮತ್ತು ಇನಾಂದಿರಿಗೆಗಳು ಮಾಫಿ ಮಾಪ ಬೇಕು.

ಯುದ್ಧರಂಗದ ವಾರ್ತೆಗಳು.

ಮಲಯಾದ್ವಲ್ಲಿ ಘೋರಕದನ:—

ಉತ್ತರ ಮಲಯದಲ್ಲಿ ಘೋರಯುದ್ಧವಾಗುತ್ತಲಿದೆ. ಕೇಡಾಕ್ಷತ್ರದಲ್ಲಿ ಜಪಾನಿಯರಿಗೆ ಗೆಲುವೆಂಟಾಗುವಂತೆ ತೋರುತ್ತದೆ. ಥಾಯಲೆಂಡಕಡೆಯಿಂದ ಜಪಾನರು ಮುತ್ತಿಗೆ ಆರಂಭಿಸಿದ್ದಾರೆ.

ಈಗ ಎರಡು ದಿನಗಳ ಹಿಂದೆ ಜಪಾನರು ಥೈಲೆಂಡನಿಂದ ಮಲಯದ ಮೇಲೆ ಉಗ್ರಮುತ್ತಿಗೆಯಾರಂಭಿಸಿದರು ಹೊಡಾಟವೀಗ ಬಹಳ ಚುರುಕಿನಿಂದ ನಡೆಯುತ್ತಿವ ಅರಣ್ಯ ಪ್ರದೇಶಗಳಲ್ಲಿ ಹೊಡಾಡುವುದರಲ್ಲಿ ಜಪಾನರು ಅಪೂರ್ವ ಸೈಪುಣ್ಯತೆಯನ್ನು ತೋರ್ಪಡಿಸುತ್ತಿದ್ದಾರೆ. ಮಾನಸಳೆಗಳಿಂದ ತುಂಬಿದ ನದಿಗಳಲ್ಲಿ ಜಪಾನ್ ಯೋಧರು ನಿರ್ಭಯವಾಗಿ ಶಸ್ತ್ರಗಳನ್ನಿಟ್ಟುಕೊಂಡು ಈಜಿಕೊಂಡು ಒಯ್ಯುತ್ತಿದ್ದಾರೆ. ಅವರ ಸಹಾಯಕ್ಕೆ ಶಸ್ತ್ರಬಂಡಿಗಳನ್ನು ಕೊಡಲಾಗಿದೆ. ಕೇಡಾ ಕ್ಷೇತ್ರದಲ್ಲಿರುವ ಬಂದೇರಸ್ತೆಯಲ್ಲಿ ಅವರು ಮುಂದ ಸುಗ್ಗಿದ್ದಾರೆ.

ಸಾಮ್ರಾಜ್ಯ ಸೇನೆಗಳು ಬಹಳಮಟ್ಟಿಗೆ ಭಾರತೀಯರು, ಸ್ಯಾಬಹರು ಮತ್ತು ಪ್ರುಷರು ನಿಶ್ಚಲ ಮನಸ್ಸಿನಿಂದ ಹೊಡದಾಡುತ್ತಿದ್ದಾರೆ. ಒಂದು ಅಂಗುಲವೂ ಹಿಮ್ಮೆಟ್ಟಲಾಗದೆಂದೂ ಪ್ರತಿಯೊಂದು ಗುಂಡಿರುವವರೆಗೂ ಹೊಡದಾಡಬೇಕೆಂದೂ ಅಲ್ಲಿರುವ ಹಲವು ಬ್ರಿಟಿಷ್ ಪಡೆಗಳಿಗೆ ಆಜ್ಞಾಮಾಡಲಾಗಿದೆ.

ಬ್ರಿಟಿಷ್ ವಿಮಾನಗಳು ಸಾಮ್ರಾಜ್ಯ ಸೈನ್ಯಗಳಿಗೆ ಬೆಂಬಲ ಕೊಡುತ್ತಲಿವೆ. ಆದರೆ ಮಲೆಯಾಕ್ಕೆ ವಿಮಾನಸೈನ್ಯವು ಬಹಳವಾಗಿ ಬೇಕಾಗಿದೆ. ಮಿತ್ರಸೈನ್ಯಗಳು ಸಿಂಗಪುರದವರೆಗೂ ಹಿಮ್ಮೆಟ್ಟಬೇಕಾದ ಪರಿಸ್ಥಿತಿ ಬರಬಹುದು. ಹೆಚ್ಚಿನ ವಿಮಾನಬಲವು ಬರುವವರೆಗೆ ಜಪಾನರನ್ನು ಮಲಯದಿಂದ ಓಡಿಸುವುದು ಅಸಾಧ್ಯ.

ಪೆನಾಂಗ್—ಫಾರ್ಮೋಸಗಳ ಮೇಲೆ ಮುತ್ತಿಗೆ:—

ಹಿಂದೂ ಸಾಗರದಲ್ಲಿರುವ ಪೆನಾಂಗ್ ದ್ವೀಪ ಮತ್ತು ಫಾರ್ಮೋಸಾದ್ವೀಪದ ಸ್ಯುರುತ್ಯ ಭಾಗಕ್ಕೆ ಜಪಾನರ ಬಾಂಬರ್ ವಿಮಾನಗಳು ಹೋಗಿ ದಾಳಿಮಾಡಿದೆ ಬಂದವಂತೆ.

ಹಾಂಕಾಂಗ್ ರೇವು:—

ಬ್ರಿಟಿಷರಿಗೆ ಸೇರಿದ ಕೌಲೂನ್ ದ್ವೀಪದಿಂದ ಹಾಂಕಾಂಗ್‌ಗೆ ಬ್ರಿಟಿಷ್ ಸೈನ್ಯಗಳು ಸರಿದಿವೆ. ಹಾಂಕಾಂಗ್ ಪತನವಾಯ್ತೆಂಬ ಸುದ್ದಿಯು ಧೃಡಪಟ್ಟಿಲ್ಲ.

ಜಪಾನರ ನಾಲ್ಕು ಹಡಗುಗಳು ಮುಳುಗಿದವು.—

ನದರ್ಲೆಂಡ್ ಸಬ್ಮೇರೀನ್‌ಗಳು ಜಪಾನರ ನಾಲ್ಕು ಸೈನಿಕ ಹಡಗುಗಳನ್ನು ಮುಳುಗಿಸಿದವರಂತೆ. ಜಪಾನರಿಗೆ ಅಪಾರ ಹಾನಿಯಾಗಿದೆಯಂತ.

ಪರ್ಲ್ ಬಂದರದ ದಾಳಿಯಲ್ಲಿ ಅಮೆರಿಕನ್ನರಿಗೆ ಆದನಷ್ಟ:—

ನಾವಿಕ ಖಾತೆಯ ಕಾರ್ಯದರ್ಶಿಗಳಾದ ಕರ್ನಲ್ ನಾಕ್ಸರವರು – ಪೂರ್ವಭಾಗದಲ್ಲಿ ಸಂಚರಿಸಿ ಅಮೆರಿಕಾದ ನೃತ್ಯ ಪತ್ರಿಕೋದ್ಯೋಗಿಗಳ ಸಭೆಯಲ್ಲಿ ತಿಳುಹಿಸಿದಪ್ರಕಾರ ಜಪಾನರು ಪರ್ಲ್ ಬಂದರದಮೇಲೆ ಮಾಡಿದ ದಾಳಿಯಲ್ಲಿ ಅಮೆರಿಕಸ್ಥರೆ ೨ ಯುದ್ಧದ ಹಡಗುಗಳನ್ನು ಮುಳುಗಿಸಿರುವರು. ಇದರಿಂದ 2729 ಜನರು ಸತ್ತಿರುವರು. 656 ಜನರಿಗೆ ಘಾಯಗಳಾಗಿವೆ. ದ್ವೀಪದಲ್ಲಿದ್ದ ಪಂಚ ಮದಳದವರಿಂದ ಈ ಕೆಲಸಗಳಾಗಿರಬೇಕೆಂದು ತಿಳುಹಿಸಲಾಗಿದೆ.

ಜಪಾನಿನ ಮುತ್ತಿಗೆ.

ಪೆಸಿಫಿಕ್ ದ್ವೀಪಗಳ ಆಕ್ರಮಣದ ಉದ್ದೇಶ:—

ಜಪಾನ್ ಅನೇಕ ಕಡೆಗಳಲ್ಲಿ ಪೆಸಫಿಕ್ ಸಾಗರದಲ್ಲಿ ಮುತ್ತಿಗೆ ನಡೆಸಿರುವುದನ್ನು ನೋಡಿದರೆ, ಏರ್‌ಕ್ರಾಫ್ಟ್ ಕ್ಯಾರಿಯರ್‌ಗಳಲ್ಲಿರುವ ವಿಮಾನಗಳು ಮುತ್ತಿಗೆಗಳನ್ನು ನಡೆಸಿರಬೇಕೆಂದು ಲಂಡನ್ನಿನ ನೌಕಾ ಸುದ್ದಿಗಾರರು ಅಭಿಪ್ರಾಯವಟ್ಟಿದ್ದಾರೆ. ಜಪಾನಿನಲ್ಲಿ 'ಏರ್‌ಕ್ರಾಫ್ಟ್ ಕ್ಯಾರಿಯರ್', ಸಂಗ್ರಾಮ ನೌಕೆಗಳವೆ. ಮಿಡ್‌ವೆ ಮತ್ತು ವೇಕ್ ದ್ವೀಪಗಳು ಬಹಳ ಚಿಕ್ಕ ದ್ವೀಪಗಳು ಆದರೆ ಗಾಂ ದ್ವೀಪವು ಬಹಳ ದೊಡ್ಡ ದ್ವೀಪ. ಅಲ್ಲಿಂದ ಫಿಲಿಪೈನ್ಸ್ ದ್ವೀಪಗಳಿಗೆ ಸುಲಭವಾಗಿ ಹೋಗಬಹುದು. ಗಾಂ ದ್ವೀಪವು ಬಹಳ ಭದ್ರವಾದ ರಕ್ಷಣಾ ವ್ಯವಸ್ಥೆಯಿಂದ ಕೂಡಿರುವ ದ್ವೀಪ. ಜಪಾನಿನ ಏರ್‌ಕ್ರಾಫ್ಟ್ ಕ್ಯಾರಿಯರ್‌ಗಳೊಡನೆಯೂ ಅವುಗಳನ್ನು ರಕ್ಷಿಸುತ್ತಿರುವ ಸಂಗ್ರಾಮ ನೌಕೆಗಳೊಡನೆಯೂ ಅಮೆರಿಕದ ಸಂಗ್ರಾಮ ನೌಕೆಗಳು ಕದನ ಹೂಡಿರುವವೇ ಎಂಬ ವಿಚಾರವು ಇನ್ನು ಗೊತ್ತಾಗಿಲ್ಲ. ಪರ್ಲ್ ಬಂದರಿನ ಮೇಲೆ ಜಪಾನಿನ ವಿಮಾನಗಳು ಮುತ್ತಿಗೆ ನಡೆಸಿರುವುದನ್ನು ನೋಡಿದರೆ ಅಲ್ಲಿರುವ ಅಮೆರಿಕನೌಕೆಗಳು ಮಲಯ ಮತ್ತು ಫಿಲಿಪೈನ್ಸ್ ದೇಶಗಳಿಗೆ ಹೋಗಿ ಸಹಾಯ ಮಾಡುವುದನ್ನು ತಪ್ಪಿಸುವ ಉದ್ದಿಶ್ಯವನ್ನು ಜಪಾನ್ ಅಧಿಕಾರಿಗಳು ಇಟ್ಟುಕೊಂಡಿದ್ದರೆಂದು ಹೇಳಬಹುದು ಮಲಯ ಮತ್ತು ಫಿಲಿಪೈನ್ ದ್ವೀಪಗಳಲ್ಲಿ, ಭೂಮಿಯಮೇಲೆ ಭಯಂಕರವಾದ ಕದನಗಳು ನಡೆಯಬೇಕಾಗಿದೆ ಇಂಡೋ ಚೀನ ಮತ್ತು ಮಲಯ ದೇಶಗಳ ಸಮುದ್ರಗಳಲ್ಲಿ ಸದ್ಯಕ್ಕೆ ಜಪಾನಿನ ನೌಕಾಬಲವು ಹೆಚ್ಚಾಗಿದೆ ಆದುದರಿಂದ ಹೆಚ್ಚು ಕಷ್ಟವಿಲ್ಲದೆ ಜಪಾನ್ ನೌಕೆಗಳು ಸೈನಿಕರನ್ನು ಆ ಪ್ರದೇಶಗಳಿಗೆ ಸಾಗಿಸುತ್ತಿವೆ

ಥೈಲೆಂಡ್ ದೇಶವು ಜಪಾನಿಗೆ ಶರಣಾಗತವಾಗಿ ಸೈನ್ಯಪಡೆಗಳ ಸಂಚಾರಕ್ಕೆ ಅವಕಾಶವಿತ್ತಿರುವ ಪ್ರಯುಕ್ತ ಜಪಾನಿಗೆ ಅನುಕೂಲ ಹೆಚ್ಚಾಯಿತು. ಕೋಟಿಬಾರು ವಿಮಾನನಿರ್ವಾಣವನ್ನು ಜಪಾನ್ ಹಿಡಿಯುವುದಕ್ಕೆ ಇದರಿಂದ ಅನುಕೂಲವಾಯಿತು. ಜಪಾನಿನ ಸಂಗ್ರಾಮ ನೌಕೆಗಳು ಸಿಂಗಪುರದಮೇಲೆ ಮುತ್ತಿಗೆನಡಿಸಿ ಅದನ್ನು ವಶವಡಿಸಿಕೊಳ್ಳಲು ಯತ್ನಿಸಬಹುದು. ಇಲ್ಲವೇ ಭೂಮಾರ್ಗವಾಗಿ ನುಗ್ಗಿ ಸಿಂಗಪುರದಮೇಲೆ ಬೀಳಬಹುದು ಉತ್ತರದಲ್ಲಿ ಜಪಾನ್ ರಂಗೂನ್ ಮಾರ್ಗವಾಗಿ ಮುಂದಡಿ ಇಡಬಹುದು. ಇಲ್ಲವೇ ಲಾಷಿಯೋ ಕಡೆ ನುಗ್ಗಬಹುದು. ಆದರೆ ಮೊದಲು ಜಪಾನ್ ಥೈಲೆಂಡಿನಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕಾಗಿದೆ. ಬ್ರಿಟಿಷರು ಥೈಲೆಂಡಿನ ಮೇಲೆ ಬೀಳುವುದನ್ನು ತಪ್ಪಿಸಬೇಕಾಗಿದೆ.

ಪೆಸಿಫಿಕ್ ಸಾಗರದಲ್ಲಿ ನಡೆಯುವ ನೌಕಾಯುದ್ಧದಮೇಲೆ ಡಚ್ ಇಂಡಿಸ್ ಫಿಲಿಪೈನ್ಸ್, ಬೋರ್ನಿಯೋ ಮೊದಲಾದ ದೇಶಗಳ ಭವಿಷ್ಯವು ಅವಲಂಬಿಸಿದೆ.

ಜಪಾನ್ ವಂಚನೆಯಿಂದ ಕೊಂಚಮಟ್ಟಿಗೆ ಮೊದಲಿನಲ್ಲಿ ಜಯಗಳಿಸಿದೆ. ಆದರೆ

106

10

ಆಧುನಿಕ ಯುದ್ಧದ ವೈಚಿತ್ರ್ಯ

ಸಂಗ್ರಾಮವು ದೀರ್ಘಕಾಲ ನಡಯುವು ದಾಗಿದ ಜವಾನಿನ ನಾ ಧ ನ ಸಂಪತ್ತು ಗಳು ಅಷ್ಟು ಹೆಚ್ಚಾಗಿಲ್ಲ

ಜರ್ವಾ ವ್ಲಾಡಿವೋಸ್ಟಾಕ್ ಬಂದರ ನ್ನೇಕೆ ಆಕ್ರಮಿಸಲಿಲ್ಲವೆಂದು ಅನೇಕರು ಪ್ರಶ್ನೆಹಾಕುತ್ತಿದ್ದಾರೆ ರಷ್ಯಸೈನ್ಯಬಲವೇ ಇದಕ್ಕೆ ಕಾರಣವಿರಬಹುದು ಅಲ್ಲದೆ ಜವಾನಿನ ನ ಗ ರ ಗ ಳ ಮೇಲ ರಷ್ಯದ ವಿಮಾನಗಳು ಮುತ್ತಿಗೆ ನಡಿಸಿ ಆ ನಗರ ಗಳನ್ನು ನಾಶಮಾಡುವ ಬೀ ಟ ಯೇ ಇದಕ್ಕೆ ಕಾರಣವಿರಬಹು ರ ಷ್ಯ ಕ್ಕೂ ಜರ್ಮನಿಗೂ ಇರುವ ವಿಚಿತ್ರ ತಾಟಸ್ಥ್ಯ ನೀತಿಗೆ ಇಂಗ್ಲೆಂಡ್ ಅಮೆರಿಕ ದೇಶಗಳು ಒಪ್ಪಿಗೆ ಕೊಡಬಹುದು ಈರೀತಿ ಒಪ್ಪಿಗೆ ಕೊಟ್ಟವುದರಿಂದ ಜ ಲಕ್ಷ ಸುಂದಿ ಜವಾನ್ ಸೈನಿಕರು ಸುಮ್ಮನೆ ರಷ್ಯದ ಗಡಿಯಲ್ಲಿ ಕಾದು ಕುಳಿತಿರಬೇಕಾಗುವದು ಅಲ್ಲದೆ ರಷ್ಯವು ಎರಡು ಕಡೆಗಳಲ್ಲಿ ಯುದ್ಧ ಮಾಡುವ ತೊಂದರೆಯು ತಪ್ಪುವದು

ದಾಳಿಗಳನ್ನು ದೂರದಿಂದಲೇ ನಿರ್ಮೂಲಗೊಳಿಸುವ ಹೊಸದೊಂದು ಅಸ್ತ್ರ.

ಸೈನಿಗಳ ಯುದ್ಧದ ಹಡಗುಗಳನ್ನೂ ವಿಮಾನಗಳನ್ನೂ ಟ್ಯಾಂಕುಗಳನ್ನೂ ಅನೇಕ ಮೈಲು ದೂರದಿಂದಲೇ ನಿರ್ಮೂಲಗೊಳಿಸುವ ಒಂದು ಅಸ್ತ್ರವು ಒಂದಿ ರ್ಲ್ಲಂದು ದಿನ ಉಪಯೋಗದಲ್ಲಿ ಬರು ವಸಂಭವ ತೋರಿ ಎರುತ್ತಿರುವದು ಈ ಹೊಸ ಅಸ್ತ್ರದಿಂದ ವೈರಿಗಳಹಡಗುಗಳೂ ವಿಮಾನಗಳೂ ಟ್ಯಾಂಕುಗಳೂ ತಮ್ಮ ಸ್ಥಿಯ ಬಾಂಬುಗಳ ಸ್ಫೋಟದಿಂದ ತಂತಾನೇ ನಾಶಹೊಂದುವವು ಆದರೆ ಈ ಅಸ್ತ್ರಕ್ಕೆ ಸೂರ್ಯನ ಸಹಾಯ ಮಾತ್ರ ಅಗತ್ಯವಿರುವದು

ಆಮೇರಿಕೆಯ ಓಟ್ಟೊ ಎಚ್ ಹೊಹ ರ ಎಂಬವರು ಈ ಅಸ್ತ್ರವನ್ನು ಶೋಧಿ ಸಿದ್ದು ಅಮೇರಿಕೆಯು ಸ್ವೀಕಾರಿಗಳ ಎದುರಿಗೆ ಅದರ ಪ್ರಯೋಗವನ್ನು ಮಾಡಿ ತೋರಿಸಿರುವರು ಪ್ರಯೋಗದಲ್ಲಿ ಗುರಿ ಯಿಂದ ಅಸ್ತ್ರದ ಅಂತರವು ಕೇವಲ ೨೦ ಮೂಟಿನಷ್ಟೇ ಇದ್ದರೂ ಹೆಚ್ಚು ಶಕ್ತಿಯು ತವಾದ ಅಸ್ತ್ರಗಳಿಂದ ೪೦ ಮೈಲು ದೂರ ದ್ದಲ್ಲಿರುವವುಗಳನ್ನೂ ಹೊಡೆಯುವದು ಸಾಧ್ಯವಿದೆಯೆಂದು ಹೇಳಲಾಗುತ್ತದೆ ಈ ಅಸ್ತ್ರಕ್ಕೆ ಸೋಲರ ಡಿಟೋನೇಟರ ಎಂದು ಹೆಸರಿಡಲಾಗಿದೆ.

ಪ್ರಯೋಗದಲ್ಲಿ ನೂರ ಇನರು ಕೆಲವು ಕ್ಯಾನವ್ಹಾಸ ಚೀಲಗಳಲ್ಲಿ ಸ್ಫೋಟಕ ಪುಡಿಯನ್ನು ತುಂಬಿ ತಮ್ಮ ಅಸ್ತ್ರ ವನ್ನು ಅವುಗಳ ಸಮೀಪ ಇಟ್ಟರು ಅಸ್ತ್ರದ ಮೇಲ್ಭಾಗದಲ್ಲಿ ಕೊಳವೆಯು ಸೂರ್ಯಾಭಿಮುಖವಾಗಿತ್ತು. ಮತ್ತು ಮತ್ತೊಂದು ಕೊಳವೆಯನ್ನು ಅಸ್ತ್ರದಿಂದ ಚೀಲಗಳವರೆಗೆ ಜೋಡಿಸಲಾಗಿತ್ತು. ೯ ಮಿನಿಟುಗಳ ಮೇಲೆ ಪುಡಿಯು ಸ್ಫೋಟವಾಯಿತು.

ಅಸ್ತ್ರದಲ್ಲಿಯ ಕೆಲವು ಅಂಶಗಳು ಗುಪ್ತವಾಗಿ ಇಡಲ್ಪಟ್ಟಿದ್ದರೂ ಅದರಲ್ಲಿ ಅಡಕವಾದ ತತ್ವವು ಸರ್ವಪ್ರತಿವಿದಿ ರಾವುಗನ್ನಡಿಯನ್ನು ಸೂರ್ಯ ಕಿರಣಗ ಳಿಗೆ ಹಿಡಿದು ಕಾಗದದಮೇಲೆ ಕಿರಣಗ ಳನ್ನು ಬೀಳಿಸಿದರೆ ಕಾಗದವು ಸುಟ್ಟು ಹೋಗುವಂತೆ ಇಲ್ಲಿಯೂ ಸೂರ್ಯನ ಕಿರಣದಿಂದ ಪುಡಿಯು ಸ್ಫೋಟವಾಗುವದು

ರಶಿಯನರ ರೇಡಿಯೋ ಬಾಂಬುಗಳು

ಜರ್ಮನ್ ಸೈನಿಕರು ಫ್ಹಿ ಬಾ ರ್ಗ ಜಿಲ್ಲೆಯ ಹದ್ದಿನಲ್ಲಿ ಹೊಕ್ಕ ಕೂಡಲೇ ರಶಿಯನ್ನರು ಅಲ್ಲಿಬಿಟ್ಟುಹೋದ ಬಾಂ ಬುಗಳು ರಶಿಯರಾಣಿಗಳಲ್ಲಿ ಇಡಲ್ಪಟ್ಟ ಶಾರ್ಟವೇವ್ಹ ವಾಯರಲೆಸ್ ಟ್ರಾನ್ಸಮಿ ಟರಗಳಿಂದ ಹಾರಿಸಲ್ಪಟ್ಟವೆಂದು ಬರ್ಲಿ ನ ರೇಡಿಯೋದಿಂದ ತಿಳಿದುಬರುತ್ತದೆ ಯುದ್ಧದಲ್ಲಿ ರೇಡಿಯೋ ನಿಯಂತ್ರಣದ ಹೊಸ ಶಾಸ್ತ್ರದ ಉಪಯೋಗ ತೆಗೆದು ಕೊಂದು ಇದೇ ಮೊದಲನೆ ಸಲವಿದ್ದರೂ ಯುದ್ಧ ಮುಗಿಯುವದರೊಳಗಾಗಿ ಎರ ಡು ಪಕ್ಷದವರೂ ಇಂಥ ಇನ್ನೂ ಅನೇಕ ಯುಕ್ತಿಗಳನ್ನು ಕೃತಿಯಲ್ಲಿ ತರಬಹುದಾ ಗಿದೆ ಈ ರೇಡಿಯೋ ನಿಯಂತ್ರಣದಿಂದ ಈಗ ಬಾಂಬುಗಳನ್ನೂ ಜಲಸುರಂಗಗ ಳನ್ನೂ ದೂರದಲ್ಲಿ ನಿಂತು ಹಾರಿಸುವುದು ಟಾರ್ಪೆಡೋಗಳನ್ನು ಯುದ್ಧದ ಹಡಗು ಗಳಿಗೆ ನೇರವಾಗಿ ಒಗೆಯುವದು ವಿಮಾ ನಗಳನ್ನು ಅಂತರದಲ್ಲಿ ಬಿಟ್ಟು ಅವುಗ ಳಿಂದ ಗುರಿಗಳಮೇಲೆ ಬಾಂಬು ಚೆಲ್ಲು ವದು ಒಳ್ಳೆ ಸುಲಭವಾದದ್ದಾಗಿರುವದು.

ನಿರ್ದಿಷ್ಟ ಸಿಗ್ನಲ್ ದೊರೆತ ಕೂಡಲೆ ಎಸ ಜಿ-ಯು ವಿಸ್ಫೋಟವಾಗುವದು. ಆದರೆ ಸಿಗ್ನಲ್ ದೊರೆತ ಕೂಡಲೆ ರೇಡಿಯೊದಿಂದ ಅದು ಮುಚ್ಚಿಹೋಗಿ ಅದಕ್ಕೆ ಜೋಡಿಸ ಲ್ಪಟ್ಟ ಯಂತ್ರಗಳು ಚಲಿಸತೊಡಗುವವು ರಸಿರ್ಯ ರೇಡಿಯೋ ಬಾಂಬುಗಳಲ್ಲಿ ಇದೇ ರೀತಿ ಸರ್ಕೂಟ ಮುಚ್ಚಿದಕೂಡಲೆ ಡಿಟೋನೇಟರ ಚಲಿಸತೊಡಗಿ ಬಾಂಬು ಗಳು ಸ್ಫೋಟನಾಗುವವು(ಕರ್ಮವೀರ)

ಕ್ಷಾಮ ವಾರ್ತೆಗಳು:—

ಆದವಾನಿ ಭಾಗದಲ್ಲಿ ನಡೆಯಬೇಕಾ ಗಿರುವ ಕ್ಷಾಮ ಕಾರ್ಯಕ್ಕಾಗಿ ಸಿ. ಡಬ್ಲು ಡಿ. ಶಾಖೆಯವರಿಂದ ತಕ್ಕ ಸಾಮಗ್ರಿಗಳು ಜಿಲ್ಲಾ ಬೋರ್ಡಿನ ದೊರೆತಿವೆ. ಹಿಂದೆ ಸೂಚಿಸಿದ ಪ್ರಕಾರ 20ನೆಯ್ದು ತಾ. ವಳಗಾಗಿ ಆಭಾಗದಲ್ಲಿ ಕಾರ್ಯಾರಂಭವಾಗುತ್ತಲಿದೆ ಯೆಂದು ಗೊತ್ತಾಗಿದೆ. ಉಳಿದ ಭಾಗದಲ್ಲಿ ಎಂದು ಪ್ರಾರಂಭ ಮಾಡಲಿರುವರೆಂಬುದ್ಕೂತಲೆ ಕ್ಟರ್‌ರವರು ಯಾವಭಾಗಕ್ಕೆ ಪರಿಹಾರ ಕೊಡುವರೆಂಬುದೂ ಇನ್ನೂ ತಿಳಿದು ಬಂದಿಲ್ಲ

ಕಲ್ಲುಗೊಟ್ಟ ದೈವಂದಿನ್ನೆ ಹೊಸರಸ್ತೆ ಹಾಕಿಸುವ ಕಾರ್ಯವನ್ನು ಸರಕಾರದ ಕಡೆಯಿಂದಲೆ ಕಲೆಕ್ಟರವರು ಹಾಕಿಸುವ ರೆಂದೂ ಅದನ್ನು ಪರೀಕ್ಷಾಕಾರ್ಯ ವಾಗಿ ಪ್ರಾರಂಭಿಸುವರೆಂದೂ ಗೊತ್ತಾ ಗಿದೆ ಯಮ್ಮಿಗನೂರು, ನಾಗಲದಿನ್ನೆ, ಮತ್ತು ಕಂಬಳದಿನ್ನೆ ಮೂಲಪಲ್ಲಿ ರಸ್ತೆಗ ಳಿರುವೇರಿ ಕಾಮಗಾರಿಯನ್ನು ಜಿಲ್ಲಾ ಬೋರ್ಡಿನವರೇ ನಡಿಸಿದ್ದಾರೆ. ಕವುತಾಳಂ ಹಜ್ಜೆಳ್ಳಿರಸ್ತೆಯ ರಿಪೇರಿಗೆ ಕಲೆಕ್ಟರರ ಒಪ್ಪಿಗೆ ದೊರೆತಿದೆ. ಇದನ್ನು ಈ ವಾರ ದೊಳಗಾಗಿ ಕೈಗೊಳ್ಳಲಿರುವರು. ಈ ಎಲ್ಲಾ ಭಾಗಗಳಿಗೂ ಜಿಲ್ಲಾ ಬೋರ್ಡಿ ನವರು ಓವರ್‌ಸೀಯರುಗಳನ್ನು ನಿಯಮಿಸಿ ದ್ದಾರೆ ಜಿಲ್ಲಾ ಬೋರ್ಡಿನವರು 0-3-0 ಗಂಡಸರಿಗೆ 0-2-0 ಹೆಂಗಸರಿಗೆ 0-1-6 ಚಿಕ್ಕವಯಸ್ಸಿನವರಿಗೆ ದಿನಕೂಲಿ ಕೊಡಲು ನಿಶ್ಚಯಿಸಿರುವರು.

ದ್ವಿತೀಯ ಪಶು ಪ್ರದರ್ಶನ:—

ವೆಟರ್ನರಿ ಖಾತೆಯವರು ಇಲ್ಲಿ ಒಂದು ಪ್ರದರ್ಶನವನ್ನೇರ್ಪಡಿಸಿ 1942 ನೆಯ ಫೆಬ್ರವರಿ ಮೊದಲನೆಯ ವಾರದಲ್ಲಿ ನಡೆ ಯುವ ಪಶುಪ್ರದರ್ಶನದಲ್ಲಿ ಉಪಯುಕ್ತ ಸಾಹಿತ್ಯವನ್ನು ಒದಗಿಸಲಿರುವರು. ಬಳ್ಳಾರಿ ಪುರಸಭೆಯವರು ಪಶು ಪ್ರದ ರ್ಶನಕ್ಕಾಗಿ 100 ರೂ. ದೇಣಿಗೆ ಕೊಟ್ಟಿ ರುವರು

ಪಂಡಿತ ಜವಹರಲಾಲರ ಉಜ್ವಲ ಭಾಷಣ.

ನಿಮ್ಮ ಸಹವಾಸವು ಇನ್ನು ಸಾಕು ಹೊರಗಿರಿ.

ವೃತ್ತಪತ್ರಿಕೋದ್ಯೋಗಿಗಳ ಸಭೆಯಲ್ಲಿ ಸದ್ಯದ ಪರಿಸ್ಥಿತಿಯ ವಿಷಯವಾಗಿ ಮಾತನಾಡುತ್ತಾ ತಮ್ಮ ಅಭಿಪ್ರಾಯವನ್ನು ಪಂ|| ನೆಹ್ರೂರವರು ಈ ರೀತಿಯಾಗಿ ವ್ಯಕ್ತಪಡಿಸಿದರು.

ನಾನು ಜೈಲಿನಲ್ಲಿದ್ದಕಾಲದಲ್ಲಿ ಬ್ರಿಟಿಷ್ ಸರ್ಕಾರದವರು ಮತ್ತು ಅವರ ಅಧಿಕಾರಿಗಳ ನೀತಿನಿಯಮಗಳನ್ನು ನುಸಗಂಡಿರುತ್ತೇನೆ. ತಮ್ಮಲ್ಲೇ ಅಭಾವವಾಗಿರುವ ರಾಜಕೀಯ, ಆಧ್ಯಾತ್ಮಿಕ ಮತ್ತು ನೈತಿಕಗುಣಗಳನ್ನು ನಮಗೆ ಭೋಧಿಸುತ್ತಿರುವದು ಸೋಜಿಗದ ಸಂಗತಿಯಾಗಿದೆ. ಅವರಲ್ಲಿ, ಯುದ್ಧ ಮತ್ತು ಕ್ರಾಂತಿಯ ಸನ್ನಿವೇಶಗಳಲ್ಲಿ ಬೇಕಾದ ಸಾಮಾನ್ಯ ಜಾತುರ್ಯವು ಇಲ್ಲೆಂಬುದನ್ನು ಅವರೇ ಪ್ರಪಂಚಕ್ಕೆ ಕೋರ್ಸಡಿಸಿದ್ದಾರೆ "ಹೇಳದೆ ಹೇಳೋ ಕಿಸಬಾಯಿದಾಸ" ಎಂಬಂತೆ ಒಲೇನಣ ನೀತಿಯನ್ನು ಪುನಃ ಪುನಃ ಹೇಳುವ ಅವರಿಯವರ ಹೇಳಿಕೆಯಲ್ಲಿ ನನಗೆ ನಲಕ್ತಿಯಿಲ್ಲ.

ಬ್ರಿಟಿಷು ಸರ್ಕಾರ್ತ್ವಮತ್ತು ಅವರಿಯವರಿಗೆ ನಾನು ಹೇಳಬಯಸುವದಿಷ್ಟೆ! ಅಲಿವರ್ ಕ್ರಾಂವೆಲ್‌ರವರ ಭಾಷೆಯಲ್ಲಿ "ನಿಮ್ಮ ಸಹವಾಸವು ಸಾಕು"

ಕಾಂಗ್ರೆಸಿನ ಮುಖ್ಯರೇ ಇದನ್ನು ನಿರ್ಣಯಿಸಲಿ

ಪೂನಾದಲ್ಲಿ ಹಿಂದೆ ತೀರ್ಮಾನಿಸಲ್ಪಟ್ಟ ನಿರ್ಣಯ ಮತ್ತು ಇತರ ಬೇಡಿಕೆಗಳನ್ನು ಪುನರುದ್ಧರಿಸಬೇಕೆಂದು ಕೆಲವರುಹೇಳುತ್ತಿರುವರು. ರಾಜನೀತಿಯಲ್ಲಾಗಲಿ ಧಾರ್ಮಿಕ ವಿಷಯದಲ್ಲಾಗಲಿ ಹಿಂದಿನಕಾಲದ ವ್ಯಗಳನ್ನು ಪುನರುದ್ಧರಿಸಬೇಕೆಂದರೆ ನಾನುನಿರೋಧಿಸುವೆನುಬದಲಾಯಿಸುತ್ತಿರುವ ಪ್ರಪಂಚ ಮತ್ತು ಇತರ ಸನ್ನಿವೇಶಗಳನ್ನು ದೃಷ್ಟಿಯಲ್ಲಿಟ್ಟು ರಾಜಕಾರಣಿಯು ತನ್ನ ನೀತಿಯನ್ನು ನಿಶ್ಚಯಿಸಬೇಕಾಗುತ್ತದೆ ಇದು ಸ್ವಭಾವ ಧರ್ಮವಾಗಿರುತ್ತದೆ. ಹದಿನೆಂಟು ತಿಂಗಳಿಳಿಗೆ ನಡೆದ ವಿಷಯವನ್ನು ಕಾರ್ಯರಂಗಕ್ಕೆ ತರಲು ಇಚ್ಚಿಸುವ ಮನೋವೃತ್ತಿಯು ಯುದ್ಧದ ಕ್ರಾಂತಿಯು ಈ ಕಾಲದಲ್ಲಿ ಹಾನಿಕರವಾಗಿದೆ. -

ನಾನು ಬಂಧಮುಕ್ತನಾದಮೇಲೆ ಈ ವಿಷಯಗಳ ಬಗ್ಗೆ ನಿಶ್ಚಿತಾಭಿಪ್ರಾಯಗಳನ್ನು ವ್ಯಕ್ತಪಡಿಸಿಲ್ಲ. ಕಾಂಗ್ರೆಸು ಕಾರ್ಯ ಕಾರಿಣಿ ಸಮಿತಿ, ಕಾಂಗ್ರೇಸು ಅಧ್ಯಕ್ಷರು ಅಥವಾ ಮಹಾತ್ಮಾ ಗಾಂಧಿಯವರೇ ಅಧಿಕಾರಯುಕ್ತವಾದ ಹೇಳಿಕೆಯನ್ನು ಕೊಡಲು ಬದ್ಧರಿರುವರು

ಹಿಂಸೆ—ಅಹಿಂಸೆ.

ನಮ್ಮ ನೀತಿಯ ಕೆಲಸಾಧಾರಣ ತತ್ವಗಳನ್ನು ನಾನು ಹೇಳಿರುತ್ತೇನೆ. ಈಚೆಗೆ ಫಾರ್ಮೊಸಾ ಧೊರೆಗಳ ತಲೆಯಂತೆ ಹಿಂಸಾ ಹಿಂಸೆಯ ನಿರ್ಮಶ್ಚಿಯು ತಲೆಯೆತ್ತಿದೆ. ಇದು ಹಿಂದೂಸ್ಥಾನದಲ್ಲಿ ಬೇಕಾದಷ್ಟು ಚರ್ಚಿತವಾಗಿದೆ ಮಹಾತ್ಮ ಗಾಂಧಿಯವರ ಅಭಿಪ್ರಾಯಗಳನ್ನು ಎಲ್ಲರೂ ಬಲ್ಲರು. ಎ. ಐ. ಸಿ. ಸಿ. ಸಭೆಯು ಬೊಂಬಾಯಿಯಲ್ಲಿ ಕೂಡಿದಾಗ ಕಾಂಗ್ರೆಸ್ ನೀತಿಯೂ ವ್ಯಕ್ತಪಟ್ಟಿದೆ ಮಹಾತ್ಮರು ಇದಕ್ಕಿಂತಲೂಮುಂದೆ ಹೆಜ್ಜೆ ಇಡುವರಾದರೂ ಕಾಂಗ್ರೆಸ್ ನಾಯಕರಿಗೆ ಒಪ್ಪುವಂತೆ ಕಾಂಗ್ರೆಸ್ ಸಂಸ್ಥೆಯ ನೀತಿಗೆ ಹೊಂದಿಕೊಂಡಿರುವರು. ನಾನಾದರೂ ಇದನ್ನು ಪೂರ್ಣವಾಗಿ ಸ್ವೀಕರಿಸಿರುವೆನು ಪ್ರಪಂಚಯುದ್ಧದ ನಾಶಕಾರ್ಯದಲ್ಲಿ ರಾಜಕೀಯ ಅಹಿಂಸೆಯ ಮತ್ತು ನಿಶ್ಶಸ್ತ್ರನೀತಿಯಕಡೆ ನನ್ನ ಮನಸ್ಸು ಹೆಚ್ಚಾಗಿ ಸೆಳೆದಿದೆ. ಹೊಸ ಮತ್ತು ಒಳಸನ್ನಿವೇಶಗಳನ್ನು ಗಮನದಲ್ಲಿಟ್ಟು ಅಹಿಂಸೆಯ ಪೂರ್ಣಪ್ರಯೋಗವು ಸಾಧ್ಯವೇ ಎಂಬುದರಬಗ್ಗೆ ನಾನು ಹೇಳಲಾರೆ. ಆದರೂ ಅಹಿಂಸೆಯ ಪ್ರಯೋಗವನ್ನು ಮಾಡಲು ಯತ್ನಿಸಬೇಕು ಇದನ್ನು ವಿಮರ್ಶಿಸುವದರಲ್ಲಿ ತಪ್ಪುದಾರಿಗೆ ಹೆಜ್ಜೆ ಇಟ್ಟು ತೊಡಕಿಗೆ ಬೀಳಬೇಕಾಗುತ್ತದೆ.

ಎರಡು ಸಮಸ್ಯೆಗಳು.

ಹಿಂದೂಸ್ತಾನ ಮತ್ತು ಬ್ರಿಟಿಷ್ ಸರಕಾರದವರೆ ಸಹಕಾರವನ್ನು ಬಯಸುವವರು ಎರಡು ಮುಖ್ಯ ಸಮಸ್ಯೆಗಳನ್ನೇ ನುರೆಯುತ್ತಾರೆ ಬ್ರಿಟಿಷ್ ಸರಕಾರದ ನೀತಿಯ ಬಗ್ಗೆಎಂದಿಗಿಂತಲೂ ಇಂದು ಅವರಿಮಿತವಾದ ಅಸಹ್ಯವು ಹೆಚ್ಚಿದೆ ಪೆಷಾವರದಿಂದ ಕೇವಾಕಾಮೊರಿನ್‌ದವರೆಗಿರುವ ನಗರ ಹಳ್ಳಿಗಳ ಬೀದಿಯಲ್ಲಿ ಓಡಾಡುವ ಮನುಷ್ಯನನ್ನು ಕೇಳಿದರೆ ಇದು ಚನ್ನಾಗಿ ಗೊತ್ತಾಗುತ್ತದೆ. ಈ 25 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಇಂಥಾ ದ್ವೇಷವನ್ನು ನಾನೆಂದಿಗೂ ಕಂಡಿಲ್ಲ

ಎರಡನೆಯದೆಂದರೆ.

ಬ್ರಿಟಿಷ್ ಲೇಬರ್ ಪಾರ್ಟಿಯವರು ಛೇಂಬರ್ಲೈನ್ ಸರಕಾರವು ಹೋಗಿ ರಾಷ್ಟ್ರೀಯ ಸರಕಾರವು ಸ್ಥಾನಿಸಲ್ಪಡುವವರೆಗೂ ಅವರು ಸಹಾಯಮಾಡಲಿಲ್ಲ. ನಮ್ಮ ವಿಷಯವಾದರೂ ಇದಕ್ಕಿಂತಲೂ ಬಲವತ್ತರವಾಗಿದೆ. ಇಂಥಾ ಸಂದರ್ಭದಲ್ಲಿ ಈ ಸರಕಾರದೊಡನೆ ಸಹಕರಿಸುವದೆಂತು?

ಸೈನಿಕರನ್ನು ಕೊಡಿಸುವ ಸಾರ್ಜೆಂಟ್ ಆಗಲಾರೆನು.

ಚೀನ ರಷ್ಯಾಗಳಮೇಲೆ ನಮಗಿರುವ ಸಾನುಭೂತಿ ಇದ್ದೇಇದೆ. **ಆದರೆ ಎಂಥಾ ಸಂದರ್ಭದಲ್ಲೂ ನಾನು ಬ್ರಿಟಿಷ್ ಸರಕಾರದ ಸಾರ್ಜೆಂಟನಾಗಿ ಅವರ ಭಾರತ ನೀತಿಯನ್ನಾಗಲಿ ಅವರ ಕೈಕೆಳಗಿರುವ ದೇಶಗಳಲ್ಲಿನ ಅವರ ವರ್ತನೆಯನ್ನಾಗಲಿ ಸಮರ್ಥಿಸಲಾರೆ:** —

ಯುದ್ಧವಾದಮೇಲೆ: —

ಯುದ್ಧವಾದ ಒಂದೆರಡು ವರ್ಷಗಳ ನಂತರ ಏನು ಆಗಬೇಕೆಂಬುದನ್ನು ಕೆಲವರೂ ಕೆಲಸಂಸ್ಥೆಗಳೂ ಚರ್ಚಿಸುತ್ತಲಿವೆ ಅಮೆರಿಯವರಾಗಲಿ ಬ್ರಿಟಿಷ್ ಸರಕಾರವಾಗಲಿ ಭವಿಷ್ಯ ಪ್ರಪಂಚದ ರೀತಿ ನೀತಿಗಳನ್ನು ನಿಶ್ಚಯಿಸುವುದಿಲ್ಲ. ಪ್ರಕೃತಿಯ ನಿಯಮಗಳೇ ಅದನ್ನು ನಿಶ್ಚಯಿಸುತ್ತವೆ.

ಬ್ರಿಟಿಷ್ ಸರಕಾರದವರು 150 ವರ್ಷಗಳ ತನ್ನು ಹಿಂದಿನ ರಾಜ್ಯಭಾರ ಕ್ರಮವನ್ನು ಸ್ಮರಣೆಗೆ ತಂದುಕೊಳ್ಳಬೇಕು. ನನ್ನು ನಮ್ಮಲ್ಲೇ ಜಗಳಹುಟ್ಟಿಸುವ ಬೀಜಗಳನ್ನು ಹಾಕಿ ಅದರ ದುಷ್ಪಲಗಳನ್ನು ಅವರೇ ಭೋಗಿಸುತ್ತಿರುವರು. ಸಾಮ್ರಾಜ. ಮತ್ತು ಸಾಮ್ರಾಜ್ಯದಾಹವನ್ನು ಕೊನೆಗಾಣಿಸುವ ನೀತಿಯಿಂದ ಪೌರ್ವಾತ್ಯ ಜನರ ಸಹಾನುಭೂತಿ ಸಹಕಾರಗಳು ದೊರೆಯುವುವು.

ವ್ಯಕ್ತಿಸತ್ಯಾಗ್ರಹದ ಯತ್ನ:—

ಜನರು ಬ್ರಿಟಿಷ್ ಸರಕಾರದಮೇಲೆ ಇಷ್ಟವಿರುದ್ಧವಿದ್ದರೆ ತಾವು ಸಾಮೂಹಿಕ ಸತ್ಯಾಗ್ರಹಕ್ಕೆಳೆ ಬೆಂಬಲಕೊಡಲಿಲ್ಲವೆಂದು ಕೇಳಿದಾಗ ನೆಹ್ರೂರವರು ಸದ್ಯದಪರಿಸ್ಥಿತಿಯಲ್ಲಿ ಸ್ಥಾನಿಕ ಸತ್ಯಾಗ್ರಹವು ಅನಪೇಕ್ಷಿತವೆಂದರು. ಮಹಾತ್ಮಾ ಗಾಂಧಿಯವರ ನೀತಿಯಲ್ಲಿ ತನಗೆ ವಿಶ್ವಾಸವಿದೆಯೆಂದರು. ಸರಕಾರದ

(7ನೇ ಪುಟವನ್ನು ನೋಡಿರಿ.)

ಉಪಾಧ್ಯಾಯರಿಗೆ ಪ್ರಾಥಮಿಕ ಪಾಠಪಟ್ಟಿಯ ಸೂಚನೆಗಳು.

(ಕಳೆದವಾರದಿಂದ ಮುಂದುವರಿದಿದೆ.)

2 ಭಾಷಾಪಾಠ.

ಅಕ್ಷರಜ್ಞಾನವೇ ಪ್ರಾಥಮಿಕ ಶಾಲೆಯ ಮೂಲ ಉದ್ದೇಶ. ಸಂಕುಚಿತ ಅರ್ಥವನ್ನು ಕೊಟ್ಟರೆ ಅಕ್ಷರಜ್ಞಾನವೆಂದರೆ ಓದುಬರಹಗಳನ್ನು ಕಲಿಯುವುದು. ಐದನೆಯ ತರಗತಿಯವರೆಗೆ ಕಲಿತು ಶಾಲೆಯನ್ನು ಬಿಡುವವರೆಲ್ಲರಿಗೆ ಈ ತರನಾದ ಅಕ್ಷರಜ್ಞಾನವೂ ಇರುವುದಿಲ್ಲ. ಹೊಸ ವಾರವಟ್ಟಿಯನ್ನೂ ಸೂಚನೆಗಳನ್ನೂ ಅನುಸರಿಸಿದರೆ ಅದನ್ನಾದರೂ ಕೊಡಲು ಸಾಧ್ಯವಾಗುವುದು.

ಪ್ರಾಥಮಿಕ ಶಾಲೆಯ ವಾರವಟ್ಟಿಯಲ್ಲಿನ ವಿಷಯಗಳಲ್ಲಿ ಅತಿ ಮುಖ್ಯವೆಂದರೆ ಭಾಷಾವಾರ. ಪದಗಳ ಮೂಲಕವೆ ಒಬ್ಬರೊಬ್ಬರ ಆಲೋಚನೆಗಳು ತಿಳಿಯುವುವು, ತಮ್ಮ ಆಲೋಚನೆಗಳನ್ನು ಆಲೋಚಿಸುವುದು ಸಹ ಶಬ್ದಗಳ ಸಹಾಯದಿಂದ. ಶಬ್ದಗಳೆಂದರೆ ಆಲೋಚನೆಯ ವಾಹಕಗಳು, ಶಬ್ದಗಳ ಸ್ವಾಮಿತ್ವವು ಭಾಷಾಜ್ಞಾನ.

a) **ಮಾತು.** ವಿದ್ಯಾವಂತನಾದ ವ್ಯಾಯಸ್ಥನಿಗೆ ಸಹ ಭಾಷೆಯ ಉಪಯೋಗದಲ್ಲಿ 90% ರಷ್ಟು ಸಂಭಾಷಣೆಗಾಗಿ. ಸ್ವತಃ ಕೆಂಡು ಮಾತನಾಡಲಿಕ್ಕೆ ಸಾಧ್ಯವಿಲ್ಲವಿದ್ದಲ್ಲಿ ಮಾತ್ರ ಬರಹದ ಪ್ರಯೋಜನ ಬೀಳುವುದರಿಂದ ಬರಹವು ಯಾವಾಗಲೂ ಉಪಯುಕ್ತತೆಯ ಮಟ್ಟಿಗೆ ಎರಡನೆ ಸಾಲಿನದು. ಐದನೆಯ ತರಗತಿಯವರೆಗೆ ಕಲಿತು ಹೊರಬೀಳುವ ಮಕ್ಕಳಲ್ಲಿ ಅನೇಕರು ವ್ಯಾಯಸ್ಥರಾದಾಗ ಅವರಿಗೆ ಬರಹವು ಉಪಯೋಗಕ್ಕೆ ಬೀಳುವ ಸಂದರ್ಭಗಳು ಬಹಳ ವಿರಳ, ಎಂದಾದರೊಮ್ಮೆ ಖಾಸಗಿ ಯಾ ಸಾಮಾಜಿಕ ಉಪಯೋಗದ ಕಾಗದವನ್ನು ಬರೆಯುವ ಸಂದರ್ಭ ಬಂದೀತು, ಆಸ್ಟೆ. ವ್ಯಾಯಸ್ಥರ ಸಂಭಾಷಣೆಯನ್ನು ಸರಿಯೀ ಲಿಸಿದರೆ ಮಾತುಕತೆ ನಡೆಸಲಿಕ್ಕೂ ತಕ್ಕ ತರಬೇತಿಯಾಗುವುದು ಅಗತ್ಯವಿದೆ ಎಂಬುದು ಸ್ಪಷ್ಟವಾಗುವುದು. ಮಾತುಕತೆಯನ್ನು ಕೇಳಿಯೇ ಕಲಿಯಬೇಕಾದುದರಿಂದ ಬರಹಕ್ಕೆ ತರಬೇತಿ ಮಾಡುವ ಮೊದಲೇ ' ಸಂಭಾಷಣೆ ,ಗೆ ಮನಸ್ಸು ಕೊಡಬೇಕಾಗುವುದು.

ಅದಕ್ಕಾಗಿ ಸಂಭಾಷಣೆಗೆ ಯೋಗ್ಯ ಸೂಚನೆಗಳನ್ನು ವಾರವಟ್ಟಿಯಲ್ಲಿ ಕೊಟ್ಟಿದೆ. ಸಂಭಾಷಣೆಯ ವಿಷಯವು ಸಾಕ್ಷಾತ್ತಾಗುವಂತೆ ತಕ್ಕ ವಸ್ತುಗಳನ್ನೂ ಚಿತ್ರಗಳನ್ನೂ ಉಪಾಧ್ಯಾಯನು ಸಂಗ್ರಹಿಸಬೇಕು, ಇಲ್ಲವೆ ತಯಾರಿಸಬೇಕು. ಅದಲ್ಲದೆ ಮಕ್ಕಳನೂತನಲ್ಲಿ ಬರುವ ಶಬ್ದಗಳ ಪಟ್ಟಿಯನ್ನುಮಾಡಿ ಅದರಲ್ಲಿ ಗ್ರಾಮ್ಯ ಶಬ್ದಗಳು, ಸ್ವಷ್ಟವಾಗಿ ಉಚ್ಚಾರವಾಗದ ಶಬ್ದಗಳು, ಈ ರೀತಿಯ ತಿದ್ದಬೇಕಾದ ಶಬ್ದಗಳನ್ನು ಗುರ್ತಿಸಬೇಕು.

ಶಬ್ದ ಸಂಪತ್ತನ್ನು ಹೆಚ್ಚಿಸುವುದು; ಅದಕ್ಕೆ ಒಪ್ಪಕೊಡುವುದು ಸಾಕ್ಷಾತ್ತಲ್ಲ, ಶಬ್ದಗಳ ಉಪಯೋಗದಲ್ಲೂ ಭಾವನೆಗಳನ್ನು ವಿಶದಪಡಿಸುವ ರೀತಿಯಲ್ಲಿ ನಿಶ್ಚಿತಾರ್ಥ ಬರುವಂತೆ ಮಾಡುವುದೂ ಅಗತ್ಯ. ಅದಕ್ಕಾಗಿ ತನ್ನ ಸಂಗಾತಿಗಳು, ಮನೆಯವರು, ಉಪಾಧ್ಯಾಯರು, ಮೇಲಧಿಕಾರಿಗಳು ಮೊದಲಾದವರ ಹೆಸರುಗಳನ್ನು ಸ್ಪಷ್ಟವಾಗಿ ಹೇಳಲಿಕ್ಕೆ ಕಲಿಯುವುದು. ಪಟ್ಟಣಗಳಲ್ಲಾದರೆ ತನ್ನ ಮತ್ತು ನರಯಾನರ ಮನೆಯ ನಂಬ್ರವನ್ನು ಸರಿಯಾಗಿ ತಿಳಿಸುವುದು; ಹತ್ತಿಯ ಹಗ್ಗುರುತುಗಳನ್ನು ಹೇಳುವುದು, ವಾರ, ಗಂಟೆ, ತನ್ನಿಷ್ಟಾಯ, ಇಂದು ನಾಳೆ ಎಂಬ ಕಾಲವಾಚಗಳು, ದಿನದ ಭಾಗಗಳು, ಬಳಕೆಯಲ್ಲಿರುವ ಮಾನ (ಅಳತೆ) ಗಳು, ನಾಣ್ಯಗಳು, ದವ್ವು, ತಳು, ತಗಲು, ನಮ್ಮರ ಗಟ್ಟಿ, ಮುದು, ನಯ, ದೊರಗು, ನೆಟ್ಟಿಗ ಡೊಂಕು, ಒಲ, ಎಡ, ಹಿಂದೆ, ಮುಂದು, ಮೇಲೆ, ಕೆಳಗೆ, ಒಳಗೆ,ಹೊರಗೆ,ಮೂಲಕ ನುತ್ತ, ದಪ್ಪ, ಸಿರಳ, ಬಿಗಿ, ನಡಿಲು, ಕುಬ್ಜ, ನೂಸದ ಮೊದಲಾದ ಪದಗಳು ಮಕ್ಕಳ ಶಬ್ದ ಸಂಪತ್ತಿನಲ್ಲಿ ಬರುವಂತೆ ಮಾಡಬೇಕು. ಮಾತಿನಲ್ಲಿ ಸ್ಪಷ್ಟತೆ ಇರಬೇಕಾದರೆ ತಕ್ಕ ಪದಗಳ ಸಂಗ್ರಹವಿರಬೇಕು; ಈಸಂಗ್ರಹವನ್ನು ಶೇಖರಿಸುವುದೂ ತಪ್ಪು ಉಪಯೋಗಗಳನ್ನು ತಿದ್ದುವುದೂ ಭಾಷೆ. ಕಲಿತುದರ ಹೆಗ್ಗುರುತುಗಳು. ಶಬ್ದ ಸಂಗ್ರಹಕ್ಕಾಗಿ ಬರೆಗ್ರಂಥಸ್ಥವಾದ, ಅಸಾಮಾನ್ಯಕೃತಕ ಶಬ್ದಗಳನ್ನು ಒಟ್ಟುಮಾಡಬಾರದು ಎಚ್ಚರವಿರಬೇಕು. ಇದಕ್ಕಾಗಿ ನಾಕ್ಯಗಳು ಯಾವಾಗಲೂ ಚಿಕ್ಕವಾಗಿಯೂ ಸುಲಭವಾಗಿಯೂ ಇರುವಂತೆ ನೋಡಬೇಕಲ್ಲದ ಶಬ್ದಗಳನ್ನು ಗ್ರಂಥ, ಭಾಷಣ ಮತ್ತು ನಿಘಂಟುಗಳಿಂದ ಸಂಗ್ರಹಿಸದೆ ಜನಸಾಮಾನ್ಯರ ಮಾತುಕತೆಗಳಿಂದ ಹುಡುಕತೆಗೆಯಬೇಕು. ಒಂದು ಹೊಸ ಭಾವನೆಯನ್ನು ವಿವರಿಸಲಿಕ್ಕೆ ವಿದ್ಯಾವಂತರಾದವರು ಇಂಗ್ಲಿಷು ಶಬ್ದಗಳನ್ನು ಭಾಷಾಂತರಿಸಲು ಪ್ರಯತ್ನಿಸುವಾಗ ವಿದ್ಯ ಇಲ್ಲದ ಹಳ್ಳಿಯವರು ಭಾವನೆಗೆ ತಕ್ಕುದಾದ ಶಬ್ದಗಳನ್ನು ಉಪಯೋಗಿಸುತ್ತಾರೆಂದು ಹೇಳಿದರೆ ಅನೇಕರಿಗೆ ಹೌದನಿಸದು; ಆದರೆ ಅದು ನಿಜವಾದ ಸಂಗತಿ. ಬರಹವಿಲ್ಲದವನು ಭಾವನೆಗಳಿಗೆ ರೂಪುಕೊಡುವಾಗ ಇನ್ನೊಂದು ಭಾಷೆಯು ಯಾನಿಘಂಟುವಿನ ಸಹಾಯವಿಲ್ಲದೆ ಅನುಭವಗಳಮೂಲಕ ಹೊಸ ಹೊಸ್ಮುತ್ತವೆ; ಆದುದರಿಂದ ಅವನೆ ಮಾತುಕತೆಯಲ್ಲಿ ನಮಗೆ ಬೇಕಾಗುವ ಸಂಗ್ರಹವಿರುತ್ತದೆ. ಹೀಗೆ ಮಾಡಿದರೆ ಮಕ್ಕಳ ಬಳವಣಿಗೆಯು ಅವಾ ಜನಾಂಗದ ವಿಕಾಸದ ಪ್ರತಿಬಿಂಬವಾಗಿದೆ ಎಂಬ ತತ್ವವನ್ನೂ ಭಾಷಾಜ್ಞಾನಕ್ಕೆ ಪ್ರತ್ಯಕ್ಷ ರೀತಿಯೇ(Direct Method)ಮೇಲು ಎಂಬ ಮಿಕ್ಕೊದು ವಿದ್ಯಾತತ್ವವನ್ನೂ ಅನುಸರಿಸಿದಂತಾಗುವದು. ಪ್ರತ್ಯಕ್ಷ ರೀತಿಯನ್ನು ಇಷ್ಟರ ತನಕ ವರ ಭಾಷೆಗಳನ್ನು ಕಲಿಸುವುದಕ್ಕೆ ಉಪಯೋಗಿಸಿದ್ದಾರಲ್ಲದೆ ಮಾತೃಭಾಷೆಯನ್ನು ಕಲಿಸುವಾಗ ಅದರ ಉಪಯುಕ್ತತೆಯನ್ನು ಮನಗಂಡಿಲ್ಲ.

ಅದೇ ರೀತಿ ಹಳ್ಳಿಯ ಕಸುಬಿನ (Artisan) ಮಾತಿನಲ್ಲಿ ವಿಸ್ತೀರ್ಣ, ದೂರಗಳನ್ನು ಸೂಚಿಸುವ ಅನೇಕ ಯೋಗ್ಯ ಶಬ್ದಗಳಿವೆ. ನಮ್ಮ ಸಾಮಾಜಿಕ ಕ್ರಮದಿಂದಾಗಿ ಅವು ಎಲ್ಲರ ಶಬ್ದ ಸಂಗ್ರಹದಲ್ಲಿ ಸೇರಿಲ್ಲ; ಸಾಯವಾಗುತ್ತಲೂ ಇವೆ, ಅಂಥವನ್ನು ಆರಿಸಿ ಸೇರಿಸಿಕೊಳ್ಳುವುದು ಅಗತ್ಯ. ಹಾಗೆ ಮಾಡದಿದ್ದುದಿಂದ ವಿದ್ಯಾವಂತರ ಮಾತುಕತೆಯಲ್ಲಿ ಸಹ ಜೀವಕಳೆ ಇಲ್ಲದಂತಾಗಿದೆ. ಶಾಲೆಯ ಮಕ್ಕಳು ದೊಡ್ಡದು, ಸಂಣ್ಣದು ಎಂಬ ಎರಡು ಶಬ್ದಗಳನ್ನು ಎಷ್ಟುವಿಧದ ಅರ್ಥದಲ್ಲಿ ಉಪಯೋಗಿಸುತ್ತಾರೆಂದು ನೋಡಿದರೆ ನಮ್ಮ ಶಬ್ದಸಂಗ್ರಹವು ಎಷ್ಟರ ಮಟ್ಟಿಗೆ ಕ್ಷಯಿಸಿಹೋಗಿದೆ ಎಂದು ತಿಳಿಯಬಹುದು.

ರಾಯಲಸೀಮ ಬ್ಯಾಂಕು,
(ಲಿಮಿಟೆಡ್.)

ಮುಖ್ಯ ಕಾರ್ಯಾಲಯ, ಬಳ್ಳಾರಿ.

ಪ್ರಥಮ ವರ್ಷದ ಪ್ರಗತಿ.

ವಿವಾಜಿಟ್ಟುಗಳು.	31-10-1940	30-11-1941
ಫಿಕ್ಸೆಡ್	ರೂ Nil	90,930
ಚಾಲ್ತಿ	,, 3,173	20,994
ಸೇವಿಂಗ್ಸು	,, 1,231	18.368
ಇತರ	,, 40	781
ಸಾಲಗಳು.		
ಭಂಗಾರ	,, 520	27,478
ಮಾಲು	,, Nil	16.838
ಇತರ	,, Nil	6.181
ಇತರಆಸ್ತಿ.		
ಸರ್ಕಾರದ ಬಾಂಡುಗಳು	,, 13,300	32,476
ಬ್ಯಾಂಕುಗಳಲ್ಲಿರುವ ಹಣ	,, 32 502	23,904
ಕೈಯ್ಯಲ್ಲಿ ನಗದು	,, 5770	45 338

ಒಟ್ಟು ವ್ಯವಹಾರದ ಮೊತ್ತ.

31 10 40.	31—10—41.
ರು. 1,14,774-0-0	ರು. 2,16.664-00

ಶಾಖೆಗಳು

1 ತಿಮ್ಮಸಮುದ್ರ 2 ಕೊಟ್ಟೂರು. 3 ಉರವಕೊಂಡ. 4-ಪತ್ತಿಕೊಂಡ

ಬಿ. ಎ. ಶೇಶಗಿರಿನ್‌ರಾ, ಬಿ ಕಾ ಕಾರ್ಯದರ್ಶಿ.

ಹೆಚ್. ಶೀತಾಮರಡ್ಡಿ,, ಬಿ. ಎ. ಬಿ ಎಲ್ (ಆಂ. ಎ.)
ಜೈಲ್ಕೆರುಗಳ ಜೋರ್ಡು ಅಧ್ಯಕ್ಷರು

(ನ. ಜವಹರಲಾಲರ ಭಾಷಣ.)

[5ನೆ ಪುಟದಿಂದ]

ಯುದ್ಧ ಪ್ರಯತ್ನಗಳನ್ನು ನಿಲ್ಲಿಸುವ ಕಾರ್ಯಕೇಳಿದರೆ ವ್ಯಕ್ತಿಸತ್ಯಾಗ್ರಹದಿಂದ ಅದಕ್ಕೇನೂ ತೊಂದರೆಯಾಗಿಲ್ಲ. ಫಾಸಿಸ್ಟ್ ಮತ್ತು ನಾಜಿಗಳಿಗೆ ಸಹಾಯ ಮಾಡುವ ಉದ್ದೇಶವು ನಮಗಿಲ್ಲ. ಹಿಂದೂಸ್ಥಾನದಲ್ಲೂ ಮತ್ತು ಹೊರಗೂ ಜನರ ಮನಸ್ಸಿನಲ್ಲಿ ಇದರಿಂದ ಒಂದು ಶೋಧನೆಗೆ ಅವಕಾಶವಾಯ್ತೆಂದಾಗ ನಾನು ಒಪ್ಪುತ್ತೇನೆ. ಬ್ರಿಟಿಷ್ ಸರಕಾರದ ನೀತಿಗೆ ತಲೆಬಾಗಿಸದಿರುವ ಅನಿಷ್ಟನನ್ನು ಸೂಚಿಸುವುದರಲ್ಲಿ ವ್ಯಕ್ತಿಸತ್ಯಾಗ್ರಹವು ತುಂಬಾ ಯಶಸ್ವಿಯಾಗಿದೆ

ತೆಕ್ಕಲಕೋಟೆ.

ಶಾಲಾ ಬಾಲಕರ ನೆರವಣಿಗೆಯಿಂದ

ಆರೋಗ್ಯ ಮತ್ತು ಶಿಶುಪ್ರದರ್ಶನವಾರವು ಇಲ್ಲಿ 8 ನೆಯ ತಾ. ನಿಂದ ಪ್ರಾರಂಭವಾಯಿತು. ಸಮಿತಿಗೆ ಶ್ರೀ ಕೆ. ರಾಮಡಾನರು ಅಧ್ಯಕ್ಷರಾಗಿಯೂ, ಶ್ರೀ ನಾರಾಯಣರಾಯರು ಕಾರ್ಯದರ್ಶಿಗಳಾಗಿಯೂ ಇದ್ದರು. ಕ್ಷಯರೋಗ ಮತ್ತು ಇನ್ನೂ ಅನೇಕ ವಿಷಯಗಳಮೇಲೆ 16ನೆ ತಾ. ಸಿರುಗುಪ್ಪೆ ತಹಶೀಲ್ದಾರ್ ಜನಾಬ್ ಮುಹಮದ್ ಗೌಸ್ ಸಾಹೇಬರ ಅಧ್ಯಕ್ಷತೆಯಲ್ಲಿ ಡಾ ಕೃಷ್ಣ ಪ್ರಸಾದಾಚಾರ್ ಮತ್ತು ಇತರರಿಂದ ಭಾಷಣಗಳು ಕೊಡಲ್ಪಟ್ಟವು. ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳು ಬತವರಿಗೆ ಉಚಿತ ಕೊಡಲಾಯಿತು. ಶ್ರೀ ದೇಶಾಯಿಸುಬ್ಬರಾಯರು ಬಡವರಿಗೂ ಶಾಲಾಮಕ್ಕಳಿಗೂ ಮಿಠಾಯಿ ಹಂಚಿದರು. ಛಾಯಾಚಿತ್ರವು ತೆಗೆದುಕೊಳ್ಳಲ್ಪಟ್ಟನಂತರ ಆರೋಗ್ಯವಾರದ ಕಲಾಪಗಳು ಮುಗಿದವು.

ಹೊಳಲು.

13 ನೆಯ ತಾ|| ಸಾಯಂಕಾಲ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ|| ನಾಗನಗೌಡ ಶಾಸನಸಭ್ಯರಾದ ಅನಂತಾಚಾರ್ಯ ಹೊಸಪೇಟೆ ಕಾಂಗ್ರೆಸ್ ಮುಖ್ಯರಾದ ಮುತ್ತಿಹಳ್ಳಿ ರಾಘವೇಂದ್ರರಾಯರು ಇಲ್ಲಿಗೆ ಆಗಮಿಸಿದರು. ಅವರನ್ನು ಸ್ವಾಗತಿಸಿ ಶಾಲೆಯ ಬಳಿಹಾಕಿದ್ದ ಸುಂದರ ಮಂಟಪಕ್ಕೆ ಕರೆತರಲಾಯಿತು. ಸಾವಿರದವರೆಗೂ ಜನರು ಕಲೆತಿದ್ದರು ವಾದ್ಯಾರ್ಧನಾನಂತರ ಶ್ರೀ ಮಹದೇವನ ಗೌಡರು ಸ್ವಾಗತಮಾಡಿ ಪರಿಚಯಮಾಡಿಸಿದರು ಶ್ರೀ ಚನ್ನಬಸವನಗೌಡರು ಸಂಪಾದ ಸಾರ್ವಜನಿಕಸಭೆಯನ್ನು ಛಿದಿ ಅವರೂ ಮತ್ತು ಗ್ರಾಮಸ್ಥರ ಪರವಾಗಿ ತಿಪ್ಪಣ್ಣಗೌಡರೂ ಬಿನ್ನವತ್ತಳಿಗಳನ್ನು ಏರ್ಪಿಸಿದರು ಕುಂದು ಕೊರತೆಗಳನ್ನು ದೂರಮಾಡಲು ಆಶ್ವಾಸನೆಕೊಟ್ಟು ಅಧ್ಯಕ್ಷರು ಉಪಾಧ್ಯಾಯರ ಕರ್ತವ್ಯಗಳನ್ನು ವಿವರಿಸಿದರು. ಸದ್ಯದಪರಿಸ್ಥಿತಿ ಕಾಂಗ್ರೆಸ್ ನೀತಿ ನೀತಿಧ್ಯೇಯಗಳು ರಚನಾತ್ಮಕ ಕಾರ್ಯಗಳಿಂದ ಗ್ರಾಮೋದ್ಧಾರ ಖಾದಿ ಅಸ್ಪೃಶ್ಯತಾ ನಿವಾರಣೆಯ ಮಹತ್ವ ಜಾತಿಜಾತಿಗಳಲ್ಲಿರಬೇಕಾದ ಐಮತ್ಯ ಈ ವಿಷಯಗಳ ಬಗ್ಗೆ ಶ್ರೀಗಳಾದ ಅಧ್ಯಕ್ಷರು ಅನಂತಾಚಾರ್ಯ ರಾಘವೇಂದ್ರರಾವು ಚಕ್ಕ ಚನ್ನಪ್ಪನವರು ಮಾತನಾಡಿ ಗಾಂಧೀಜಿಯವರ ಸಾಯಕತ್ವದಲ್ಲಿ ವಿಶ್ವಾಸವಿಡಬೇಕೆಂದರು. ಸ್ಥಳಾಧಿಕಾರಿಗಳಾದ ಶ್ರೀ ಮಧ್ವನಾಧಾಚಾರ್ಯರು "ಶಿಕ್ಷಣ"ದಮೇಲೆ ಭಾಷಣ ಮಾಡಿದರು

14ನೆಯ ತಾ|| ವ್ಯಾಯಾಮ ಪ್ರದರ್ಶನವು ನಡೆಯಿತು ವ್ಯಾಯಾಮ ಸಂಘದ ಉದ್ಘಾಟನೆಯು ಅನಂತಾಚಾರ್ಯರಿಂದ ನೆರವೇರಿತು, ಅಲ್ಲಿಸೇರಿದ ಮುಖ್ಯರೂ ಬಂದ ಅತಿಥಿಗಳೂ ಸಟ್ಟುಹಾಕಿದ ಕಾರಣ ಸುಮಾರು 40 ರೂ. ಚಂದಾ ಹಣವು ಶೇಖರವಾಯಿತು.

ಸೂಚನೆ

ಕ್ರಿಸ್ಮಸ್ ರಜಾದ ಕಾರಣ "ನವಭಾರತ"ವು 25ನೆಯ ತಾ. ಹೊರಡುವದಿಲ್ಲ, ಜನವರಿ ತಿಂಗಳ ಮೊದಲನೆಯ ಭಾನುವಾರ ಹೊರಡುವುದು

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ,
ಸಾಮಲಕೋಟೆ.

ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ಸಿರಿಲ್ಲಿ ಕೊಟ್ಟೆ ಯನ್ನು ತೆಗೆದು ಪುರಾತನಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **A. S.** ಸೀಲನ್ನು ಗಮನಿಸಿ. ಕೊಳ್ಳಿರಿ. ಮೋಸಹೋಗಬೇಡಿರಿ.

ದೊರೆಯುವ ಸ್ಥಳಗಳು: 1.) ಎಂ. ಶಂಕರಂಜಿರಾವು,
ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ವಿ. ಯು. ಗಿರಿ ಅಂಡ್ ಸನ್ಸ್,
ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....

ನಿಮಗೆ ಸಹಾಯವು ಬೇಕೋ?

ಇ ಹಾಗಾದರೆ ಕೂಡಲೇ ಕೆಳಗಿನವರಲ್ಲಿ ನಿಮಗಿಷ್ಟವಾದವರಿಗೆ ತಿಳಿಸಿರಿ.

ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಛೇರಿ ಕಾರಂಬಿ ಪಗ್ಗೆರೆ ದೊರೆಯುವವಲ್ಲದೆ ನಿಮಗೆ ಎಲ್ಲಾ ವಿಧವಾದ ಸೂಚನೆಯೂ, ಉಚಿತವಾಗಿ ಹೇಳಲಾಗುವುದು.

ಟಿ ಬಿ. ಕೇಶವರಾವ್,
ಕ್ರೈಸ್ತ ಮಾಳಾರಿ ಕಾಂಸ್ಟಾಂಟು, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವವರಿಗೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಬಂದು ನಮ್ಮಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ, ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ಸ್ತ್ರೈತ್ರ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ರುದ್ಧಿ ಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೪೦

ಸ್ಟಾಕಿಸ್ಟ್ಸ್- ಜೋರಣಗಲ್ಲು ಮರೆಪ್ಪ, ಬಳ್ಳಾರಿ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦	ಅಂಚೆ ಪಚ್ಚಿ ಪೇರೆ
ಕನ್ನಡ ದಶೋಪನಿಷತ್ತುಗಳು	೦—೯—೦	ಪ್ರತಿಕ ವ್ಯಾಪಾರಿಗಳಿಗೆ
ಶಿವಾನುಭವ ಜೋಳಿ	೦—೪—೦	ಕಮಿಷನ್ ಹೆಚ್ಚು ಕೊಡಲ್ಪಡುವುದು
ಸುಮತಿ ಶತಕ	೦—೧—೦	ಕೊಳ್ಳುವರಿಗೆ ಧಾರಾಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮುಚ್ಚಂಟು, ಬಳ್ಳಾರಿ.

ಜಾಹೀರಾತಿಗಾಗಿ ಕಾದಿಡಲ್ಪಟ್ಟಿದೆ.

NAVA BHARAT BELLARY.
With which is incorporated Congress Bulletin
THE LEADING NATIONAL WEEKLY.
ನವ ಭಾರತ ಬಳ್ಳಾರಿ.
ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual
Local 2—4—0
Moffusil 3—0—0

6 Months
Local 1—4—0
Moffusil 2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. 3957.

Sri

Printed at Vittal Press, Car Street Edited & Published by T. B Keshava Rao, Bellary